ನಾಮಕರಣ ಮಹೋತ್ಸವ ಸಂಪುಟ

36
Tor P-1-181

ಕರ್ನಾಟಕ

ಕರ್ನಾಟಕ ನಾಮಕರಣ ಮಹೋತ್ಸವ ಸಮಿತಿ
ಬೆಂಗಳೂರು - ೧.

ಪತ್ರಗಾರ ಇಲಾಖೆಗೆ
ನಮ್ಮ ಸಂಖ್ಯೆ 25/2/68

ಕರ್ನಾಟಕ

PATIL. K. F.
HANUMANA MATTI P.O:
DIST: DHARWAR

ನಾಮಕರಣ ಮಹೋತ್ಸವ ಸಂಪುಟ

Box-V

ಕರ್ನಾಟಕ ನಾಮಕರಣ ಮಹೋತ್ಸವ ಸಮಿತಿ
ಬೆಂಗಳೂರು - ೧.

ಕರ್ನಾಟಕ ನಾಮಕರಣ ಮಹೋತ್ಸವ ಸಮಿತಿಯ ಪರವಾಗಿ
ಶ್ರೀ ಡಿ. ಆರ್. ಪಾಟೀಲ್ ಅವರಿಂದ ಪ್ರಕಟಿಸಲ್ಪಟ್ಟಿತು.

ಬೆಲೆ ರೂ. ೫

ಸಂಪಾದಕ ಮಂಡಲ

ಶ್ರೀ ಕೆ. ಎಫ್. ಪಾಟೀಲ್
,, ಎಸ್. ಆರ್. ಪಾಟೀಲ
,, ಡಿ. ಆರ್. ರಾಮಯ್ಯ
,, ವೆಂಕಟೇಶ ಸಾಂಗಲಿ
,, ಸುರೇಂದ್ರ ದಾನಿ
,, ಎನ್. ಎಸ್. ಕಾತರಕಿ
ಶ್ರೀ ಕಲ್ಲೂರ ಕೃಷ್ಣಕುಮಾರ
,, ಮ. ನ. ಮೂರ್ತಿ
,, ವಿ. ಸಿ. ಹಿತ್ತಲಮನಿ
,, ಸೂರ್ಯನಾರಾಯಣ ಜಡಗ
,, ಬಿ. ಎನ್. ಜೋಗಿತ್ತಾಯ
ಶ್ರೀಮತಿ ಪ್ರೇಮಾ ಭಟ್

[ಸಲಹೆಗಾರರು

ಶ್ರೀ ಸಿದ್ದಯ್ಯ ಪುರಾಣಿಕ
ಶ್ರೀ ಬಿ. ಜಿ. ಕುಲಕರ್ಣಿ
ಶ್ರೀ ಎಂ. ಎಚ್. ಮರಿಗೌಡ
ಶ್ರೀ ಎನ್. ಡಿ. ಬಗರಿ

ಬೆಂಗಳೂರು :
ಸರ್ಕಾರೀ ಮುದ್ರಣಾಲಯದ ಡೈರೆಕ್ಟರ್ ಅವರಿಂದ ಮುದ್ರಿಸಲ್ಪಟ್ಟಿತು.
೧೯೭೩

ಪರಿವಿಡಿ

		ಪುಟ
	ಶುಭ ಸಂದೇಶಗಳು	
	ಸಂಪಾದಕೀಯ	i
೧.	ಪ್ರಾಸ್ತಾವಿಕ	೧
೨.	ಕರ್ನಾಟಕದ ವಿಶ್ವರೂಪ ದರ್ಶನ	೧೧
೩.	೧–೧೧–೫೬ ನವರಾಜ್ಯೋದಯದ ಉತ್ಸವ	೧೩
೪-೫.	ಸರ್ಕಾರದ ನಿರ್ಣಯಗಳು	೧೭
೬.	ಸ್ಮರಣೀಯ ಉಲ್ಲೇಖಗಳು	೩೦
೭.	ಆಲೂರರ ಮಂತ್ರೋಕ್ತಿಗಳು	೪೦
೮.	ಕವನ ವಿಭಾಗ	೪೪
೯.	ಕರ್ನಾಟಕದ ಪ್ರಾಚೀನತೆ	೬೭
೧೦.	ಕರ್ನಾಟಕದ ಜನಪದ	೭೪
೧೧.	ಕರ್ನಾಟಕದ ಉದ್ದಿಮೆಗಳು	೭೮
೧೨.	ಕರ್ನಾಟಕ–ಇಂದು	೮೪
೧೩.	ಕರ್ನಾಟಕದ ಶಿಕ್ಷಣ ಪ್ರಗತಿ	೯೧
೧೪.	ಕರ್ನಾಟಕದ ಏಕೀಕರಣ	೯೩
೧೫.	ವಿದ್ಯಾರಣ್ಯ	೧೦೧
೧೬.	ಅವಿಸ್ಮರಣೀಯ ಕೃತಿ	೧೦೨
೧೭.	ಕರ್ನಾಟಕದ ಕೃಷಿ ಅಭಿವೃದ್ಧಿ	೧೦೪
೧೮.	ಕರ್ನಾಟಕದ ಜಲಸಂಪತ್ತು	೧೦೯
೧೯.	ಕರ್ನಾಟಕದ ಹಿರಿಮೆ–ಕೃಷಿಯ ಪೇಲ್ಮೆ	೧೧೨
೨೦.	ಕರ್ನಾಟಕದ ಮಳೆ–ಮಣ್ಣು	೧೨೧
೨೧.	ಆಡಳಿತ ಭಾಷೆ	೧೨೪
೨೨.	ವಿಜಯನಗರದ ವೀರಶ್ರೀ	೧೨೬
೨೩.	ಅಧ್ಯಕ್ಷೀಯ ಭಾಷಣಗಳ ಉಲ್ಲೇಖಗಳು	೧೨೮
೨೪.	ವಿಶೇಷ ಕವನಗಳು	೧೪೩
೨೫.	ಸಂಸ್ಮರಣೆಗಳು	೧೪೮
೨೬.	ಕರ್ನಾಟಕ ಮಹೋತ್ಸವ	೧೫೩

ಅನುಬಂಧ

ಕರ್ನಾಟಕ ನಾಮಕರಣ ಸಂಸ್ಮರಣೆಯ ದಿನಗಳು

೧. ದಿನಾಂಕ ೧೮-೭-೨೨ ರಾಜ್ಯ ಸಚಿವ ಸಂಪುಟದ ನಿರ್ಣಯ

೨. ದಿನಾಂಕ ೨೭-೭-೨೨ ವಿಧಾನ ಸಭೆಯ ಒಪ್ಪಿಗೆ

೩. ದಿನಾಂಕ ೩೧-೭-೨೨ ವಿಧಾನ ಪರಿಷತ್ತಿನ ಒಪ್ಪಿಗೆ

೪. ದಿನಾಂಕ ೩೦-೭-೨೩ ಲೋಕ ಸಭೆಯ ಒಪ್ಪಿಗೆ

೫. ದಿನಾಂಕ ೪-೮-೨೩ ರಾಜ್ಯ ಸಭೆಯ ಒಪ್ಪಿಗೆ

೬. ದಿನಾಂಕ ೮-೧೦-೨೩ ರಾಷ್ಟ್ರಪತಿಗಳ ಅಂಕಿತ

೭. ದಿನಾಂಕ ೧-೧೧-೨೩ ನಾಮಕರಣ

೮. ದಿನಾಂಕ ೧-೧೧-೨೩ ನಾಮಕರಣ ಸ್ಮರಣೆಗಾಗಿ ಹಂಪೆಯಲ್ಲಿ ವಿಶೇಷ ಉತ್ಸವ (ಕರ್ನಾಟಕ ಜ್ಯೋತಿ ಹೊತ್ತಿಸಿ ನಂದಾದೀಪ ಪಾಗಿರಿಸುವಿಕೆ, ಪಂಚಮಟಿ ಹಾಗೂ ಕರ್ನಾಟಕ ಕೀರ್ತಿ ಸ್ಥಂಭಗಳ ನಿರ್ಮಾಣಕ್ಕಾಗಿ ಭೂಮಿ ಪೂಜೆ ಮತ್ತು ಶ್ರದ್ಧಾಂಜಲಿ)

೯. ದಿನಾಂಕ ೩-೧೧-೨೩ ನಾಮಕರಣ ಸ್ಮರಣೆಗಾಗಿ ಗದುಗಿನ ವೀರನಾರಾಯಣನ ಗುಡಿಯಲ್ಲಿ ಹಂಪೆಯಲ್ಲಿ ಹೊತ್ತಿಸಿದ ಕರ್ನಾಟಕ ಜ್ಯೋತಿಯನ್ನು ನಂದಾದೀಪವಾಗಿರಿಸುವಿಕೆ ಹಾಗೂ ಶ್ರೀ ದೇವರಾಜ ಅರಸ್, ಶ್ರೀ ಜಯಚಾಮರಾಜ ಒಡೆಯರಾದಿಯಾಗಿ ಕರ್ನಾಟಕಕ್ಕೆ ದುಡಿದವರಿಗೆ ಸಾಂಕೇತಿಕ ಸನ್ಮಾನ.

"ಕರ್ನಾಟಕ"ಕ್ಕೆ

ಪ್ರಧಾನ ಮಂತ್ರಿಗಳ ಶುಭಾಶಯ

'ಹೆಸರಿನ ಹಿರಿಮೆಗೆ ತಕ್ಕಂತೆ ಬಾಳಿ"

ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ಇಡುತ್ತಿರುವ ಬಗ್ಗೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಅಪಾರ ಸಂತಸ ವ್ಯಕ್ತಪಡಿಸಿ ಜನತೆಗೆ ಹಾಗೂ ರಾಜ್ಯಕ್ಕೆ ಶುಭಾಶಯ ಹಾರೈಸಿದರು.

"ಕರ್ನಾಟಕ ಎಂಬ ಹೆಸರಿಗೆ ಪುರಾತನ ಇತಿಹಾಸವಿದೆ. ಈ ಹೆಸರಿನ ಹಿಂದೆ ನಮ್ಮ ಪುರಾತನ ಸಂಸ್ಕೃತಿ ಮತ್ತು ಸಂಪ್ರದಾಯವಿದೆ. ಪುರಾಣಗಳು ಮತ್ತು ವಾಸ್ತುಶಿಲ್ಪಿಗಳಲ್ಲಿ ಈ ಹೆಸರಿನ ಉಲ್ಲೇಖವಿದೆ. ಇದು ಅನೇಕ ಆಶೋತ್ತರಗಳನ್ನು ಪ್ರತಿಬಿಂಬಿಸುವ ಹೆಸರು. ಈ ಆಶೋತ್ತರಗಳ ಈಡೇರಿಕೆಗಾಗಿ ಕರ್ನಾಟಕದ ಜನತೆ ಸಿದ್ಧರಾಗಬೇಕು."

ಬೆಂಗಳೂರು : ೨೮-೧೦-೭೩

"ಕರ್ನಾಟಕ ರಾಜ್ಯ" ನಾಮಕರಣದ ದಿನಕ್ಕಾಗಿ
ಮುಖ್ಯ ಮಂತ್ರಿಗಳ ಸಂದೇಶ

"ರಾಜ್ಯಕ್ಕೆ ಹೊಸದಾಗಿ ನಾಮಕರಣ ಆಗಿರುವುದು ಹೆಸರಿನ ಬದಲಾವಣೆ ಮಾತ್ರವಲ್ಲ, ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಅತ್ಯುನ್ನತ ಶಿಖರವನ್ನೇರಿದ ಪ್ರದೇಶವೊಂದರ ಸಾಧನೆಯ ಪುನರುತ್ಥಾನಕ್ಕೆ ಒದಗಿಸಿದ ಅವಕಾಶ".

ಬೆಂಗಳೂರು : ೨೮-೧೦-೭೩

ಶುಭ ಸಂದೇಶಗಳು

ಕರ್ನಾಟಕ ನಾಮಕರಣ ಮಹೋತ್ಸವವನ್ನು ಸ್ವಾಗತಿಸಿ ತುಂಬು ಹೃದಯದ ಸಂತೋಷವನ್ನು ವ್ಯಕ್ತಪಡಿಸಿ ಅನೇಕ ಮಹನೀಯರು ಸಂದೇಶ ಕಳಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷೇಪವಾಗಿ ಉದ್ಧರಿಸಲಾಗಿದೆ.

* * * *

ಶ್ರೀ ಕೆ. ಎಚ್. ರಂಗನಾಥ, ಕರ್ನಾಟಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರು

"ಕನ್ನಡ ಜನತೆಯ ಶತಮಾನದ ಬಯಕೆಯಾಗಿ ಈ ನಾಡಿಗೆ 'ಕರ್ನಾಟಕ' ಎಂದು ನಾಮಕರಣವಾದ ಬಗೆಗೆ ಹರ್ಷೋತ್ಸವವನ್ನು ರಾಜ್ಯೋತ್ಸವವನ್ನು ತಾವೆಲ್ಲ ಪಂಪಾವತಿ ಶ್ರೀ ವಿರೂಪಾಕ್ಷನ ಸನ್ನಿಧಿಯಲ್ಲೂ ಗದುಗಿನ ಶ್ರೀ ವೀರನಾರಾಯಣನ ಸನ್ನಿಧಿಯಲ್ಲೂ ಆಚರಿಸುವಿರೆಂದು ತಿಳಿದು ಅತ್ಯಂತ ಹರ್ಷಿತನಾಗಿರುವೆ.

ಇದು ಕನ್ನಡ ಕುಲಕೋಟಿಗೆ ಪುಣ್ಯ ದಿನ.

ನಾಡಿನ ಭವ್ಯ ಪರಂಪರೆ, ಇತಿಹಾಸಗಳನ್ನು ನೆನೆದು ಮತ್ತೊಮ್ಮೆ ಈ ರಾಜ್ಯವನ್ನು ತಲೆಯೆತ್ತಿ ನಿಲ್ಲಿಸಿ, ಹೊನ್ನಿನ ಮಳೆಯನ್ನೇ ಸುರಿಸುವ ಸಂಕಲ್ಪ ಮಾಡುವ ದಿನ.

ನಾಡ ಏಕೀಕರಣಕ್ಕಾಗಿ ಹಾಗೂ ನಾಡ ನಾಮಕರಣಕ್ಕಾಗಿ ಶ್ರಮಿಸಿದವರನ್ನೆಲ್ಲಾ ನೆನೆದು ಕೃತಜ್ಞತೆ ಸಲ್ಲಿಸುವ ಹಾಗೂ ಗೌರವ ಅರ್ಪಿಸುವ ತಮ್ಮ ಬಯಕೆ ಚಿರಸ್ಮರಣೀಯ.

ತಮ್ಮೆಲ್ಲ ಕಾರ್ಯಕ್ರಮಗಳೂ ಶ್ರೀ ಭುವನೇಶ್ವರಿಯ ಆಶೀರ್ವಾದದಿಂದ ಯಶಸ್ವಿಯಾಗಿ ನೆರವೇರಲಿ ! ಕರ್ನಾಟಕ ಸ್ತಂಭ ಅಮರವಾಗಲಿ !! ಕನ್ನಡ ಬನ ಅಜೇಯವಾಗಲಿ!!!

ಕನ್ನಡ ನೆಲಕ್ಕದೋ ನೆಮೋ ನಪಂಃ !"

* * * *

ಶ್ರೀ ಎಚ್. ಸಿದ್ಧವೀರಪ್ಪ. ಕರ್ನಾಟಕ ರಾಜ್ಯದ ಆರೋಗ್ಯ ಸಚಿವರು

"....ಕೋಟಿ ಕೋಟಿ ಕನ್ನಡಿಗರ ದೀರ್ಘಕಾಲದ ಜಯಕ್ಕೆ ಫಲಗೊಂಡ ಹರ್ಷದ ಹಬ್ಬ ಹಂಪೆಯನ್ನು ಬಿಟ್ಟು ಮತ್ತೆಲ್ಲಿ ಕಂಗೊಳಿಸೀತು ? ಈ ಮಂಗಳ ಸಮಯಕ್ಕೆ ಕನ್ನಡ ಜನತೆಯ ಪರಮಪ್ರೀತಿಗೆ ಪಾತ್ರರಾದ ಶ್ರೀ ಜಯಚಾಮರಾಜ ಒಡೆಯರ ಬಹದ್ದೂರ್ ಅವರು ಆಗಮಿಸುತ್ತಿರುವುದಂತೂ ಅತ್ಯಂತ ಮಹತ್ವದ ಸಂಗತಿ. ಕರ್ನಾಟಕ ರತ್ನ ಸಿಂಹಾಸನಾಧೀಶ್ವರರೇ ಆಗಿದ್ದ ಶ್ರೀ ಜಯಚಾಮರಾಜ ಒಡೆಯರ ಅವರು ಕನ್ನಡಿಗರ ಆಶೋತ್ತರಗಳ ಈಡೇರಿಕೆಗೆ ನೀಡಿದ ಕಾಣಿಕೆಯನ್ನು ನಾವು ಮರೆಯುವಂತಿಲ್ಲ. ಈ ದೃಷ್ಟಿಯಿಂದ ಹಂಪೆಯಲ್ಲಿ ಈಗ ನಡೆಯುವ ಸಮಾರಂಭ ಚರಿತ್ರಾರ್ಹವೆಂದು ನಾನು ಭಾವಿಸುತ್ತೇನೆ.

...ಕನ್ನಡ ಬಂಧುಗಳೆಲ್ಲರ ಹೃದಯದಲ್ಲಿ ಒಂದೇ ಜೀವನಾದ ಮಿಡಿಯಲಿ !"

* * * *

ಶ್ರೀ ಕುವೆಂಪು ರಾಷ್ಟ್ರಕವಿ

"ತಾವೂ ತಮ್ಮ ಮಿತ್ರರೂ ಗದುಗಿನಲ್ಲಿ ಕರ್ನಾಟಕವೆಂಬ ಹೆಸರು ದೊರೆಯಲುಂ ಶ್ರಮಿಸಿದ ಗಣ್ಯರೆಲ್ಲರನ್ನೂ ಗೌರವಿಸಲಿರುವ ವಿಷಯ ತಿಳಿದು ತುಂಬಾ ಸಂತೋಷವಾಗಿದೆ—

ಕರ್ನಾಟಕ : ಹಳೆಯದೆ ಆದು
ಹೊಸತಾಯಿತು ಹೆಸರು
ತುಂಬುವುದಿದೆ ಜನ ಹೃದಯದಂದ
ಭಾವೈಕ್ಯದ ಉಸಿರು,
ಕೆರೆಕಟ್ಟೆಯ ಹೊಲಗದ್ದೆಯ
ಸಿರಿದೋಂಟದ ಹಸಿರು :
ಭಾರತಾಂಬೆಗೆ ತಾನಾಗಲಿ
ನಾಡಿದು ಹೊಂಬಸಿರು !

ಸಮಾರಂಭವು ಅತ್ಯಂತ ಯಶಸ್ವಿಯಾಗಿ ನಡೆಯಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

* * * *

ಶ್ರೀ ದ. ರಾ. ಬೇಂದ್ರೆ, ವರಕವಿ

ತಾವು ಬರೆದ ಕಾಗದವೂ ಸನ್ಮಾನದಷ್ಟೇ ಮಹತ್ವದ್ದಾಗಿದೆ. ಕರ್ನಾಟಕಕ್ಕಾಗಿ ದುಡಿದ ಎಲ್ಲರ ಪಾದಕ್ಕೆ ನಮಸ್ಕಾರಗಳನ್ನು ಸಲ್ಲಿಸುತ್ತಿದ್ದೇನೆ. ಶ್ರೀ ಮಂಗಳವೇಢೆ, ಶ್ರೀ ಕಲ್ಲೂರ, ಮಂಖ್ಯೆ ಮಂತ್ರಿ ದೇವರಾಜ ಅರಸ ಮತ್ತು ಇತರ ದೇಶಭಕ್ತರಿಗೂ ತಮಗೂ ಸಾಷ್ಟಾಂಗ ಪ್ರಣಾಮಗಳು.

* * * *

ರಾಜ್ಯದ ಸಚಿವರುಗಳಾದ ಸರ್ವಶ್ರೀ ಡಿ.ಕೆ. ನಾಯ್ಕರ್, ಅಜೀಜ್ ಸೇಠ್, ಜಿ. ದೇವೆಂದ್ರಪ್ಪ, ಸಾಹಿತಿಗಳಾದ ಶ್ರೀ ಆದ್ಯ ರಂಗಾಚಾರ್ಯ, ಶ್ರೀ ಎಸ್. ವಿ. ರಂಗಣ್ಣ, ಶ್ರೀ ಎಂ.ವಿ. ಸೀತಾರಾಮಯ್ಯ, ಡಾ॥ ಶಿವರಾಂ, ಶ್ರೀಮತಿ ಜಯದೇವಿತಾಯಿ ಲಿಗಾಡೆ ಡಾ॥ ಜ.ಚ.ನಿ, ಪದ್ಮಶ್ರೀ ಶಿವಮೂರ್ತಿ ಶಾಸ್ತ್ರಿಗಳು, ಶ್ರೀ ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ, ಡಾ॥ ಎಚ್. ದೇವೀರಪ್ಪ, ವಿಶ್ವವಿದ್ಯಾನಿಲಯಗಳ, ಉಪಕುಲಪತಿಗಳಾದ ಕನ್ನಡ ಜ್ವಾಲಾಮುಖಿ ಪ್ರಾ। ದೇ. ಜ. ಗೌ ಹಾಗೂ ಕೃಷಿತಜ್ಞ ಡಾ॥ ಎಚ್.ಆರ್. ಆರಕೇರಿ, ನಿವೃತ್ತ ನ್ಯಾಯಾಧೀಶ ಶ್ರೀ ನಿಟ್ಟೂರ ಶ್ರೀನಿವಾಸರಾವ, ಶಾಸನ ಸಭೆ ಉಪಾಧ್ಯಕ್ಷರಾದ ಶ್ರೀ ಬಿ. ಪಿ. ಕದಂ, ರಾಜ್ಯ ಸಭಾಸಚಿವ ಎಚ್.ಎಸ್. ನರಸಿಂಹಯ್ಯ, ಶಾಸಕರಾದ ಶ್ರೀ ಪಿ. ಎಂ. ಬಾಂಗಿ, ಆಜನ್ಮ ಹೋರಾಟಗಾರ ಶ್ರೀ ಚೆನ್ನಪ್ಪ ವಾಲಿ, ಸಾಮಾಜಿಕ ಕಾರ್ಯ ಕರ್ತರಾದ ಶ್ರೀ ವಿ. ಜಿ. ಕುಂಬಿ, ಶ್ರೀ ಕೆ. ಎಸ್. ಪಾಟೀಲ ಮೊದಲಾದ ಮಹನೀಯರೂ ಶುಭಕೋರಿ ಸಂದೇಶ ಕಳಿಸಿದ್ದಾರೆ.

ಕನ್ನಡಿಗರ ಪೆಂಪಿನ ಅಧಿದೈವತ ಪಂಪಾವತಿ, ಹಂಪೆಯ ವಿರೂಪಾಕ್ಷೇಶ್ವರ

ಕರ್ನಾಟಕದ ಕುಲದೇವತೆ ಪಸುದೈವ ಕುಟುಂಬಕದ ಪ್ರತೀಕ
ಭುವನೇಶ್ವರಿ.

ಕನ್ನಡಿಗರ ಮನೆಮನೆಗಳಲ್ಲಿ ಮನಮನಗಳಲ್ಲಿ ನೆಲಸಿದ
ಗದುಗಿನ ವೀರನಾರಾಯಣ

ಕರ್ನಾಟಕ ಏಕೀಕರಣದ ತತ್ವವನ್ನು ಒಪ್ಪಿ 1920ರಿಂದ ಪರಸುತ್ತ ಬಂದ
ರಾಷ್ಟ್ರಪಿತ ಮಹಾತ್ಮ ಗಾಂಧೀಜಿ



ಕರ್ನಾಟಕತ್ವಕ್ಕೆ ನೈತಿಕ ಅಸ್ತಿತ್ವವನ್ನು ಸ್ಥಿರೀಕರಿಸಿದ ಐತಿಹಾಸಿಕ ಬೆಳಗಾವಿಯ
1924ರ ಕಾಂಗ್ರೆಸ್ ಮಹಾಧಿವೇಶನ ಕಾಲಕ್ಕೆ ಅಧ್ಯಕ್ಷತೆ ವಹಿಸಿದ ಮಹಾತ್ಮಾ ಗಾಂಧೀಜಿ



'ಕರ್ನಾಟಕ'ಕ್ಕೆ ಒಪ್ಪವಿತ್ತು ಆಚಂದ್ರಾರ್ಕ ಅವನ್ನು ಸ್ಥಿರಗೊಳಿಸಿದ
ನಮ್ಮ ರಾಷ್ಟ್ರಾಧ್ಯಕ್ಷರು—ಶ್ರೀ ವಿ. ವಿ. ಗಿರಿ'

ಮೈಸೂರು ಪೇಟಾದಲ್ಲಿ

'ಕರ್ನಾಟಕ'ವು ಎಂತ್ತೆ ತಲೆಯೆತ್ತಲು ಆತ್ಮನುಕೂಲವನ್ನು ನಿರ್ಮಿಸಿ ಕೊಟ್ಟ
ನಮ್ಮ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ

'ಕರ್ನಾಟಕ' ರಾಜ್ಯದ ಮೊತ್ತಮೊದಲ ರಾಜ್ಯಪಾಲರಾದ

ಮಾನ್ಯ ಶ್ರೀ ಮೋಹನಲಾಲ್ ಸುಖಾಡಿಯವರು



'ಕರ್ನಾಟಕ'ವನ್ನು ಮತ್ತೆ ಮೇಲೆತ್ತಿ ತರಲು
'ತಾಪ್ರ ನಿಮಿತ್ತ ಮಾತ್ರರು' ಎಂದುಕೊಳ್ಳುವ
ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸು

1956ರಲ್ಲಿ ಮೊದಲಸಲ 'ಕರ್ನಾಟಕ' ರಾಜ್ಯವನ್ನು ಹರಸಿದ ತ್ರಿಮೂರ್ತಿಗಳು

ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರ್

ರಾಷ್ಟ್ರಪತಿ ಶ್ರೀ ರಾಜೇಂದ್ರ ಪ್ರಸಾದ

ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪ.



ಬೇಲೂರ ಚೆನ್ನಕೇಶವ ಮಂದಿರ



ಶ್ರೀರಂಗಪಟ್ಟಣದ ಭಿತ್ತಿಚಿತ್ರಗಳು

ಬದಾಮಿಗುಹೆಯಲ್ಲಿ ಯಕ್ಷದಂಪತಿ



ಹಂಪೆಯ ವಿರೂಪಾಕ್ಷ ದೇವಾಲಯ

ಹಿಡಕಲ ಅಣೆಕಟ್ಟು



ಮಲಪ್ರಭಾ ಅಣೆಕಟ್ಟು



ಸುಪಾಬಳಿ ಕಾಲಿಂದೀ ನದಿ



ಮಂಗಳೂರು ಬಂದರು



ಇಂಗಳದ್ಹಾಳ ತಾಮ್ರದ ಗಣಿಗಳು

ಕರ್ನಾಟಕ ಕುಲಪುರೋಹಿತ
ಆಲೂರ ವೆಂಕಟರಾಯ

ಉಜ್ವಲ ಕರ್ನಾಟಕ ಯೋಧ
ಶಾಂತವೇರಿ ಗೋಪಾಲಗೌಡ

ಕರ್ನಾಟಕಕ್ಕಾಗಿ ಮಾಡಿಮಡಿದ ಮಹನೀಯರು

ಉಗ್ರಕನ್ನಡಾಭಿಮಾನಿ
ದೊಡ್ಡಮೇಟಿ ಅಂದಾನಪ್ಪ

ಕನ್ನಡ ಕಡುಗಲಿ
ಹಳ್ಳಿಕೇರಿ ಗುದ್ಲೆಪ್ಪ



ಕರ್ನಾಟಕದ ಕರ್ಮವೀರ
ದಿವಾಕರ ರಂಗನಾಥ

ಕೆಚ್ಚೆದೆಯ ಕನ್ನಡಿಗ
ಕೆಂಗಲ್ ಹನುಮಂತಯ್ಯ

ಕರ್ನಾಟಕಕ್ಕಾಗಿ ಸತತ ಪರಿಶ್ರಮಿಸುತ್ತಿರುವ ಮಹನೀಯರು

ಕರ್ನಾಟಕ ರಾಜ್ಯ ನಿರ್ಮಾಣಕ್ಕಾಗಿ ಶ್ರಮಿಸಿದ
ಕನ್ನಡ ಕಾಯಕಿ ಕೆ. ಎಫ್. ಪಾಟೀಲ

ಕರ್ನಾಟಕ ನಾಮಕರಣದ
ಅಧ್ವರ್ಯು ಕೆ. ಎಚ್. ಪಾಟೀಲ

ಸಚಿವ ಶ್ರೀ ಕೆ. ಎಚ್. ಪಾಟೀಲರೊಡನೆ
ಶ್ರೀ ಕೃಷ್ಣಕುಮಾರ ಕಲ್ಲೂರ ಹಾಗೂ ಶ್ರೀ ಕೆ. ಎಫ್. ಪಾಟೀಲ



ಸಂಪಾದಕ ಮಂಡಳಿ ಸದಸ್ಯರು

1948ನೆಯ ನವೆಂಬರ್ 15 ರಂದು ಮೈಸೂರಿನಲ್ಲಿ ಮೈ. ವಿ. ವಿ. ಸಂಘದ ವಾರ್ಷಿಕ ಅಧಿವೇಶನದಲ್ಲಿ ಕರ್ನಾಟಕ ವಿಕೀಕರಣ ಗೊತ್ತುವಳಿ ಪಾಸುಮಾಡಲಾಯಿತು. ಆಂದಿನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಕುವೆಂಪು, ಉದ್ಘಾಟಕರಾಗಿದ್ದ ಆಂದಿನ ಮುಂಬೈ ರಾಜ್ಯದ ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿದ್ದ ಶ್ರೀ ಕೆ. ಎಫ್. ಪಾಟೀಲ ಹಾಗೂ ಮುಖ್ಯ ಅತಿಥಿಗಳಾಗಿದ್ದ ಮದ್ರಾಸ್ ರಾಜ್ಯದ ಕಂದಾಯ ಮಂತ್ರಿ ಶ್ರೀ ಕೆ. ಆರ್. ಕಾರಂತರು ಹಾಗೂ ವಿದ್ಯಾರ್ಥಿ ವೃಂದ.



ಕರ್ನಾಟಕ ಕೀರ್ತಿ ಸ್ತಂಭ

ನಾಡೆತ್ತರದ ಎತ್ತುಗಡೆಗಳಿಗೆ ಇಂದು ಪ್ರಾರಂಭ,
ಯಾವುದಕೂ ಬಾಗದಿಹ ಸಂಕಲ್ಪಗಳ ಸಮಾರಂಭ ;
ಇದು ನಾಡ ಮೇಲ್ಮೈಯನು ಕೊರೆದಿಟ್ಟ ನಿತ್ಯದಾಲಂಬ,
ಬರುವ ಶತಮಾನಗಳು ಕಾದಿರುವ ಸತ್ಕೀರ್ತಿ-ಸ್ತಂಭ !



ಉಜ್ವಲಭವಿಷ್ಯದ ಸಂಕೇತವಾಗಿ, ನಾನಾ ಮುಖವಾಗಿ ಬಿಳಿಲು ಬಿಡುತ್ತಿರುವ ಪಟವೃಕ್ಷ

ಕರ್ನಾಟಕ ನಾಮಕರಣ ಮಹೋತ್ಸವ

ಕಾರ್ಯಕ್ರಮ ವಿವರಣೆ

ಹಂಪಿಯಲ್ಲಿ :

೩೧–೧೦–೭೩ ಮತ್ತು ೧–೧೧–೭೩

(೩೧–೧೦–೧೯೭೩)

ಮೊದಲನೇ ಹಂತ :

ಸಂಜೆ, ಗೋಧೂಲೀ ಮುಹೂರ್ತದಲ್ಲಿ (ಗಂಟೆ ೭ ರಿಂದ ೮) : ಪ್ರಾಸ್ತಾವಿಕ ಸಭೆ : ಪುಣ್ಯಾಹವಾಚನ, ಜಯಕರ್ನಾಟಕ ಗೀತೆ, ಸ್ವಾಗತ, ಉದ್ದೇಶ ವಿವರಣೆ, ಪೂರ್ಣ ಕುಂಭಸ್ಥಾಪನೆ ಪೂಜೆ, ಸಾಮೂಹಿಕ ಪ್ರಾರ್ಥನೆ, ಸಹಭೋಜನ.

ಎರಡನೇ ಹಂತ :

ರಾತ್ರಿ, ೧೦ ರಿಂದ ೧೨ : ಜಯಕರ್ನಾಟಕ ಗೀತೆ, ಪೂರ್ಣಕುಂಭ ಗೀತೆ, ಶ್ರದ್ಧಾಂಜಲಿ, ಸಾಮೂಹಿಕ ಪ್ರತಿಜ್ಞೆ, ಮಂತ್ರಪುಷ್ಪ (ವೇದ, ಬೈಬಲ್, ಕುರಾನ, ಧಮ್ಮಪದಾದಿ ಗಳಿಂದ), ಶ್ರದ್ಧಾಂಜಲಿ ಸಂಸ್ಮರಣೆ. ರಾತ್ರಿ ೧೨ಕ್ಕೆ ಸರಿಯಾಗಿ ಶ್ರೀ ಭುವನೇಶ್ವರಿ ಯೆದುರು ಕರ್ನಾಟಕ ಜ್ಯೋತಿ ಹೊತ್ತಿಸುವುದು. ಆರತಿ. ಭಜನೆ.

(೧–೧೧–೧೯೭೩)

ಮೂರನೇ ಹಂತ :

ಬೆಳಿಗ್ಗೆ : ಪ್ರಭಾತಫೇರಿ, ನಗರಸಂಕೀರ್ತನ, ಧ್ವಜವಂದನೆ.

ನಾಲ್ಕನೇ ಹಂತ :

೧೦ ರಿಂದ ೧೨: ಕರ್ನಾಟಕ ಜ್ಯೋತಿ ಹಾಗು ಪೂರ್ಣಕುಂಭಗಳ ಜಂಬೂಸವಾರಿ; ಮೆರವಣಿಗೆ; ಕರ್ನಾಟಕಸ್ತಂಭದ ಭೂಮಿ ಪೂಜೆ; ಪಂಚವಟಿ ವೃಕ್ಷಾರೋಪಣ. (ಶ್ರೀ ಜಯಚಾಮರಾಜ ಒಡೆಯರು, ಸಚಿವ ಸಂಪುಟದ ಶ್ರೀ ಕೆ. ಎಚ್. ಪಾಟೀಲ, ಶ್ರೀ ಎಂ. ಭೈ. ಫೋರ್ಪಡೆ, ಶ್ರೀ ಎಚ್. ಎನ್. ನಂಜೇಗೌಡ, ಶ್ರೀ ದೇವೆಂದ್ರಪ್ಪ ಘಾಳಪ್ಪಾ— ಮುಂತಾದವರು ಭಾಗವಹಿಸುವರು.) ಮಾನೋಮಿದಿಬ್ಬದ ದರ್ಶನ. ಸಾಮೂಹಿಕ ಪ್ರತಿಜ್ಞೆ (೨ನೇ ಸಲ).

ಐದನೇ ಹಂತ :

೩ ರಿಂದ ೫ : ಸಾಂಸ್ಕೃತಿಕ ಸಮ್ಮೇಲನ, ಬಹಿರಂಗ ಅಧಿವೇಶನ, ಭಾಷಣಗಳು, ಗೊತ್ತು ಪಳಿಗಳು, ಕಾವ್ಯಗಾಯನ, ಗ್ರಂಥಗಳ ಬಿಡುಗಡೆ. ಪಾರಿತೋಷಕ ವಿತರಣೆ. — ಶ್ರೀ ಜಯಚಾಮರಾಜ ಒಡೆಯರಿಂದ. (ಅಖಿಲ ಕರ್ನಾಟಕ ಸಂಸ್ಕೃತಿ ಪರಿಷತ್ತಿನ ಕಾರ್ಯಕ್ರಮ.)

ಆರನೇ ಹಂತ :

೫ ರಿಂದ ೭ : ಪಂಚವಟಿ ಪೂಜೆ, ಗದುಗು ಮೊದಲಾದ ಸ್ಥಳಗಳಿಗೆ ಕರ್ನಾಟಕ ಜ್ಯೋತಿಯ ಬೀಳ್ಕೊಡುವಿಕೆ (ಶ್ರೀ ಜಯಚಾಮರಾಜ ಒಡೆಯರಿಂದ.) ಉಚಿತೋಕ್ತಿಗಳು, ಗೀತಗಳು; ಸಾಮೂಹಿಕ ಪ್ರತಿಜ್ಞೆ (ಹಿನೇ ಸಲ); ಹಿಲಾಲುಗಳ ಮೆರವಣಿಗೆ, ಮಂಗಲ ಚರಣ, ಉತ್ಸವ ವಿಸರ್ಜನೆ.

(೫೧-೧೦-೭೩ ರ ಸಂಜೆ ೭ಕ್ಕೆ ಆರಂಭವಾಗಿ ಉತ್ಸವ ೧-೧೧-೭೩ರ ಸುಜೆ ೭ಕ್ಕೆ ಮುಕ್ತಾಯ.)

ಗದುಗಿನಲ್ಲಿ :

ದಿನಾಂಕ 3-11-73 ನೇ ಶನಿವಾರ

ಬೆಳಿಗ್ಗೆ

ಶ್ರೀ ವೀರನಾರಾಯಣನ ಗುಡಿಯಲ್ಲಿ

ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಕರ್ನಾಟಕ ಜ್ಯೋತಿಗೆ ಸ್ವಾಗತ
ಕರ್ನಾಟಕ ಜ್ಯೋತಿಯ ಮೆರವಣಿಗೆ

ಮಧ್ಯಾಹ್ನ

ಕರ್ನಾಟಕ ಉತ್ಸವ ಸಂಚಿಕೆಯ ಬಿಡುಗಡೆ

ಕರ್ನಾಟಕವು ಅಸ್ತಿತ್ವದಲ್ಲಿ ಬರಲು ಅಪೂರ್ವ ಸೇವೆ ಸಲ್ಲಿಸಿದವರಿಗೆ ಹಾಗೂ ಹೆಸರಿಸಂವಲ್ಲಿ ದಿಟ್ಟ ನಿಲುಮೆ ತಳೆದ ಸನ್ಮಾನ್ಯ ರಾಜ್ಯದ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸರಿಗೆ ಸನ್ಮಾನ

ಸಂಪಾದಕೀಯ ಆತ್ಮನಿವೇದನೆ

ಈ ಹೊತ್ತಿಗೆಯಂ ಬೇರೆ ಬೇರೆ ಭಾಗಗಳನ್ನೋದುವವರಿಗೆ, ಕನ್ನಡಿಗನ ಬಾಳು-ಬದುಕು ಹೇಗೆ ನಾಡು-ನುಡಿಗಳೊಂದಿಗೆ ಹಾಸುಹೊಕ್ಕಾಗಿ ಹೆಣೆದುಕೊಂಡಿದೆ ಎಂಬದು ಸ್ಪುಟವಾಗದಿರದು. ಆ ಮಾತನ್ನು ಕಳೆದ ನೂರು ವರ್ಷಗಳಿಂದ ನಾಡಿನ ಧೀಮಂತರೆಲ್ಲರೂ ಹೇಳುತ್ತ ಬಂದಿದ್ದಾರೆ; ವಿಚಾರವಂತರೆಲ್ಲರೂ ಮನಗಂಡಿದ್ದಾರೆ; ಭಾವುಕರೆಲ್ಲರೂ ಆಳವಾಗಿ ಅನಿಸಿಕೊಂಡಿದ್ದಾರೆ. ಈ ಮಾತು ಜಗತ್ತಿನ ಯಾವುದೇ ನಾಡಿನ ಯಾವುದೇ ಬಾಳು-ಬದುಕಿಗೂ ಅನ್ವಯಿಸುವದಾದರೂ, ಅದು ಕನ್ನಡಿಗರಿಗೆ ಹೆಚ್ಚು ತೀವ್ರವಾಗಿ, ಆಳವಾಗಿ, ಸ್ಥಿರವಾಗಿ ಅನ್ವಯಿಸುವದಗತ್ಯವಾಗಿದೆ. ಏಕೆಂದರೆ, ಕನ್ನಡಿಗ, ಪ್ರಪಂಚದ ಕೆಲವೇ ಅತಿಪುರಾತನ ನಾಗರಿಕತೆಗಳೊಂದಾದ ಕಿಷ್ಕಿಂಧಾ-ನಾಗರಿಕತೆಯ ವಾರಸುದಾರ, ಭಾರತವು ಪೂರ್ಣಸ್ವರೂಪ ತಾಳದ ಮುನ್ನವೇ ಜಗತ್ಪ್ರಸಿದ್ಧವಾಗಿದ್ದ ಜಂಬೂದ್ವೀಪದ ಗರ್ವಶಾಲಿ ಮೂಲಪುರುಷ. ಐತಿಹಾಸಿಕ ವೈಭವಕ್ಕೆ ಸರಿಜೋಡಿಲ್ಲದ, ಸಾಹಿತ್ಯ-ಸಂಗೀತ-ಕಲಾ ನೈಪುಣ್ಯಕ್ಕೆ ಸಾಟಿಯಿಲ್ಲದ ಸಾಂಸ್ಕೃತಿಕ ಗೌರವಕ್ಕೆ ಹಕ್ಕುದಾರ. ಭಾರತದಲ್ಲಿ ಮತ್ತಾವ ಪ್ರದೇಶದಲ್ಲೂ ಕಾಣಸಿಗದಷ್ಟು ದೀರ್ಘಕಾಲ ಚಕ್ರವರ್ತಿತನದ,—ಅದರೊಡನೆಯೇ ಆಧ್ಯಾತ್ಮಿಕ ಶ್ರೇಯಂ—ದಮೇಲ್ಮೈಯನ್ನು ಮೆರೆಸಿದ ಗಟ್ಟಿಗ. ಇದೆಲ್ಲವನ್ನು ಕರ್ನಾಟಕದ ವಿರಾಟ್ ಸ್ವರೂಪದಲ್ಲಿ ಕಾಣಬಹುದು.

ಭಾರತದ ಮತ್ತಾವ ಭಾಷೆಗೂ ಸಲ್ಲದಷ್ಟು ದೀರ್ಘಕಾಲ ಅವನ ತಾಯ್ನುಡಿ ಚಕ್ರವರ್ತಿಗಳಿಂದ ಸೇವೆ ಸಲ್ಲಿಸಿಕೊಂಡು ಸಾವಿರ ವರ್ಷಕ್ಕೂ ಮಿಕ್ಕಿ ರಾಜ ಭಾಷೆಯೆಂಬ ಗೆಲುವಿನಿಂದ ಮೆರೆದಿತ್ತು. ವಿಜಯನಗರದ ಕಾಲದಲ್ಲಿ ಭಾರತಕ್ಕೆ ಬರುತ್ತಿದ್ದ ಪೋರ್ಚುಗೀಸ್ ರಾಯಭಾರಿಗಳೂ ವ್ಯಾಪಾರಿಗಳೂ ಭಾರತದ ಕರಾವಳಿಯಲ್ಲಿ ಕಾಲಿಡುವದಕ್ಕೆ ಮುನ್ನವೇ ಕನ್ನಡವನ್ನು ಕಲಿತೇ ಬರುತ್ತಿದ್ದರೆಂಬುದಕ್ಕೆ ದಾಖಲೆಗಳಿವೆ. ಚಾಂದಬೀಬಿಯನ್ನು ಸಂದರ್ಶಿಸ ಹೋದ ಪೋರ್ಚುಗೀಸ್ ರಾಯಭಾರಿಯೊಬ್ಬ ಆ ರಾಣಿಯ ಪ್ರಶ್ನೆಕ್ಕೆ ಉತ್ತರಕೊಡುತ್ತ 'ತನಗೆ ಪರ್ಶಿಯನ್‌ಕಿಂತ ಕನ್ನಡ ಚೆನ್ನಾಗಿ ಬರುತ್ತದೆಂದು' ಹೇಳಿದು ದಾಗಿಯೂ ಅವರಿಬ್ಬರೂ ಆ ಮೇಲೆ ತಮ್ಮ ಅಂತರ್‌ರಾಷ್ಟ್ರೀಯ ರಾಜಕೀಯ ಚರ್ಚೆಯನ್ನು ಕನ್ನಡದಲ್ಲೇ ನಡೆಸಿದರಾಗಿಯೂ ಕರ್ನಲ್ ವೆಂಡೋಜನು ತನ್ನ 'ದಿ ನೋಬಲ್ ಕ್ವೀನ್' ಎಂಬ ಉದ್ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ. ಇದು ವಿಜಾಪುರದ ದರ್ಬಾರದ ಮಾತು. ಆ ಮಾತುಗರಿಬ್ಬರೂ ಕನ್ನಡಿಗರಿರಲಿಲ್ಲ. ಇಂದು ಇಬ್ಬರು ಅಚ್ಚಕನ್ನಡಿಗರೇ ಸೇರಿದಾಗಲೂ ಹೀಗಾಗುವದಿಲ್ಲವೆಂಬುದನ್ನು ಬಗೆದರೆ, ಕನ್ನಡಿಗ ಯಾವ ಮೇಲ್ಮೈಯ ಶಿಖರದಿಂದ ಯಾವ ಕೀಳ್ಮೈಯ ಕೊಳ್ಳಕ್ಕಿಳಿದಿದ್ದಾನೆಂಬದು ಬಿಂಬಿಸುವಂತಿದೆ. ಇದಕ್ಕೆ ಐತಿಹಾಸಿಕ ಕಾರಣಗಳು ಉಂಟೇನೋ ನಿಜ. ಏಕೀಕರಣದ ಮೊದಲು ಆ ಕಾರಣಗಳೇ ಬಾಯಿ-ಬಂಡವಾಳವಾಗು

ತ್ತಿದ್ದವು. ಹದಿನೇಳು ವರ್ಷದ ನಂತರವೂ ಕನ್ನಡ ಆಡಳಿತ ಭಾಷೆಯಾಗಲು ಶಿಕ್ಷಣ ಮಾಧ್ಯಮ ವಾಗಲು ಹಿಂದೇಟು ಹಾಕುತ್ತಿರುವುದನ್ನು ಬಗೆದರೆ ನಾವಿನ್ನೂ ಆ ಕೊಳ್ಳಿದಿಂದ ಮೇಲೇಳಲಂ ಒಲ್ಲೆವೆಂದೂ, ರಾಜಕೀಯ ಸ್ವಾತಂತ್ರ್ಯ ಪಡೆದರೂ, ಮಾನಸಿಕ-ವೈಚಾರಿಕ-ಸ್ವಾತಂತ್ರ್ಯ ವಂತ್ತು ದಿಟ್ಟತನಗಳನ್ನೂ ಪಡೆದಿಲ್ಲವೆಂದೂ ಸ್ವಭೈವ ಸಿದ್ಧವಾಗುವದು. ಇದೇ ಮಾತು ಕರ್ನಾಟಕ ಸಾಹಿತ್ಯ ಪರಿಷತ್ತಿನ ಅನೇಕಾನೇಕ ಅಧ್ಯಕ್ಷೀಯ ಭಾಷಣಗಳಲ್ಲೂ ಆಡಳಿತ ಭಾಷೆಯ ಬಗೆಗೆ ಇದ್ದ ಉಲ್ಲೇಖಗಳಲ್ಲೂ ಕಳೆದೊಂದು ಅರ್ಧಶತಕದಿಂದಲೂ ನಿರರ್ಥಕವಾಗಿ ಪ್ರತಿಧ್ವನಿತವಾಗುತ್ತ ಬಂದುದೂ ಸ್ಪಷ್ಟವಾಗಿದೆ. ಕರ್ನಾಟಕ-ಕನ್ನಡ ಎರಡೂ ಒಂದೇ ಅರ್ಥದ ಪದಗಳು. ಇನ್ನು ಮುಂದಾದರೂ ಕನ್ನಡ ತನ್ನ ಜನ್ಮಸಿದ್ಧಹಕ್ಕಿನ ಪಟ್ಟವನ್ನು ಪಡೆಯಂದಿದ್ದರೆ, 'ಕರ್ನಾಟಕ'ವಾಗಿಯೂ, ನಾಚಿಕೆಗೇಡೇ ಆದೀತು ಎಂಬುದನ್ನು ರಾಜ್ಯದಾ ಡಳಿತಕ್ಕೆ ಜವಾಬ್ದಾರರಾದವರು ಬಹಳ ಎಚ್ಚರಿಕೆಯಿಂದ ಗಮನಿಸಬೇಕಾಗಿದೆ. ಏಕೆಂದರೆ, ಒಳಗಿಗಿಂತ ಹೆಚ್ಚಾಗಿ ರಾಜ್ಯದ ಹೊರಗೆ ಈ ಅಸಮಂಜಸತೆ ಕಣ್ಣಿಸುರಾದೀತು. ಕರ್ನಾಟಕತ್ವದ ಪ್ರಥಮ ಪೌರುಷೇಯ ಇದರಲ್ಲಡಗಿದೆ ಎಂಬದು 'ಪ್ರಾಸ್ತಾವಿಕ'ದಲ್ಲಿ ಪ್ರಸ್ತುತವೇ ಆಗಿದೆ.

ವಿಧಾನಸಭೆ - ವಿಧಾನ ಪರಿಷತ್ತುಗಳಲ್ಲಿ 'ಕರ್ನಾಟಕ'ವು ಯಾವ ಉಲ್ಲಾಸ-ಉತ್ಸಾಹ ಉದ್ರೇಕಗಳಿಂದ ಸ್ವೀಕೃತವಾಯಿತೆಂಬುದನ್ನು ಬಗೆದರೆ, ಕನ್ನಡಿಗನಿಗೆ ಪ್ರಾಚೀನ ಗೌರವದ ಸ್ವರ್ಗ ಮೂರೇ ಬೆರಳು ಉಳಿದಂತೆಯೂ, ನವೆಂಬರ್ 1 ರಿಂದ, ಆ ಅಂತರವೂ ಅಳಿದು, ಪ್ರತಿ ಕನ್ನಡಿಗ ಸತ್ಯಾಶ್ರಯ ಪುಲಿಕೇಶಿ ಪರಮೇಶ್ವರನೇ ಆಗುತ್ತಾನೇನೋ ಎಂಬ ಭಾಸವಾಗುತ್ತದೆ. ಆ ಭಾಸ ಅಭಾಸವಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಆ ಚಾರಿತ್ರಿಕ ನಿರ್ಣಯಕ್ಕೆ ಪಾಲುಗಾರನಾದ ಪ್ರತಿಯೊಬ್ಬನೂ ತನ್ನ ತಲೆಯಮೇಲೆ ತಾನೇ ಹೊತ್ತಿದ್ದಾನೆಂಬುದೂ ಸ್ವಯಂ ಸಿದ್ಧ. ಅವರ ಜವಾಬ್ದಾರಿಯ ಪರಿಧಿಯೆಷ್ಟು ವಿಸ್ತಾರವಾದುದೂ ಎಂಬದೂ 1956ರ ಉದ್ಧೃತ ಉಲ್ಲೇಖಗಳಲ್ಲೂ, ಕರ್ನಾಟಕ ಕುಲಪುರೋಹಿತ ದಿವಂಗತ ಆಲೂರು ವೆಂಕಟ ರಾಯರ ಮಂತ್ರೋಕ್ತಿಗಳಲ್ಲೂ, ಕವನಗಳ ಅಭಿಷ್ಟೋಕ್ತಿಗಳಲ್ಲೂ, ಹಂಪೆಯ ಹಪಾಹಪಿ ಯಲ್ಲೂ, ಇತಿಹಾಸ, ಉದ್ಯೋಗ, ಕೃಷಿ ಹಾಗೂ ಜನಪದಕ್ಕೆ ಸಂಬಂಧಪಟ್ಟ ಲೇಖಗಳಲ್ಲೂ ಕೊರೆದು ತೋರಲ್ಪಟ್ಟಿದೆ. ಇದೆಲ್ಲದುದರಿಂದ ಕರ್ನಾಟಕ ಆಗದಿದ್ದುದರಕಿಂತ, ಆದೀಗ ಆಗಿರುವದರಿಂದ ಕನ್ನಡಿಗರ, ಹಾಗು ಆಡಳಿತದ, 'ರಾಷ್ಟ್ರೀಯ' ಹೊಣೆಗಾರಿಕೆ, ಇನ್ನೂ ಹೆಚ್ಚುತ್ತದೆ.

ಇದೆಲ್ಲದಕ್ಕೂ ಹಿನ್ನೆಲೆಯಾಗಿ ಏಕೀಕರಣದ ಹೋರಾಟವೂ, ಅದಕ್ಕಾಗಿ ಮಾಡಿ ಮಡಿ ದವರ 'ಕಾಯಕ'ದ ಪುಣ್ಯವೂ, ಸ್ವಾತಂತ್ರ್ಯ ಸಂಗ್ರಾಮದ ಪ್ರಭಾವಳಿಯೆದುರು, ಮೂಡಿ ಬಂದಿವೆ. ಆ 'ಕಾಯಕ'ದಿಂದಾಗಿ 'ಕೈಲಾಸ'ವನ್ನು ಕರತಲಾಮಲಕವಾಗಿಸಿಕೊಂಡವರ ಋಣದ ತೀರಲಾರದ ಭಾರವು, ಕನ್ನಡಿಗನ ತಲೆಯೇರಿ ಹೇರಿಕೊಂಡು ನಿಂತಿದೆ. ಅದನ್ನಿಳಿಸಲು ಪ್ರತಿ ಕನ್ನಡಿಗ ಹಗಲಿರುಳು ಶತಮಾನದುದ್ದಕ್ಕೂ ದುಡಿದರೂ ಸಾಲದಂತಿದೆ. ಅವರಿಗೆಲ್ಲ ಪ್ರತ್ಯೇಕ

ವಾಗಿ ಶ್ರದ್ಧಾಂಜಲಿ ಅರ್ಪಿಸಿಯಾಗಿದೆ. (ಅವರಲ್ಲೂ ಹಲಕೆಲವರು ಹೆಸರಿಸದೆ ಉಳಿದಿರ ಬಹುದು)* ಅವರೊಂದಿಗೆ ಕರ್ನಾಟಕಕ್ಕಾಗಿ ಎಂದಿನಿಂದ ಇಂದಿಗೂ ದುಡಿಯುತ್ತಲಿರುವ ಅಸಂಖ್ಯ ಕನ್ನಡ 'ಕಾಯಕಿ'ಗಳಿದ್ದೇ ಇದ್ದಾರೆ. ಅಂಥ ಸಹಸ್ರಾರು ಮಂದಿಯಲ್ಲಿ ಹಲವರು, ಬರೆಹ, ಚಿಂತನೆ, ಭಾಷಣ, ಸಾಂಘಿಕ ಚಟುವಟಿಕೆ, ಸ್ವಯಂ ಸೇವಕತ್ವ, ಪತ್ರಿಕೆ, ಪ್ರದರ್ಶನ, ಸಭೆ, ಪ್ರತಿಭಟನೆಗಳ ಮೂಲಕ. ಅಥವಾ ಶಾಸಕರಾಗಿ, ಸರಕಾರದ ಧುರೀಣತ್ವ ವಹಿಸಿ, ಹೀಗೆ ಅನೇಕಾನೇಕ ರೀತಿಯಲ್ಲೂ ಪ್ರತ್ಯಕ್ಷಾಪ್ರತ್ಯಕ್ಷವಾಗಿ ಅಳಿಲು ಸೇವೆಯಿಂದ ಹಿಮಾಲಯ ದೆತ್ತರದವರೆಗೂ ಸೇವೆ ತಪಸ್ಯೆ ಸಲ್ಲಿಸಿದ್ದಾರೆ. ಇವರೆಲ್ಲರಿಗೂ–ಒಳನಾಡ-ಹೊರನಾಡವ ರಿಗೂ, ಜ್ಞಾತಾಜ್ಞಾತರಿಗೂ, ಇನ್ನು ಮುಂದೆ ಸಹ ದಿವ್ಯ–ಭವ್ಯ ಕರ್ನಾಟಕ ಕಟ್ಟಲು ಕಂಕಣ ಬದ್ಧರಾಗುವ ಹಿರಿ-ಕಿರಿಯರಿಗೂ ಈ ಪರ್ವಕಾಲ, ಈ ಪುಣ್ಯಾಹದಂದು ಕರ್ನಾಟಕೇಶ್ವರಿ ಭುವನೇಶ್ವರಿಯ ಹೆಸರಿನಲ್ಲಿ ಶುಭಾಕಾಂಕ್ಷೆಗಳನ್ನೂ, ಅಭಿನಂದನೆ–ಅಭಿವಂದನೆಗಳನ್ನೂ ಸಲ್ಲಿಸುತ್ತೇವೆ. ಯಾರನ್ನೂ ಮರೆತು ಬಿಡುವ ಇಚ್ಛೆ ಎಳ್ಳಷ್ಟೂ ಇಲ್ಲ. ಇದಲ್ಲದೆ 'ಕರ್ನಾಟಕ' ನಾಮಕರಣಕ್ಕೆ, ವಿವಿಧ ಕ್ಷೇತ್ರಗಳಲ್ಲಿದ್ದು, ಹಿಂದೂ, ಇಂದೂ, ಕಾರಣರಾದವರಿ ಗೆಲ್ಲ ಕನ್ನಡಿಗರೆಲ್ಲರ ಪರವಾಗಿ ಈ ಮೂಲಕ ಗೌರವದ ಸಂಸ್ಮರಣೆ ಸಲ್ಲಿಸುತ್ತಿದ್ದೇವೆ. (ಶಾಸಕರೇ ಮುಂತಾದವರ ಪ್ರತ್ಯೇಕ ಉಲ್ಲೇಖವು ಕೊನೆಯಲ್ಲಿ ಕೊಡಲ್ಪಟ್ಟಿದೆ.)

ಅಂಥವರೆಲ್ಲರನ್ನು ವ್ಯಕ್ತಿಶಃ ಸ್ಮರಿಸುವದೂ ಅಶಕ್ಯದ ಮಾತೇ! ಆದ್ದರಿಂದ ಅವರಿಗೆ ಪೊತ್ತದಲ್ಲಿ ಮಾತ್ರ, ಪತ್ರಂ, ಪುಷ್ಪಂ, ಫಲಂ, ತೋಯಂ ಎಂಬುದಾಗಿ, ನಮ್ಮ ಹಾರ್ದಿಕ ಸಂಸ್ಮರಣಾ ಸಮರ್ಪಣೆ ಮಾಡಿ ಸಮಾಧಾನ ಮಾಡಿಕೊಳ್ಳಬೇಕಾಗಿದೆ.*

ಹಂಪೆಯಲ್ಲಿ ನಡೆಯುವ ಈ ಕರ್ನಾಟಕೋತ್ಸವವು ಜನತೆಯ ಪರವಾಗಿ ನಡೆಯು ವಂಥದು. ಇದಕ್ಕೆ ಜನ ಸಾಮಾನ್ಯರು, ಸಂಘ-ಸಂಸ್ಥೆಗಳು, ಸರ್ಕಾರವೂ ಸಹ ಮುಕ್ತ ಹಸ್ತ ಸಹಾಯ ಸಲ್ಲಿಸಬಹುದು. ಇಂದಿನ ಈ ಉತ್ಸವದ ತಾಯಿ-ಬೇರು ೧೯೫೬ರಲ್ಲೂ ಹಂಪೆ ಯಲ್ಲೇ ನಡೆದ ಸಾಂಸ್ಕೃತಿಕ ಉತ್ಸವದಲ್ಲಿದೆಯೆಂಬದು ಆ ಉತ್ಸವದ ವರದಿಯಿಂದ ತಿಳಿಯುವಂತಿದೆ. ಇಂದಿಗಾಗಿ ಅಂದೇ ಒಂದು ಪ್ರತಿಜ್ಞೆಯನ್ನು ಕೈಕೊಳ್ಳಲಾಯಿತೆಂಬದು 'ಪ್ರಾಸ್ತಾವಿಕ' ದಿಂದ ತಿಳಿಯುವಂತಿದೆ. ಆ ಪ್ರತಿಜ್ಞೆ ಇಂದು ಕರ್ನಾಟಕ ಮಾತೆಯ ಮಕ್ಕಳನೇಕರ ನೆರವಿನಿಂದ ಕೈಗೂಡುತ್ತಿದೆ. ಒಂದು ರೀತಿಯಿಂದ ನೋಡಿದರೆ, ಇದು ಆತ್ಮತೃಪ್ತಿ ಗಾಗಿ ಕೈಕೊಂಡ ಕಾರ್ಯ. ೧೯೭೨ ರ ಆಗಷ್ಟದಂದು ಬರೆದ ನನ್ನೊಂದು ಕರೆಗೆ ಶ್ರೀ ಕೆ. ಎಫ್. ಪಾಟೀಲರು ತಟ್ಟನೆ ಓಗೊಟ್ಟು ಹಿಂದಿನ ಪ್ರತಿಜ್ಞೆಯನ್ನು ನೆನಪು ಮಾಡಿದರು. ಅಂದಿನಿಂದಲೇ

---

*ಇಂಥವರದೊಂದು ನಾಮಾವಲಿಯನ್ನೇ ಸಂಕಲಿಸುವ ವಿಚಾರವಿದೆ. ಈಗಾಗಲೇ 5–6 ನೂರು ಹೆಸರುಗಳು ಸಂಕಲಿತವಾಗಿವೆ. ಯಾರನ್ನೂ ಮರೆತಾಗಲಿ ಅರಿಯದೆಯಾಗಲಿ ಬಿಡಬಾರದೆಂದೇ, ಈ ಉತ್ಸವ ಸಂಚಿಕೆಯಲ್ಲಿ ಅಂಥ ಹೆಸರುಗಳನ್ನು ಪ್ರಕಟಿಸಬೇಕೆಂಬ ನಮ್ಮ ಲವಲವಿಕೆಗೆ ಲಗಾಮು ಹಾಕ ಬೇಕಾಯಿತು. ಜನತೆ ಈ ಕಾರ್ಯದಲ್ಲಿ ನೆರವಾಗಬೇಕು.

ಯೋಜನೆ ಆರಂಭವಾಗಿ, (ಸರ್ಕಾರೀ ನಿರ್ಣಯ ತಡೆಗಟ್ಟಿದಂತೆ ಆ ಯೋಜನೆಯೂ ತಡೆಗಟ್ಟುತ್ತ ಬಂದರೂ,) ಕೊನೆಗೀಗ ಅದು ಹಣ್ಣುಗೊಳ್ಳುವ ಹದ ಬಂದಂತಾಯಿತು. ಕರ್ನಾಟಕವು ನಿಜನಾಮಧಾರಿಯಾಗುವ ಪರ್ವದಿನಕ್ಕಾಗಿ ನನ್ನ ಕೆಲವು ಮಹತ್ವಾಕಾಂಕ್ಷೆಗಳಿದ್ದುವು. ಅವನ್ನೆಲ್ಲಾ ಶ್ರೀ ಕೆ. ಎಫ್. ಪಾಟೀಲರು, ಅವರೊಡನೆ, ಹೆಚ್ಚು ಮುಖ್ಯವಾಗಿ ಸಚಿವ ಶ್ರೀ ಕೆ. ಎಚ್. ಪಾಟೀಲರು ವ್ಯಕ್ತಿಶಃ ಮೆಚ್ಚಿದುದಲ್ಲದೆ ಬಲವಾಗಿ ಸಮರ್ಥಿಸಿದರು. 'ಕರ್ನಾಟಕ ಜ್ಯೋತಿ',—ಆಗಲಿ ಎಂದರು. 'ಕರ್ನಾಟಕ-ಸ್ತಂಭ',—ಅದೂ ಆಗಲಿ ಎಂದರು. ಸಾಂಸ್ಕೃತಿಕ ಜಂಬೂ ಸವಾರಿಗೂ 'ಹೂಂ' ಎಂದರು. ಅದೂ ಅಲ್ಲದೆ, ಉತ್ಸವ ಸಂಚಿಕೆ, ಕರ್ನಾಟಕಕ್ಕಾಗಿ ದುಡಿದವರಿಗಾಗಿ ಗೌರವ-ಗಳ ಪ್ರಸ್ತಾಪವನ್ನು ಅವರೇ ಮಾಡಿದರು. ಒಂದು ಸಂಯೋಜಿತ ಯೋಜನೆಯೂ ಸಮಿತಿಯ ರಚನೆಯೂ, ಕಾರ್ಯಾರಂಭವೂ, ಆದುವು. ಹಂಪೆಗಾಗಿ ಸಿದ್ಧತೆಗಳು ಸನ್ನದ್ಧವಾದುವು. ಆ ಆಯಕಟ್ಟಿನ ಹೊತ್ತಿನಲ್ಲಿ ಬಹಳ ಹೆದರಿ ಹೆದರಿ, ಶ್ರೀಮಾನ್ ಜಯಚಾಮರಾಜರನ್ನು ಕರೆಸುವ ಬಗೆಗೆ ಮಾಡಿದ ಸೂಚನೆಯನ್ನೂ ಶ್ರೀ ಕೆ. ಎಫ್. ಪಾಟೀಲರೂ, ಶ್ರೀ ಕೆ. ಎಚ್. ಪಾಟೀಲರೂ ಸಮರ್ಥಿಸಿದ್ದಲ್ಲದೆ ಅವರನ್ನು ಕರೆತರಲು ಮಾಡಬೇಕಾದ ನೆರವನ್ನೆಲ್ಲಾ ಇಬ್ಬರೂ ಮಾಡಿದರು. ಇದಕ್ಕಾಗಿ ಅವರಿಬ್ಬರಿಗೂ ಅನಂತ ಅಭಿನಂದನೆಗಳು. ಇದನ್ನೆಲ್ಲ ಚಿಗುರಿಸಿದವರೇ ಅವರು.

ಎಲ್ಲಕ್ಕೂ ಹೆಚ್ಚಾಗಿ ನಮ್ಮ, ಕನ್ನಡಿಗರಲ್ಲರ, ಕೃತಜ್ಞತೆಗಳು ಸಲ್ಲಬೇಕಾದದ್ದು ಶ್ರೀಮಾನ್ ಜಯಚಾಮರಾಜ ಒಡೆಯರಿಗೆ ಮತ್ತು ಮುಖ್ಯಮಂತ್ರಿ ಶ್ರೀ ದೇವರಾಜ ಅರಸರಿಗೆ. ಕರ್ನಾಟಕದ ನಿರ್ಮಿತಿಗೆ ನಿಮಿತ್ತ ಮಾತ್ರರು ತಾವು ಎಂದು ತಮ್ಮ ಸಜ್ಜನಿಕೆಯನ್ನು, ವೈಯಕ್ತಿಕ ಅಭಿಪ್ರಾಯವೇನೇ ಇದ್ದರೂ, ಜನತೆಯ ಇಚ್ಛೆಯನ್ನು ಸಂತೋಷದಿಂದ ಸ್ವಾಗತಿಸಿ ಆನಂದಿಸುತ್ತೇನೆ ಎಂದು ತಮ್ಮ ಹಿರಿ-ಮುತ್ಸದ್ದಿತನ ಮತ್ತು ಗೌರವ ಭಾವವನ್ನು ಪ್ರಕಟಿಸಿ ಕರ್ನಾಟಕವನ್ನು ಒಪ್ಪಿಕೊಂಡ, ಅಪ್ಪಿಕೊಂಡ, ಶ್ರೀ ದೇವರಾಜರು ನಿಜವಾಗಿಯೂ ಗೌರವಾರ್ಹರು. ನಮ್ಮ ಮಾಜೀ ಮಹಾರಾಜರಾದ ಶ್ರೀಮಾನ್ ಜಯಚಾಮರಾಜ ಒಡೆಯರ ಬಗ್ಗೆ, ಕರ್ನಾಟಕತ್ವದ ಸಂದರ್ಭದಲ್ಲಿ, ಯಾರೂ ಎರಡೆಣಿಸುವಂತಿಲ್ಲ. ೧೯೫೬ರ ೧ನೇ ನವೆಂಬರದಂದೇ, ಮಿಕ್ಕೆಲ್ಲ ಅತಿರಥಿ ಮಹಾರಥಿಗಳು ಹಿಂದೇಟು ಹಾಕಿದಾಗ, ಅವರೊಬ್ಬರೆ ನಮ್ಮ ನಾಡಿಗೆ ಮುಕ್ತ ಭಾವದಿಂದ, ಮುಕ್ತ ಕಂಠದಿಂದ, 'ಕರ್ನಾಟಕ' ಎಂದವರು. ಆ ಅಭೀಷ್ಟೋಕ್ತಿ ಇಂದು ಸತ್ಯವಾಗಿರುವಾಗ ಅವರನ್ನು ಗೌರವಿಸದಿದ್ದರೆ ಹೇಗೆ - ಮೇಲಾಗಿ ಅವರು ಉಜ್ವಲ ಕನ್ನಡಿಗರು ; ಪ್ರಪ್ರಥಮ ಕರ್ನಾಟಕಸ್ಥ ನಾಗರಿಕರು. ಈ ಜನತೆಯ ಉತ್ಸವದಲ್ಲಿ, ತಮ್ಮ ಹಲವು ಅನಾನುಕೂಲತೆಗಳನ್ನು ಬದಿಗಿರಿಸಿ, (ಹಂಪೆ-ಗದುಗುಗಳಲ್ಲಿ) ಭಾಗವಹಿಸಲು ಒಪ್ಪಿದ್ದೇ ಒಂದು ಅಗ್ಗಳಿಕೆಯ ಮಾತು. ಆದುದರಿಂದ ಅವರಿಗೆ ನಮ್ಮ ಪ್ರಿಕರಣ ಪೂರ್ವಕ ಧನ್ಯವಾದಗಳು ; ಇವರಂತೆಯೇ, ಸಚಿವ ಶ್ರೀಗಳಾದ, ಶ್ರೀ ಎಂ. ವೈ. ಘೋರ್ಪಡೆ, ಶ್ರೀ ಎಚ್. ಎನ್. ನಂಜೇಗೌಡರು, ಶ್ರೀ ಡಿ. ಕೆ. ನಾಯಕರ್. ಶ್ರೀ ಅಜೀಝುಸೇಠ್, ಶ್ರೀ ಹುಚ್ಚಮಾಸ್ತಿಗೌಡರು, ಶ್ರೀ ಸಂಗಪ್ಪ ನಾಗರಾಳ, ಶ್ರೀ ದೇವೆಂದ್ರಪ್ಪ ಘಾಳಪ್ಪ

ಮೊದಲಾದವರಿಗೂ ಹಂಪೆ ಗದಗುಗಳೆರಡರಲ್ಲೂ ಭಾಗವಹಿಸಲೊಪ್ಪಿದ್ದಕ್ಕಾಗಿ ಧನ್ಯವಾದಗಳು. ಹಂಪೆಯಲ್ಲಿ ವಿಶೇಷ ಪ್ರದರ್ಶನವನ್ನೇರ್ಪಡಿಸಿದ ಮದ್ರಾಸಿನ-ಬೆಂಗಳೂರಿನ ಆರ್ಕಿಯಾಲಾಜಿಕಲ್ ಅಧಿಕಾರಿಗಳಿಗೂ ಧನ್ಯವಾದಗಳು, ವಿಶೇಷ ಕೃತಜ್ಞತೆಗಳು. ನಮ್ಮ ಉತ್ಸವ ಸಂಚಿಕೆಯ ತಯಾರಿಗಾಗಿಯೂ, ಹಂಪೆ-ಗದುಗಗಳಲ್ಲಿಯ ಸರ್ವಸನ್ನಾಹಗಳಿಗೂ ಆತ್ಮೀಯತೆಯಿಂದ ನೆರವಾದ ಬೆಂಗಳೂರು, ಬಳ್ಳಾರಿ, ಹೊಸಪೇಟೆ, ಕಮಲಾಪುರ, ಗದುಗು ಮುಂತಾದೆಡೆಗಳ ಸ್ಥಳೀಯ ಅಧಿಕಾರ ವರ್ಗದವರಿಗೂ, ಅವರ ಸಿಬ್ಬಂದಿಯವರಿಗೂ, ಮುನಿಸಿಪಾಲಿಟಿ, ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೂ ಪಂಪಾಪತಿ ವೀರನಾರಾಯಣ ದೇವಸ್ಥಾನದ ಅಧಿಕಾರಿಗಳಿಗೂ ಅವರವರ ಸಿಬ್ಬಂದಿಯವರಿಗೂ, ಪ್ರತ್ಯಕ್ಷಾಪ್ರತ್ಯಕ್ಷವಾಗಿ ನೆರವಾದ ಕಾರ್ಯಕರ್ತರು, ಕೆಲಸಗಾರರು, ಸ್ವಯಂ ಸೇವಕರು. ಕಾರ್ಮಿಕರಿಗೂ ಸಹ ನಾವು ಅತ್ಯಂತ ಕೃತಜ್ಞರು. ಆರಣ್ಯ ಹಾಗು ತೋಟಗಾರಿಕೆ ಇಲಾಖೆಯವರಿಗೂ, ಸ್ಥಳೀಯ ಅನುಕೂಲತೆಗಳಿಗಾಗಿ. ವಿಶೇಷ ಧನ್ಯವಾದಗಳು. ಕರ್ನಾಟಕದ ವಿವಿಧ ಭಾಗಗಳಿಂದ ಸ್ವಯಂಸ್ಫೂರ್ತಿಯಿಂದ ಬಂದು ಯಾರೋ ಕಂಡ ಕನಸನ್ನು ತಮ್ಮ ದೆಂದೆಣಿಸಿ ನನಸಾಗಿಸಿಕೊಟ್ಟು ಉತ್ಸವಕ್ಕೆ ಕಳೆಕಟ್ಟಿದ ಕನ್ನಡ ಯಾತ್ರಿಕರಿಗೆಲ್ಲ ಇನ್ನೂ ಹೆಚ್ಚಿನ ಅಭಿನಂದನೆಗಳು. ಈ ಉತ್ಸವದ ಮೂಲ ೧೯೫೬ ಹಾಗು ೧೯೭೨ರಲ್ಲೂ ಮುಂಬಯಿಯಲ್ಲೇ ಆದುದರ ಅಭಿಮಾನ ಹಿಡಿದು ಅಷ್ಟು ದೂರದ ಮುಂಬಯಿಯಿಂದಲೂ ಎತ್ತಿ ಬಂದ ಹೊರನಾಡ ಕನ್ನಡಿಗರು ನಮ್ಮ ವಿಶೇಷ ಕೃತಜ್ಞತೆಗೆ ಪಾತ್ರರು. ತೀರ ಅಲ್ಪಾವಧಿಯಲ್ಲಿಯೂ ಈ ಸಂಚಿಕೆಯನ್ನು ಉತ್ಸಾಹ ದಕ್ಷತೆಗಳಿಂದ ತಯಾರಿಸಿಕೊಟ್ಟ ಸರ್ಕಾರ ಮುದ್ರಣ ಇಲಾಖೆ ಹಾಗು ಮುದ್ರಣಾಲಯದ ಉಚ್ಚಾಧಿಕಾರಿಗಳಿಗೂ, ಕಂಪೋಜಿಟರರೇ ಮೊದಲಾದವರೆಲ್ಲರಿಗೂ. ಆತ್ಮೀಯ ಕೃತಜ್ಞತೆಗಳು. ಕೊನೆಯದಾಗಿ, ಲೇಖಕರು, ಪತ್ರಿಕಾಕರ್ತರು ಸಂಪಾದಕ ಕಾರ್ಯಕಾರಿ ಮಂಡಲಿಗಳ ಸದಸ್ಯರು ಸಲಹೆಗಾರರು ಹತ್ತೇ ದಿನಗಳಲ್ಲಿ ಹಮ್ಮಿದ ಹವ್ಯಾಸಕ್ಕೆ ಹದತಂದು ಕೊಟ್ಟರು; ಅವರಿಗೆಲ್ಲ ಅನಂತ ವಂದನೆಗಳು. ಅಲ್ಪಾವಧಿಯಿಂದಾಗಲೀ, ನಮ್ಮ ಗಳ ಕೊರತೆಯಿಂದಾಗಲಿ ಉಂಟಾದ ಕುಂದುಗಳಿಗಾಗಿ 'ಕ್ಷಮೆ' ಕೊರುತ್ತೇವೆ.

ಈ ಉತ್ಸವ ಹಂಪೆ ಗದುಗುಗಳಲ್ಲೇಕೆ ಎಂಬುದು ಪ್ರಾಸ್ತಾವಿಕದಲ್ಲಿ ಉತ್ತರಿಸಲ್ಪಟ್ಟಿದೆ. ಕರ್ನಾಟಕಕ್ಕಾಗಿ ದುಡಿದವರಿಗೆ ಗೌರವ ಸಲ್ಲಿಸಲು ಗದುಗು ಹೆಚ್ಚು ಅನುಕೂಲ, ಅಲ್ಲಿಯ ಕಾರ್ಯಕರ್ತರ ನೆರವು ಹೆಚ್ಚು ಆಗತ್ಯ. ಅಲ್ಲದೆ ಹಂಪೆಗೆ ಅದು ನೆರಮನೆ; ಹರಿಹರ ತತ್ವದ ಇನ್ನೊಂದು ಪ್ರತೀಕನಂಬಿದ್ದ ವೀರನಾರಾಯಣನ ಆವಾಸ; ಕುಮಾರವ್ಯಾಸನ ಕಾವ್ಯ-ಕ್ಷೇತ್ರ. ಕರ್ನಾಟಕ ಜ್ಯೋತಿಯನ್ನು ಒಯ್ಯಲು ತಾವಾಗಿ ಮೊದಲು ಮುಂದೆ ಬಂದ ಉತ್ಸಾಹಿಗಳ ಊರಂ. ಇನ್ನು, ಹಂಪೆಯೋ, ಕರ್ನಾಟಕದ ಸಾಂಸ್ಕೃತಿಕ ಹೃದಯ. ಹನುಮ ಶಕ್ತಿಯ ತವರು. ಆದೀಗ ಯಾರದೂ ಅಲ್ಲವೆಂತಲೇ, ಕನ್ನಡಿಗರೆಲ್ಲರ ಹಕ್ಕಿನ 'ಕೊಂಪಿ'. ಆ ಕೊಂಪಿಯದೊಂದು 'ನೋಂಪಿ' ನೇರವೇರಬೇಕಾಗಿದೆ. ಕನ್ನಡಿಗರ ಅಂತಃಕರಣದ ರಕ್ತ ಕುದಿದರೆ ಮಾತ್ರದು ಗಗನದ ಎತ್ತರಕ್ಕೇರಬೇಕಾಗಿದೆ ಹಿಂದಿನಂತೆ. ಅದರ ಹೊಣೆ, ಆಣೆ, ಪ್ರತಿ

ಕನ್ನಡಿಗನಿಗೂ ಇದೆ. ಪಾವಿತ್ರ್ಯದಲ್ಲಿ ಅದು ಕಾಶಿಗಿಂತಲೂ ಹಿರಿದು ಎಂದಿದ್ದಾನೆ ಹರಿಹರ ಕವಿ. ಐತಿಹಾಸಿಕವಾಗಿಯಂತೂ ಅದು ಕಾಶಿಗಿಂತ ಪುರಾತನ. ದಿ. ಅಲೂರವರು ಒಂದೆಡೆ ಲಾಕ್ಷಣಿಕವಾಗಿ, 'ಕರ್ನಾಟಕ ಭಾರತಕ್ಕಿಂತಲೂ ದೊಡ್ಡದು, ಸತ್ವದಲ್ಲಿ,' ಎಂದಿದ್ದಾರೆ. ಅದೇ ಲಾಕ್ಷಣಿಕ ಕತೆಯಿಂದ.—'ಹಂಪೆ ಕರ್ನಾಟಕಕ್ಕಿಂತಲೂ ದೊಡ್ಡದು.' ಹಿರಿಯ ಸಂಸ್ಕೃತಿಯೊಂದು ಉದಯಿಸಿದ, ರಾಮ ಹನುಮರ ಸಖ್ಯವನ್ನು ಕಂದುರಿಸಿದ ಹಿರಿಮೆ ಹಂಪೆಯಂದು. ಅಯೋಧ್ಯೆ ಹಂಪೆಗಳ ನಡುವೆ ಎಂದೂ ಜಗ್ಗದ, ತಗ್ಗದ, ಕುಗ್ಗದ, ರಾಷ್ಟ್ರೀಯ ಸಮನ್ವಯ ತೆಯ ಸೇತುವೆ ಕಟ್ಟಿ ಭಾರತದ ದಕ್ಷಿಣೋತ್ತರಗಳನ್ನು ಪ್ರಬಲವಾಗಿ ಬೆಸೆದ ಪುಣ್ಯ ಹಂಪೆಯಂದು ಅದರ 'ವಾರಸುದಾರ' ಕನ್ನಡಿಗ, ಆ ಹಂಪೆಯೀಗ ಸಂಪುಟವಾಗಿದೆ. ಅದು ತೆರೆದು ಮತ್ತೊಂದು ಗೌರವಶಾಲಿ ಮನ್ವಂತರವು ಬ್ರಹ್ಮ-ಕಮಂಡಲದಂತೆ ಅರಳಬೇಕಾಗಿದೆ.. ಅದರ ಹೊಣೆ ಪ್ರತಿ ಕನ್ನಡಿಗನದು. ಅವನ ಸದ್ಯದ ಗ್ಲಾನಿಯಿಂದಾದ ವಿದ್ಯಾರಣ್ಯರ ನಾಚಿಕೆ ಮೌನ, ಅರೆಮಬ್ಬಾದ ಭುವನೇಶ್ವರಿಯ ಇಂಗಿತ, ತುಂಗಭದ್ರೆಯ ತಬ್ಬಿಬ್ಬಾಗುವಿಕೆ ಇವೆಲ್ಲವುಗಳನ್ನು ಪರಿಹರಿಸಿ, ಕನ್ನಡಿಗನು ರಾಘವಾಂಕ ಹರಿಹರರ ಶಾಪದಿಂದ ಮುಕ್ತನಾಗಿ, ಹಂಪೆಯನ್ನೂ, ತನ್ಮೂಲಕ ಕರ್ನಾಟಕ ಭಾರತಗಳನ್ನೂ ಎತ್ತಬೇಕಾಗಿದೆ. ಅದಕ್ಕಾಗಿ ಚಾಲುಕ್ಯ ವಿಜಯ ನಗರದವರ ಕಾಲದಿಂದಲೂ ಆ ಎತ್ತುವ ಮಹಾವರಾಹ ಶಕ್ತಿ ಕನ್ನಡಿಗನಿಗಾಗಿ, ಕಾದು, ಕಾದು ಕಾಯುತ್ತಿದೆ, ಅವನು ಅದನ್ನರಿತರೆ ಸಾಕೆಂದು ! ಹಂಪೆಯಲ್ಲಿ ಇಂದು ಚಿಗುರಿದ ಅಗಿ ಮಹಾವೃಕ್ಷವಾಗುವದು ಕನ್ನಡಿಗನ ಸಂಕಲ್ಪ ಕಾಯಕಗಳನ್ನವಲಂಬಿಸಿದೆ.

ಬೆಂಗಳೂರು,

೩೦-೧೦-೭೩

—ಕಲ್ಲೂರ ಕೃಷ್ಣಕುಮಾರ,

ಪ್ರಾಸ್ತಾವಿಕ

ಭಾಷಾವಾರು ಪ್ರಾಂತಗಳ ರಚನೆಯ ತತ್ವವನ್ನು ರಾಷ್ಟ್ರವು ಒಪ್ಪಿಕೊಂಡ ಮೇಲೂ ಅದು ಪ್ರತ್ಯಕ್ಷವಾಗಿ ಅಸ್ತಿತ್ವದಲ್ಲಿ ಬರಲು ಬಹುಕಾಲ ಹಿಡಿಯಿತು. ಅದರ ಅನುಷ್ಠಾನಕ್ಕೆ ಬಹಳ ಜನ, ಬಗೆ ಬಗೆಯ ಪರಿಶ್ರಮ ವಹಿಸಬೇಕಾಯಿತು. ಅದರಂತೆಯೇ ಕನ್ನಡನಾಡು, ನುಡಿ, ಸಂಸ್ಕೃತಿಗಳೆಲ್ಲವುಗಳ ಸಮಗ್ರ ಸಂಕೇತವಾದ ನವ ರಾಜ್ಯಕ್ಕೆ ಕರ್ನಾಟಕವೆಂಬ ಹೆಸರು ಅಧಿಕೃತವಾಗಿ ದೊರೆಯುವುದಕ್ಕೆ ಬಹುಕಾಲ, ಪರಿಶ್ರಮಗಳೂ ಹಿಡಿದವು. ಅಂಥ ವಿಳಂಬ ನಾಡ ಇತಿಹಾಸದಲ್ಲಿ ಅಸ್ವಾಭಾವಿಕವೇನೂ ಅಲ್ಲ. ವಿಳಂಬಕ್ಕೆ ಕಾರಣಗಳೇನು ? ಕಾರಣರಾರು? ಇವು ಈ ಪ್ರಸಂಗದಲ್ಲಿ ನಮಗೆ ಮುಖ್ಯವಲ್ಲ. ಆದರೆ ಅದಕ್ಕಾಗಿ ಆಸ್ಥೆವಹಿಸಿ ಹೆಣಗಿದವರನ್ನೆಲ್ಲಾ ನೆನೆಯುವುದೇ ನಮಗೆ ಇಲ್ಲಿ ಮುಖ್ಯವಾಗಿದೆ.

ಸಾಂಕೇತಿಕವಾಗಿ ಕರ್ನಾಟಕತ್ವದ ಪೌರುಷೇಯವು ಈ ಮೊದಲೇ ಅಸ್ತಿತ್ವದಲ್ಲಿ ಬಂದಿದ್ದರೂ ಈಗ ಕರ್ನಾಟಕ ಅಭಿಧಾನಪಡೆದಿರುವ ಈ ಶುಭ ಸಮಯದಲ್ಲಿ ಕರ್ನಾಟಕತ್ವದ ಪ್ರಜ್ಞೆಯ ಹಿಂದೆ ಅಡಗಿರುವ ನೂರಾರು ಭವ್ಯ ಭಾವನೆಗಳು ಕೆರಳುವುದು ಸ್ವಾಭಾವಿಕ, ಕರ್ನಾಟಕ-ಸತ್ವದ ಸಂಕಲ್ಪ ಚೈತನ್ಯವು ಪುನರ್ಜೀವನ ಹೊಂದಿ ಅನುಷ್ಠಾನ, ಪ್ರೇರಣ ಪಡೆದರೆ ಅದರಿಂದ ನಮಗೆಷ್ಟೋ ತೃಪ್ತಿ. ಕನ್ನಡಿಗನ ದೇಹ, ಪ್ರಾಣ, ಮನ, ಭಾವ ಬುದ್ಧಿಗಳಿಗೆ ಯಾವುದು ಸ್ವಾಭಾವಿಕವೋ ಹಾಗೂ ಯಾವುದು ಪೋಷಕವೋ ಎಂಬುದನ್ನು ನಿರ್ಣಯಿಸುವಲ್ಲಿ ಮತ್ತು ಅದನ್ನು ಅನುಷ್ಠಾನಕ್ಕೆ ತರುವಲ್ಲಿ ಅದೆಷ್ಟೇ ವಿಳಂಬವಾಗಿದ್ದರೂ ಕೊನೆಗೊಮ್ಮೆ ನೈಸರ್ಗಿಕ ಸತ್ಯವು ತನ್ನ ಅಸ್ತಿತ್ವವನ್ನು ಪುನಃ ಪ್ರಸ್ಥಾಪಿಸಿದ್ದು ಮಹತ್ವದ್ದಾಗಿದೆ. ಕನ್ನಡ ಜ್ಯೋತಿಯ ಕರ್ತೃತ್ವಶಾಲತ್ವದ ಪುನರುತ್ಥಾನಕ್ಕೆ ವಿವಿಧರೀತಿಯಲ್ಲಿ ದುಡಿದು ಪ್ರತಿಷ್ಠಾಪನಕ್ಕೆ ಕಾರಣರಾದ ನಮ್ಮ ನಾಡಿನ ಅಭಿಮಾನಿಗಳು ತಾತ್ವಿಕ ದಾರ್ಶನಿಕರು, ಸಾಹಿತಿಗಳು, ಕವಿಪುಂಗವರು, ಕಲಾವಿದರು, ರಾಜಕಾರಣ ದರಂಧರರು—ಎಲ್ಲರ ಏಕೈಕ ಗುರಿಯಾದ ವಿಕೀಕೃತ ಕರ್ನಾಟಕ ರಾಜ್ಯ-ಸಂಪಾದನೆ ಹಾಗೂ ಕರ್ನಾಟಕಾಭಿದಾನ ಎರಡೂ ಬಹುಮಟ್ಟಿಗೆ ಪೂರ್ತಿಗೊಂಡ ಇಂದಿನ ದಿನ ಐತಿಹಾಸಿಕ ಮಹತ್ವದ್ದಾಗಿದೆ. ಕರ್ನಾಟಕದ ಕೆಲವೊಂದು ಭಾಗಗಳು ಇನ್ನೂ ಹೊರಗುಳಿದಿರುವ ಸಮಸ್ಯೆ, ಗಡಿ ತಂಟೆಗಳ ಸಮಸ್ಯೆ, ಆರ್ಥಿಕ ಸ್ವಾವಲಂಬನೆಯ ಸಮಸ್ಯೆ, ಮೊದಲಾದ ಇನ್ನೂ ಅನೇಕ ಸಮಸ್ಯೆಗಳು ಪೂರ್ತಿಯಾಗಿ ಹಾಗೂ ತೃಪ್ತಿಕರವಾಗಿ ಬಗೆಹರಿದಿಲ್ಲವೆಂಬ ಅರಿವು, ಮೈಯೆಲ್ಲ ಕಣ್ಣಾಗಿ ನಮ್ಮನ್ನು ಆವರಿಸಿದ್ದರೂ ಅವುಗಳ ಪ್ರಾಪ್ತಿಯ ವಿಷಯದಲ್ಲಿ, ಈಗ ಅತೃಪ್ತಿ, ಅಸಂತೋಷಗಳನ್ನು ವ್ಯಕ್ತಪಡಿಸುವುದು ಅಪ್ರಸ್ತುತ. ಆ ಸಮಸ್ಯೆಗಳನ್ನು ಮುತ್ಸದ್ದಿತನ ಹಾಗೂ ದಿಟ್ಟ ನಿಲುಮೆ

ಗಳಿಂದ ಸಾಧಿಸುವಂತೆ ನಾಯಕರ ಕೈಗಳನ್ನು ಬಲಪಡಿಸುವುದರಲ್ಲೇ ನಮ್ಮ ಜಾಣ್ಮೆ ಅಡಗಿದೆ ಎಂದಿಷ್ಟನ್ನು ಮಾತ್ರ ಹೇಳಿದರೆ ಸಾಕು.

ಅಗ್ಗದ ಪ್ರಚಾರವು ಮಹತ್ವಪಡೆದ ಈ ಕಾಲದಲ್ಲಿ ಇಂಥ ಸಮಸ್ಯೆಗಳಲ್ಲಿ ಹೆಚ್ಚಿನ ತೊಡಕುಗಳಿಗೆ ಕಾರಣರಾಗದಂತೆ ಕನ್ನಡಾಭಿಮಾನಿಗಳು ಎಚ್ಚರಿಕೆ ವಹಿಸುವುದು ಅಗತ್ಯ.

ಸುತ್ತಲೂ ಹರಡಿದ ಇಂಥ ವಾತಾವರಣಕ್ಕೆ ಬಲಿಯಾಗದೆ ದಿಟ್ಟ ಹಾಗೂ, ಉಚ್ಚ ಮಟ್ಟದ ಕೆಚ್ಚು ಕನ್ನಡಿಗರಲ್ಲಿ ಎಂದಿಗಿಂತ ಇಂದು ಹೆಚ್ಚಿನ ಅವಶ್ಯಕವಾದ ವಸ್ತುವಾಗಿದೆ. ಈ ಉದ್ದೇಶ ಸಾಧನೆಯ ಸಂಕಲ್ಪ ಸಾಧಿಸುವ ಸಂಸಂಧಿಯನ್ನು ಇಂದಿನ ಈ ಉತ್ಸವವು ತಂದು ಕೊಡಬಲ್ಲುದಾಗಿದೆ. ಕಾಲಕ್ಕನುಗುಣವಾಗಿ ಅವಶ್ಯವಿದ್ದ ನಾಯಕತ್ವವನ್ನು ಒದಗಿಸಬಲ್ಲ ಶಕ್ತಿ ಕರ್ನಾಟಕಕ್ಕಿದೆ. ಕರ್ನಾಟಕ ಪುರುಷನ ಅಂತರ್ಯಾದಲ್ಲಿ ಯಂಗಪುರುಷನ ಪ್ರಾಣಪ್ರತಿಷ್ಠೆ ಆಗಬೇಕಾಗಿದೆ. ಈ ಶುಭದಿನದಂದಂ ಶ್ರೀ ಭುವನೇಶ್ವರೀ ಆದಿಶಕ್ತಿಯ ಪ್ರಜ್ವಲಿತ ಆತ್ಮ ಶಕ್ತಿಯು ದೀಕ್ಷೆ ಆಗಲೆಂಬುದೇ ನಮ್ಮ ಈ ಉತ್ಸವ ಕಾರ್ಯ ಪ್ರೇರೇಪಣೆಯ ಹಿಂದಿನ ಭಾವನೆ ಯಾಗಿದೆ.

ನಮ್ಮ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಆರ್ಥಿಕ ಚಟುವಟಿಕೆಗಳಲ್ಲಿ ಚಿರನೂತನವಾದ ಶಕ್ತಿ ಪ್ರೇರೇಪಕ ಮಂತ್ರದ ಮೋಡಿ 'ಕರ್ನಾಟಕ' ಎಂಬ ಹೆಸರಿನಲ್ಲಿ ಅಡಗಿದೆ. ಈ ನಂಬುಗೆಯೇ ಕನ್ನಡ ಕುಲದ ಸರ್ವತೋಮುಖ ಏಳಿಗೆ ಅಭಿವೃದ್ಧಿ ಗಳಿಗೆ ನಾಂದಿಯಾಗುವುದೆಂದೂ ಆಶಿಸಲಾಗಿದೆ. ಸ್ವಾವಲಂಬೀ, ಅನವರತ ಪುನರುತ್ಪತ್ತಿಯ ಆರ್ಥಿಕ ವ್ಯವಸ್ಥೆ ರಚಿತವಾಗಿ, ಸಾಮಾಜಿಕ ಅನ್ಯಾಯಗಳಿಗೆ ಕೊನೆಯಾಗಿ, ಸರ್ವರಿಗೂ ಸಮಾನ ಅವಕಾಶಗಳ ಸಂಧಿ ಸನ್ನಿವೇಶದ ಸಂಸಮಯಗಳು ಸಾಕಷ್ಟು ಪ್ರಮಾಣದಲ್ಲಿ ದೊರೆ ಯುವ ಪ್ರೇರೇಪಣೆ ಈ ಕರ್ನಾಟಕ ಮಂತ್ರದಲ್ಲಿ ಅಡಕವಾಗಿದೆ. ಅಂಥ ಸಂದರ್ಭಗಳು ಕರ್ನಾಟಕದ ಪ್ರಜಾತಂತ್ರದಲ್ಲಿ ಸತ್ವಯುತ ಪ್ರಾಣಸ್ವರೂಪವಾಗಲಿವೆ, ಆಗಲೇ ಬೇಕಾಗಿವೆ, ಎಂಬ ದೃಢ ವಿಶ್ವಾಸ ನಮಗಿದೆ.

ಶಿಲ್ಪ, ಸಂಗೀತ, ನಾಟ್ಯ ಮೊದಲಾದ ಲಲಿತ ಹಾಗೂ ಕುಶಲ ಕಲಾವಿಲಾಸ, ಜಾತ್ಯ ತೀತವಾದ ಸಮಾಜರಚನೆ, ಮತ್ತು ಸಾಹಿತ್ಯ ಸಂಸ್ಕೃತಿಗಳ ಅಭಿವೃದ್ಧಿಗಳು ಕರ್ನಾಟಕದ ವೈಶಿಷ್ಟ್ಯವಾಗಿ ಬೆಳೆದು ಭಾರತಕ್ಕೂ ಅದರ ಮುಖಾಂತರ ಮಾನವಕೋಟಿಗೂ ಕೊಡಬಹು ದಾದ ಉಡುಂಗೊರೆಯಾಗುವಲ್ಲಿ, ಕರ್ನಾಟಕಾಭಿಧಾನ ಮೊದಲ ಮೆಟ್ಟಿಲಾಗಲಿದೆ ಎಂಬುದು ನಮ್ಮ ಕನಸು. ಈ ಹೊಸ ಕನಸು, ಹೊಸ ಸಂಕಲ್ಪ, ಹೊಸ ದೃಢನಿರ್ಧಾರ, ಹೊಸ ಪಣ ಗಳಿಗೆ ಈ ಅಭಿಧಾನೋತ್ಸವವು ಹೊಸ ಸಂಧಿಯನ್ನು ಕಲ್ಪಿಸಿಕೊಟ್ಟಿದೆ. ಇದನ್ನು ಅರ್ಥ ಮಾಡಿಕೊಂಡು ಆಚರಣೆಯಲ್ಲಿ ತರುವ ನಮ್ಮ ಯುವ ಜನಾಂಗದ ನಿರ್ಧಾರದ ಮೇಲೆ ವನ್ನಮ್ಮ ಕರ್ನಾಟಕದ ಉಜ್ವಲ ಭವಿತವ್ಯ ಅವಲಂಬಿಸಿದೆ.

ನಾಡಿನಲ್ಲಿ ಇತ್ತೀಚೆಗೆ ಅಧಿಕವಾಗುತ್ತಿರುವ ಸಂಕುಚಿತ ಪ್ರಾದೇಶಿಕ ಭಾವನೆಗಳು ಈ ಕರ್ನಾಟಕ ನಾಮಕರಣದಿಂದ ಅಳಿದು ಅಖಂಡ ಕರ್ನಾಟಕದ ಸಮಗ್ರ ಕನ್ನಡಿಗನ ದೃಷ್ಟಿ ಎಲ್ಲ ವ್ಯವಹಾರಗಳಲ್ಲೂ ಅಳವಡಲು ಅನುವಾಗುವುದು ಎಂಬ ವಿಶ್ವಾಸ ನಮಗಿದೆ. ಗಂಣಕ್ಕೆ ಪ್ರಾಧಾನ್ಯತೆ ದೊರೆತು ಸ್ಥಾನಿಕ ಹಾಗೂ ಜಾತೀಯ ಭಾವನೆಗಳು ಹಿಮ್ಮೆಟ್ಟಿ ವಿಶಾಲವಾದ ಮಾನಸಿಕ ಭಾವನಾತ್ಮಕ ವ್ಯಾವಹಾರಿಕ ಸಾಮರಸ್ಯವು ಕನ್ನಡಿಗರೆಲ್ಲರ ಹೃದಯಾಳದಲ್ಲಿ ಸ್ಥಿರ ಗೊಂಡು ಪ್ರಾಣದುಸಿರಾಗಿ ಸರ್ವಚಟುವಟಿಕೆಗಳಲ್ಲಿ ಸದಾ ಮಿಡಿಯುತ್ತಿರುವ ಸಚೇತನ ಶಕ್ತಿಯಾಗಲಿ ಎಂಬುದು ನಮ್ಮ ಹಾರೈಕೆ. ಪರಸ್ಪರರಲ್ಲಿ ಹಬ್ಬುತ್ತಿರುವ ಶಂಕೆ, ಸಂದೇಹ, ಅವಿಶ್ವಾಸಗಳಳಿದು ಕರ್ನಾಟಕದ ಈ ಹೊಸ ಮನ್ವಂತರದಲ್ಲಿ, ಪರಸ್ಪರರಲ್ಲಿ ವಿಶ್ವಾಸ ಮೂಡಿ ಸಾಮರಸ್ಯ ಬೆಳೆದು, ತಾಳ್ಮೆ, ಸಹನೆ, ಸಹೃದಯಾದಿಗಳೇ ಭದ್ರನೆಲೆಗಟ್ಟಾಗಿ ಕನ್ನಡಿಗನ ಜೀವನಾಡಿ ಸದಾ ಮೇಲ್ಮಟ್ಟದಲ್ಲಿ ಮಿಡಿಯುವಂತಾಗಲೆಂಬ ನಮ್ಮ ಕನಸು ನನಸಾಗಲಿ ಎಂಬುದು ನಮ್ಮ ಆಶಯ. ಬಂಡಿಪುರದಿಂದ ಸಂತಪುರವನ್ನೂ ದಾಟಿ ನಿತ್ಯನೆಲೆಗೊಂಡ ಕರ್ನಾಟಕದ ಪರಂಪರೆಯಲ್ಲಿ ಅಶಾಸ್ತ್ರೀಯವಾದುದು, ಅನಗತ್ಯವಾದುದು, ಅವ್ಯವಹಾರಿಕ ವಾದುದು ಎಲ್ಲವನ್ನೂ ಕಳೆದೊಗೆದು, ಸಮಸ್ತ ಮಾನವಕುಲದ ದಿವ್ಯಭವ್ಯ ಕಲ್ಪನೆಯ ತಳಹದಿಯಮೇಲೆ ಹೊಸ ಪರಂಪರೆಗಳು ಭದ್ರವಾಗಿ ನೆಲೆಸುವಂತೆ ದುಡಿಯಲು ನಮ್ಮ ಯುವಶಕ್ತಿಗೆ ಪ್ರೇರಕ ಚೈತನ್ಯವನ್ನು ಇದು ನೀಡಲಿದೆ ಎಂದು ನಮ್ಮ ಭರವಸೆ.

ಜನಜೀವನಕ್ಕೆ ಅಂಟಿದ ಹಳೆಯ ಕೊಳೆ ಕಳೆದು ಹೊಸ ದೃಷ್ಟಿ ಉದಿಸಿ, ಹೊಸ ಸೃಷ್ಟಿ ರಚಿತವಾಗಿ ಜೀವನಕ್ಕೊಂದು ಸಮಂರಸದ ಸಮನ್ವಯದ ಸರ್ವಾಂಗೀಣದ ಏಳ್ಗೆಯ ತಿಳಿ ಬೆಳಗಿನ ಪಥ ಈ ಅಭಿಧಾನದಿಂದ ನಾಡಿನಲ್ಲೆಲ್ಲಾ ಪ್ರಕಾಶಿಸುವಂತಾಗಲಿ. ಮೂರು ಕೋಟಿ ಕನ್ನಡಿಗರ ಹೃನ್ಮನಗಳನ್ನು ಬೆಳಗಿ, ಮಾರ್ಗದರ್ಶನ ಮಾಡಿ, ಕೈಹಿಡಿದು ಸನ್ಮಾರ್ಗದಲ್ಲಿ ಕರೆದೊಯ್ಯುವ ಶಕ್ತಿಯ ಈ ಭವ್ಯದಿವ್ಯ ಕರ್ನಾಟಕದ ಸಮರ್ಥ ಜ್ಯೋತಿ ಶಕ್ತಿ ಆಗಲೆಂದು ಹಾರೈಸುತ್ತೇನೆ.

ಕರ್ನಾಟಕಾಭಿದಾನ ಉತ್ಸವದ ಉಗಮ

ರಾಜಕೀಯ ಶಕ್ತಿಗೆ ಹಿನ್ನೆಲೆಯಾಗಿ ಧರ್ಮಶಕ್ತಿ, ನ್ಯಾಯಶಕ್ತಿ, ನೈತಿಕ ಶಕ್ತಿಗಳು ಭದ್ರ ತಳಹದಿಯಾಗಿರದಿದ್ದರೆ ಹಾಗೂ ಅದಕ್ಕೆ ತಾತ್ವಿಕ ಮತ್ತು ದಾರ್ಶನಿಕ ಶಕ್ತಿಗಳ ಮಾರ್ಗ ದರ್ಶನವಿಲ್ಲದಿದ್ದರೆ ಅದು ಹೆಳವನಂತಾಗಿರುವುದು. ಜನಕಲ್ಯಾಣ ಹಾಗೂ ಸಾಮಾಜಿಕ ನ್ಯಾಯ ತತ್ವ ಸಿದ್ಧಾಂತಗಳ ಬೆಳಕಿಲ್ಲದ ರಾಜಕೀಯ ಶಕ್ತಿ ಕುರುಡಾಗಿರುವುದು. ಭದ್ರ ಆರ್ಥಿಕ ಸಮಾನತೆ ಹಾಗೂ ದಕ್ಷ ಆಡಳಿತಗಳೇ ಪ್ರಾಣದುಸಿರಾಗಿಲ್ಲದ ಯಾವ ರಾಜ್ಯಾಧಿಕಾರವೂ ಬಹುದಿನ ಬಾಳದು. ಜಾಗತಿಕ ಇತಿಹಾಸವನ್ನು ನಿರೀಕ್ಷಿಸಿದರೆ ಈ ಮಾತಿನ ಸತ್ಯತೆ ಹೊಳೆಯಂದಿರದು. ಸಾಮ್ರಾಜ್ಯಗಳು ಹುಟ್ಟಿವೆ, ಬೆಳೆದಿವೆ, ಅಳಿದಿವೆ. ಆದರೆ ಬದುಕಿ ಉಳಿದು ಸತತ ಬೆಳೆದುಕೊಂಡು ಬಂದಿರುವುದೊಂದೇ ಒಂದು ಶಕ್ತಿ ಮಾತ್ರ; ಅದುವೇ ಜನಸಾಮಾನ್ಯನ ಶಕ್ತಿ;

ಬದುಕಿಕೊಂಡು ಬಂದಿರುವುದೊಂದೇ ವ್ಯಕ್ತಿ; ಅವನೇ ನಮ್ಮ ಜನಸಾಮಾನ್ಯ; ಪ್ರಜಾ ತಂತ್ರದಲ್ಲಂತೂ ಅವನೇ ಸರ್ವಸ್ವ, ಸರ್ವ ಅಭಿವೃದ್ಧಿಯ ಮೂಲಾಧಾರ. ಇಂದು ಎಲ್ಲ ರಾಜಕೀಯ ಚೆಲ್ಲಾಟ ನಡೆಯುತ್ತಿರುವುದೂ ಅವನ ಹೆಸರಿನಲ್ಲಿಯೇ. ಅವನ ಸರ್ವಾಂಗೀಣ ಉನ್ನತಿಯೇ ಎಲ್ಲ ರಾಜಕೀಯದ ಘೋಷಣೆ.

ಕಾಲ ಪರಿಸ್ಥಿತಿಗಳಿಗನುಸರಿಸಿ ಅತಿಯಾದದ್ದು ಅಳಿಯಲೇಬೇಕು; ಮಿತವಾದದ್ದು ಬದುಕಿ, ಉಳಿದು ಬೆಳೆಯಲು ಅನುಕೂಲವಾದ ಸೂಕ್ತ ಪರಿಸ್ಥಿತಿಯು ನಿಸರ್ಗದಲ್ಲಿ ಸ್ವಯಂ ಸಿದ್ಧವಾಗಿ ಸಾಕಷ್ಟು ಪ್ರಮಾಣದಲ್ಲಿ ಸದಾ ತುಂಬಿಕೊಂಡಿರುತ್ತವೆ. ಅದನ್ನು ವಿಶ್ಲೇಷಿಸಿ ಗುರುತಿಸಿ ಸರಿಯಾಗಿ ಅರ್ಥಮಾಡಿಕೊಂಡು, ಸೂಕ್ತರೀತಿಯಲ್ಲಿ ಬಳಸಿಕೊಂಡು ಸಂಘಟಿಸಬಲ್ಲ ಜಾಣ್ಮೆಯುಳ್ಳವನಿಗೆ ಹಾಗೂ ಅದನ್ನು ಕ್ರಿಯಾಶಕ್ತಿಯನ್ನಾಗಿ ಪರಿವರ್ತಿಸಿಕೊಂಡು ಅನುಷ್ಠಾನಕ್ಕೆ ಪರಿಶ್ರಮಿಸುವವನಿಗೆ ನಾಯಕತ್ವವು ತಂತಾನೇ ಪ್ರಾಪ್ತವಾಗುತ್ತದೆ. ಇದು ನಿಸರ್ಗದ ಸಿದ್ಧಾಂತ ಮತ್ತು ಇತಿಹಾಸದ ಅನುಭವ. ಈ ನಿಯಮಕ್ಕೆ ವಿರೋಧವಾದ ಇಲ್ಲವೇ ಕಾರ್ಯಕುಶಲತೆ, ಸಂಘಟನಾ ಚಾತುರ್ಯಗಳ ಅಭಾವವಿದ್ದಲ್ಲಿ ನಾಯಕತ್ವವು ಅಥವಾ ಸಾಧನೆಯು ಅಲ್ಪಾವಧಿಯಲ್ಲಿ ಅಳಿದುಹೋಗುತ್ತದೆ.

ಈ ನಿಯಮಕ್ಕನುಗುಣವಾಗಿ ಹದಿನಾಲ್ಕನೆಯ ಶತಮಾನದಲ್ಲಿ ಕುಮಾರ ರಾಮನ ಸಾಹಸದಲ್ಲಿ ಪ್ರಕಟಗೊಂಡ ಈ ನಿಸರ್ಗ ಶಕ್ತಿಯನ್ನು ತಮ್ಮ ಪ್ರಭಾವದಿಂದ ಗುರುತಿಸಿ ವಿದ್ಯಾರಣ್ಯರು ಕನ್ನಡಿಗರಿಗೊಂದು ಮಹಾ ಸನ್ನಿವೇಶವನ್ನು ಕಲ್ಪಿಸಿಕೊಟ್ಟರು. ವಿಜಯನಗರ ಸಾಮ್ರಾಜ್ಯ ಉದಿಸಿ ಕನ್ನಡದ ಕೆಚ್ಚು ಮೂರು ಶತಮಾನಗಳು, ಧಿಗ್‌ದಿಗಂತಗಳಲ್ಲಿ ಹರಡಿ ಪರಕೀಯರ ಕಣ್ಣುಕುಕ್ಕಿಸಿತು; ಆಕ್ರಮಣಲೀಲ ಆಕಾಂಕ್ಷೆಗಳನ್ನು ಕೊನೆಗೂ ಕಮರಿಸಿತು. ಅಧಿಕಾರದಲ್ಲಿದ್ದವರ ವಿಲಾಸಭೋಗ, ಮಾತ್ಸರ್ಯ, ಸೈತಿಕ ಅಧಃಪತನಗಳೇ ಮೊದಲಾದ ಕಾರಣಗಳಿಂದಾಗಿ ಧರ್ಮಜ್ಯೋತಿ ನಂದಿ ಸಾಮ್ರಾಜ್ಯ ಕಣ್ಮರೆಯಾಯಿತು. ಅಂತಹ ಮಹಾ ಶಕ್ತಿಯು ಕಾರ್ಯಕ್ಷೇತ್ರವಾಗಿದ್ದ ಹಂಪೆ ಇಂದು ಹಾಳು ಕೊಂಪೆಯಾಗಿದೆ. ಆದರೆ ಅದರ ಅತಿಪ್ರಾಚೀನವಾದ ಅಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಶಕ್ತಿ ಇನ್ನೂ ಹುದುಗಿಕೊಂಡು ಪುನಃ ಪ್ರಜ್ವಲಿಸಲು ಅಣಿಯಾಗಿದೆ. ಅಲ್ಲಿನ ಅಂದಿನ ವೈಭವ, ವಿಜೃಂಭಣೆಗಳ ಕುರುಹುಗಳು ಇಂದಿಗೂ ಕಣ್ಣೀರು ಕರೆಯುತ್ತ ಗೋಳಿಡುತ್ತಿರುವ ದೃಶ್ಯಗಳು ಅಲ್ಲಿ ಹೋದ ಕನ್ನಡಿಗನನ್ನು ಚುಚ್ಚಿ ಚುಚ್ಚಿ ಎಚ್ಚರಿಸುತ್ತಿದ್ದಂತೆ ಭಾಸವಾಗುತ್ತದೆ. ಅಲ್ಲಿನ ಸಿರಿ, ಸಂಪತ್ತು, ಶಿಲ್ಪಕಲೆ, ವೈಭವ, ಸಾಹಿತ್ಯ, ಸಂಸ್ಕೃತಿಗಳೇ ಮೊದಲಾದ ಉಜ್ವಲ ಪರಂಪರೆಗಳು ಆಳವಾಗಿ ಇಣಿಕಿನೋಡಿದವರನ್ನು ಆಕರ್ಷಿಸಿ ಮನಸೂರೆಗೈದು, ಅವರಲ್ಲಿ ಕನ್ನಡಿಗನ ಅಭಿಮಾನ ಪ್ರಜ್ಞೆಗಳನ್ನು ಕಾದುರಿಸುತ್ತವೆ.

ಅಂದಿನ ವ್ಯಕ್ತಿಗತ ಸಾಮ್ರಾಜ್ಯಶಕ್ತಿ ಇಂದಿನ ಸನ್ನಿವೇಶದಲ್ಲಿ ಜನತಾ ಸಾಮ್ರಾಜ್ಯಶಕ್ತಿಯ ರೂಪದಲ್ಲಿ ಪರಿವರ್ತನೆಗೊಂಡು ಪುನಃ ಅಸ್ತಿತ್ವಕ್ಕೆ ಬರಲು, ಪ್ರಕಟವಾಗಲು, ತವಕಿಸುವಂತೆ

ಈಗ ಭಾಸವಾಗಹತ್ತಿದೆ. ಹಂಪೆಯ ಪರಿಸರದ ಭೂಗರ್ಭದ ಖನಿಜ ಸಂಪತ್ತು, ವಿಶೇಷತಃ ಕರಿಚಿನ್ನ (ಕಾರ್ಬೊನ್ನು = ಕಬ್ಬಿಣದ ಅದುರು), ನೆಲ ನೀರುಗಳಲ್ಲಿ ಹುದುಗಿರುವ ಅಪಾರ ಧನ ಧಾನ್ಯ ಸಂಪತ್ತು, ಉದ್ದಿಮೆ ವ್ಯವಹಾಗಳಿಗೆ ಅನುಕೂಲವಾದ ಭೌಗೋಲಿಕ ಹಾಗೂ ನೈಸರ್ಗಿಕ ಅನುಕೂಲಗಳು ಜನಸಾಮಾನ್ಯನ ಬಳಕೆಗೆ ಬಂದು ಹಂಪೆಯನಾಡು ಕನ್ನಡಿಗರ ಜೀವನದಲ್ಲಿ ಹೊಸದೊಂದು ಮಹಾಕ್ರಾಂತಿಯ ಕೇಂದ್ರವಾಗಿ ಪರಿಣಮಿಸಲು ತವಕಿಸುತ್ತಿರುವುದನ್ನು ಕಾಣುವ ದ್ರಷ್ಟಾರರು ಇಲ್ಲದಿಲ್ಲ. ಹಿಂದಿನ ವೈಭವವನ್ನು ನೂರಾರು ಪಾಲು ಮೀರಿಸುವ ಹುದುಗಿದ್ದ ವಿಶಾಲ ವೈಭವದ ಶಕ್ಯತೆಯನ್ನು ಅಲ್ಲಿ ಕಾಣಬಹುದು, ಆ ಶಕ್ತಿಯನ್ನು ಕಂಡರಿದು, ಕ್ರಾಂತಿಕಾರಕ ರೀತಿಯಲ್ಲಿ ಅದನ್ನು ಬಳಸಿಕೊಂಡು, ಸಂಘಟನೆ ಮಾಡಿ ಕಾರ್ಯಾಚರಣೆಯಲ್ಲಿ ತರುವುದಕ್ಕೆ ಅವಶ್ಯವಿದ್ದ ತಪಃಶಕ್ತಿ ಇಂದು ಜನಸಾಮಾನ್ಯನಿಂದಲೇ ಬರಬೇಕಾಗಿದೆ. ಸಾಹಿತಿಗಳು, ಕವಿಗಳು, ಅರ್ಥಶಾಸ್ತ್ರಜ್ಞರು, ಸಮಾಜಶಾಸ್ತ್ರಕೋವಿದರು, ಅಲ್ಲಿನ ಜನಸಾಮಾನ್ಯದಲ್ಲಿ ಅಂಥ ನಾಯಕತ್ವದ ಹೊಣೆ ಹೊರಬಲ್ಲ ನರಪುಂಗವನನ್ನು ಕಾಣದೆ, ಕೇವಲ ಕಲ್ಪನಾ ಸಾಮ್ರಾಜ್ಯದಲ್ಲಿ ತೊಡಗಿದರೆ ಅದೊಂದು ಮಾನಸಿಕ ವ್ಯಾಯಾಮ ಮಾತ್ರವಾದೀತು. ಅಲ್ಲಿನ ಕ್ರಾಂತಿಶಕ್ತಿಯನ್ನು ಕುದುರಿಸಿ ಸಂಘಟಿಸುವ ಸಾಹಿತ್ಯ ಸಲಕರಣೆಗಳು ಕನ್ನಡಿಗನಿಗೆ ಇಂದು ಬೇಕಾದ ಆವಶ್ಯಕ ವಸ್ತುಗಳಾಗಿವೆ. ಹಂಪೆಯ ಸುತ್ತಿನ ನಾಡಿನ, ನಲ, ಜಲ, ಹವೆಗಳಲ್ಲೂ, ಜನಸಾಮಾನ್ಯರಲ್ಲೂ ಅಡಗಿರುವ ಮಹಾಶಕ್ತಿಯನ್ನು ಎಚ್ಚರಿಸಿ, ಸಂಘಟಿಸಿ, ತಾತ್ವಿಕ ದರ್ಶನದ ಮಂಸೆಯಲ್ಲಿ ಎರಕಹೊಯ್ದು ರೂಪಿಸಬಲ್ಲ ನಾಯಕತ್ವ ಇಂದು ಬೇಕಾಗಿದೆ. ಕನ್ನಡಿಗನ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವವು ಈ ಹೊಸ ದಿಸೆಯಲ್ಲಿ ಕ್ರಾಂತಿಯನ್ನು ಹುಟ್ಟಿಸಬೇಕಾಗಿದೆ. ದಿವ್ಯ, ಭವ್ಯ, ಭವಿಷತ್ಯದ ಸಂಕಲ್ಪದಿಂದ ಚೇತನಗೊಂಡು, ತಪೋಬಲದಿಂದ ಹೊಸ ಜನತಾಸಾಮ್ರಾಜ್ಯವನ್ನು ನಿರ್ಮಿಸಬಲ್ಲ ನಾಯಕತ್ವವಿಂದು ಕನ್ನಡಿಗರಲ್ಲಿ ಬರಬೇಕಾಗಿದೆ. ಅದೂ ಜನಸಾಮಾನ್ಯರಿಂದಲೇ ಬರಬೇಕು.

ರಾಮಾಯಣ ಕಾಲಕ್ಕಿಂತ ಪೂರ್ವದಿಂದಲೂ ಹಂಪೆಗೊಂದು ಹಿರಿಯ ಸ್ಥಾನವಿದ್ದೇ ಇದೆ. ಹನುಮಂತನುದಿಸಿದ ನಾಡಿನಲ್ಲೀಗ ಹನುಮಶಕ್ತಿ, ಸಾಹಸ, ಸೇವೆ, ತ್ಯಾಗ, ಕಾರ್ಯತತ್ಪರತೆಗಳೆಲ್ಲ ಕಾಣದಂತಾಗಿದೆ. ಸಕಲರೂ ಪೂಜಿಪ ಈ ಹನುಮನ ಶಕ್ತಿ ಈಗ ಎಲ್ಲಿ ಮಾಯವಾಗಿದೆ? ಹೇಗೆ ಮಾಯವಾಗಿದೆ? ಅದರ ಪರಿಶೋಧನೆ, ಆತ್ಮಶೋಧನೆಗಳ ಅಗತ್ಯ ಇಂದು ಬಹಳವಾಗಿದೆ. ಆ ಕೇಂದ್ರದಿಂದಲೇ ಭವ್ಯ, ದಿವ್ಯಜ್ಯೋತಿ ಪುನರುದಿಸಿ, ಅಖಂಡ ಕರ್ನಾಟಕವನ್ನು ಬೆಳಗಬೇಕಾಗಿದೆ. ಶಬರಿಯ ಶ್ರದ್ಧೆಯ ನಾಡು ಹಂಪೆ; ಕನಕನ ಅಧ್ಯಾತ್ಮ ಬೀಡು ಹಂಪೆ; ದಾಸವರೇಣ್ಯರಿಗೆ ಆಶ್ರಯವಿತ್ತುದು ಹಂಪೆ; ಶರಣರ ಕಾಯಕದ ಕ್ಷೇತ್ರ ಹಂಪೆ; ಈಗ ಅದೆಲ್ಲ ಎಲ್ಲಿದೆ? ಅದೆಲ್ಲ ಏನಾಯಿತು? ಜನಸಾಮಾನ್ಯನ ದೇವ ಹನುಮನ ಸೇವಾಭಾವವೆಲ್ಲಿ? ಸ್ವಾಮಿನಿಷ್ಠೆ ಎಲ್ಲಿ? ಶಕ್ತಿಯುಕ್ತಿಗಳೆಲ್ಲಿ? ತ್ಯಾಗ ಪರಿಶ್ರಮಗಳೆಲ್ಲಿ? ದಕ್ಷ ಕರ್ತೃತ್ವಶಾಲಿತ್ವವೆಲ್ಲಿ? ಅವೆಲ್ಲ ಈಗಲೂ ಅವ್ಯಕ್ತರೂಪದಲ್ಲಿ ಅಲ್ಲಿನ ಜನಮನದಲ್ಲಿ, ನೆಲ, ಜಲ, ವಾಯುಗಳಲ್ಲಿ, ಕಲ್ಲುಬಂಡೆಗಳಲ್ಲಿ ಇದ್ದೇ ಇವೆ. ಅದನ್ನು

ಕಂಡರಿದು ಎಚ್ಚರಿಯಬೇಕಾಗಿದೆ. ಉಳುವವನೇ ಆಳುವವನು ; ನೇಗಿಲಯೋಗಿಯೇ ನಮ್ಮ ತಪಸ್ವಿ. ಕಾಯಕ—ಕಾರ್ಮಿಕನೇ ನಾಯಕ ಪುರುಷನು ; ಊಳಿಗದವನೇ ಏಳ್ಗೆಯ ಮೂಲ.

ರಾಷ್ಟ್ರಶಕ್ತಿಯಿಂದು ದಿಲ್ಲಿಯಿಂದ ಹಳ್ಳಿಗೆ ಇಳಿದು ಬರಬೇಕು. ಜನಶಕ್ತಿಯ ಕೆಚ್ಚು ಹೆಚ್ಚಬೇಕು. ತುಂಗಭದ್ರಾ ಜಲಾಶಯ, ತೋರಣಗಲ್ಲು ಉಕ್ಕಿನ ಕಾರಖಾನೆಗಳು ನಮ್ಮ ಕ್ರಾಂತಿಯ ಹೊಸ ಬೆಳಕಿನ ಕಿರಣಗಳೆಂದು ಗುರುತಿಸಿ ಕನ್ನಡ ನಾಡಿನ ಮಧ್ಯವರ್ತಿ ಪ್ರದೇಶವಾದ ಈ ನಾಡಭಾಗವನ್ನು ಕರ್ನಾಟಕ ರಾಜ್ಯದ ಜನತೆ, ಜನತಾ ಪ್ರತಿನಿಧಿಗಳು, ಸರಕಾರ ಗುರುತಿಸಬೇಕು. ಅವರುಗಳ ಲಕ್ಷ್ಯವನ್ನು ಕರ್ನಾಟಕದ ಭವ್ಯ ಭಾಗ್ಯದ ಕೇಂದ್ರವಾಗಲಿರುವ, ಹುದುಗಿರುವ ಮಹಾಶಕ್ತಿಯ ಕಡೆಗೆ ಆಕರ್ಷಿಸುವುದೇ ಕರ್ನಾಟಕ ನಾಮಕರಣ ಉತ್ಸವವನ್ನು ಹಂಪೆಯಲ್ಲಿ ಏರ್ಪಡಿಸುವಲ್ಲಿ ಒಂದು ಮುಖ್ಯ ಉದ್ದೇಶವಾಗಿದೆ. ಸರ್ವ ಕನ್ನಡಿಗರು ಅದರಲ್ಲೂ ನಮ್ಮ ಯುವಕರು ಈಕಡೆ ಗಮನಹರಿಸಿದರೆ ನಮ್ಮ ಶ್ರಮ ಸಾರ್ಥಕವೆಂದು ಬಗೆದಿದ್ದೇವೆ. ಇಂತಹ ಆಶಯದಿಂದಲೇ ೧೭ ವರ್ಷಗಳ ಹಿಂದೆಯೂ ೧೯೫೬ರ ನವೆಂಬರ್ ೧ ರಂದು ದಿ. ಕರ್ನಾಟಕ ಕುಲ ಪುರೋಹಿತ ಆಲೂರ ವೆಂಕಟರಾಯರ ಪೌರೋಹಿತ್ಯದಲ್ಲಿ ಇಂತಹದೇ ಒಂದು ಸಾಂಸ್ಕೃತಿಕ ಉತ್ಸವವನ್ನು ನಾವು ಕೆಲವು ಗೆಳೆಯರೂ ಕರ್ನಾಟಕದ ಎಲ್ಲ ಭಾಗಗಳಿಂದ ಬಂದ ಜನತಾ ಪ್ರತಿನಿಧಿಗಳೆಂದೆನ್ನಿಸಬಲ್ಲ ಹಲವಾರು ಉತ್ಸಾಹಿಗಳೂ ಸೇರಿ ನಡೆಸಿದ್ದೆವು. (ಅದರ ವರ್ಣನೆ ಬೇರೆಡೆಯಲ್ಲಿ ಬಂದಿದೆ.) ಆದರೆ ರಾಜ್ಯೋದಯವಾದರೂ 'ಕರ್ನಾಟಕ' ದ ಹೆಸರೂ, ಅದರಲ್ಲಡಗಿದ ತಾತ್ತ್ವಿಕತೆ ಹಾಗೂ ಸಾಂಸ್ಕೃತಿಕ ಮಹತಿಗಳೂ 'ಅಜ್ಞಾತವಾಸ' ಕ್ಕೊಳಗಾಗಬೇಕಾದ ವಿಷಾದ ಹುದುಗಿ ಉಳಿಯಿತು. ಆ ಸಂದರ್ಭದಲ್ಲಿ ಮುಂಬಯಿಯ ಗೆಳೆಯ ಕೃಷ್ಣಕುಮಾರ ಕಲ್ಲೂರ ಅವರು ನವೆಂಬರ್ ೧೯೫೭ರಲ್ಲಿ ನನಗೆ ಬರೆದ ಈ ಪತ್ರದಿಂದ ಇಂದಿನ ಉತ್ಸವದ ಉಗಮದ ಅರಿವಾಗುವಂತಿದೆ.

"ಪ್ರಿಯ ಕಲ್ಲನಗೌಡರೇ, ...

೧೨ ವರ್ಷದ ವನವಾಸದಲ್ಲಿ ನಾಮಾಂತರ ಮಾಡಿಕೊಂಡು ಪಾಂಡವರು ಅಜ್ಞಾತವಾಸದಲ್ಲಿದ್ದಂತೆ ನಮ್ಮ ನಾಡೂ ಇದೆ. ಅದು ನಿಜನಾಮಧಾರಿಯಾಗಿ ನಿಜಸ್ವರೂಪವನ್ನು ಪಡೆದಂದು ಮತ್ತೆ ಅದೇ ಹಂಪೆಯಲ್ಲಿಯೇ ಇನ್ನೂ ಹೆಚ್ಚಿನ ವಿಜೃಂಭಣೆಯಿಂದ ಭುವನೇಶ್ವರಿಯು ಜಂಬೂಸವಾರಿಯನ್ನು ಕನ್ನಡಿಗರೆಲ್ಲಾ ಸೇರಿ ನಡೆಯಿಸೋಣವಂತೆ.....ಕರ್ನಾಟಕ ಎಂಬ ಹೆಸರು ಎಂದು ಅಧಿಕೃತವಾಗಿ ನಮ್ಮ ನಾಡಿಗೆ ಇಡಲ್ಪಡುವುದೋ ಅಂದೇ ಕಟ್ಟೆಯ ಕಲ್ಲನ್ನು ಕಟ್ಟೆಗೆ ಕೂಡಿಸುವಾ! ಅರ್ಥಾತ್ ಹಂಪೆಯಲ್ಲಿ ನಿಜವಾದ ರಾಜ್ಯೋತ್ಸವವನ್ನು ಆಚರಿಸುವಾ! .....೧-೧೧-೫೭ರಂದು ಆಗದಿದ್ದ 'ಕರ್ನಾಟಕ ಸ್ತಂಭ'ದ ಸ್ಥಾಪನೆ ಮಾಡಿಸುವಾ! ಆದಕ್ಕಾಗಿ ಈಗಿನಿಂದಲೇ ಸಿದ್ಧತೆ ಮಾಡಲಡ್ಡಿಯಿಲ್ಲವೆನ್ನಿಸಿ ನಿಮಗೀ ಕಾಗದ ಬರೆದು ನಿಮ್ಮ ಪ್ರತಿಕ್ರಿಯೆಯ ದಾರಿ ನೋಡುತ್ತಿದ್ದೇನೆ. ಇಂತೀ ವಂದನೆಗಳು.

ನಿಮ್ಮ, ಕೃಷ್ಣಕುಮಾರ."

ಮೇಲಿನ ಪತ್ರ ಬರೆಯುವಾಗ ಆ ಶುಭ ಪ್ರಸಂಗ ಇಷ್ಟು ಮುಂದೂಡಲ್ಪಟ್ಟೀತೆಂಬ ನಿರೀಕ್ಷೆಯಿರಲಿಲ್ಲ. ಅದನ್ನೇ ನಾನು ಬರೆದ ಪ್ರತ್ಯುತ್ತರದ ಈ ಉಲ್ಲೇಖದಲ್ಲಿ ಕಾಣುತ್ತೇವೆ. ''ಶ್ರೀ ರಾಮನಿಗೆ ೧೪ ವರ್ಷ ವನವಾಸಾನಂತರವೇ ನಿಜವಾದ ಪಟ್ಟಾಭಿಷೇಕವಾದಂತೆ. ಕಳೆದ ೧೪ ವರ್ಷಗಳಿಂದ ಕನ್ನಡಾಂಬೆ ವನವಾಸಿಯಾಗಿದ್ದಾಳೆ. ಮುಂದಿನ ವರ್ಷ ತುಂಬುವುದರೊಳಗಾಗಿ ನಮ್ಮ ರಾಜ್ಯವು 'ಕರ್ನಾಟಕ'ವೆಂಬ ಹೆಸರು ಧರಿಸಿ ಮೆರೆಯುವಂತಾಗಲೆಂದು ಹಾರೈಸುವಾ."—ಇದು ೧೯೫೭ರ ಮಾತು. ಆ ನಂತರ ಮತ್ತೆ ೧೫ - ೧೬ ವರ್ಷಗಳು ಕಳೆದುವು.. 'ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ' ಎಂಬದಕ್ಕೂ, ಸತ್ಯಮೇವ ಜಯತೇಗೂ ಕಾಲಹಿಡಿದೇ ಹಿಡಿಯುತ್ತದೆಂಬದಕ್ಕೂ, ಎತ್ತರಕ್ಕೆ ತಕ್ಕ ಅಡಿಪಾಯ ಬೇಕೇಬೇಕು ಎಂಬದಕ್ಕೂ ಇದೆಲ್ಲ ಉದಾಹರಣೆಯಾಗಿದೆ. ಭಾರತದ ಏಳು ಚಿರಂಜೀವಿಗಳಲ್ಲಿ ಮೂವರಿಗೆ ಜನ್ಮವಿತ್ತ 'ಕರ್ನಾಟಕ' ತಾನೂ ಇಂದಿನಿಂದ ಮುಂದೆ ಚಿರಂಜೀವಿಯಾಗಲಿ.

ಗದುಗಿನಲ್ಲಿ ಸಮಾರಂಭ

ಹಂಪೆಯಲ್ಲಿ ಹೊತ್ತಿಸಿದ ಕರ್ನಾಟಕ ಜ್ಯೋತಿಯನ್ನು ಗದಗಿಗೆ ತಂದು, ಅಲ್ಲಿ ಆದರ ಪ್ರಭೆಯಲ್ಲಿ, ಕರ್ನಾಟಕವು ಅಸ್ತಿತ್ವದಲ್ಲಿ ಬರಲು ಅಪೂರ್ವಸೇವೆ ಸಲ್ಲಿಸಿದವರನ್ನು ಗೌರವಿಸುವಲ್ಲಿ ಒಂದು ಮಹತ್ವದ ಔಚಿತ್ಯವಿದೆ. ಕರ್ನಾಟಕಾಭಿದಾನದ ಉತ್ಸವ ನೆರವೇರಿಸಿ, ಉತ್ಸವ ಸಂಚಿಕೆ ಪ್ರಕಟಿಸುವಲ್ಲಿ ಕ್ರಮಪ್ರಾಪ್ತತೆ ಇದ್ದೇ ಇದೆ. ಇದರಲ್ಲಿ ಕರ್ತವ್ಯಭಾವವು ಪ್ರಾಮುಖ್ಯವಾಗಿದೆ ಎಂದು ಮಾತ್ರ ಈ ಕಾರ್ಯಕ್ರಮ ಹಮ್ಮಲಾಗಿದೆ. ಹಂಪೆಯಲ್ಲಿಯೆ ಈ ಎಲ್ಲ ಕಾರ್ಯಕ್ರಮಗಳನ್ನು ನೆರವೇರಿಸುವುದು ಸಾಧ್ಯವೇ ಎಂಬ ವಿಚಾರದಲ್ಲಿ ತೊಡಗಿದ್ದಾಗಲೇ ಗದುಗಿನ ಸಾಹಸಿಗರು ಇದರ ಕಾರ್ಯಭಾರದ ಬಹುಭಾಗವನ್ನು ವಹಿಸಲು ಮುಂದೆ ಬಂದುದು ಸಮಯೋಚಿತವಾದ ಹಾಗೂ ಸೂಕ್ತ ನೆರವಾಗಿದೆ.

ಗದುಗಿನ ಆಧ್ಯಾತ್ಮದ ಭದ್ರ ಬುನಾದಿ ದ್ವಾಪರಯುಗದ ಆದಿಯಲ್ಲಿ ನೆಲೆಸಿದೆ. ಅಂದಿನಿಂದ, ತ್ರಿಕೂಟೇಶ್ವರ, ವೀರನಾರಾಯಣರ ಮೂಲಕವಾಗಿ ಆ ನಾಡಲ್ಲಿ ಹರಡಿದೆ. ಇತಿಹಾಸ ಕಾಲದಿಂದಲೂ ಗದುಗಿನ ಸುತ್ತಲಿನ ನಾಡು ಅದ್ವಿತೀಯವಾದ ಭವ್ಯ ಸಂಗತಿಗಳ ಬೀಡಾಗಿತ್ತು. ಅಲ್ಲಿನ ಶಿಲ್ಪಕಲಾ ವೈಭವ, ರಾಜ್ಯ ಶಕ್ತಿ, ವಿದ್ಯಾಪ್ರೇಮ, ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ಸಾವಿರಾರು ವರ್ಷಗಳ ಹಿಂದಿನ ಅನೇಕ ಶಿಲಾಶಾಸನಗಳು ಈಗಲೂ ಕೈಸಾರಿ ಹೇಳುತ್ತವೆ. ಅನೇಕ ಉನ್ನತಪಟ್ಟವ ಸಾಹಿತಿಗಳು ಗದುಗಿನ ಗುರುತ್ವವನ್ನು ವಿಧವಿಧವಾಗಿ ಬಣ್ಣಿಸಿವ್ವಾರೆ. ಅದರ ಭವ್ಯಭವಿಷ್ಯದ ಕನಸು ಕಂಡಿದ್ದಾರೆ. ಸಾಹಿತ್ಯ ಪ್ರಪಂಚದಲ್ಲಿ ಅದಕ್ಕೊಂದು ಅಮರ ಸ್ಥಾನವಿದೆ. ಅದು ಕನ್ನಡದ ಕೆಚ್ಚನ್ನು ಆಚ್ಚಳಿಯದೆ ಉಳಿಸಿಕೊಂಡು ಬಂದಿದೆ. ಅದಕ್ಕೆ ವರಕವಿ ಕುಮಾರವ್ಯಾಸರ ಮಹಾಭಾರತವೇ ಸಾಕ್ಷಿ. "ಗದುಗಿನ ವೀರನಾರಾಯಣನಿಂದ ಗದುಗು, 'ವೀರನಾರಾಯಣನ ಗದುಗಾ'ಗಿದೆ. ಅವುಗಳ ಪರಸ್ಪರ ಸಂಬಂಧವು ಅಗಲಿಸಲಾಗದ ಆತ್ಮೀಯತೆಯಿಂದ ಕೂಡಿದೆ".

ಗದುಗಿನ ನಾಡಿನ ಲಕ್ಕುಂಡಿ (ಲಕ್ಷಕುಂಡ) ಯಲ್ಲಿ ಪೌರಾಣಿಕ ಕಾಲದಲ್ಲಿ ಶಿಬಿ ಚಕ್ರವರ್ತಿ ಆಳುತ್ತಿದ್ದನಂತೆ. 12ನೆಯ ಶತಮಾನದಲ್ಲಿ ಅದು ವೀರಬಲ್ಲಾಳನ ರಾಜಧಾನಿಯಾಗಿತ್ತು. ಆ ಒಂದು ಊರಲ್ಲೇ 35 ಶಾಸನಗಳಿವೆ. ಅಲ್ಲಿ ಅದ್ವಿತೀಯ ವಾಸ್ತುಶಿಲ್ಪಕಲೆಯನ್ನೊಳಗೊಂಡ 9 ರಿಂದ 13 ಶತಮಾನದವರೆಗಿನ 34 ದೇವಾಲಯಗಳಿವೆ. ಅದರಂತೆ ಗದುಗಿನ ಹತ್ತಿರ 12 ಮೈಲಿನ ಕ್ಷೇತ್ರದಲ್ಲಿರುವ ಬೆಳಧಡಿ, ಕಳಸಾಪುರ, ಮುಳಗುಂದ, ನೀಲಗುಂದ, ಅಣ್ಣಿಗೇರಿ, ಕೋಟುಮುಚಗಿ, ಕೋಳಿವಾಡ, ಹುಯಿಲಗೋಳ, ಹುಲಕೋಟ, ಹೊಸಳ್ಳಿ, ನಾಗಾಯಿ, ಡಂಬಳ ದೊದಲಾದ ಸ್ಥಗಳು ಒಂದಿಲ್ಲೊಂದು ತೆರನಾದ ಐತಿಹಾಸಿಕ ಶೈಕ್ಷಣಿಕ, ಸಾಹಿತ್ಯಕ, ಸಾಂಸ್ಕೃತಿಕ ಮಹತ್ವವನ್ನು ಪಡೆದಿವೆ. 1912ರಲ್ಲಿ ಪರಿತ್ಯಜಿಸಲ್ಪಟ್ಟ ಚಿನ್ನದ ಗಣಿಗಳ ಕಪ್ಪತ ಗುಡ್ಡವೂ ತುಂಗಭದ್ರೆ ನದಿಯೂ ಸಮೀಪದಲ್ಲಿಯೇ ಇರುವುದು ವಿಶೇಷವಾಗಿದೆ.

'ಉದಯವಾಗಲಿ ನಮ್ಮೂರ ಚೆಲುವ ಕನ್ನಡ ನಾಡು' ಎಂಬ ಸಜೀವ ನಾಡಗೀತೆಯನ್ನು 1924ರಲ್ಲಿಯೆ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಹುಯಿಲಗೋಳ ನಾರಾಯಣರಾಯರು ಹಾಡಿ, ಕನ್ನಡ ಚೈತನ್ಯದ ಪ್ರಜ್ಞಾ ಜ್ಯೋತಿಯನ್ನು ಹೊತ್ತಿಸಿದರು. ಅರ್ಧ ಶತಮಾನದವರೆಗೆ ಜನಮನವನ್ನು ಸೂರೆಗೊಂಡ ಈ ನಾಡಗೀತೆ ಬಂದುದು ಗದುಗಿನ ನಾರಾಯಣರಾಯರಿಂದ ಎಂಬುದನ್ನು ಮರೆಯಲಿಕ್ಕಾದೀತೆ ?

ಗದುಗಿನ ತೊಂಟದಾರ್ಯ ಯತಿವರ್ಯರು, ಮುಳಗುಂದದ ಬಾಲಲೀಲಾ ಮಹಂತ ಶಿವಯೋಗಿಗಳು, ಉಭಯ ಗಾನವಿಶಾರದ ಯೋಗಿ ಪಂಚಾಕ್ಷರೀ ಗವಾಯಿಗಳು, ತ್ರಿಭಾಷಾ ವಿಶಾರದ ಪಂಡಿತ ಪುಟ್ಟ ರಾಜರು, ಮೊದಲಾದ ಅನೇಕ ಶರಣರ ಪುಣ್ಯ ನಾಡಲ್ಲವೇ ಗದುಗು ?

ಇಡೀ ಭಾರತದಲ್ಲಿಯ ಮೊಟ್ಟಮೊದಲಿನ ಸಹಕಾರೀ ಪತ್ತಿನ ಸಂಘವು ಗದುಗಿನ ಬಳಿ ಕಣಗಿನಹಾಳದಲ್ಲಿ 1904ರಲ್ಲೇ ಸ್ಥಾಪಿತವಾಗಿ ಕರ್ನಾಟಕಕ್ಕೆ ಕೀರ್ತಿ ಕಳಸಪ್ರಾಯವಾಗಿದೆ. ಅಂದಿನಿಂದಲೂ ಈ ಭಾಗವು ಸಹಕಾರೀ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿ ಅದ್ವಿತೀಯವಾಗಿದೆ. ಸಹಕಾರೀ ಆಂದೋಲನದಲ್ಲಿ ಅಗ್ರಪಾತ್ರವಹಿಸಿ, ಅನೇಕ ಹೊಸ ದಿಕ್ಕುಗಳಲ್ಲಿ ಸಾಗಿ ದಿಗ್ವಿಜಯ ಸಾಧಿಸಂತ್ತಿರುವದಂ ಅಲ್ಲಿನ ವೈಶಿಷ್ಟ್ಯವಾಗಿದೆ. ಅದು ಕರ್ನಾಟಕಕ್ಕೇ ಹೆಮ್ಮೆಯ ವಿಷಯವಾಗಿದೆ.

ಗದುಗು-ಬೆಟಗೇರಿಗಳ ಗುರುತ್ವ ಹೇಳುವಾಗ ಇತಿಹಾಸ ಸಂಶೋಧಕ ಶ್ರೀ ಪಾಂಡುರಂಗ ದೇಸಾಯಿ ಅವರು ಒಂದೆಡೆ ಹೀಗೆ ಹೇಳಿದ್ದಾರೆ :—'ಗದುಗು, ಗದುಗು, ಗದುಗು, ಕನ್ನಡ ಜನಾಂಗಕ್ಕೆ ಕರ್ಣರಸಾಯನವಾದ ಕನ್ನಡ ಜನತೆಗೆ ಅಚ್ಚುಮೆಚ್ಚಿನದಾದ ಈ ಹೆಸರು ಶತಮಾನಗಳಿಂದ ನೂರು, ಸಾವಿರ, ಲಕ್ಷ, ಕೋಟಿ ಶತಕೋಟಿ ಸಲ ಅವರ ನಾಲಗೆಯ ಮೇಲೆ

ನಲಿದಾಡುತ್ತಲಿಗೆ ; ನಲಿದಾಡಿದೆ'. ಜನಮೇಜಯನಿಂದ ಸ್ಥಾಪಿತವಾದ ಮಹಾ ಅಗ್ರಹಾರ ಗದುಗು ಎಂದಿನಿಂದಲೂ ವಿದ್ಯಾದಾನಕ್ಕಾಗಿ ಖ್ಯಾತಿವೆತ್ತ ನಗರ. ತ್ರಿಕೂಟೇಶ್ವರ ಮತ್ತು ವೀರನಾರಾಯಣರು ಗದುಗಿನ ದೇವತಾ ಸಾರ್ವಭೌಮರು. ಸ್ವಯಂ ತ್ರಿಕೂಟೇಶ್ವರನಂತೆ ವೀರನಾರಯಣನಾದರೂ ಗದುಗಿನ ಯಶೋದುಂದುಭಿಯನ್ನು ಮೊಳಗಿಸಿದ ದೇವಾಧಿದೇವನು. 'ಹರಿಯನ್ನು ಬಿಟ್ಟು ಹರನಿಲ್ಲ, ಹರನನ್ನು ಅಗಲಿ ಹರಿ ಇಲ್ಲ' ಎಂದು ಹರಿಹರ ಉಪಾಸನೆಯ ರಹಸ್ಯವನ್ನು ಘೋಷಿಸುವಂತೆ ಈ ದೇವಪರೇಣ್ಯರು ಗದುಗಿನಲ್ಲಿ ಸತತ ದೇದೀಪ್ಯಮಾನರಾಗಿ ನಿಂತಿರುವರು : ಗದುಗು ಮತ್ತು ಗದುಗು ನಾಡಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ವಿಶೇಷಗಳನ್ನು ಎತ್ತಿ ತೋರಿಸಿದ ಅವರು 'ನಾನು ಕಾಣುತ್ತಿರುವ ಸಮಗ್ರ ಕನ್ನಡನಾಡಿನ ಭವ್ಯ ಭವಿಷ್ಯತ್ತಿನ ಕನಸುಗಳಲ್ಲಿ ಒಂದು ಕನಸು ಗದುಗು ನಾಡಿನ ಭಾಗ್ಯೋದಯವನ್ನು ಕುರಿತಾದುದು' ಎಂದು ಗದುಗಿನ ಗುರುತ್ವಕ್ಕೆ ಮಹತಿ ಇತ್ತಿದ್ದಾರೆ.

ಅದರಂತೆಯೇ ಕನ್ನಡದ ಉಜ್ವಲಾಭಿಮಾನಿ ಸಾಹಿತಿ ಸಂಶೋಧಕ ಶ್ರೀ ಕೃಷ್ಣಕುಮಾರ ಕಲ್ಲೂರ ಅವರು—'ಕುಮಾರವ್ಯಾಸನ ಮಹತಿ ಗದುಗಿನ ಮಹತಿ ; ಆತನಿತ್ತ ಕೊಡುಗೆಯೆಲ್ಲಾ ಗದುಗಿನ ಕೊಡುಗೆ ;....ಆತನು ಗದುಗಿನಲ್ಲೂ, ವೀರನಾರಾಯಣನಲ್ಲೂ ತನ್ನನ್ನು ಪೂರ್ತಿ ಮರೆಯಿಸಿಕೊಂಡಿದ್ದಾನೆ....ಗದುಗು ಎಂದಿಗೂ ಇಂದಿಗೂ ಕನ್ನಡದ ನಡುನಾಡು ; ತಿರುಳುಗನ್ನಡದ ಗಂಡುಮೆಟ್ಟು; ಜನತೆಯ, ನಾಡಾಡಿಗಳ ಅಚ್ಚಗನ್ನಡದ ಕೆಚ್ಚು ಅದು; ಕನ್ನಡವನ್ನು ಒಂದು ಮೇಲ್ಮಟ್ಟಕ್ಕೆ, ಸ್ಥಿರ ಪಟ್ಟಕ್ಕೆ ತರಲು (ಸ್ಟ್ಯಾಂಡರಡೈಜೇಶನ್) ಗದುಗಿನ ಹದಗನ್ನಡ, ಹುರುಳು–ಗನ್ನಡ, ಅಚ್ಚುಕೆಚ್ಚಿನ ಕನ್ನಡ ಬಲು ತಕ್ಕುದಾಗಿತ್ತು. ಕವಿ ನೃಪತುಂಗನು ಬಣ್ಣಿಸಿದ ಕೊಪ್ಪಳ, ಲಕ್ಷೇಶ್ವರ, ಒಕ್ಕುಂದ, ಪಟ್ಟದ ಕಲ್ಲು, ಇವುಗಳ ಮಧ್ಯವರ್ತಿಯಾದ ತಿರುಳುಗನ್ನಡ ನಾಡೇ ಗದುಗಿನ ನಾಡೆಂಬುದನ್ನು ಮರೆಯಲಿಕ್ಕಾದೀತೇ ? ಭೌಗೋಲಿಕವಾಗಿ ಗದುಗಿಗೆ ಕರ್ನಾಟಕದಲ್ಲಿ ಅತಿ ಮಹತ್ವಮವಾದ ಸ್ಥಾನವಿದೆ. ಚಾರಿತ್ರ್ಯ ಮಹಿಮೆಯುಳ್ಳ ನಗರ, ಭೌಗೋಲಿಕವಾಗಿ ಮಧ್ಯವರ್ತಿ ನಗರ, ಭೂಗರ್ಭರಚನೆಯಲ್ಲೂ ಗದುಗು ಒಂದು ಸಂಧಿ–ಸ್ಥಾನದಲ್ಲಿದೆ.' ಎಂದು ಅನೇಕ ವಿಧದಲ್ಲಿ ಅದರ ಮಹತಿ ಬಣ್ಣಿಸಿದ್ದಾರೆ. ಅಲ್ಲಿನ ವ್ಯವಸಾಯ ಉದ್ದಿಮೆ, ಅವರುಗಳ ಮಹತಿಯನ್ನಭ್ಯಸಿಸಿ ಅಲ್ಲಿ '' ಹುದುಗಿರುವ ಆರ್ಥಿಕ ಶಕ್ತಿ ಗದುಗಿಗೆ ಅನುಪಮ ಆಸ್ಪದ ಕೊಡುವಂತಿದೆ ; ಒಟ್ಟಿನಲ್ಲಿ ಪೂರ್ತಿ ಪ್ರಫುಲ್ಲವಾಗಿ ಅರಳುವ ಆಸ್ಪದ ದೊರೆತರೆ ಗದುಗು ಕರ್ನಾಟಕದಲ್ಲೇ ಏಕೆ ಭಾರತದಲ್ಲೇ ಹೆಸರಾಗಬಲ್ಲ ಹದವುಳ್ಳದ್ದು '' ಎಂದು ಭರವಸೆ ತಾಳಿದ್ದಾರೆ.

ಇಂದಿನ ಗದುಗಿನ ಪ್ರಗತಿಯನ್ನು ಗಮನಿಸಿದರೂ ಗದಗು ಕರ್ನಾಟಕದ ಯಾವುದೇ ನಗರಕ್ಕಿಂತ ಹೆಚ್ಚಿನ ವೇಗದಲ್ಲಿ ಧಾವಿಸುತ್ತಾ ನಡೆದಿದೆ. ಗದುಗಿನ ನಾಡಿನಲ್ಲಿ ಔದ್ಯಮಿಕ ಪ್ರಗತಿ ಸ್ವಾತಂತ್ರ್ಯಾನಂತರದಲ್ಲಿ ಮತ್ತಾವಭಾಗದಲ್ಲೂ ಆಗದಷ್ಟು ಪ್ರಮಾಣದಲ್ಲಿ ಬೆಳೆದಿದೆ. ಅದರಲ್ಲೂ ಹತ್ತಿ ಬೆಳೆಗೆ ಸಂಬಂಧಿಸಿದ ಉದ್ದಿಮೆಗಳಲ್ಲಿ ಅದು ರಾಜ್ಯದಲ್ಲಿ ಪ್ರಪ್ರಥಮ ಸ್ಥಾನ

ಪಡೆದಿದೆ. ವ್ಯವಸಾಯ ಹಾಗು ಶೈಕ್ಷಣಿಕ ಕ್ಷೇತ್ರಗಳಲ್ಲೂ ಅದು ಸಾಧಿಸಿರುವ ಪ್ರಗತಿ ಆ ಭಾಗದ ಜನಸಾಮಾನ್ಯನ ಸ್ಥಿತಿಯನ್ನು ಇತರ ಕಡೆಗಳಿಗಿಂತ ಹೆಚ್ಚು ಉತ್ತಮಗೊಳಿಸಿದೆ. ಗದುಗು ಮತದಾರ ಕ್ಷೇತ್ರದ ಪ್ರತಿನಿಧಿಯಾದ ಶ್ರೀ ಕೆ. ಎಚ್. ಪಾಟೀಲರವರು ರಾಜ್ಯದ ಮಂತ್ರಿ ಮಂಡಲದಲ್ಲಿ ಸೇರಿದಂದಿನಿಂದಂತೂ ಪ್ರಗತಿಯ ವೇಗ ಇತರರನ್ನು ಕಣ್ಣು ಕುಕ್ಕಿಸುವಂತಾಗಿದೆ. ರಾಜ್ಯ ಸಂಪುಟದಲ್ಲಿ ಅವರೊಬ್ಬ ''ಭೀಮ'' ನೆಂದು ಮುಖ್ಯ ಮಂತ್ರಿಗಳೇ ಹೇಳಿರುವಾಗ ಇತರರು ಹೇಳುವದೇನಿದೆ ?

ಮಾನ್ಯ ಶ್ರೀ ಕೆ. ಎಚ್. ಪಾಟೀಲರ ನೆರವು ನೇತೃತ್ವಗಳು ಈ ಉತ್ಸವ ಸಮಾರಂಭ ನೇರವೇರಿಸುವಲ್ಲಿ ಹಾಗೂ ಉತ್ಸವ ಸಂಚಿಕೆ ಪ್ರಕಟಿಸುವಲ್ಲಿ ನಮ್ಮ ಬೆಂಬಲಕ್ಕಿರದಿದ್ದರೆ, ಈ ಪ್ರಮಾಣದಲ್ಲಿ ಈ ಕಾರ್ಯ ಇಷ್ಟು ಅಲ್ಪಾವಧಿಯಲ್ಲಿ ನೇರವೇರುವುದು ಸಾಧ್ಯವಾಗುತ್ತಿರಲಿಲ್ಲ ವೆಂದು ಹೇಳದಿರಲಾರೆವು. ಅವರಿಗೆ ನಮ್ಮ ತುಂಬು ಹೃದಯದ ಕೃತಜ್ಞತೆಗಳು.

ಬೆಂಗಳೂರು
೨೨-೧೦-೭೩

ಪಾಟೀಲ ಕಲ್ಲನಗೌಡ

ಸುಮಾರು ಎರಡುವರೆ ಸಾವಿರ ಸಂವತ್ಸರಗಳಷ್ಟು ಪ್ರಾಚೀನ ಯುಗದಿಂದ ಕನ್ನಡ ಜ್ಯೋತಿ ರುಗರುಗಿಸುತ್ತ ಅಖಂಡವಾಗಿ ಬೆಳಗುತ್ತಿದೆ. ಕೋಟಿ ಕೋಟಿ ಕನ್ನಡ ನಾಡಿನ ಚಿನ್ನದ ಮಕ್ಕಳು ತಮ್ಮ ಅಮಲ ಅಮರ ಆತ್ಮದ ಚೈತನ್ಯ ತೈಲವನ್ನು ಎರೆದು ಹೊತ್ತಿಸಿರುವುದರಿಂದ ಈ ಜ್ಯೋತಿಯ ಪ್ರಕಾಶವು ಕುಂದದೆ ನಂದದೆ ದೇದೀಪ್ಯಮಾನವಾಗಿ ತೊಳಗುತ್ತದೆ.

ಭಾರತ ರಾಷ್ಟ್ರಮಾತೆಯ ಪವಿತ್ರ ಮಂದಿರದಲ್ಲಿ ಹಲವು ನಾಡುಗಳ ಹಲವು ಜ್ಯೋತಿಗಳು ನಿರಂತರ ಜಾಜ್ವಲ್ಯಮಾನವಾಗಿವೆ. ಅವುಗಳ ಮಾಲಿಕೆಯಲ್ಲಿ ಈ ಕನ್ನಡ ಜ್ಯೋತಿ ತನಗಾಗಿ ಒಂದು ಅಚಲ ಸ್ಥಾನವನ್ನು ಕಲ್ಪಿಸಿಕೊಂಡಿದೆ. ನಾಗರಿಕತೆ, ರಾಜ್ಯ ನಿರ್ಮಾಣ, ಭಾಷೆ, ಸಾಹಿತ್ಯ, ವಿದ್ಯೆ, ವಿಜ್ಞಾನ, ಧರ್ಮ, ಕಲೆ, ಇತ್ಯಾದಿ ನಾನಾ ರಂಗಗಳಲ್ಲಿನ ವಿಶಿಷ್ಟ ಸಾಧನೆಗಳಿಂದಾಗಿ ಈ ಜ್ಯೋತಿ ವರ್ಣಮಯ ಕಾಂತಿಯಿಂದ ರಾರಾಜಿಸುತ್ತಿದೆ.

—ಶ್ರೀ. ಪಾಂ. ಭೀ. ದೇಸಾಯಿ.

ಕರ್ನಾಟಕದ ವಿರಾಟ್‌ಸ್ವರೂಪ ದರ್ಶನ

ಕಲ್ಲೂರ ಕೃಷ್ಣಕುಮಾರ

ಕರ್ನಾಟಕ 'ಕರ್ನಾಟಕ'ವೇ ಆಗುವುದರಲ್ಲಿ, ಯಾವ ಮೋಡಿ, ಯಾವ ಗಾರುಡಿ, ಯಾವ ಇಂದ್ರಜಾಲವಿದೆಯೆಂದರೆ,—'ಕರ್ನಾಟಕ' ಎಂದೊಡನೆ, ಒಂದು ಉಜ್ವಲವಾದ, ಗೌರವಶಾಲಿಯೂದ, ಪುರಾತನವಾದ, ಅಪರಂಪಾರವಾದ ಸಾಂಸ್ಕೃತಿಕ ಪರಂಪರೆಯ ವಿರಾಟ್–ದೃಶ್ಯದ ಮಹಾದ್ವಾರವೇ ತೆರೆದಂತಾಗುವದು. ಸದಭಿಮಾನಿ ಕರ್ನಾಟಕಸ್ಥನೊಬ್ಬ ಆ ತೆರೆದ ಮಹಾದ್ವಾರವನ್ನು ಪ್ರವೇಶಿಸಿ ಒಳ ಹೊಕ್ಕನೆಂದರೆ, ಆ ರಮ್ಯೋದ್ಯಾನದ ಬಾಗಿಲ ಬಳಿಯಲ್ಲಿಯೇ ಆಲೂರ ವೆಂಕಟರಾಯರು, ಕಡಪ ರಾಘವೇಂದ್ರರಾಯರು, ಮುದವೀಡು ವೆಂಕಟರಾಯರು, ಶಾಂತಕವಿಗಳು, 'ಶ್ರೀ' ಅವರು, ತೀ. ನಂ. ಶ್ರೀ, ಉತ್ತಂಗಿ. ಪಂಜೆ, ಗೋವಿಂದ ಪೈ. ದೊಡ್ಡಮೇಟಿ. ವಿಶ್ವೇಶ್ವರಯ್ಯ ಮುಂತಾದ ಅನೇಕ ಹಿರಿಯರು ಸಿಕ್ಕುತ್ತಾರೆ. ಅವರೆಲ್ಲರ ಕೈ ಕುಲುಕಿ ಮುನ್ನಡೆದರೆ, ಬಸಪ್ಪಶಾಸ್ತ್ರಿ, ಕೆರೂರು, ಗಳಗನಾಥ, ವೆಂಕೋಬಾಚಾರ್ಯ ತುರಮರಿ, ಕಿಟ್ಟೆಲ್, ಡಿ. ಚನ್ನಬಸಪ್ಪ, ಮುದ್ದಣ—ಮನೋರಮೆ, ಕೆಂಪು ನಾರಾಯಣ, ಹೊನ್ನಮ್ಮ, ಚಿಕ್ಕದೇವರಾಯ, ಪೂರ್ಣಯ್ಯ, ಷಡಕ್ಷರಿ, ಕಿತ್ತೂರ ಚೆನ್ನಮ್ಮ, ಟಿಪ್ಪು, ವೆಂಕಟನಾಯಕ, ಸಂಗೊಳ್ಳಿ ರಾಯಣ್ಣಾದಿಗಳು ಸಿಗುತ್ತಾರೆ. ಅವರನ್ನೆಲ್ಲ ಬೀಳ್ಕೊಂಡು ಇನ್ನೂ ಒಳಹೊಕ್ಕು, ಸರ್ವಜ್ಞ, ದಾಸಾಗ್ರಣಿಗಳು, ಶರಣಶ್ರೇಷ್ಠರು, ಲಕ್ಷ್ಮೀಶ, ರತ್ನಾಕರ, ಕುಮಾರವ್ಯಾಸಾದಿಗಳನ್ನು ಅಭಿವಂದಿಸುತ್ತಿರುವಂತೆಯೇ, ಅವರೇ ಆತನನ್ನು ಮುಗುಳ್ನಗೆಯಿಂದ ಸ್ವಾಗತಿಸುತ್ತಾರೆ. ಯೋಗಸ್ಥರಾದ ವಿದ್ಯಾರಣ್ಯರಿಗೆ ಬಲವಂದು ಆತ ದಂಡಪ್ರಣಾಮಂ ಮಾಡುವಷ್ಟರಲ್ಲಿಯೇ, ಅವರ ಸನ್ನಿಧಿಯಲ್ಲಿಯೇ ಪುರಂದರರು, ಶಾರ್ಙದೇವ, ಪುಂಡಲೀಕವಿಠಲರು, ನಿಜಗುಣ ಶಿವಯೋಗಿಗಳೊಡನೆ ಮಾನ ಸೋಲ್ಲಾಸದ ಸಂಗೀತ ಚರ್ಚೆಯಲ್ಲಿ ತೊಡಗಿರುವದೂ, ಅನತಿದೂರದಲ್ಲಿ ಕುಳಿತು ವಾಸುದೇವಾಚಾರ್ಯರೂ, ಹುಲಗೂರ ಕೃಷ್ಣಾಚಾರ್ಯರೂ ಟಿಪ್ಪಣಿ ಬರೆದುಕೊಳ್ಳುತ್ತಿರುವದೂ ವಿದಿತವಾಗುತ್ತದೆ. ಇನ್ನೊಂದೆಡೆಗೆ ತಿರುಗಿದರೆ, ಜಕ್ಕಣ, ಪದ್ಮೋಜ, ವಾಸೋಜ, ಮಲ್ಲೋಜರಂ ಮುಗಿಲಲ್ಲೇ ಮೂರ್ತಿಗಳನ್ನೂ ಮಂದಿರಗಳನ್ನೂ ಕಟೆಯುವದರಲ್ಲಿ ತಲ್ಲೀನರಾಗಿರುವದು ಕಂಗೊಳಿಸುವದು. ಮತ್ತೊಂದೆಡೆಯಲ್ಲಿ ಹಂಪಿ, ಸೋಮನಾಥಪುರ, ಹಳೆಬೀಡು, ಬೇಲೂರು, ಲಕ್ಕುಂಡಿ, ಬಾದಾಮಿ, ಎಲ್ಲೋರಾಗಳಲ್ಲಿ ಕಲ್ಗವಿಗಳೂ, ಕಲ್ಗುಡಿಗಳೂ, ಕುಡಿಯೊಡೆದುದೂ, ರೂವಾರಿಗಳ, ಚಿತ್ರಕಾರರ ಗಾರುಡಿಗೆ ಅರಳಿ ನಿಂತುದೂ ಪ್ರತ್ಯಕ್ಷವಾಗುವದು. ವಿಜಯನಗರದ ಸಾಹಸ, ಹೊಯ್ಸಳರ ಹಿರಿಮೆ, ಚಾಲುಕ್ಯ–ರಾಷ್ಟ್ರಕೂಟಾದಿಗಳ ಬಲ್ಮೆ ಮುಗಿಲುದ್ದದ ಕೀರ್ತಿಕಸ್ತಂಭಗಳಾಗಿ ನಿಂತಿರುವದು ಕಣ್ಗೆಂಬಾಗುವದು.

ಈ ನಡುವೆ ಮಧ್ವ-ರಾಮಾನುಜರ ಮಂತ್ರವಾಣಿ, ಬಸವ-ಅಲ್ಲಮ-ಮಹಾದೇವಿಯರ ವಚನವಾಣಿ ಸುಳಿಗಾಳಿಯಲ್ಲಿ ಬೆರೆದು ಇಡುಗಿದಂತೆ ಕೇಳಬರುವವು. ಇನ್ನೂ ಒಳಸೇರಿದರೆ, ಪಂಪ, ಹೊನ್ನ, ರನ್ನ, ನೃಪತುಂಗಾದಿಗಳು ನಮ್ಮ ಸದಭಿಮಾನಿ ಕರ್ನಾಟಕಸ್ಥನನ್ನು ಗುರುತಿಸಿ ಕೈಚಾಚಿ ಕರೆದಪ್ಪಲು ಆತುರರಾಗಿರುವರು, ಸಾವಿರಾರು ವರ್ಷಗಳ ಋಣಾನುಬಂಧವನ್ನು ನೆನೆದು. ಅತ್ತ ಆಕಡೆ, ಇವುಗಳೆಲ್ಲವಕ್ಕೂ ಕಾವಲುನಿಂತ ಗೊಮ್ಮಟೇಶನ ಉನ್ನತಮೂರ್ತಿ ನಾಡಸಿರಿಯನ್ನೇ ತನ್ನ ನಸುನಗೆಯಲ್ಲಿ ಸೂಸುವಂತಿದೆ. ಇಲ್ಲಿಯ ಪರಿಸರದಲ್ಲೆಲ್ಲ ಪಾವಿತ್ರ್ಯವೇ ಉಸಿರ್ಗಾಳಿ ಎಂದೆನಿಸುತ್ತದೆ, —ಏಕೆಂದರೆ, ಎದುರಿಗೇ ಮೂರ್ತಿಮತ್ತಾಗಿ ಶೃಂಗೇರಿಯ ಶೃಂಗವನ್ನೇರಿ ನಿಂತ ಶಂಕರಾಚಾರ್ಯರು ತಲೆಬಾಗಿನಿಂತ ಹಿಮಾಲಯವನ್ನೇ ಹರಸುತ್ತಿದ್ದ ನಿತ್ಯಸುಂದರ ದೃಶ್ಯ ಬಗೆದೋರುವದು. ಅದಕ್ಕೂ ಮುಂದೆ, ದುರ್ಬೀನು ಚಾಚಿದರೆ, ಕದಂಬರು, ಶಾಲಿವಾಹನರು, ವಿಶ್ರಮಿಸುತ್ತಿರುವದೂ, ಅದರಾಚೆ ಸೋಟು ಬಯಲಂಚಿನ್ನು ತಾಗುವಲ್ಲಿ, ಚಂದ್ರಹಾಸ, ಋಷ್ಯಶೃಂಗ, ಹನುಮಂತ, ಪರಶುರಾಮ ಬಲಿಚಕ್ರವರ್ತಿಗಳು ತಮ್ಮ ಚಿರಂಜೀವಿತನದ ಚೈತನ್ಯದಲ್ಲಿ ವಿಜೃಂಭಿಸುವದೂ ಕಂಚುಮಿಂಚಾಗಿ ಮಿನುಗುವದು. ಇದೆಲ್ಲಾ, ಸಾವಿರಾರು ವರ್ಷಗಳ ಗಡಿಮೀರಿ ಕಾಣುವ ಒಂದು ಅದ್ಭುತ ದೃಶ್ಯ-ಪರಂಪರೆಯ, —'ಪ್ಯಾನೋರಮಾ'ದ, —ಹೆಗ್ಗುರುತುಗಳು ಮಾತ್ರ. ಇಂತಹ ಅಪರಂಪಾರವಾದ, ಅತಿ-ಅಳವಾದ, ಅತಿ-ಪ್ರಾಚೀನವಾವ ಅಸಮಾನ—ಸದೃಶವಾದ ದೃಶ್ಯ-ಪರಂಪರೆಗೆ 'ಕರ್ನಾಟಕ' ಮಾತ್ರವೇ ಹೆಬ್ಬಾಗಿಲು; ಮೈಸೂರು, ಬಿದನೂರು, ಹಳೇ ಬೀಡು, ಕಲ್ಯಾಣ, ಬಾದಾಮಿ, ಬನವಾಸಿಗಳು ಚಿಕ್ಕದೊಡ್ಡ 'ಕನಕನಕಿಂಡಿ'ಗಳು ಮಾತ್ರ. ಆ ಹೆಬ್ಬಾಗಿಲು ತೆರೆದರಷ್ಟೇ ಕರ್ನಾಟಕಸ್ಥನಿಗೆ ವಿಶಾಲವಾದ, ವಿಶ್ವತೋಮುಖವಾದ, 'ನಷ್ಟೋಮೋಹಃ, ಸ್ಮೃತಿರ್ಲಬ್ಧಃ' ಎನಿಸಬಲ್ಲ ಮಹತ್ತಮ ಸಾಂಸ್ಕೃತಿಕ ಪರಂಪರೆಯ ವಿಶ್ವರೂಪ ದರ್ಶನವಾಗಬಲ್ಲುದು. ಆ ವಿಶ್ವರೂಪದರ್ಶನವಾಗುವದಷ್ಟೇ ಅಲ್ಲದೆ, ಅದರೊಂದಿಗೆ ಸಮರಸನಾಗಿ, ಆ ಅತಿಪುರಾತನವಾದ ಅಸೀಮವಾದ ಪ್ರಾಕಾರದಲ್ಲೆಲ್ಲ ನಮ್ಮ ಕರ್ನಾಟಕಸ್ಥನು ಸತ್ತ್ವಪೂರಿತನಾಗಿ, 'ಭಯೇನ ಪ್ರವ್ಯಥಿತಂ ಮನೋ ಮೇ' ಎಂದೆನ್ನಿಸದೆ, ಸ್ವಚ್ಛಂದವಾಗಿ ವಿಹರಿಸಬಲ್ಲ. ಅಂತಹ ಆ ಅಸೀಮ ಪ್ರಾಕಾರಕ್ಕೆ 'ಕರ್ನಾಟಕ' ಹೊರ-ಹೆಬ್ಬಾಗಿಲಷ್ಟೇ ಆಗಿರದೆ, ಅಂತಃಪ್ರಾಣವೂ ಆಗಿದ್ದು, ಅಲ್ಲಿಯ ಪ್ರತಿಯೊಂದು ಸತ್ಯಪೀಠ, ಸತ್ವ ಪೀಠ, ಧರ್ಮಪೀಠ, ಕರ್ಮ ಪೀಠ, ಜ್ಞಾನಪೀಠ, ಕಾವ್ಯಪೀಠ, ಶಾಸ್ತ್ರಪೀಠ, ಭಕ್ತಿಪೀಠ, ಶಕ್ತಿ ಪೀಠ, ದೈಕ್-ಪೀಠ, ದಿಕ್-ಪೀಠಗಳಲ್ಲೆಲ್ಲಾ 'ಕರ್ನಾಟಕ' 'ಕರ್ನಾಟಕ' ಎಂಬ ಕೊರೆದಕ್ಕರಗಳೇ ಚಂದ್ರಾರ್ಕ-ಸಾಕ್ಷಿಯಾಗಿ ಕಣ್ಣು ಕೋರೈಸುವವು. ಆ ಪ್ರಾಕಾರದ ಹವೆಯಲ್ಲೆಲ್ಲ ಅನಾದ್ಯನಂತವಾಗಿ ಸುಳಿಯುವ ಮರ್ಮರವೊಂದು ಕೇಳಬರುವದು; ಅದರಲ್ಲೂ 'ಕರ್ನಾಟಕ' ಸುಳಿದುಲಿಯುತ್ತಿರುವದು ಹೃದ್ಗೋಚರವಾಗುವದು. ಆಗ ಅದೊಂದು ಮಂತ್ರ ಎಂಬ ಪ್ರಜ್ಞೆ ಉಂಟಾಗುವುದು.

---

೧ ನವೆಂಬರ್ ೧೯೫೬ ರಂದು ಶ್ರೀ ಪಂಪಾಕ್ಷೇತ್ರದಲ್ಲಿ ನವರಾಜ್ಯೋದಯದ ಉತ್ಸವ

ಕರ್ನಾಟಕ ಕುಲಪುರೋಹಿತರೆನಿಸಿದ ವಯೋವೃದ್ಧರಾದ ಶ್ರೀ ಆಲೂರ ವೆಂಕಟ ರಾಯರ ಪೌರೋಹಿತ್ಯದಲ್ಲಿ ಅಂದಿನ ಗುರು ಗಂಭೀರ ವಾತಾವರಣದಲ್ಲಿ ವೇದೋಕ್ತವಾಗಿ ಈ ರಾಜ್ಯೋದಯದ ಉತ್ಸವವು ಸಾಂಗವಾಯಿತು. ಕರ್ನಾಟಕದ ಬೇರೆಬೇರೆ ಭಾಗಗಳಿಂದ ಈ ಉತ್ಸವದಲ್ಲಿ ಭಾಗವಹಿಸಲು ಜನ ಬಂದಿದ್ದರು. ಹೀಗೆ ಬಂದ ಕನ್ನಡಿಗರು ತಮ್ಮತಮ್ಮ ಭಾಗದಲ್ಲಿ ನದಿಗಳ ನೀರನ್ನೂ ಆಯಾ ಭಾಗಗಳ ಕನ್ನಡ ತಾಯಿಯ ಮೈಮಣ್ಣನ್ನೂ ಹೂ ಹಣ್ಣುಗಳನ್ನೂ ಕಾಳಂಕಡಿಗಳನ್ನೂ ಉತ್ಸವಕ್ಕೆಂದು ತಂದು ಒಪ್ಪಿಸಿದ್ದರು.

ಅಲಂಕೃತ ವೇದಿಕೆಯ ಅಗ್ರಪೀಠದಲ್ಲಿ ತೀರ್ಥಕುಂಭ, ಅದರ ಹಿನ್ನೆಡೆಗೆ ಕಲ್ಪಿತ ವಿಶ್ವ ಪತಾಕೆ. ಅದರ ಮುಂದೆ ಭಾರತದ ಪತಾಕೆ, ಅದರ ಮುಂದೆ ಸಮ್ಮುಖವಾಗಿ ಇರಿಸಿದ ನವ ಕರ್ನಾಟಕದ ಬಾವುಟ. ಇದನ್ನೆಲ್ಲ ಸಿಂಗರಿಸಲು ಬೇರೆಬೇರೆ ಭಾಗಗಳಿಂದ ಬಂದ ತೆಂಗು. ಕಂಗು, ಕೆದಾಳೆ, ಸೀಯಾಳ, ಹಸಿ ಅಡಿಕೆ. ತೋರಕಿತ್ತಳೆ—ಸಿಂಗಾರೆ ಎಂಬ ಪುಷ್ಪಗಳಿದ್ದವು.

ಹೀಗಿರಲು ಸಂಜೆ 7 ಕ್ಕೆ ಮೊಟ್ಟಮೊದಲು ಶ್ರೀ ಆಲೂರ ವೆಂಕಟರಾಯರ ಯಾಜಮಾನ್ಯದಲ್ಲಿ, ಶ್ರೀ ಭುವನೇಶ್ವರಿ ಸಹಸ್ರನಾಮ ಸಹಿತ ಕುಂಕುಮಪೂಜೆ, ಮಂಗಳಾರತಿ ಇತ್ಯಾದಿ ನಡೆದವು. ಅಲ್ಲಿಂದ ವಿದ್ಯಾರಣ್ಯ ಸನ್ನಿಧಿಯಲ್ಲಿ ಮಂಗಳಾರತಿಯಾಗಿ, ಪಂಪಾಪತಿಯ ಅರ್ಜನೆ ಮುಗಿಸಿಕೊಂಡು, ತೀರ್ಥಪ್ರಸಾದ ವಿತರಣೆಯ ನಂತರ ದಿವ್ಯವೂ ಭವ್ಯವೂ ಸುಂದರವೂ ವಿಶಾಲವೂ ಪ್ರಾಚೀನಶಿಲ್ಪದಿಂದ ವರ್ಣಚಿತ್ರಗಳಿಂದ ಕಲಾಪೂರ್ಣವೂ ಆದ ಕಲ್ಯಾಣಮಂಟಪದಲ್ಲಿ ರಾತ್ರಿ 9ರ ವರೆಗೆ ನಾಡಹಾಡುಗಳೊಂದಿಗೆ ಸಭೆ ನಡೆಯಿತು. ಬಾದಾಮಿ ಮತ್ತು ಗುಡಿ ಎಂಬ ಇಬ್ಬರು ಚಿಕ್ಕ ಕುಮಾರಿಕೆಯರು ಕರ್ನಾಟಕದ ಸ್ತ್ರೀಲೋಕವನ್ನು ಪ್ರತಿನಿಧಿಸಿ ಬಂದಿದ್ದರೋ ಎಂಬಂತೆ ಗದಗಿನಿಂದ ನಾಡಹಬ್ಬಗಳನ್ನು ಹಾಡಲು ಬಂದಿದ್ದರು. ಅವರ ಮಧುರ ರಾಷ್ಟ್ರಗೀತೆಯ ನಂತರ ಸಭೆ ಪ್ರಾರಂಭವಾಯಿತು.

ಶತಾಸುಶತಕಗಳ ಉದ್ದಕ್ಕೂ ಅನೇಕ ಮಹಾವಿಭೂತಿಗಳೂ ಕವಿಗಳೂ ಶಿಲ್ಪಿಗಳೂ ರಾಜ್ಯದರಂಧರರೂ ವೀರರೂ ರಾಜಕಾರಣ ಪಟುಗಳೂ ಕೂಡಿ ಕನ್ನಡನಾಡಿನ ಸಾಹಿತ್ಯಕ, ಕಲಾತ್ಮಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ವೈಭವವನ್ನು ಬೆಳೆಯಿಸಿ ವೈಶಿಷ್ಟ್ಯಪೂರ್ಣವಾದ ಭದ್ರವಾದ ಸತ್ಪರಂಪರೆಯೊಂದನ್ನು ಕಟ್ಟಿ ನಿಲ್ಲಿಸಿದ್ದಾರೆ. ಈ ಮಹತ್ಕಾರ್ಯಕ್ಕೆ ಕಾರಣಭೂತರಾದವರೆಲ್ಲರನ್ನೂ ಅತ್ಯಾಧುನಿಕ ಕಾಲದವರೆಗೂ ಸ್ಮರಿಸಿ ಅವರೆಲ್ಲರಿಗೂ ಇಂದಿನ ಕರ್ನಾಟಕದ ಕೃತಜ್ಞತೆ ಸಲ್ಲಿಸುವುದೇ ಈ ಸಭೆಯ ಆಶಯವಾಗಿತ್ತು. ಮೊಟ್ಟಮೊದಲು

ಶ್ರೀ ದೊಡ್ಡಮೇಟಿ ಅಂದಾನಪ್ಪನವರು ಪ್ರಾಥಮಿಕ ಭಾಷಣ ಮಾಡಿ, ಬಿಕ್ಕಟ್ಟಿನ ಪ್ರಸಂಗಗಳಲ್ಲೆಲ್ಲ ತಾವು ಶ್ರೀ ಭುವನೇಶ್ವರಿಯ ಸನ್ನಿಧಿಗೆ ಧಾವಿಸಿಬಂದು, ಆಕೆಗೆ ಮೊರೆಹೊಕ್ಕ ವಿಚಾರ ಹೇಳಿದರು. ಇದೇ ಬಗೆಯಾಗಿ ಶ್ರೀ ನರೆಗಲ್ಲ ಪ್ರಹ್ಲಾದರಾಯರು ಕರ್ನಾಟಕದ ವೀರವಿಭೂತಿಗಳ ವಿಷಯಕ್ಕೂ ಶ್ರೀ ಮೈಂದೂರ ತಿರುಮಲಾಚಾರ್ಯರು ಕನ್ನಡದ ಕವಿಗಳ ವಿಷಯಕ್ಕೂ, ಶ್ರೀ ನಾರಾಯಣ ಸಂಗಮರವರು ಕರ್ನಾಟಕದ ಶಿಲ್ಪಿಗಳು, ಕಲಾವಿದರು, ಸಂಗೀತಜ್ಞರ ವಿಷಯಕ್ಕೂ ಶ್ರೀ ಗಾಂವಕರರು ಆಧುನಿಕ ಕರ್ನಾಟಕ ಏಕೀಕರಣ ಭಕ್ತರು ಹಾಗೂ ಧುರೀಣರ ವಿಷಯಕ್ಕೂ ಸಮಯೋಚಿತ ಭಾಷಣ ಮಾಡಿದರು.

ಕೂಡಿದ ಜನರಲ್ಲಿ ಏಕೀಕರಣವು ಸಾಂಕೇತಿಕವಾಗಿ ವ್ಯಕ್ತವಾಗಿದ್ದಂತೆ ಊಟದಲ್ಲಿಯೂ ಏಕೀಕರಣ ವೈಶಿಷ್ಟ್ಯವು ಒಡೆದು ಕಾಣುತ್ತಿತ್ತು. ಪಂಪಾಧೀಶ್ವರನ ಪ್ರಾಕಾರದಲ್ಲಿ ವಿಸ್ತೀರ್ಣವಾದ ಹಾಸೋಗಲ್ಲಿನ ಸ್ವಚ್ಛ ಪಟಾಂಗಣದಲ್ಲಿ ಏಕೀಕರಣ ಭಕ್ತರು ಊಟಕ್ಕೆ ಕುಳಿತ ಆ ನೋಟವು ನಿಂತುನೋಡುವಂತಿತ್ತು. ಬೆಳನಲದ ಊಟವೆಂದು ನೂರಾರು ಬಿಳಿ ಜೋಳದ ರೊಟ್ಟಿ, ಕಾಳು, ಹಿಂಡಿ, ಬೆಣ್ಣೆ, ಕಲಸನ್ನ, ಕರ್ಜಿಕಾಯಿ ಇತ್ಯಾದಿ ಪದಾರ್ಥಗಳನ್ನು ಕೆಲವರು ತಂದಿದ್ದರು. ಮಲೆನಾಡಿನ ಊಟವೆಂದು ಅಕ್ಕಿಯ ಬಿಸಿಬೋನ, ಸಾರು, ಹುಳಿ, ಚಟ್ನಿ ಇತ್ಯಾದಿ ಖಾದ್ಯದ್ರವ್ಯಗಳೂ ಇದ್ದವು. ಪಂಕ್ತಿಗೆ ಕುಳಿತಾಗ ತಿನಿಸುಗಳನ್ನು ಪರಸ್ಪರರಲ್ಲಿ ವಿನಿಮಯಿಸಿ ಊಟಮಾಡುವಂತೆ ತಂದ ಬುತ್ತಿಯನ್ನು ಕೆಲವರು ಎಲ್ಲರಿಗೂ ಬಡಿಸುವ ಸಂಭ್ರಮವೇನು ! ಊಟಕ್ಕೆ ಕುಳಿತ ಜನರಲ್ಲಿ ಯಾರ ಕಲ್ಪನೆಯೂ ಇಲ್ಲದಹಾಗೆ ತಾನಾಗಿ ಒಡಮೂಡಿ ಹೋಗಿದ್ದ ಜಾತ್ಯತೀತ ಸಮ್ಮಿಲನವನ್ನು ಚಿಕಿತ್ಸಾದೃಷ್ಟಿಯಿಂದ ಈಗ ನೆನಸಿಕೊಂಡಾಗಲೇ ಅದರ ಅರಿವು !

ರಾತ್ರಿ 10-30 ಕ್ಕೆ ಸರಿಯಾಗಿ ಮತ್ತೆ ಕಲ್ಯಾಣಮಂಟಪಕ್ಕೆ ಬರಲು ಅಂದಿನ ಸಭೆಯ ಎರಡನೆಯ ಹಂತ ಪ್ರಾರಂಭವಾಯಿತು.

ಆಗ ಮೊದಲು ಎಲ್ಲ ತೀರ್ಥಗಳನ್ನೂ ನದಿನೀರನ್ನೂ ಹೆಸರು ಹೇಳಿ ಹೇಳಿ ಕುಂಭಕ್ಕೆ ಸುರಿಯಲಾಯಿತು. ಮಾದರಿಗಾಗಿ ಕೆಲವು ತೀರ್ಥಗಳ ಹೆಸರನ್ನು ಇಲ್ಲಿ ನಿರ್ದೇಶಿಸಿದೆ : ಗೋಕರ್ಣದಿಂದ ಬಂದವರು ಕೋಟಿತೀರ್ಥ, ರಾಮತೀರ್ಥ, ನಾಗತೀರ್ಥ, ಪಾಪನಾಶಿನೀ ತೀರ್ಥ, ಋಣ ವಿಮೋಚನತೀರ್ಥ, ಕಮಂಡಲತೀರ್ಥ, ಗೌತಮತೀರ್ಥ ಮೊದಲಾದವನ್ನು ತಂದಿದ್ದರು. ಅಲ್ಲದೆ ಅವರು ಗಂಗಾವಳಿ ನದಿ, ಅಘನಾಶಿನೀ ನದಿ, ಶರಾವತಿ ನದಿ, ವೆಂಕಟಾಪುರ ನದಿ, ಕಾಳೀ ನದಿ, ಪಾಂಡರೀ ನದಿ ನೀರುಗಳನ್ನೂ, ''ರತ್ನಾಕರಿ''ಯನ್ನೂ ಅಂದರೆ ಸಮುದ್ರೋದಕವನ್ನು ತಂದಿದ್ದರು. ಶ್ರೀ ವಾಸುದೇವ ಶಿಗ್ಗಾಂವ ಮೊದಲಾದವರು ಧರ್ಮಾ ನದಿಯ ನೀರನ್ನು ಹಾನಗಲ್ಲಲ್ಲಿ ಮೆರವಣಿಗೆಯಲ್ಲಿ ತಂದು, ಅಲ್ಲಿ ತಾರೇಶ್ವರನಿಗೆ ಅಭಿಷೇಕ ಮಾಡಿ ಆ ನೀರನ್ನು ಕಳುಹಿಸಿದ್ದರು, ರಾಣೆಬೆನ್ನೂರಿನ ಒಬ್ಬ ಮಿತ್ರರು ಕುಮುದ್ವತಿ ತೀರ್ಥ ತಂದಿದ್ದರು. ಮಂಡಿಯಾಳದ ಗೆಳೆಯರು ಕಾವೇರಿ ಜಲ ತಂದಿದ್ದರು. ರಾಯಚೂರವರು

ಉತ್ತರ ಕರ್ನಾಟಕದ ಎಲ್ಲ ಹೊಳೆಗಳು ಕೂಡಿದ, ಕೃಷ್ಣಾ ನದಿಯು ಸಂಗಮಸ್ಥಳದಿಂದ ಉದಕ ತಂದಿದ್ದರು. ಇವಲ್ಲದೆ ತುಂಗಾ, ಭದ್ರಾ, ಭೀಮಾ, ವರದಾ, ಮಲಪ್ರಭ, ಘಟಪ್ರಭ ಇತ್ಯಾದಿ ನದೀ ನೀರು ಬಂದಿತು.

ಸರಿರಾತ್ರಿವರೆಗೂ ಶ್ರೀ ಕೆ. ಎಫ್. ಪಾಟೀಲರ, ಶ್ರೀ ಮಂಗಲಗೀಯವರ, ರಾಯಚೂರಿನ ಶ್ರೀ ಶ್ರೀಕಂಠಯ್ಯನವರ, ಆಗುಂಬೆಯ ಶ್ರೀ ವಿಜಯೇಂದ್ರರಾಯರ, ಋಷ್ಯಮೂಕಾಶ್ರಮದ ಶ್ರೀವಿಜಯೇಂದ್ರ ಯೋಗಿಗಳ, ಶ್ರೀ ಬುರ್ಲಿ ಶೇಷಣ್ಣನವರ ಚಿಕ್ಕಚಿಕ್ಕ ಭಾಷಣಗಳಾದವು. ಸಮಗ್ರ ಕಾರ್ಯಕ್ರಮದುದ್ದಕ್ಕೂ ಸರದಾರರಂತೆ ಸೂತ್ರಧಾರನ ಹಾಗೆ ವಿಪರಣೆಯ ರೂಪದಿಂದಲೂ ಸಭಾಚಾಲನೆಯ ವ್ಯಾಜದಿಂದಲೂ, ಶ್ರೀ ಕೃಷ್ಣಕುಮಾರರ ಪಾತ್ರ ನಡುನಡುವೆ ಬಂದೇ ಬರುತಿತ್ತು. ಈ ಸಮಯದಲ್ಲಿ ಶ್ರೀ ಕೃಷ್ಣಕುಮಾರರು ಶ್ರೀ ಆಲೂರ ರವರಿಂದ ಈಗಾಗಲೇ ಪ್ರಕಟಿಸಲ್ಪಟ್ಟ " ಕರ್ನಾಟಕ ಏಕೀಕರಣದ ಸೂತ್ರಗಳು " ಎಂಬ ಚಿಕ್ಕ ಹೊತ್ತಿಗೆಯಿಂದ ಕೆಲವೊಂದು ಸಾರಗರ್ಭಿತವಾದ ಸೂತ್ರಗಳನ್ನು ಓದಿ ಹೇಳಿದರು. ಅನಂತರ ಅನೇಕರಿಂದ ಸಂಗೀತ ಸೇವೆ ನಡೆಯಿತು.

ರಾಜ್ಯೋದಯದ ಪರ್ವಕಾಲದ ಸಮಯಕ್ಕೆ, ಅಂದರೆ ನಟ್ಟಿರುಳಾಗುತ್ತಲೇ ಶ್ರೀ ಪಂಪಾಪತಿಯ ಘಂಟಾರವದ ಎತ್ತುಗಡೆಯಿತ್ತು. ಮಧ್ಯೆಮಧ್ಯೆ ರವೀಂದ್ರನೆಂಬ ಎಳೆಹರೆಯದ ಹುಡುಗನೊಬ್ಬನು ಅಣುಕ್ಷೋಭೆಮಾಡಿಮಾಡಿ ತನ್ನ ಉತ್ಸಾಹವು ಪ್ರಸ್ತರ ಪ್ರಾಕಾರದಲ್ಲೆಲ್ಲ ಹಬ್ಬಿ ಪ್ರತಿಧ್ವನಿಸುವಂತೆ ಮಾಡುತ್ತಿದ್ದನು.

ಮಧ್ಯರಾತ್ರಿಯ ಘಂಟಾರವವಾಗುತ್ತಲೇ ಎಲ್ಲರೂ ಪಂಪಾನಾಥನ, ಇದಕ್ಕೆಂದೇನೆರ್ಪಟ್ಟ ವಿಶೇಷ ಅರ್ಚನೆಗೆಂದು ಹೊರಟರು. ಅರ್ಚನೆ, ಮಂಗಳಾರತಿ, ತೀರ್ಥಪ್ರಸಾದ ವಿತರಣೆಯಾಗುತ್ತಲೇ ಮತ್ತೆ ಜನರು ಮೂಲ ಸಭಾಮಂಟಪಕ್ಕೆ ಬಂದು ಕುಳಿತರು. ಆಗ ಅಲ್ಲಿ ಶ್ರೀ ವೆಂಕಟರಾಯರು ಪೌರೋಹಿತ್ಯವಹಿಸಿ ನವಕರ್ನಾಟಕದ ಭೂಪಟಕ್ಕೆ ಮತ್ತು ಮಂಗಲಕುಂಭಕ್ಕೆ ತಾವೇ ಯೋಜಿಸಿದ ವೇದೋಕ್ತವಾದ ವಿಶೇಷ ಪೂಜಾಕ್ರಮದಿಂದ ಪೂಜೆ, ಮಂಗಳಾಷ್ಟಕ, ಸ್ವಸ್ತಿಪಾಠ ಮೊದಲಾದ್ದು ಹೇಳಿ ಅರ್ಚನೆಮಾಡಿದರು. ನಂತರ ಗದ್ಗದ ಕಂಠಿತರಾಗಿ ಸಮಯೋಚಿತ ನಾಲ್ಕುಮಾತು ಹೇಳಿದರು.

ಹೀಗೆ ರಾತ್ರಿ ಒಂದು ಗಂಟೆಯಹೊತ್ತಿಗೆ ಮತ್ತೆ ಶ್ರೀ ಪಂಪಾಪತಿಯು ಮಂಗಳಾರತಿಗೆ ಕರೆ ಬಂದಿತು. ತರುವಾಯ ಪಾರ್ವತಿ, ಪರಮೇಶ್ವರರ ಏಕಾಂತಸೇವೆ, ಪರಾಕು ಇತ್ಯಾದಿ ನಡೆದುವು. ವಿಶ್ರಾಂತಿಗೆ ಹೊರಡುವಾಗ ರಾತ್ರಿ ಎರಡು ಗಂಟೆಯಾಯಿತು.

ಗುರುವಾರ ತಾರೀಖು 1 ರಂದು ಬೆಳಗ್ಗೆ 6-30ಕ್ಕೆ ಎಲ್ಲರೂ ಎದ್ದು ಪ್ರಾತರ್ವಿಧಿ ತೀರಿಸಿ ತುಂಗಭದ್ರೆಯಲ್ಲಿ ಮಿಂದು ದೇವರ ದರ್ಶನಪಡೆದ ತೀರ್ಥಕುಂಭವನ್ನು ತೆಗೆದು ಕೊಂಡು ಮಾನವಮಿ ದಿಬ್ಬಕ್ಕೆ ಹೋಗಿ ಅಲ್ಲಿ ಶ್ರೀ ಗಾಂವಕರರ ಹಸ್ತದಿಂದ ಭಾರತದ ಹಾಗೂ

ನವಕರ್ನಾಟಕದ ಧ್ವಜಾರೋಹಣ ಮತ್ತು ಧ್ವಜಪೂಜೆ, ಧ್ವಜವಂದನ ನಡೆಯಿತು. ಈ ಕಾರ್ಯಕ್ರಮಕ್ಕೆ ಕಮಲಾಪುರ, ಕಂಪಿಲಗಳಿಂದ ಕೆಲವರು ಬಂದು ಕೂಡಿಕೊಂಡಿದ್ದರು. ಈ ಸಂದರ್ಭದಲ್ಲಿ ಮುಕ್ತಾಯದ ಭಾಷಣಮಾಡುತ್ತ ಶ್ರೀ ಕೃಷ್ಣಕುಮಾರರು ತೆಗೆದ ಉದ್ಗಾರಗಳು ಕನ್ನಡನಾಡಿನ ಆಡಳಿತಗಾರರಿಗೆ ಸ್ಪಷ್ಟ ರಚನಾತ್ಮಕ ಸೂಚನೆಗಳಂತಿದ್ದವು.

ಮುಂದೆ ಎರಡೂ ಧ್ವಜಗಳನ್ನು ಕಮಲಾಪುರದವರೆಗೆ ಹೋಗಿ ಮೆರವಣಿಗೆಯಲ್ಲಿ ತೆಗೆದುಕೊಂಡು ಅಲ್ಲಿ ಕಾರ್ಯಕ್ರಮವು ಮುಕ್ತಾಯಗೊಂಡಿತು. ಅತ್ತ ಬೆಂಗಳೂರಲ್ಲಿ ರಾಜೋಚಿತವಾದ ವೈಭವದಿಂದ ರಾಜ್ಯೋದಯದ ಉತ್ಸವ ನಡೆದಾಗ ಇತ್ತ ಹಂಪೆಯಲ್ಲಿ ''ಪತ್ರಪುಷ್ಪಂ ಫಲಂ ತೋಯಂ'' ಸ್ವರೂಪದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಉತ್ಸವವು ಒಂದು ಮಹಾವ್ರತದಂತೆ ಜರುಗಿತು. ಒಂದುವೇಳೆ ಜರುಗಿರದಿದ್ದರೆ ಏನೋ ಒಂದು ಕೊರತೆಯಾಗಿ ಉಳಿಯಬಹುದಿತ್ತು. ಕೆಲವು ಜನ ಕನ್ನಡ ತಾಯಿಯ ಪ್ರಾತಿನಿಧಿಕ ಪುತ್ರ ಪುತ್ರಿಯರು ಈ ವ್ರತವನ್ನು ನಡೆಯಿಸಿ, ಈ ಕೊರತೆಯನ್ನು ತುಂಬಿ ತೆಗೆದಿದ್ದಾರೆ ಎಂದರೆ ಅದೇನೂ ಅತಿಶಯೋಕ್ತಿಯಲ್ಲ.

—ಉದ್ಧೃತ

ರಾಜ್ಯದ ಹೆಸರನ್ನು 'ಕರ್ನಾಟಕ' ಎಂದು ಮಾರ್ಪಡಿಸುವ ಸರಕಾರದ ನಿರ್ಣಯಗಳು (ಮುಖ್ಯಾಂಶಗಳು)

ಶ್ರೀ ಡಿ. ದೇವರಾಜ್ ಅರಸ್(ಮುಖ್ಯ ಮಂತ್ರಿಗಳು) :—

೧. ವಿಧಾನಸಭೆಯ ಚಾರಿತ್ರಿಕ ನಿರ್ಣಯ

"ನಾನು ಈ ಕೆಳಗೆ ಕಂಡ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

"ಭಾರತದ ಸಂವಿಧಾನದಲ್ಲಿ ನಮೂದಿಸಿದ ಈ ರಾಜ್ಯದ ಹೆಸರನ್ನು "ಕರ್ನಾಟಕ" ಎಂಬುದಾಗಿ ಬದಲಾಯಿಸಬೇಕೆಂದು ಈ ಸಭೆಯವರು ತಮ್ಮ ಖಚಿತ ಅಭಿಪ್ರಾಯವನ್ನು ಘೋಷಿಸಿ ಈ ಬಗ್ಗೆ ಅಗತ್ಯವಾದ ಸಂವಿಧಾನದ ತಿದ್ದುಪಡಿಗಳನ್ನು ರಾಜ್ಯ ಸರ್ಕಾರದವರು ಪಡೆದುಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಈ ಸಭೆಯವರು ಶಿಫಾರಸು ಮಾಡುತ್ತಾರೆ."

ಶ್ರೀ ಡಿ. ದೇವರಾಜ್ ಅರಸ್ :—ಮಾನ್ಯ ಅಧ್ಯಕ್ಷಣಿಯವರೇ, ಈ ದಿವಸ ನಮ್ಮ ದೇಶದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾಗತಕ್ಕಂಥ ದಿವಸವಾಗಿದೆ. ಅದರ ಕಾರಣ ಏನು ಎನ್ನುವುದು ಈ ಸಭೆಗೆ ವಿವರಿಸಿ ತಿಳಿಸಬೇಕಾದ ಅಗತ್ಯವಿಲ್ಲ.....

ಈ ಮೈಸೂರು ಹೊಸದಾಗಿ ರಾಜ್ಯ ಎಂದಾದ ಮೇಲೆ ಅಥವಾ ಇದು ವಿಶಾಲ ಮೈಸೂರು ಆದಮೇಲೆ ಈ ರಾಜ್ಯದ ಹೆಸರು ಹಿಂದಿನಿಂದ ಬಂದಂಥ ಹೆಸರು ಇರಬೇಕೇ ಅಥವಾ ಇಷ್ಟೊಂದು ಭಾಗಗಳೆಲ್ಲ. ಹಿಂದೆ ಇದ್ದಂಥ ರಾಜ್ಯದಷ್ಟೇ ಹೆಚ್ಚು ಭಾಗಗಳು ಇಲ್ಲಿ ಬಂದು ಸೇರಿದ ಮೇಲೆ ಈ ಎಲ್ಲ ಜನರೂ ಒಂದೇ ಆದ ಮೇಲೆ ಒಂದೇ ಭಾಷೆಯ ಜನರಾದ ಮೇಲೆ ಈ ಬದಲಾವಣೆ ಹೆಸರಿನಲ್ಲಿ ಮಾಡಬೇಕೆಂಬ ವಿಚಾರ ನಮ್ಮ ಇಡೀ ರಾಜ್ಯದ ಜನತೆಯ ಮನಸ್ಸನ್ನು ಸೆಳೆದು ಆ ಒಂದು ವಿಷಯ ಇದುವರೆಗೂ ಇತ್ಯರ್ಥವಾಗದೆ ಹಾಗೆಯೇ ವಿಚಾರದಲ್ಲಿಯೇ ಉಳಿದು ಬಂದಿದೆ.

ಈ ಸಂದರ್ಭದಲ್ಲಿ ಬಹುಭಾಗದ ಜನ ಯಾವ ರೀತಿ ಹೇಳುತ್ತಿದ್ದರು ಅದು ಮುಖ್ಯವಲ್ಲ. ಅದಕ್ಕೆ ವಿರೋಧ ಇದ್ದಂಥ ಜನರ ಸಂಖ್ಯೆ ಕಡಿಮೆ ಇದ್ದರೂ ಒಂದು ಪ್ರಬಲವಾದ ವಿರೋಧವಿತ್ತು ಎಂದು ನನಗೆ ಗೊತ್ತು. ನಾನು ಆ ಕಾಲದಲ್ಲಿ ರಾಜ್ಯ ಎರಡು ಆಗಬೇಕು ಒಂದು ಆಡಳಿತ ದೃಷ್ಟಿಯಿಂದ, ಶಾಸ್ತ್ರೀಯ ದೃಷ್ಟಿಯಿಂದ ಎಂದು ಹೇಳುವುದರಲ್ಲಿ ನಾನೂ ಒಬ್ಬನಾಗಿದ್ದೆ.

ಮೊದಲು ಕನ್ನಡ ಜನ ಎಲ್ಲಾ ಒಂದು ಕಡೆ ಸೇರೋಣ, ಈ ಒಂದು ಕಾರ್ಯ ಮುಖ್ಯ ವಾದುದು, ಅದು ಆಗಲೀ, ತದನಂತರ ಹೆಸರಿನ ಬದಲಾವಣೆಯ ಬಗ್ಗೆ ನಾವು ನಿಧಾನವಾಗಿ ಯೋಚನೆ ಮಾಡಿ, ಇತರರು ಇದನ್ನು ಮನ ಒಲಿದು ಒಪ್ಪುವ ರೀತಿ ಮಾಡಿ ಬದಲಾಯಿ ಸೋಣ ಎಂದು ಅದನ್ನು ಹಾಗೇ ಇಟ್ಟುಕೊಂಡರು.

ಜನತೆ ಒಂದು ಕಡೆ ಹೆಸರು ಬದಲಾವಣೆ ಆಗಬೇಕು ಎಂದು ಇಚ್ಛೆಪಡುತ್ತಾ ಬಂದಿದ್ದರೆ ಶಾಸನ ಸಭೆಯ ಆಡಳಿತ ಪಕ್ಷದವರು ಇದನ್ನು ಮುಂದೂಡಿಕೊಂಡು ಬಂದಿದ್ದಾರೆ, ಇಂಥ ಒಂದು ಪರಿಸ್ಥಿತಿ ನಮ್ಮ ದೇಶದಲ್ಲಿ ಕೆಲವು ವರ್ಷಗಳವರೆಗೆ ನಡೆದು ಬಂತು.

೧೯೬೭ನೇ ಜುಲೈ ತಿಂಗಳಲ್ಲಿ ಕಾಂಗ್ರೆಸ್ ಪಕ್ಷದ ಚರಿತ್ರೆ ಬದಲಾವಣೆಯಾಯಿತು. ಅದೇ ರೀತಿ ಇಡಿ ಭಾರತ ದೇಶದ ರಾಜಕೀಯ ಚರಿತ್ರೆಯೂ ಕೂಡ ಬದಲಾವಣೆಯಾಯಿತು. ಅದರ ವಿಚಾರಕ್ಕೆ ಈಗ ನಾನು ಹೋಗಬೇಕಾದ ಅಗತ್ಯವಿಲ್ಲ. ಆ ಬದಲಾವಣೆಯ ಪರಿಣಾಮ ವಾಗಿ ನಾವು ಇಲ್ಲಿ ಈ ಸಭೆಯಲ್ಲಿದ್ದೇವೆ.

೧೯೭೦-೭೧ರಲ್ಲಿ ನಡೆದಂಥ ಮಧ್ಯಂತರ ಚುನಾವಣೆ ಕಾಲದಲ್ಲಿ ಅಲ್ಲಲ್ಲಿ ಈ ಹೆಸರು ಬದಲಾವಣೆ ಬಗ್ಗೆ ಬಹಿರಂಗವಾಗಿ ಹಾಗೂ ಅಂತರಂಗವಾಗಿ ವಾದ ವಿವಾದಗಳು ನಡೆಯು ತ್ತಿದ್ದವು. ಮಧ್ಯಂತರ ಚುನಾವಣೆ ಆದ ಮೇಲೆ ೧೯೭೨ನೇ ಚುನಾವಣೆ ಕಾಲಕ್ಕೆ ಈ ಹೆಸರಿನ ವಿಚಾರ ಬಹಳ ಪ್ರಬಲವಾಗಿ ಜನ ಸಾಮಾನ್ಯರ ಮನಸ್ಸನ್ನು ಸೆಳೆಯುವುದಕ್ಕೆ ಒಂದು ಕಾರಣವಾಯಿತು.

ಈ ರಾಜಕೀಯ ತಿಕ್ಕಾಟದಲ್ಲಿ ನಾನು ಒಂದುಕಡೆ ಮಾಡಿದಂಥ ಭಾಷಣದಿಂದ ಸ್ವಲ್ಪ ಕೆಡಿ ಹಾರಿತು, ಅದು ನಮ್ಮ ದೇಶದಾದ್ಯಂತ ವ್ಯಾಪ್ತಿಗೊಂಡಿತು.

ನನ್ನ ಅಭಿಪ್ರಾಯ ಏನೇ ಇರಲಿ, ಜನಸಾಮಾನ್ಯರ ಅಭಿಪ್ರಾಯದಲ್ಲಿ ಅವರಿಗೆ ಈ ಬದಲಾವಣೆಯಿಂದ ಒಂದು ಆನಂದ, ಒಂದು ತೃಪ್ತಿ, ಒಂದು ಸಮಾಧಾನ. ಒಂದು ಭಾವೈಕ್ಯತೆ ಬರುವುದಾದರೆ ನಮಗೆ ಅವರಿಂದ ತೊಂದರೆಯಾಗುವುದು ಏನೂ ಇಲ್ಲ. ಸಂತೋಷ ಎಂದು ಹೇಳುವುದರ ಜೊತೆಗೆ, ನಾಳೆ ಚುನಾವಣೆ ಆದಮೇಲೆ ನಮ್ಮ ಪಕ್ಷ ಬಹು ಮತ ಪಡೆದು ಬಂದು ಅಧಿಕಾರವನ್ನು ಪಡೆಯುವುದಾದರೆ ಸಭೆಯಲ್ಲಿ ಚರ್ಚೆಮಾಡಿ. ಶಾಸನ ಸಭೆಯಲ್ಲಿ ನಿಮ್ಮ ಪ್ರತಿನಿಧಿಗಳು ಯಾರು ಇರುತ್ತಾರೆ ಅವರ ಅಭಿಪ್ರಾಯದಂತೆ ಹೋಗುವು ದಕ್ಕೆ ನನ್ನ ಅಡ್ಡಿ ಇಲ್ಲ, ಹೆಸರು ಬದಲಾವಣೆ ಮಾಡೋಣ, ಬಹುಮತ ಅಭಿಪ್ರಾಯದಂತೆ ಹೋಗೋಣ ಎನ್ನುವ ಮಾತನ್ನು ಜನತೆಯ ಮುಂದೆ ನಮ್ಮ ಪಕ್ಷದ ಪರವಾಗಿ ಹೇಳಿದ್ದು ಉಂಟು. ನಾನು ನೀವು ಜನತೆಗೆ ಕೊಟ್ಟಂಥ ಮಾತನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಇವೊತ್ತು ತಮ್ಮ ಎಲ್ಲರ ಆಪ್ಪಣೆ ಪಡೆದು ಈ ಒಂದು ಠರಾವನ್ನು ನಾನು ಈ ಸಭೆಯಮುಂದೆ ಮಂಡಿಸುತ್ತಿದ್ದೇನೆ. ಮತ್ತೆ ಈ ಹೆಸರು ಯಾವುದು ಇರಬೇಕು ಎನ್ನುವ ಬಗ್ಗೆ ಕೂಡ ನಮ್ಮ ದೇಶದಲ್ಲಿ ಬಹಳ ಕಾಲ ಚರ್ಚೆ ನಡೆದಿದೆ.

ಇವೆಲ್ಲಾ ಚರ್ಚೆಗಳಿಂದ ನಾನು ಅರಿತಿರುವ ಪ್ರಕಾರ ಇದರಲ್ಲಿ ಈ ಯಾವ ಚರ್ಚೆಗೂ ಅವಕಾಶವಿಲ್ಲ ಮತ್ತು ಇಂತಹ ಬದಲಾವಣೆಯನ್ನು ಮಾಡುವುದು ಎಂದರೆ "ಕರ್ನಾಟಕ" ಎಂದು ಮಾಡಬಹುದು ಎನ್ನುವ ಒಂದು ನಿರ್ಣಯವನ್ನು ಇಲ್ಲಿ ಮಂಡಿಸಿದ್ದೇನೆ. ಕರ್ನಾಟಕ ಎನ್ನುವ ಹೆಸರನ್ನು ಹಿಂದೆ ರಾಜರುಗಳು ಉಪಯೋಗಿಸುತ್ತಿದ್ದರು. ಕರ್ನಾಟಕ ಸಿಂಹಾಸನಾಧೀಶ್ವರ ಎಂದು ಒಂದು ಕಾಲದಲ್ಲಿ ಮೈಸೂರು ರಾಜರು ಇಟ್ಟುಕೊಂಡಿದ್ದರು. ಇದರಂತೆ ವಿಜಯನಗರದ ರಾಜರು ಇಟ್ಟುಕೊಂಡಿದ್ದರು, ಹೊಯ್ಸಳರು ಹಾಗೂ ಕದಂಬರು ಇಟ್ಟುಕೊಂಡಿದ್ದರು. ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಈ ಹೆಸರು ಬರುತ್ತಲೇ ಇತ್ತು. ಸಾಹಿತಿಗಳು ಸಾಹಿತ್ಯದಲ್ಲಿ ಕರ್ನಾಟಕ ಎಂಬ ಹೆಸರನ್ನು ಇಡಬಹುದೆಂದು ಹೇಳಿದ್ದರು. ಅದರಂತೆ ಇಲ್ಲಿ ನಿರ್ಣಯವನ್ನು ಮಂಡಿಸಿದ್ದೇನೆ.

ಈಗ್ಗೆ ಒಂದೂವರೆ ತಿಂಗಳ ಹಿಂದೆ ಇಂತಹ ಒಂದು ಠರಾವನ್ನು ನಮ್ಮ ಕ್ಯಾಬಿನೆಟ್ಟಿನಲ್ಲಿ ಮಾಡುವಾಗ ನಾವೇನು ಮಾಡಿದೆವು ಎಂದರೆ ಶಾಸಕರು ಅಭಿಪ್ರಾಯಪಟ್ಟಂತೆ ಹಾಗೂ ಹೆಚ್ಚು ಜನರು ಅಭಿಪ್ರಾಯಪಡುವಂತೆ ನಮ್ಮ ರಾಜ್ಯಕ್ಕೆ ಒಂದು ಶಾಶ್ವತವಾದ ಹೆಸರನ್ನು ಇಟ್ಟು ಈಗಿನ ಹೆಸರನ್ನು ಬದಲಾವಣೆ ಮಾಡಬಹುದು ಎನ್ನುವ ಒಂದು ತೀರ್ಮಾನಕ್ಕೆ ಬಂದೆವು.

ನಾನು ತಮ್ಮ ಮುಂದೆ ಠರಾವಿನಲ್ಲಿ 'ಕರ್ನಾಟಕ' ಎಂದು ಏನು ಹೆಸರನ್ನು ಇಟ್ಟಿದ್ದೇನೋ ಅದೇ ಬಹುಮತ ಅಭಿಪ್ರಾಯ ಎಂದು ನನ್ನ ನಂಬಿಕೆ. ಇಂತಹ ಒಂದು ಬಹುಮತದ ಅಭಿಪ್ರಾಯ ಬಂದ ಮೇಲೆ ನಮ್ಮ ಪಕ್ಷದಲ್ಲಿ ಕೂಡ ಇದನ್ನು ನಾವು ಚರ್ಚೆ ಮಾಡಿ ಆಡಳಿತ ಪಕ್ಷವಾದ ಕಾಂಗ್ರೆಸ್ ಪಕ್ಷದವರು ಎಲ್ಲರೂ ಒಪ್ಪಿದಂತೆ ಠರಾವನ್ನು ಇಲ್ಲಿ ತಂದಿದ್ದೇನೆ. ಒಂದು ಸಂತೋಷದ ವಿಚಾರ ಇಲ್ಲಿ ಹೇಳಬೇಕಾಗಿದೆ. ನಮ್ಮ ಪಕ್ಷದಲ್ಲಿ ಕೆಲವು ವಿಚಾರದಲ್ಲಿ ಅಭಿಪ್ರಾಯ ಭೇದಗಳು ಇದ್ದರೂ ಇದರಲ್ಲಿಲ್ಲ; ಎಲ್ಲರೂ ಇಂತಹ ಒಂದು ಬದಲಾವಣೆಯನ್ನು ಮಾಡಲು ಒಪ್ಪಿದ್ದಾರೆ.

ಆದರೆ ಪ್ರಜಾಪ್ರಭುತ್ವ ತತ್ವದ ಒಂದು ಅಭಿಪ್ರಾಯಕ್ಕೆ ನಾವು ಕಟ್ಟುಬಿದ್ದಿರುವುದರಿಂದ ಬಹುಮತದ ಅಭಿಪ್ರಾಯದಲ್ಲಿ ಹೆಸರಂ ಯಾವ ರೀತಿ ಇರಬೇಕೆಂದು ತೀರ್ಮಾನ ಮಾಡುತ್ತಾರೋ ಆ ತೀರ್ಮಾನವನ್ನು ತಗೆದುಕೊಂಡು ಅದಕ್ಕೆ ನಾವೆಲ್ಲರೂ ಒಪ್ಪಿಕೊಂಡು ಹೋಗೋಣ ಎಂದು ಎಲ್ಲರೂ ಒಂದು ದೊಡ್ಡ ಮನೋಭಾವವನ್ನು ಪ್ರದರ್ಶನ ಮಾಡಿದ್ದಾರೆ. ಇದು ಒಂದು ಸಂತೋಷದ ವಿಚಾರ.

ನಾವೆಲ್ಲಾ ಮೈಸೂರು ದೇಶದಲ್ಲಿರಲಿ ಇಲ್ಲವೇ ಕರ್ನಾಟಕ ದೇಶದಲ್ಲಿರಲಿ ಇಡೀ ಭಾರತ ದೇಶದಲ್ಲಿ ಸೇವೆ ಮಾಡುತ್ತಿದ್ದರೂ ಕಾಲ ಸನ್ನಿವೇಶಕ್ಕೆ ತಕ್ಕಹಾಗೆ ಆರ್ಥಿಕವಾಗಿ ಐಹಿಕ ವಿಚಾರಕ್ಕೆ ಹೆಚ್ಚು ಪ್ರಾಧ್ಯಾನ್ಯತೆ ಕೊಡುತ್ತಿದ್ದೇವೆ. ಇದು ಮನುಷ್ಯನಿಗೆ ತೃಪ್ತಿ ತರುವ

ವ್ಯವಹಾರವಾಗಿದ್ದರೂ ಒಂದು ರೀತಿಯಲ್ಲಿ ಇದರಲ್ಲಿ ಹೊಂದಿಕೊಂಡು ಹೋಗುವ ಒಂದಂ ಭಾವನೆಗೆ ಬರಬೇಕು.

ಇದು ಮನುಷ್ಯನಿಗೆ ಆನಂದವನ್ನು ತರುವ ಒಂದು ಸಂಗತಿಯಾಗಿದೆ. ಇಂತಹ ಒಂದು ಆನಂದವನ್ನು ಅನುಭವಿಸುತ್ತಿರುವ ಸದಸ್ಯರುಗಳನ್ನು ನೋಡಿ ನಾವೂ ಆ ಆನಂದದಲ್ಲಿ ಭಾಗಿಯಾಗಬೇಕು ಎನ್ನುವ ಒಂದು ಭಾವನೆಯಿಂದ ನಾವು ಇಲ್ಲಿ ಹೇಳುತ್ತಿದ್ದೇವೆ. ನಮ್ಮ ರಾಜ್ಯದ ಹೆಸರಿನ ಬದಲಾವಣೆಯಿಂದಾಗಿ ಅವರಿಗೆ ಒಂದು ರೀತಿಯಾದ ಆನಂದ ಹಾಗೂ ಸಂತೋಷ ಉಂಟಾಗುತ್ತದೆ ಎಂದು ನಮಗೆ ಕಾಣುತ್ತದೆ, ಬಹುಜನರು ಎಂದರೆ ಈ ದೇಶದಲ್ಲಿರುವ ಬೇರೆ ಬೇರೆ ವರ್ಗದವರೂ ಸೇರುತ್ತಾರೆ. ಅನೇಕ ಸಾಹಿತಿಗಳು ಕರ್ನಾಟಕದಲ್ಲಿ ಇದ್ದಾರೆ. ಇಂತಹ ಸಾಹಿತಿಗಳಲ್ಲಿ ಹಿರಿಯರಿಂದ ಕಿರಿಯರವರೆಗೂ ಎಂದರೆ ಶ್ರೀಮಾನ್ ಬೇಂದ್ರೆಯವರು, ಹಾಗೂ ರಾಷ್ಟ್ರದ ದೊಡ್ಡ ಕವಿಗಳಾದ ಶ್ರೀಮಾನ್ ಕೆ. ವಿ. ಪುಟ್ಟಪ್ಪನವರು ಮತ್ತೆ ಇನ್ನಿತರ ಎಲ್ಲ ಸಾಹಿತಿಗಳೂ ಈಗಿರುವ ಹೆಸರನ್ನು ಬದಲಾವಣೆ ಮಾಡಿ ಕರ್ನಾಟಕ ಎಂದು ಮಾಡಬೇಕೆಂದು ಸತತವಾಗಿ ಹೇಳಿಕೆಗಳನ್ನು ಕೊಡುತ್ತಾ ಬಂದಿದ್ದಾರೆ, ಇದರಲ್ಲಿ ಬುದ್ಧಿ ಜೀವಿಗಳೂ ಕೂಡ ಹೆಸರು ಬದಲಾವಣೆಯಾಗಬೇಕೆಂದು ಹೇಳಿದ್ದಾರೆ. ಅನೇಕ ವಿದ್ಯಾರ್ಥಿಗಳೂ ಮತ್ತು ಮಧ್ಯಮ ವರ್ಗದ ಜನರೂ, ಈಗಿನ ಯುವಕ ಜನಾಂಗದವರೂ ಬದಲಾವಣೆಯಾಗಬೇಕೆಂದು ಹೇಳಿಕೊಂಡು ಬರುತ್ತಿದ್ದಾರೆ ಅದೇ ರೀತಿ ಆಡಳಿತದಲ್ಲಿರತಕ್ಕ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿರತಕ್ಕ ಜನ ಅಭಿಪ್ರಾಯಪಟ್ಟಿದ್ದಾರೆ.

ಇದು ಅವರ ಆಸೆ; ನಾವು ಜನತಾ ಪ್ರತಿನಿಧಿಗಳಾಗಿರುವುದರಿಂದ ನಾವು ಅವರ ಆಸೆಗೆ ಅಡ್ಡಿ ತರತಕ್ಕದ್ದು ಸೂಕ್ತವಲ್ಲ ಎನ್ನುವ ಶ್ರೀಮಾನ್‌ಸಕ್ಕೆ ಬಂದು, ಇಷ್ಟೊಂದು ಜನಕ್ಕೆ ಸಂತೋಷವಾಗಬೇಕಾದರೆ ಅಂತಹ ಸಂತೋಷವಾಗಿರುವ ಜನತೆಯಲ್ಲಿ ನಾವೂ ಸಹ ಭಾಗಿಯಾಗೋಣ ಎಂದು, ನಮ್ಮ ಅಲ್ಪ ಸೇವೆಯನ್ನು ಮಾಡೋಣ ಎನ್ನುವ ಒಂದು ಸಂತೋಷದಿಂದ, ನಾನು ಇಲ್ಲಿ ಇಂತಹ ಒಂದು ನಿರ್ಣಯವನ್ನು ತರುವ ಕಾಲ ಬಂತಲ್ಲಾ ಎಂದು ಸಂತೋಷಿಸುತ್ತೇನೆ ಮತ್ತು ಇದರಲ್ಲಿ ನಮ್ಮ ಜವಾಬುದಾರಿಯೂ ಇದೆ ಎನ್ನುವ ಮಾತನ್ನು ಹೇಳಿ ಇಂತಹ ಒಂದು ನಿರ್ಣಯ ಇಲ್ಲಿ ಬಂದಿದೆ, ಇದನ್ನು ತಮ್ಮ ಅಪ್ಪಣೆ ಪಡೆದು ನಮ್ಮ ಈ ಸಭೆಯ ಮುಂದೆ ಇಟ್ಟಿದ್ದೇನೆ.

ಹಳೆಯ ಮೈಸೂರಿನ ಭಾಗದಿಂದ ಬಂದ ಜನರಿಗೆ ಮೈಸೂರು ರಾಜ್ಯದ ಹೆಸರಿನ ಬಗ್ಗೆ ಹಿಂದಿನಿಂದಲೂ ಚಾರಿತ್ರಿಕವಾಗಿ ಒಂದು ಅಭಿಮಾನ ಬೆಳೆದು ಬಂದಿದೆ. ಮೈಸೂರು ರಾಜ್ಯ ಎಂಬುದು ಇಡೀ ಇಂಡಿಯಾ ದೇಶದಲ್ಲಿ ಕೀರ್ತಿ ಪಡೆದಿರುವುದಲ್ಲದೆ, ಹೊರ ದೇಶಗಳಲ್ಲಿಯೂ ಸಹ ಕೀರ್ತಿಪಡೆದಿದೆ. ಮೈಸೂರು ಜನತೆಯ ವಿಚಾರದಲ್ಲಿ ಮೈಸೂರು ಸಾಮಾನುಗಳ ವಿಚಾರದಲ್ಲಿ ತಿಳಿದಂತಹ ಜನರು ಹೊರದೇಶಗಳಲ್ಲಿ ಇದ್ದಾರೆ. ಅದಕ್ಕೋಸ್ಕರ ಮೈಸೂರು ರಾಜ್ಯ ಹೆಚ್ಚಿನ ಗೌರವ ಹಾಗೂ ಕೀರ್ತಿ ಪಡೆದುಕೊಂಡಿದೆ. ಮೈಸೂರು ಎಂಬ ಹೆಸರಿಗೆ ಶಕ್ತಿ ಇದೆ.

ಈ ಹೆಸರು ಅಸ್ಪಂಗತವಾದರೂ ಸಹ ಇನ್ನೊಂದು ಹೆಸರು ಉದಯಿಸಾಗುತ್ತಿದೆ. ಹೊಸ ಹೆಸರಿನಲ್ಲಿ ಭಾವೈಕ್ಯತೆ ಇದೆ, ಹೊಸ ಹೆಸರಿನ ಬಗ್ಗೆ ವಿಶ್ವಾಸವಿದೆ. ಆ ಹೆಸರಿನ ಬಗ್ಗೆ ಹೆಚ್ಚಿನ ಜನರಿಗೆ ಸಂತೋಷ, ಆನಂದ ಉಂಟಾಗುತ್ತಿದೆ.

ಬದಲಾವಣೆಯಲ್ಲಿ ಒಂದು ಹೆಜ್ಜೆ ಮುಂದೆ ಹೋಗುವಾಗ, ಹಳೆಯದು ಹೋಗಿ ಹೊಸದು ಬರುವಾಗ ತೊಂದರೆ ಇಲ್ಲ, ಆನಂದ ಬರುತ್ತದೆ. ಆದ್ದರಿಂದ ಇದರ ಬಗ್ಗೆ ಹೆಚ್ಚು ಚಿಂತನೆ ಮಾಡಬೇಕಾಗಿಲ್ಲ.

ಹೊಸದನ್ನು ನೋಡಿ, ಇತರರನ್ನು ನೋಡಿ ನಾವು ನಲಿದು ಸಂತೋಷ ಪಡುವ ಕಾಲ ಇದು. ಆದ್ದರಿಂದ ಈ ನಿರ್ಣಯಕ್ಕೆ ಮಾನ್ಯ ಸಭೆ ಒಪ್ಪಿಗೆ ಕೊಡುತ್ತದೆಂಬ ಪೂರ್ಣ ವಿಶ್ವಾಸ ನನಗೆ ಇದೆ. ಬಹುಮತದ ವಿಶ್ವಾಸವಲ್ಲ, ನಾವೆಲ್ಲರೂ ಸೇರಿ ಒಮ್ಮತದಿಂದ ಈ ಹೆಸರನ್ನು ಕರೆಯೋಣ. ಆ ರೀತಿ ನಾವು ಆನಂದದಿಂದ, ಸಂತೋಷದಿಂದ ಕರೆಯುವಾಗ ಕನ್ನಡ ಜನತೆಯ ಏಳಿಗೆಯಾಗಲಿ ಮತ್ತು ಈ ಶುಭ ಮುಹೂರ್ತದಲ್ಲಿ ಈ ಹೆಸರನ್ನು ಕರದ ರಾಜ್ಯ ಉನ್ನತವಾಗಿ ಬೆಳೆದು, ಹಿಂದಿನಿಂದ ಈ ರಾಜ್ಯ ಚರಿತ್ರೆಯಲ್ಲಿ ಏನು ಒಂದು ಒಳ್ಳೆಯ ಕೀರ್ತಿ ಮತ್ತು ಹೆಸರನ್ನು ಪಡೆದಿತ್ತೋ ಅದಕ್ಕಿಂತ ಹೆಚ್ಚಿನ ಕೀರ್ತಿಯನ್ನು ಪಡೆದು ಕನ್ನಡ ಕೋಟಿ ಜನತೆ ಏನಿದ್ದಾರೆ ಅವರ ಬಾಳ್ವೆ ಹಸನಾಗಬೇಕು, ಜನತೆ ಬೆಳೆಯಬೇಕು, ಎಲ್ಲರೂ ಆನಂದಿತ ರಾಗಬೇಕು. ನಮ್ಮ ಸಂಸ್ಕೃತಿ, ನಮ್ಮ ಸಾಹಿತ್ಯ, ನಮ್ಮ ಕಲೆ, ಇವೆಲ್ಲವೂ ಬೆಳೆದು ಇಡೀ ಭಾರತದಲ್ಲಿಯೇ ಅಲ್ಲ, ಇಡೀ ಪ್ರಪಂಚದಲ್ಲಿಯೇ ಹೆಚ್ಚಿನ ಕೀರ್ತಿ ಪಡೆಯುವಂತಾಗಬೇಕು. ಅಂತಹ ಒಂದು ಕಾರ್ಯಕ್ಕೆ ಇವೊತ್ತು ನಾವು ಅಂಕುರಾರ್ಪಣ ಮಾಡೋಣ ಎನ್ನುವ ಮಾತನ್ನು ತಿಳಿಸಿ ಈ ತರಾವನ್ನು ತಮ್ಮ ಒಪ್ಪಿಗೆಗಾಗಿ ಮಂಡಿಸುತ್ತಿದ್ದೇನೆ.

ನಾನು ಸರ್ಕಾರದ ವತಿಯಿಂದ ಮಂಡಿಸಿದಂಥ ನಿರ್ಣಯಕ್ಕೆ ಎಲ್ಲಾ ಕಡೆಯಿಂದಲೂ, ಎಲ್ಲಾ ಪಕ್ಷಗಳಿಂದಲೂ ಸರ್ವತೋಮುಖವಾದ ಬೆಂಬಲ ಬಂದಿರತಕ್ಕದ್ದು ನನಗಂತೂ, ಬಹಳ ಸಂತೋಷ ಉಂಟುಮಾಡಿದೆ.

ನಾನು ಮೊದಲೇ ಈ ಸಭೆಯಲ್ಲಿ ಅರಿಕೆ ಮಾಡಿಕೊಂಡ ಹಾಗೆ ಏನಾದರೂ ಇಲ್ಲಿ ಸ್ವಲ್ಪ ಭಿನ್ನಾಭಿಪ್ರಾಯ ಇದ್ದರೂ, ಹೆಸರು ಬದಲಾವಣೆ ಆಗತಕ್ಕ ಕಾಲದಲ್ಲಿ ಮನಸ್ಸಿಗೆ ಸ್ವಲ್ಪ ನೋವು ಆದಂಥವರು ಕೂಡ ಅಂತಿಮವಾಗಿ ನಿರ್ಣಯಕ್ಕೆ ಬೆಂಬಲ ಕೊಟ್ಟಿದ್ದಾರೆ. ಮತ್ತು ಬದಾಲಾವಣೆಯನ್ನು ಸ್ವಾಗತಿಸಿದ್ದಾರೆ.. ನಾವು ಕರ್ನಾಟಕ ಎಂಬ ಹೆಸರು ಇಡಬೇಕು ಎಂಬು ದನ್ನು ಕೂಡ ಒಪ್ಪಿದ್ದಾರೆ. ಆದಕಾರಣ ೩ ದಿವಸಗಳಿಂದ ಮಾತನಾಡಿ ತಮ್ಮ ಹೃದಯ ದಿಂದ ಬಂದ ಬೆಂಬಲವನ್ನು ಕೊಟ್ಟಂಥ ಮಾನ್ಯ ಸದಸ್ಯರಿಗೂ, ಈ ಚರ್ಚೆಯಲ್ಲಿ ಭಾಗವಹಿ ಸದೆ ಮೌನದಿಂದ ಕುಳಿತು ಮಾತುಗಳನ್ನು ಕೇಳಿದವರಿಗೂ ಮತ್ತು ಮೌನದಿಂದಲೇ ಬೆಂಬಲ ಕೊಟ್ಟಂಥ ಎಲ್ಲಾ ಸದಸ್ಯರಿಗೂ ನನ್ನ ಧನ್ಯವಾದಗಳನ್ನು ಅರ್ಪಿಸುವುದಕ್ಕೆ ನಾನು ಅಪ್ಪಣೆ

ಬೇಡುತ್ತೇನೆ. ಈ ಸಂದರ್ಭದಲ್ಲಿ ನಾನು ಈ ನಿರ್ಣಯವನ್ನು ಮಂಡಿಸುವುದಕ್ಕೆ ಮನಸ್ಸು ಮಾಡಿದ್ದಕ್ಕಾಗಿ ಅಥವಾ ತಂದಿದ್ದಕ್ಕಾಗಿ ನನ್ನ ಬಗ್ಗೆ ಕೆಲವರು ಒಳ್ಳೆಯ ಭಾಷಣವನ್ನು ಮಾಡಿದ್ದಾರೆ; ಪೆಚ್ಚಿಗೆಯನ್ನು ನನ್ನ ಮಿತ್ರರು, ಎದುರು ಪಕ್ಷದಲ್ಲಿ ಇರತಕ್ಕ ನಾಯಕರು ವ್ಯಕ್ತಪಡಿಸಿದ್ದಾರೆ.

ಇಂತಹ ಕಾರ್ಯಗಳು ಆಗುವಾಗ ನಾವು ಒಂದೊಂದು ಕಾಲಕ್ಕೆ ನಿಮಿತ್ತವಾಗುತ್ತೇವೆ ಅಷ್ಟೇ ಎಂದು ನಾನು ತಿಳಿದುಕೊಂಡಿದ್ದೇನೆ. ಇದು ನನಗೆ ವೈಯುಕ್ತಿಕವಾಗಿ ಹೆಮ್ಮೆ ಎಂದು ಅಲ್ಲ. ನಾನು ಒಂದು ನಿಮಿತ್ತವಾಗಿದ್ದೇನೆ. ಅದಕ್ಕೆ ಈ ಸಂದರ್ಭ ಕಾರಣವಾಗಿದೆ. ಇದರಿಂದ ಬರತಕ್ಕ ಕೀರ್ತಿ ಮತ್ತು ಪೆಚ್ಚಿಗೆ ಇಡೀ ನಮ್ಮ ಸಭೆಗೆ ಸೇರಿದ್ದು ಎಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅದರಲ್ಲಿ ನಾನು ಒಬ್ಬ ಇದ್ದೇನೆ ಅಷ್ಟೇ. ವೈಯುಕ್ತಿಕವಾಗಿ ನನ್ನ ಒಂದು ಪ್ರತಿಷ್ಠೆ ಏನೂ ಇದರಲ್ಲಿ ಇಲ್ಲ. ನಾನು ಮೊದಲೇ ತಿಳಿಸಿದ ಹಾಗೆ ಜನರು ಏನು ಆಸೆ ಪಡುತ್ತಿದ್ದರು, ಅವರ ಭಾವನೆಗಳು ಏನು ಇವೆ ಅದರಂತೆ ನಡೆದಿದ್ದೇನೆಂಬುದು ನನ್ನ ನಂಬಿಕೆ.

ತಿಳಿವಳಿಕೆ ಇಲ್ಲದೆ ಧೈರ್ಯ ಬರುವುದಿಲ್ಲ. ಮತ್ತೆ, ನಡೆದ ವಿಚಾರವನ್ನು ಸರಿಯಾಗಿ ತಿಳಿಮಾಡಿಕೊಳ್ಳಬೇಕಾದರೆ ನಿರ್ವಿಕಾರವಾದ ಮನಸ್ಸು ಬೇಕು; ಈ ವಿಷಯದಲ್ಲಿ ನಾನು ಒಂದು ನಿರ್ವಿಕಾರ ದೃಷ್ಟಿಯಿಂದ ನೋಡಿಕೊಂಡು ಬಂದಿದ್ದೇನೆ. ಆದ್ದರಿಂದ ಜನತೆ ಅಭಿಪ್ರಾಯ ಏನು ಇದೆ ಅದನ್ನು ನೋಡಿ ಹಾಗೆ ಮುನ್ನಡೆಯುತ್ತಿದ್ದೇನೆ ಎಂದು ನನ್ನ ತಿಳಿವಳಿಕೆ ಪ್ರಕಾರ ಗೊತ್ತಾಗಿದ್ದು ಅದರಂತೆ ನಡೆಯುವುದಕ್ಕೆ ಧೈರ್ಯ ಮಾಡಿದೆ ಅಷ್ಟೇ.

ಯುಗಯುಗಾಂತರಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ನೊಂದು ಹಿಂದುಳಿದಿರತಕ್ಕ ಜನಗಳ ಜನಾಂಗಗಳ ಉದ್ಧಾರ ಆಗಬೇಕಾದ್ದು ಸ್ತುತ್ಯವಾದ ವಿಚಾರ; ಕೆಲಸವನ್ನು ಮಾಡುವುದಕ್ಕೆ ಹೊರಟಾಗ ಅದಕ್ಕೆ ಕೆಲವರ ಮನಸ್ಸು ತಡೆಯಬೇಡಿ ಹೋದರೆ ನಾನೇನು ಮಾಡಲಿ? ಸರ್ಕಾರದ ಕರ್ತವ್ಯವನ್ನು ಮಾತ್ರ ನಾವು ಜನತೆಯ ಮುಂದೆ ಹೇಳುತ್ತಿದ್ದೇವೆ. ಅದರಂತೆ ನಡೆದುಕೊಂಡು ಹೋಗಬೇಕೆಂಬುದು ನಮ್ಮ ಇಚ್ಛೆ. ಇದಕ್ಕೆ ಏನೇ ಎಡರು ತೊಡರುಗಳು ಬಂದರೂ ಅದಕ್ಕೆ ಅಂಜದೆ ನಾವು ನುಡಿದಂತೆ ನಡೆಯಬೇಕಾದ್ದು ನಮ್ಮ ಧರ್ಮ, ನಮ್ಮ ಕರ್ತವ್ಯ. ಅದನ್ನು ಮಾಡುತ್ತೇವೆ ಎಂದು ಹೇಳಿ ನಾನು ತಮಗೆ ಆಶ್ವಾಸನೆ ಕೊಡಬಲ್ಲೆ; ಮತ್ತೆ ಕೆಲವು ಭಾಗಗಳಲ್ಲಿ ಕೆಲವು ತೊಂದರೆಗಳು ಇವೆ. ನೀರಿನ ಅಭಾವ ಇದೆ. ಮಳೆ ಇಲ್ಲದೆ ತೊಂದರೆಯಾಗಿದೆ. ಇವರ ಕಡೆ ನೋಡಬೇಕು. ಎಲ್ಲಾ ವಿಷಯಗಳನ್ನೂ ನಾವು ನೋಡಬೇಕಾಗಿದೆ. ಯಾವ ಭಾಗದವರಿಗೆ ತೊಂದರೆಯಾಗಿದ್ದರೂ ಅವನ್ನು ಪರಿಹರಿಸುವುದು ಸರ್ಕಾರವನ್ನು ನಡೆಸತಕ್ಕಂಥವರ ಕರ್ತವ್ಯ. ಎಲ್ಲಿಯವರೆಗೆ ನಮಗೆ ಸರ್ಕಾರ ನಡೆಸುವ ಜವಾಬ್ದಾರಿ ಇರುತ್ತದೆಯೋ ಅಲ್ಲಿಯವರೆಗೆ ಆ ಭಾಗ. ಈ ಭಾಗ, ನಮ್ಮ

ವರು, ನಮ್ಮ ಕಡೆಯವರು. ನಿಮ್ಮವರು ನಿಮ್ಮ ಕಡೆಯವರು ಎಂಬ ಯಾವ ಪಕ್ಷ ಪಾತವನ್ನೂ ದೃಷ್ಟಿಯನ್ನೂ ಇಟ್ಟುಕೊಳ್ಳದೆ ಎಲ್ಲಾ ಭಾಗಗಳೂ ನಮ್ಮ ರಾಜ್ಯ. ನಮ್ಮ ದೇಶ ನಮ್ಮ ಜನ ಎಂದು ಈ ಒಂದೇ ಒಂದು ಗುರಿಯನ್ನು ಇಟ್ಟು ಯಾವ ಕಾಲಕ್ಕೆ ಯಾರಿಗೆ ಸರ್ಕಾರದಿಂದ ಏನು ಆಗಬೇಕೋ ಆದನ್ನು ತ್ವರಿತವಾಗಿ ಮಾಡುವುದಕ್ಕೆ ನಾವು ಎಳ್ಳಷ್ಟೂ ಹಿಂಜರಿಯುವುದಿಲ್ಲ ಎನ್ನುವ ಆಶ್ವಾಸನೆಯನ್ನು ಕೂಡ ನಾನು ಕೊಡುತ್ತೇನೆ.

ಕೊನೆಯದಾಗಿ ಒಂದು ಮಾತು ಏನೆಂದರೆ ಈ ನಿರ್ಣಯವನ್ನು ನನ್ನ ಒಂದು ಸ್ಥಾನದಿಂದ ತಂದಿರತಕ್ಕದ್ದು ಸಂತೋಷವೆಂದು ಕೆಲವು ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ.

ಇವರು ಅರಸು ಮನೆತನದವರು ಆಗಿದ್ದರೂ ಇದನ್ನು ತಂದಿದ್ದಾರೆಂದು ಹೇಳಿದರು. ಇದರ ಬಗ್ಗೆ ನಾನು ಏನೂ ಹೆಚ್ಚು ಹೇಳಬೇಕಾದ ಅಗತ್ಯವಿಲ್ಲ. ಆದರೂ ಮತ್ತೊಮ್ಮೆ ಸ್ವಲ್ಪ ವಿವರಪಡಿಸೋಣ ಎಂದು ಎರಡು ಮಾತುಗಳನ್ನು ಹೇಳುತ್ತೇನೆ. ನಾನು ಯಾವಾಗ ರಾಜಕೀಯದಲ್ಲಿ ಕಾಲಿಟ್ಟೆನೋ ಆವಾಗಿನಿಂದ ನಾನು ಅರಸು ಮನೆತನಕ್ಕೆ ಸೇರಿದವನು. ಜನತೆಯೇ ಬೇರೆ ನಾನು ಬೇರೆ ಎಂದು ತಿಳಿದುಕೊಂಡು ಬಂದವನಲ್ಲ. ಅದಕ್ಕೆ ಕಾರಣ ವೇನೆಂದರೆ. ನಾನು ಹುಟ್ಟಿದ್ದು ಹಳ್ಳಿಯಲ್ಲಿ. ಬೆಳೆದಿದ್ದು ಹಳ್ಳಿಯಲ್ಲಿ. ಮತ್ತು ಇದುವರೆಗೆ ಇದ್ದದ್ದೂ ಹಳ್ಳಿಯಲ್ಲಿ ಆದರೆ ದೇಶದ ವಿಚಾರ ಬಂದಾಗ ದೇಶಾಭಿಮಾನ ಇರುವಂಥವರು. ಯಾವ ಜಾತಿ ಮತ ಬೇಧವಿಲ್ಲದೆ. ಯಾರ್ಯಾರಿಗೆ ಸ್ವಾತಂತ್ರಾಭಿಮಾನ ಇದೆಯೋ. ಅವರೆಲ್ಲರೂ ದೇಶಕ್ಕಾಗಿ ಹೋರಾಟವನ್ನು ಮಾಡಿದ್ದಾರೆ. ಅಂತಹ ಹೋರಾಟ ಮಾಡಿದ ಲಕ್ಷೋಪಲಕ್ಷ ಜನರಲ್ಲಿ ನಾನೂ ಒಬ್ಬ. ಒಂದು ಮುಖ್ಯವಾದ ಅಂಶವೇನೆಂದರೆ. ನನಗೆ ತನ್ನ ಜಾತಿಯೆಂದು ಏನೂ ಹೆಚ್ಚಿನ ರೀತಿಯ ಪ್ರೀತಿಯೂ ಇಲ್ಲ ಅಥವಾ ಬೇರೆ ಜಾತಿಯವರಲ್ಲಿ ಕಡಿಮೆ ರೀತಿಯ ಪ್ರೀತಿಯೂ ಇಲ್ಲ. ನಾವೆಲ್ಲರೂ ಒಂದೇ ಜಾತಿಯವರು ಎನ್ನತಕ್ಕಂತಹ ಒಂದು ಭಾವನೆಯಲ್ಲಿ ನಾನು ಬೆಳೆದಿರತಕ್ಕವನು : ಅದೇ ರೀತಿ ಈಗ ಕೂಡ ನಡೆಯುತ್ತಿದ್ದೇನೆ.

ಈ ರಾಜತ್ವಕ್ಕೆ ನನಗೆ ಆಗಿನಿಂದಲೇ ವಿರೋಧವಾದ ಮನೋಭಾವ ಬೆಳೆದು ಬಂದಿತ್ತು. ಏಕೆಂದರೆ ಅದರಲ್ಲಿ ಯಾವುದೂ ತರ್ಕಕ್ಕೆ ನಿಲ್ಲುವ ವಿಚಾರ ಇಲ್ಲ. ಯಾವಾಗ ನಮ್ಮಲ್ಲಿ ರಾಜಕೀಯ ತತ್ವಗಳ ಆಧಾರದ ಮೇಲೆ ಕೆಲವು ಇನ್ಸ್‌ಟಿಟ್ಯೂಶನುಗಳು ಬೆಳೆದುಬಂತೋ, ಆಗ. ಅಂತಹ ಸನ್ನಿವೇಶಗಳಲ್ಲಿ, ಅದು ಒಂದು ಕಾಲದಲ್ಲಿ ಒಳ್ಳೆಯದಾಗಿದ್ದರೂ. ಈ ಕಾಲದಲ್ಲಿ ಅದರಿಂದ ದೇಶಕ್ಕೆ ಮತ್ತು ದೇಶದ ಜನರಿಗೆ ಪ್ರಯೋಜನವಾಗುವುದಿಲ್ಲ.

ಹಿಂದೆ ಮಹಾತ್ಮಾ ಗಾಂಧೀಜಿಯವರು ಈ ರಾಜರುಗಳ ಬಗ್ಗೆ ಹೇಳಿದಾಗ, ಅದು ಸರಿ ಎಂದು ನನಗೆ ತೋರಿ ನಾನೂ ಅದಕ್ಕೆ ವಿರುದ್ಧವಾಗಿ ಎದ್ದು ನಿಂತಿದ್ದೇನೆ.

ಇಷ್ಟು ಹೇಳಿ, ತಾವೆಲ್ಲರೂ ಇದನ್ನು ವಿರೋಧ ಮಾಡದೆ ಸ್ವಾಗತ ಮಾಡಿದ್ದಕ್ಕಾಗಿ ತಮಗೆಲ್ಲರಿಗೂ ನಾನೂ ಅಭಿನಂದಿಸುತ್ತೇನೆ. ಇದಕ್ಕೆ ಸರ್ವಾನುಮತದ ಸ್ವಾಗತವನ್ನು ತಾವೆಲ್ಲರೂ ಮಾಡಿದ್ದೀರಿ. ಇದಕ್ಕೆ ಇನ್ನೊಂದು ಕಾರಣವನ್ನು ಹೇಳುವುದು ಅವಶ್ಯಕವೆಂದು ಕಾಣುತ್ತದೆ. ಇವತ್ತು ನಾವು ಈ ಮಹತ್ತರವಾದ ನಿರ್ಣಯವನ್ನು ತಮ್ಮ ಅಧ್ಯಕ್ಷತೆಯಲ್ಲಿ ಚರ್ಚೆಮಾಡಿ ಅಂಗೀಕರಿಸುತ್ತಿದ್ದೇವೆ. ಆ ಒಂದು ಸಂಸಂಧರ್ಭ ನಮಗೆ ಸಿಕ್ಕಿದೆ. ಇದು ಬಹಳ ಹೆಮ್ಮೆ ಮತ್ತು ಸಂತೋಷಪಡತಕ್ಕಂತಹ ವಿಚಾರವೆಂದು ಹೇಳಿದರೆ ತಪ್ಪಾಗಲಾರದು. ತಮ್ಮ ಘನ ಅಧ್ಯಕ್ಷತೆಯಲ್ಲಿ ಈ ಒಂದು ಚರಿತ್ರಾರ್ಹವಾದ ಘಟನೆ ನಡೆದಿರುವುದು ನಮ್ಮ ಪುಣ್ಯವೆಂದು ಭಾವಿಸುತ್ತೇನೆ. ತಾವು ಎಲ್ಲಾ ಪಕ್ಷದ ಸದಸ್ಯರಿಗೂ ಸಮಾಧಾನವಾಗಿ ಮಾತನಾಡುವುದಕ್ಕೆ ಅವಕಾಶಕೊಟ್ಟು ಅವರೆಲ್ಲರೂ ಸಂತೋಷದಿಂದ ಬೆಂಬಲ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇಂತಹ ಸಂದರ್ಭದಲ್ಲಿ ತಾವು ಅಧ್ಯಕ್ಷರಾಗಿರುವುದು ಒಂದು ಶುಭ ಸಂಕೇತವೆಂದು ತಿಳಿದು ನಾನು ತಮ್ಮನ್ನು ಮತ್ತೊಮ್ಮೆ ಅಭಿನಂದಿಸಿ ಈ ನಿರ್ಣಯಕ್ಕೆ ತಮ್ಮೆಲ್ಲರ ಬೆಂಬಲವನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.''

(ಎಲ್ಲರೂ ಕರತಾಡನ ಮಾಡಿ ಸಂತೋಷವನ್ನು ವ್ಯಕ್ತಪಡಿಸಿದರು)

ಅಧ್ಯಕ್ಷರು.—ನಾನು ಈ ನಿರ್ಣಯವನ್ನು ಸಭೆಯ ಒಪ್ಪಿಗೆಗೆ ಹಾಕುತ್ತೇನೆ. ಅದು ಹೀಗಿದೆ :—

"ಭಾರತದ ಸಂವಿಧಾನದಲ್ಲಿ ನಮೂದಿಸಿದ ಈ ರಾಜ್ಯದ ಹೆಸರನ್ನು 'ಕರ್ನಾಟಕ' ಎಂಬುವುದಾಗಿ ಬದಲಾಯಿಸಬೇಕೆಂದು ಈ ಸಭೆಯವರು ತಮ್ಮ ಖಚಿತ ಅಭಿಪ್ರಾಯವನ್ನು ಘೋಷಿಸಿ ಈ ಬಗ್ಗೆ ಅಗತ್ಯವಾದ ಸಂವಿಧಾನದ ತಿದ್ದುಪಡಿಗಳನ್ನು ರಾಜ್ಯಸರ್ಕಾರದವರು ಪಡೆದುಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಈ ಸಭೆಯವರು ಶಿಫಾರಸು ಮಾಡುತಾ ರೆ''

(ಎಲ್ಲಾ ಸದಸ್ಯರು ಜಯಕಾರ ಮಾಡಿದರು)

ಅಧ್ಯಕ್ಷರು.—ನಿರ್ಣಯದ ವಿರೋಧ ಯಾರು ಇಲ್ಲವಾದ್ದರಿಂದ ಈ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

The Resolution was adopted

ಶ್ರೀ ವಾಟಾಳ್ ನಾಗರಾಜ್.—ಈ ಶುಭ ಸಂತೋಷದ ಸಮಯದಲ್ಲಿ ಸಂತೋಷ ಸೂಚಕವಾಗಿ ನಾನು ಈ ಮಲ್ಲಿಗೆ ಹೂಗಳನ್ನು ಎಲ್ಲರ ಮೇಲೆಯೂ ಚೆಲ್ಲುತ್ತೇನೆ.
(ವಾಟಾಳ್ ನಾಗರಾಜರು ಮತ್ತು ಎಸ್. ಬಂಗಾರಪ್ಪನವರು ಮಲ್ಲಿಗೆ ಹೂಗಳನ್ನು ಚೆಲ್ಲಿದರು)

ಶ್ರೀ ಡಿ. ದೇವರಾಜ ಅರಸ್.—ನಾನು ಈಗ "ಕರ್ನಾಟಕಕ್ಕೆ" ಎಂದು ಹೇಳುತ್ತೇನೆ. ತಾವೆಲ್ಲರೂ ಒಕ್ಕಂಠದಿಂದ "ಜಯವಾಗಲಿ" ಎಂದು ಹೇಳಬೇಕು.

ಶ್ರೀ ಡಿ. ದೇವರಾಜ್ ಅರಸ್.—"ಕರ್ನಾಟಕಕ್ಕೆ"

ಎಲ್ಲ ಸದಸ್ಯರು.—"ಜಯವಾಗಲಿ"

ಶ್ರೀ ಡಿ. ದೇವರಾಜ್ ಅರಸ್.—"ಕರ್ನಾಟಕಕ್ಕೆ"

ಎಲ್ಲ ಸದಸ್ಯರು.—"ಜಯವಾಗಲಿ"

ಶ್ರೀ ಡಿ. ದೇವರಾಜ್ ಅರಸ್.—"ಕರ್ನಾಟಕಕ್ಕೆ"

ಎಲ್ಲ ಸದಸ್ಯರು.—"ಜಯವಾಗಲಿ"

(ಎಲ್ಲಾ ಸದಸ್ಯರು "ಕರ್ನಾಟಕಕ್ಕೆ ಜಯವಾಗಲಿ" ಎಂದು ಘೋಷಣೆಯನ್ನು ಮೂತ್ತು ಕರತಾಡನವನ್ನು ಮಾಡಿದರು)

---

೨೭ - ೭ - ೭೨

೨. ವಿಧಾನ ಪರಿಷತ್ತಿನ ಚಾರಿತ್ರಿಕ ನಿರ್ಣಯ

ಮಂಡನೆ

ಶ್ರೀ ಕೆ. ಎಚ್. ಪಾಟೀಲ್ (ಅರಣ್ಯ ಸಚಿವರು) :—" ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ದಿವಸ ನಾನು ಸರ್ಕಾರದ ಪರವಾಗಿ ಮುಂದೆ ಕಾಣಿಸಿರುವ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸಲಿಕ್ಕೆ ಇಷ್ಟಪಡುತ್ತೇನೆ.

" ಭಾರತದ ಸಂವಿಧಾನದಲ್ಲಿ ನಮೂದಿಸಿದ ಈ ರಾಜ್ಯದ ಹೆಸರನ್ನು 'ಕರ್ನಾಟಕ' ಎಂಬುದಾಗಿ ಬದಲಾಯಿಸಬೇಕೆಂದು ಈ ಸಭೆಯವರು ತಮ್ಮ ಖಚಿತ ಅಭಿಪ್ರಾಯವನ್ನು ಘೋಷಿಸಿ ಈ ಬಗ್ಗೆ ಅಗತ್ಯವಾದ ಸಂವಿಧಾನದ ತಿದ್ದುಪಡಿಗಳನ್ನು ರಾಜ್ಯ ಸರ್ಕಾರದವರು ಪಡೆದುಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಈ ಸಭೆಯವರು ಶಿಫಾರಸು ಮಾಡುತ್ತಾರೆ."

ನಮ್ಮ ರಾಜ್ಯದ ಹೆಸರನ್ನು ಕರ್ನಾಟಕ ಎಂಬುದಾಗಿ ಬದಲಾಯಿಸಬೇಕು ಅನ್ನತಕ್ಕ ವಿಚಾರದಲ್ಲಿ ಇದರಲ್ಲಿ ಯಾರಿಗೆ ಒಪ್ಪಿಗೆ ಇದೆ ಯಾರಿಗೆ ಒಪ್ಪಿಗೆ ಇಲ್ಲ ಎನ್ನತಕ್ಕ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ. ಈಗಾಗಲೇ ಕೆಳಮನೆಯಲ್ಲಿ ಈ ಠರಾವನ್ನು ಒಮ್ಮತದಿಂದ ಅನುಮೋದಿಸಿರುವುದರಿಂದ ಇದರ ಮಹತ್ವದ ಬಗ್ಗೆ ನಾನೀಗ ಹೆಚ್ಚಿಗೆ ಏನೂ ಹೇಳಬೇಕಾಗಿಲ್ಲ. ....ನಾವು ನಮ್ಮ ಮೈಸೂರು ಗೆಜೆಟಿಯರನ್ನು ನೋಡುವುದಾದರೆ ಮತ್ತು ಹೊಯ್ಸಳರ ಕಾಲದ ಹಾಗೂ ಚಾಲುಕ್ಯರ ಕಾಲದ ಚರಿತ್ರೆಗಳನ್ನು ನೋಡುವುದಾದರೆ, ಹೀಗೆ ಇನ್ನೂ ಅನೇಕ ಹಿಂದಿನ ಶಿಲಾಶಾಸನಗಳನ್ನು ನೋಡುವುದಾದರೆ ಈ ಕರ್ನಾಟಕ ಎಂಬ ಹೆಸರು ಬಹಳ ಕಾಲದ ಹಿಂದಿನಿಂದಲೂ ನಡೆದುಕೊಂಡು ಬಂದಿದೆ ಎಂಬುದು ಗೊತ್ತಾಗುತ್ತದೆ. "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಹಾಡನ್ನು ಕೇಳಿದಾಗ ಈ ಕನ್ನಡ ನಾಡು—ಕರ್ನಾಟಕ ಎಂಬ ದೇಶ ಎಷ್ಟು ವಿಶಾಲವಾಗಿತ್ತು ಎಲ್ಲಿಯವರೆಗೆ ಹಬ್ಬಿತ್ತು ಅನ್ನತಕ್ಕಂಥ ಒಂದು ಚಿತ್ರ ನಮ್ಮ ಕಣ್ಣಮುಂದೆ ಬಂದು ನಿಲ್ಲುತ್ತದೆ. ಈ ಕರ್ನಾಟಕ ಎಂಬ ಹೆಸರನ್ನು ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಡಿ. ದೇವರಾಜ ಅರಸರು ಏಕಾಏಕಿ ಸಭೆಯ ಮುಂದೆ ತರಲಿಲ್ಲ. ಇದನ್ನು ಕ್ಯಾಬಿನೆಟ್ ಮುಂದೆ ತಂದು ಅಲ್ಲಿ ಇದಕ್ಕೆ ಎಲ್ಲರ ಒಮ್ಮತದ ಅಭಿಪ್ರಾಯವನ್ನು ಪಡೆದು, ಅನಂತರ ಈ ವಿಷಯವನ್ನು ಆಡಳಿತ ಪಕ್ಷದ ಮುಂದೆ ಅವರ ಅಭಿಪ್ರಾಯವನ್ನು ಪಡೆದು ಅನಂತರ ಇದನ್ನು ಶಾಸನ ಸಭೆಯ ಮುಂದೆ ಅವರು ಮಂಡಿಸಿದ್ದಾರೆ....ಇದನ್ನು ಎಲ್ಲಾ ರೀತಿಯಿಂದಲೂ ಪರಿಶೀಲನೆ ಮಾಡಿ ಕಡೆಗೆ ಕರ್ನಾಟಕ ಎಂಬ ಹೆಸರನ್ನು ಇಡಬೇಕೆಂದು ಪಾರ್ಟಿಯಲ್ಲಿ ಬಹುಮಂದಿ ಸದಸ್ಯರು ಇಷ್ಟಪಟ್ಟರು. ಕಾರಣ ಇದಕ್ಕೆ ಒಂದು ಐತಿಹಾಸಿಕ ಹಿನ್ನೆಲೆ ಇದೆ. ಆದುದರಿಂದ ಇದಕ್ಕೆ ಈ ಹೆಸರೇ ಸಾರ್ಥಕ

ಪಾದಚೆದ್ದೆನೆಂದು ಬಹುಪಾಲಿನ ಜನರ ಸದಿಚ್ಛೆಯಾಗಿತ್ತು. ಆದೆನ್ನರಿತು ನಮ್ಮ ನಾಯಕರು ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನು ಇಡಬೇಕೆಂದು ನಿರ್ಣಯ ಮಾಡಿದರು....ನಾವು ಹಿಂದಿನ ಚರಿತ್ರೆಯನ್ನು ತಿರುವಿಹಾಕಿದರೆ ಕರ್ನಾಟಕ ಎಂಬ ಹೆಸರಿನ ಹಿಂದೆ ಅಡಗಿರತಕ್ಕ ಆ ಶೌರ್ಯ, ಸಾಹಸ ಹಾಗೂ ನಮ್ಮವರ ಪರಾಕ್ರಮ ಮತ್ತು ಆ ಕರ್ನಾಟಕದಲ್ಲಿದ್ದ ವಿವಿಧ ಭಾಷೆಗಳು, ವಿವಿಧ ಕೋಮಿನ ಜನರು ಎಲ್ಲರೂ ಒಟ್ಟಿಗೆ ಸೇರಿ ಸಹೋದರರಂತೆ ಬೆಳೆದು ಬಾಳಿದ ದೇಶ ಅದು ಎನ್ನುವುದು ಎಲ್ಲರಿಗೂ ವೇದ್ಯವಾಗುತ್ತದೆ....ಹಿಂದಿನ ಮಹಾರಾಜರಿಗೆ ಕರ್ನಾಟಕ ರತ್ನ ಸಿಂಹಾಸನಾಧೀಶ್ವರ ಎಂಬ ಬಿರುದಿತ್ತು. ಆಗ ಕರ್ನಾಟಕದ ಹಿರಿಮೆ ಎಷ್ಟಿತ್ತೆಂಬುದನ್ನು ಅದು ಎತ್ತಿ ತೋರಿಸುತ್ತದೆ. ಆದ್ದರಿಂದ ಮೈಸೂರು ಎಂಬ ಹೆಸರಿಗಿಂತ ಕರ್ನಾಟಕ ಎಂಬ ಹೆಸರು ಬಹಳ ಹೆಚ್ಚಿನ ವ್ಯಾಪಕವ್ಯಳ್ಳಿದ್ದಾಗಿದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಡಿ. ದೇವರಾಜೇ ಅರಸ್‌ರವರು ಇದನ್ನು ಸಭೆಯ ಮುಂದೆ ಮಂಡಿಸಿ ಒಂದು ಒಮ್ಮತದ ತೀರ್ಮಾನವನ್ನು ತೆಗೆದುಕೊಂಡುದಕ್ಕಾಗಿ ನಾನು ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ....ಬೆಳಗಾಂನಲ್ಲಿ ಹಿಂದೆ ಕಾಂಗ್ರೆಸ್ ಅಧಿವೇಶನವಾದಾಗ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಎಂಬ ಹೆಸರು ಬರಲು ಕಾರಣರಾದ ಮಹಾತ್ಮ ಗಾಂಧಿಯವರನ್ನು ಈ ಸಂದರ್ಭದಲ್ಲಿ ನೆನೆಯಬೇಕಾಗಿದೆ. ಕೊನೆಯವರೆಗೆ ಅವರು ನಮ್ಮ ದೇಶವನ್ನು ಕರ್ನಾಟಕ ಎಂದು ಕರೆದರೇ ಹೊರತು ಬೇರೆ ಹೆಸರಿನಿಂದ ಸಂಭೋದಿಸಿಲ್ಲ. ಕೆಲವು ಭಾಗಗಳು, ಮುಂಬಯಿ, ಮದ್ರಾಸ್, ಹೈದರಾಬಾದು ಮುಂತಾದ ಪ್ರಾಂತಗಳಿಂದ ಸೇರಿ ಒಂದು ರಾಜ್ಯವಾದಾಗಲೂ ಕೂಡ ಗಾಂಧೀಜಿಯವರ ಬಾಯಲ್ಲಿ ಕರ್ನಾಟಕ ಎಂಬ ಹೆಸರೇ ಬಂತು.....ಇಂದು ಮೈಸೂರಿನ ಹೆಸರಿಗೆ ಮಹತ್ವಕ್ಕೆ ಕುಂದೇನೂ ತರುವಂಥ ಕೆಲಸವಾಡುತ್ತಿಲ್ಲ : ಮೈಸೂರು ಮೈಸೂರಾಗಿಯೇ ಇರುವುದು; ಮೈಸೂರು ಇಂದು ಕರ್ನಾಟಕದ ಒಂದು ಭಾಗವಾಗುವುದು. ಕರ್ನಾಟಕ ಒಂದು ದೊಡ್ಡ ರಾಷ್ಟ್ರ, ಇದಕ್ಕೆ ಐತಿಹಾಸಿಕ ಹಿನ್ನೆಲೆ ಇದೆ. ಹಿಂದೊಮ್ಮೆ ಕರ್ನಾಟಕ ಪ್ರಾಂತ ಎಂದಾಗ ಗಾಂಧಿ ಪ್ರಾಂತ ಎಂದು ಹೇಳುತ್ತಿದ್ದರು. ಈ ರಾಜ್ಯದಲ್ಲಿ ಮಹಾತ್ಮ ಗಾಂಧಿಯವರ ತತ್ವವನ್ನು ಅಳವಡಿಸುವ ಯೋಜನೆ ಸಹ ಆಗಬೇಕು ಎಂಬುದು ನನ್ನ ಅಭಿಪ್ರಾಯ. ಈ ದೃಷ್ಟಿಯಿಂದ ಮಾನ್ಯ ಸದಸ್ಯರೆಲ್ಲರೂ ಕರ್ನಾಟಕವೆಂಬ ಹೆಸರಿಗೆ ಬೆಂಬಲ ಕೊಡುವುದರ ಜೊತೆಗೆ ಈ ರಾಜ್ಯವನ್ನು ಸರ್ವರೀತಿಯಿಂದಲೂ ಅಭಿವೃದ್ಧಿ ಮಾಡಲು ಶ್ರಮಿಸಬೇಕು, ಹಾಗೆ ಮಾಡಿ ಗಾಂಧೀಜಿಯವರ ಆತ್ಮಕ್ಕೆ ಶಾಂತಿ ದೊರೆಯುವಂತೆ ರಚನಾತ್ಮಕ ಕಾರ್ಯಗಳಲ್ಲಿ ಜೀವನವನ್ನು ಸವೆಸಬೇಕು ಎಂದೂ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ಭಾರತದ ನಕ್ಷೆಯಲ್ಲಿ ಕರ್ನಾಟಕ ಒಂದು ದೊಡ್ಡ ಪ್ರಾಂತವಾಗಿದೆ. ಈ ಪ್ರಾಂತದಲ್ಲಿ ಮುಂಬಯಿ ಪ್ರದೇಶದವರು ತಮ್ಮ ನಡೆನುಡಿಯನ್ನು ಕರೆದುಕೊಂಡು ಬಂದಿದ್ದಾರೆ, ಮದ್ರಾಸ್, ಹೈದರಾಬಾದ್ ಮುಂತಾದ ಪ್ರಾಂತಗಳಿಂದ ಬಂದಿರುವವರೂ ಸಹ ತಮ್ಮ ತಮ್ಮ ನಡೆನುಡಿಗಳನ್ನು ತಂದಿದ್ದಾರೆ. ಮೈಸೂರಿಗೆ ಹಿಂದಿನಿಂದಲೂ ಸಹ ಒಂದು ಹಿರಿಮೆ ಇದೆ, ಸುಗಂಧದ ಹಿರಿಮೆ. ಕನ್ನಡದ ಹಿರಿಮೆ ಇದೆ. ಮುಂಬಯಿ ಪ್ರದೇಶಗಳಿಂದ ಕಾರವಾರ ಮುಂತಾದ ಬಂದರುಗಳು ಸೇರಿವೆ...ತುಂಗಭದ್ರ ಸೌಕರ್ಯ ಬಂದಿದೆ,

ಮಂಗಳೂರು ಬಂದರು ಬಂದಿರುವುದರಿಂದ ಔದ್ಯೋಗಿಕ ಬೆಳವಣಿಗೆಗೆ ಮತ್ತು ಸ್ವಾವಲಂಬನೆಗೆ ಅವಕಾಶವಾಗಿದೆ. ಕಾರವಾರ ಬಂದರಾಗುವುದಿದೆ. ಇದು ನೈಸರ್ಗಿಕ ಸಂಪತ್ತು ನಮ್ಮಲ್ಲಿ ವಿಪ್ರಲವಾಗಿದೆ. ಬೇಕಾದ ಎಲ್ಲಾ ಸಂಪನ್ಮೂಲಗಳಿವೆ, ಅವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕಾಗಿದೆ. ಹಿಂದಿನ ಸಾಮಾಜಿಕ ಬೆಳವಣಿಗೆ, ಪ್ರಾಚಾರಿಕ ಬೆಳವಣಿಗೆ ಮುಂತಾದುವುಗಳನ್ನು ಗಮನಿಸಿ ನಮ್ಮ ಜೀವನವನ್ನು ಅದಕ್ಕೆ ಸರಿಹೊಂದಿಸಿಕೊಂಡು ಪ್ರಗತಿಯ ಕಡೆಗೆ ಹೆಜ್ಜೆ ಇಡಬೇಕಾಗಿದೆ. ಸರ್ ಎಂ. ವಿಶ್ವೇಶ್ವರಯ್ಯನವರಂಥ ಮೇಧಾವಿ ಗಳಿದ್ದ ನಾಡು ಇದು. ನಮ್ಮಲ್ಲಿ ಒಳ್ಳೆಯ ಅರಣ್ಯ ಸಂಪತ್ತಿದೆ. ಇದನ್ನೆಲ್ಲಾ ಸದುಪಯೋಗ ಮಾಡಿಕೊಂಡರೆ ನಮ್ಮ ಸಂಪತ್ತು ಹೆಚ್ಚುವುದು.....ಶ್ರೀಮಾನ್ ದೇವರಾಜ ಅರಸ್‌ರವರನ್ನು ವಿತಕ್ಕಾಗಿ ಪ್ರಶಂಸೆ ಮಾಡುತ್ತಿದ್ದೇವೆ ಎಂದರೆ ಇದು ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸಲು ಒಂದು ದಿಟ್ಟ ಹೆಜ್ಜೆಯನ್ನು ತೆಗೆದುಕೊಂಡಿದ್ದಾರೆ ಎಂದು.

ಈ ಕರ್ನಾಟಕದ ವಿಷಯವಾಗಿ ಕೆಳಮನೆಯಲ್ಲೂ ಕೂಡ ಚರ್ಚೆಯಾಗಿದೆ. ಮೇಲ್ಮನೆಯ ಸದಸ್ಯರೂ ಕೂಡ ಹೆಚ್ಚು ಅಭಿಮಾನವುಳ್ಳವರಾಗಿದ್ದಾರೆ. ಬಹುಶಃ ಎಲ್ಲರೂ ಇದನ್ನು ಒಪ್ಪಿದ್ದಾರೆ. ...ಶ್ರೀಮಾನ್ ದೇವರಾಜರು ಯಾರಿಗಿಂತಲೂ ಕಡಿಮೆ ಇಲ್ಲ. ಈ ಮಾತನ್ನು ಉತ್ತರ ಕರ್ನಾಟಕದಿಂದ ಬಂದಂಥ ಜನಗಳೂ ಕೂಡ ಹೇಳುತ್ತಾರೆ. "ಇದು ನಮ್ಮ ಕೈಯಲ್ಲೂ ಆಗಲಿಲ್ಲ. ಮೈಸೂರಿನವರೇ ಮುಂದಾಗಿ ಬಂದು ನಾವು ಇದಕ್ಕಾಗಿ ತ್ಯಾಗ ಬೇಕಾದರೂ ಮಾಡುತ್ತೇವೆ, ಈ ಹೆಸರನ್ನು ಇಡೋಣ' ಎಂದು ಮೈಸೂರಿನವರು ಉದಾರದೃಷ್ಟಿಯಿಂದ ಹೇಳಿದ್ದಾರೆ" ಎಂದು. ಕರ್ನಾಟಕ ಮೊದಲಿನ ಕಾಲದೊಳಗೆ ಏನು ಇತ್ತೋ ಚಾಳುಕ್ಯ-ಕದಂಬರ ಕಾಲವಲ್ಲಿ, ಹಾಗೆ ಬರಬೇಕೆಂದು ತಾವು ಆಶೀರ್ವಾದ ಮಾಡಬೇಕು."

ಶ್ರೀ ಡಿ. ದೇವರಾಜ ಅರಸರ ಸಮಾರೋಪಣೆ ಮತ್ತು ಪರಿಷತ್ ನಿರ್ಣಯ

ಹೆಸರಿನ ಬದಲಾವಣೆಯ ಬಗ್ಗೆ ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಅವರ ಮುಖೇಡತ್ವದಲ್ಲಿ ಆಗ ಏನಾಯಿತು ಎಂದರೆ ಈ ನಿರ್ಣಯ ಒಂದಲ್ಲ ಎರಡುಸಾರಿ ಕಾಂಗ್ರೆಸ್ ಪಕ್ಷದ ಸಭೆಯಮುಂದೆ ಬಂದಿತ್ತು....ಈಗ ನಾವು ಚುನಾವಣೆಯ ಹಿಂದೆ ಏನು ಹೇಳಿದ್ದೆವೋ ಅದನ್ನು ಕಾರ್ಯಗತ ಮಾಡಿದ್ದೇವೆ. ಚುನಾವಣೆಯ ಸಮಯದಲ್ಲಿ ನೀವು ಆರಿಸಿದಂತಹ ಪ್ರತಿನಿಧಿಗಳು ಏನು ಹೇಳುತ್ತಾರೋ ಅದನ್ನು ಮಾಡೋಣ, ಅದರಂತೆ ನಡೆಯೋಣ ಎಂದು ಹೇಳಿದ್ದೆವು. ಹಾಗೆಯೇ ಚುನಾವಣೆಯಾದ ಮೇಲೆ ಶಾಸನಸಭಾ ಸದಸ್ಯರು ಏನು ಹೇಳುತ್ತಾರೋ ಅದರಂತೆ ನಡೆದು ಇದನ್ನು ಕಾರ್ಯಗತ ಮಾಡಿದ್ದೇವೆ....ಈ ದೆಸೆಯಲ್ಲಿ ನಾವು ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ ಎಂಬುದನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಕೆಲವರು ಯಾವುದು ಸಾಧ್ಯವಿಲ್ಲವೆಂದು ತಿಳಿದುಕೊಂಡಿದ್ದರೋ, ಅದನ್ನು ಸಾಧಿಸಿದ್ದೇವೆ....ನಾನು ನಿಮ ಮಾತ್ರಕ್ಕೆ ಇದ್ದೇನೆ ಅಷ್ಟೆ. ಬೇರೇನೂ ಇಲ್ಲ. ಅದನ್ನು ಆ ಮನೆಯಲ್ಲೂ ಹೇಳಿದ್ದೇನೆ; ಈ ಮನೆಯಲ್ಲೂ ಹೇಳುತ್ತಿದ್ದೇನೆ....ಆದ್ದರಿಂದ ವೈಯುಕ್ತಿಕವಾಗಿ ಯಾವುದೇ ಏನೇ ಅಭಿಪ್ರಾಯವಿರಲಿ, ಎಲ್ಲಾ ಭಾಗದ ಜನರೂ ಇದರ ಬಗ್ಗೆ ತಮ್ಮ ಸಂತೋಷವಿದೆಯೆಂಬುದಾಗಿ ವ್ಯಕ್ತಪಡಿಸಿದ್ದಾರೆ. ನಾವು ಇಂತಹ ಸಂಧರ್ಭದಲ್ಲಿ ಎಲ್ಲರೂ ಸೇರಿ ಆ ಒಂದು ಸಂತೋಷದಲ್ಲಿ ಭಾಗಿಯಾಗೋಣ, ಏಕಮುಖವಾಗಿ ಹೋಗೋಣವೆಂದು ನನ್ನ ಪ್ರಾರ್ಥನೆ.

ಸಭಾಪತಿಯವರು :—ಈಗ ಓಟಿಗೆ ಹಾಕಕತಕ್ಕ ಸೂಚನೆ ಈ ರೀತಿ ಇದೆ :—

"ಭಾರತದ ಸಂವಿಧಾನದಲ್ಲಿ ನಮೂದಿಸಿದ ಈ ರಾಜ್ಯದ ಹೆಸರನ್ನು 'ಕರ್ನಾಟಕ' ಎಂಬುದಾಗಿ ಬದಲಾಯಿಸಬೇಕೆಂದು ಈ ಸಭೆಯವರು ತಮ್ಮ ಖಚಿತ ಅಭಿಪ್ರಾಯವನ್ನು ಘೋಷಿಸಿ ಈ ಬಗ್ಗೆ ಅಗತ್ಯವಾದ ಸಂವಿಧಾನದ ತಿದ್ದುಪಡಿಗಳನ್ನು ರಾಜ್ಯ ಸರ್ಕಾರದವರು ಪಡೆದುಕೊಳ್ಳಲು ಕ್ರಮ ಕೈಕೊಳ್ಳಬೇಕೆಂದು ಈ ಸಭೆಯವರು ಸಿಫಾರಸು ಮಾಡುತ್ತಾರೆ.—ಸೂಚನೆಯನ್ನು ಅನುಮೋದಿಸತಕ್ಕವರು 'ಹೌದು' ಎಂದು ಹೇಳಬಹುದು.

ಸಭೆಯಲ್ಲಿದ್ದ ಎಲ್ಲಾ ಸದಸ್ಯರೂ ಆಗಬಹುದೆಂದು ಹೇಳಿ ಹರ್ಷೋದ್ಗಾರ ಮಾಡಿ ಕರತಾಡನಗಳನ್ನು ಮಾಡಿದರು.

ಸಭಾಪತಿಯವರು :—

ಸಭೆಯ ತೀರ್ಮಾನವು ಈ ನಿರ್ಣಯದ ಬಗ್ಗೆ ಸರ್ವಾನುಮತದಿಂದ 'ಹೌದು' ಎಂಬುವರ ಪರವಾಗಿದೆ ಎಂದು ನನ್ನ ಅಭಿಪ್ರಾಯವಾಗಿದೆ.

ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಗಿದೆ.

ಸ್ಮರಣೀಯ ಉಲ್ಲೇಖಗಳು

(ಸಂಕಲನ)

(೧) " ಕರ್ನಾಟಕದವರು ಬಹು ದಿನಗಳಿಂದಲೂ ಕಾಣುತ್ತಿದ್ದ ವಿಕೇಂದ್ರೀಕರಣದ ಕನಸು ಇಂದು ನನಸಾಗಿದೆ. ಇದು ನಮ್ಮ ಮನಸ್ಸಿಗೆ ತುಂಬ ಸಂತೋಷವನ್ನುಂಟುಮಾಡಿದೆ. ಹಿಂದೆ ಅನೇಕ ಶತಮಾನಗಳಿಂದಲೂ ಕರ್ನಾಟಕ ಸಂಸ್ಕೃತಿಯು ವಿಕರೂಪದಲ್ಲಿದ್ದರೂ; ಕಾಲಗತಿಯಿಂದ....ಆ ಸಂಸ್ಕೃತಿಯ ಪ್ರಗತಿಗೆ ಅಡಚಣೆಯಾಗಿತ್ತು. ಈಗ ನಾಡಿನ ಪುಣ್ಯೋದಯದಿಂದ ಆ ಅಡ್ಡಿ ಆಡಚಣೆಗಳು ದೂರವಾಗಿವೆ. ಇಡೀ ಭಾರತದ ಸಂಸ್ಕೃತಿಯನ್ನು ಮಹಾ ಸಾಗರವೊಂದಕ್ಕೆ ಹೋಲಿಸಬಹುದು. ನಮ್ಮ ಪ್ರಾಂತೀಯ ಸಂಸ್ಕೃತಿಗಳು ಅದಕ್ಕೆ ಸೇರುವ ಪುಣ್ಯ ನದಿಗಳು. ಯಾವುದೊಂದು ನದಿಯಲ್ಲೂ ನೀರು ನಿಂತು ಹಸುರುಗಟ್ಟಬೆ ಮುಂದೆ ಸಾಗಬೇಕು. ಇಲ್ಲದಿದ್ದರೆ ಸಾಗರಕ್ಕೆ ಸಲ್ಲಿಸುವ ಕಾಣಿಕೆ ಅಪೂರ್ಣವೂ ಅಶುದ್ಧವೂ ಆದೀತು... ಕರ್ನಾಟಕದ ಇತಿಹಾಸದಲ್ಲಿ ಈ ಶುಭ ಪ್ರಕರಣ ನಮ್ಮ ಅಧಿಕಾರಾವಧಿಯಲ್ಲಿ ಒದಗಿದ್ದು ನಮ್ಮ ಭಾಗ್ಯವೆಂದು ಹೇಳಲು ಹೆಮ್ಮೆಪಡುತ್ತೇವೆ... ಒಂದಾಗೂಡಿದ ಕನ್ನಡ ನಾಡು ಭಾರತಾಂಬೆಯ ಸೇವೆಗೆ ಅನರ್ಘ್ಯ ರತ್ನಗಳನ್ನು ತರಲಿ. ಕನ್ನಡ ಜನತೆಯೂ...ಸತ್ಯ, ಧರ್ಮ, ಶಾಂತಿ, ಸಹನೆಗಳೆನ್ನು ಎತ್ತಿ ಹಿಡಿದು ಭಾರತಾಂಬೆಯ ಕೀರ್ತಿ ಜಗತ್ತಿನಲ್ಲೆಲ್ಲಾ ಬೆಳಗು ವಂತಾಗಲಿ ".

—ಶ್ರೀ ಜಯಚಾಮರಾಜ ಒಡೆಯರ್

(1956ರ ಉಲ್ಲೇಖಗಳು)

(೨) ಮಾನವ ಸಂಸ್ಕೃತಿ ಒಂದೇ ಒಂದು ಎಂಬುದನ್ನು ಈಗ ಎಲ್ಲ ವಿಚಾರವಂತರೂ ಒಪ್ಪುವರು.....ಕರ್ನಾಟಕ ಸಂಸ್ಕೃತಿ ಕನ್ನಡದ ಉದ್ದಾಮ ಗ್ರಂಥಗಳಲ್ಲಿ ಗರ್ಭಿತವಾದ ಸಂಸ್ಕೃತಿ : ಕರ್ನಾಟಕದಲ್ಲಿ ಪ್ರಜ್ವಲಿತವಾದ ಧರ್ಮ—ತತ್ತ್ವಜ್ಞಾನಾದಿಗಳಲ್ಲಡಗಿದ ಸಂಸ್ಕೃತಿ.....ಗುಡಿ—ಗುಂಜಾರಗಳಲ್ಲಿ ಮಾನಸ್ತಿ—ವೀರಗಲ್ಲುಗಳಲ್ಲಿ, ಶಿಲಾ ಶಾಸನಗಳಲ್ಲಿ... ಲಲಿತಕಲಾಕೃತಿಗಳಲ್ಲಿ ಮೈವೆತ್ತು ನಿಂತ ಸಂಸ್ಕೃತಿ. ಇದು ಉಜ್ವಲವಾಗಿದೆ, ವೀರವತ್ತಾಗಿದೆ, ಸ್ಫೂರ್ತಿದಾಯಕವಾಗಿದೆ. ನಮ್ಮನ್ನು ವಿಕಾಸಪೂರ್ಣದ ಗುಂಟ ಭರದಿಂದ ಮುಂದೊಯ್ಯು ವಂತಪಡಾಗಿದೆ...ಭಾರತೀಯ ಸಂಸ್ಕೃತಿಗೆ ಅದು, ಸಾಕಷ್ಟು ಮುಡಿಪನ್ನಿತ್ತಿದೆ.... ಭಾರತೀಯ ಇತಿಹಾಸ ಹಾಗೂ ಸಂಸ್ಕೃತಿ ಇವುಗಳೊಳಗಿಂದ ಕರ್ನಾಟಕದ ಕೊಡುಗೆಯನ್ನು ತೆಗೆದು ಹಾಕಿದರೆ, ಆ ಸಂಸ್ಕೃತಿಯು ಆ ಮಟ್ಟಿಗೆ ಬಡವಾಗಿ ಬಿಡುವುದು.....ಕರ್ನಾಟಕ ಸಂಸ್ಕೃತಿಯಿಲ್ಲದ ಭಾರತೀಯ ಸಂಸ್ಕೃತಿಯನ್ನಾಗಲಿ ಕಲ್ಪಿಸುವುದೆ ಅಸಾಧ್ಯ.

—ಶ್ರೀ ರಂಗನಾಥ ದಿವಾಕರ್

ಕರ್ನಾಟಕದ ಪ್ರಾಚೀನತೆ ಮತ್ತು ವೈಭವ

(೩) ''ಕರ್ನಾಟಕದ ಅತ್ಯಂತ ಪ್ರಾಚೀನತೆಯನ್ನು ಪುರಾತತ್ವ ಶೋಧನೆ ಮತ್ತು ಭೂ ಶಾಸ್ತ್ರದಿಂದ ತಿಳಿಯಬಹುದು. ದಕ್ಷಿಣ, ಪಶ್ಚಿಮ—ಮಧ್ಯಭಾಗಗಳನ್ನು ಆಕ್ರಮಿಸಿಕೊಂಡಿರುವ ಕನ್ನಡನಾಡು ಕೋಟ್ಯಂತರ ವರ್ಷಗಳ ಹಿಂದೆ ದಕ್ಷಿಣ ಆಫ್ರಿಕ ಮತ್ತು ಆಸ್ಟ್ರೇಲಿಯೆಡವರೆಗೂ ವ್ಯಾಪಿಸಿದ್ದ ''ಗೊಂಡವಾನ'' ಎಂಬ ಭೂಖಂಡದ ಭಾಗವಾಗಿದ್ದಿತು. ಕಡೂರು, ನ್ಯಾಮ್ತಿ, ಬಳ್ಳಾರಿ, ಇನ್ನೂ ಅನೇಕ ಸ್ಥಳಗಳಲ್ಲಿ ಪುರಾತನ ಶಿಲಾಯುಗದ ಜನರು ವಸಾಪತು ಮಾಡಿ ಕೊಂಡಿದ್ದರು. ನವಶಿಲಾಯುಗದ ಸಂಸ್ಕೃತಿಯ ಅವಶೇಷಗಳೂ ಬ್ರಹ್ಮಗಿರಿ, ಚಂದ್ರವಳ್ಳಿ.... ಆನೆಕಲ್....ಬಳ್ಳಾರಿ....ಮಾಸ್ಕಿ....ಬಿಜಾಪುರ....ಸ್ಥಳಗಳಲ್ಲಿ ಸಿಕ್ಕಿವೆ. ಬಳ್ಳಾರಿ ಬಳಿಯ ಸಂಗನಕಲ್, ಕಪ್ಪಗಲ್ ಗುಡ್ಡೆಗಳಲ್ಲಿ ನವಶಿಲಾಯುಗದ (ಲೋಹ) ಕಾರ್ಖಾನೆ ಇದ್ದಂತೆ ಕಂಡುಬರುತ್ತದೆ....ಕ್ರಿಸ್ತಪೂರ್ವ 1000 ವರ್ಷದಿಂದಾದರೂ ಕರ್ನಾಟಕಕ್ಕೂ ಪಾಶ್ಚಾತ್ಯ ಸಂಸ್ಕೃತಿಗಳಿಗೂ....ಸಂಬಂಧವಿದ್ದಿತೆಂದು ಊಹಿಸಬಹುದು....4ನೆಯ ಶತಮಾನದಲ್ಲಿ ಕದಂಬ ವಂಶ ಸ್ಥಾಪಕನಾದ ಮಯೂರಶರ್ಮನು ಪಶ್ಚಿಮ ತೀರದಿಂದ ಕೃಷ್ಣಾನದಿವರೆಗಿನ ದೇಶಕ್ಕೆ ರಾಜನಾದನು. ಚೀನಾ ಯಾತ್ರಿಕನಾದ ಯುವಾನ್ ಚ್ವಾಂಗ್, ಪುಲಿಕೇಶಿ ಮತ್ತು ಕರ್ನಾಟಕದ ಪ್ರಶಂಸೆ ಮಾಡಿದನು. ಚಾಲಿಕ್ಯ ಶಿಲ್ಪವು ಕರ್ನಾಟಕದಲ್ಲಿ ಮೊದಲು ಕಂಡುಬರುತ್ತದೆ. ಇದನ್ನನುಸರಿಸಿ ಪಲ್ಲವ ಶಿಲ್ಪ ರೀತಿ ಹುಟ್ಟಿತು...ಚಾಲುಕ್ಯರಾಜರ ಪೋಷಣೆಯಲ್ಲಿ ಬೆಳೆದ ಅಜಂತ ಚಿತ್ರಕಲೆ ಪಲ್ಲವರಿಂದಲೂ ಸಿಂಹಳರಿಂದಲೂ ಅನುಸರಿಸಲ್ಪಟ್ಟಿತು. ದಾಕ್ಷಿಣಾತ್ಯ (ಕರ್ನಾಟಕ) ಸಂಗೀತ ಪದ್ಧತಿಗೆ ಮೂಲ ಲಕ್ಷಣಗ್ರಂಥವಾದ ಮತಂಗನ ಬೃಹದ್ದೇಶಿ....3ನೇ ಶತಾಬ್ದದಲ್ಲಿ ಹಂಪೆಯ ಮತಂಗ ಪರ್ವತದ ಪರಿಸರದಲ್ಲಿ ರಚಿತವಾಯಿತು....''ಕರ್ನಾಟಕ'' ಎಂಬುದು ಬಾದಾಮಿ ಚಾಳುಕ್ಯರ ಸಾಮ್ರಾಜ್ಯಕ್ಕೆ ಹೆಸರಾಗಿದ್ದಿತು. ರಾಷ್ಟ್ರಕೂಟ ದಂತಿದುರ್ಗನು ಚೋಳ ಪಾಂಡ್ಯರನ್ನೂ ಉತ್ತರದಲ್ಲಿ ಮಾಳವ ದೇಶವನ್ನೂ ಗೆದ್ದು ಸಾಮ್ರಾಜ್ಯವನ್ನು ಸ್ಥಾಪಿಸಿದನು...1. ನೇ ಕೃಷ್ಣನು...ಪ್ರಪಂಚದಲ್ಲಿ ಅತ್ಯಾಶ್ಚರ್ಯಕಾರಕವಾದ ಎಲ್ಲೋರ ಕೈಲಾಸ ದೇವಾಲಯವನ್ನು ನಿರ್ಮಿಸಿದನು...ಮೂರನೆಯ ಗೋವಿಂದನು... ರಾಷ್ಟ್ರಕೂಟ ಪ್ರಭಸ್ತಿಯನ್ನು ಭಾರತದಲ್ಲೆಲ್ಲ ಹರಡಿದನು...ನೃಪತುಂಗನ ಕಾಲದಲ್ಲಿ... ಅರಬ್ಬೀ ಪ್ರವಾಸಿಗಳು...ಅಂತಹ ಖ್ಯಾತಿವಂಶನಾದ ಚಕ್ರವರ್ತಿ ಚೀನಾ ಪರ್ಶಿಯಗಳೆಲ್ಲೂ ಇಲ್ಲ ವೆಂದೂ...ಆ ದೇಶದ ಭಾಷೆ ಕನ್ನಡವೆಂದೂ ವರ್ಣಿಸಿರುವರು...ಇಮ್ಮಡಿ ಕೃಷ್ಣ...ಮುಮ್ಮಡಿ ಇಂದ್ರರು ಕರ್ನಾಟಕದ ಪ್ರಭಾವವನ್ನು ಎತ್ತಿ ಹಿಡಿದರು.....ಕರ್ನಾಟಕ ಸೈನ್ಯದ ಗಜಗಳು ಗಂಗಾನದಿಯಲ್ಲಿ ಮಿಂದು ಮಲಯಾಚಲದಲ್ಲಿ ವಿಶ್ರಾಂತಿ ಪಡೆದವು. ಮುಮ್ಮಡಿ ಕೃಷ್ಣನ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯ ಭಾರತದ ಮುಕ್ಕಾಲುಭಾಗದಲ್ಲಿ ವಿಸ್ತರಣೆ ಹೊಂದಿತು .....ಕನ್ಯಾಕುಬ್ಜದಿಂದ.....ಕರ್ನಾಟಕ ರಾಜ್ಯವನ್ನು ದಕ್ಷಿಣ ಸಮುದ್ರದವರೆಗೂ ವಿಸ್ತರಿಸಿದನು ..... ಆರನೇ (ಚಾಳುಕ್ಯ) ವಿಕ್ರಮಾದಿತ್ಯನು.....ಕರ್ನಾಟಕದ ಪ್ರಭಾವವನ್ನು ಕಾಶ್ಮೀರದವರೆಗೂ ಹರಡಿದನು.....ಕರ್ನಾಟಕದವರಾದ ಅಪರಾರ್ಕ, ವಿಜ್ಞಾನೇಶ್ವರ,

ಹೇಮಾದ್ರಿ, ವಿದ್ಯಾರಣ್ಯರ ನ್ಯಾಯ ನಿಬಂಧನೆಗಳೇ ಭಾರತದಲ್ಲೆಲ್ಲ (ಬಂಗಾಳವಿನಾ)..... ಹಿಂದುಗಳ ನ್ಯಾಯ ಕೋಷ್ಟಕವಾಯಿತು.....3ನೇ ಸೋಮೇಶ್ವರನು "ಸರ್ವಜ್ಞ—ಸೋಮೇಶ್ವರ" ನೆಂದು ಪ್ರಸಿದ್ಧಿ ಪಡೆದನು. ಕರ್ನಾಟಕ ಸಂಗೀತದಲ್ಲೂ ಆಚಾರ್ಯ ಪುರುಷನಾಗಿದ್ದನು ..... ಹೊಯ್ಸಳ ವಿಷ್ಣುವರ್ಧನನು ..... ತುಂಗಭದ್ರೆಯವರೆಗೂ ಹೊಯ್ಸಳ ರಾಜ್ಯವನ್ನು ವಿಸ್ತರಿಸಿದನು. ಇಮ್ಮಡಿ ವೀರಬಲ್ಲಾಳನು ಹೊಯ್ಸಳರಲ್ಲಿ ಪ್ರಥಮ ಸ್ವತಂತ್ರ ಚಕ್ರವರ್ತಿಯಾದನು. ಹೊಯ್ಸಳ ವಾಸ್ತುಶಿಲ್ಪ, ಸಂಗೀತ, ಕನ್ನಡ ಸಾಹಿತ್ಯ ಇವನ ಕಾಲದಲ್ಲಿ ಉಚ್ಛ್ರಾಯಸ್ಥಿತಿ ಪಡೆದುವು. ತೊಗ್ಗಲಿನು ಬಹಾಳುದ್ದೀನನಿಗೆ ಆಶ್ರಯ ಕೊಟ್ಟಿದ್ದ ಕಂಪಲಿ ರಾಜ್ಯಕ್ಕೆ ಮುತ್ತಿಗೆ ಹಾಕಿದನು. ಹಂಪೆಯ ಹತ್ತಿರ ಇರುವ ಕಂಪಿಲಿಯ ರಾಮನಾಥ—ಕುಮಾರರಾಮರು ಬಹಾಉದ್ದೀನನ್ನು ಬಲ್ಲಾಳನ ಬಳಿಗೆ ಕಳುಹಿಸಿ.....ವೀರಸ್ವರ್ಗವನ್ನು ಪಡೆದರು. ಹರಿಹರ ಬುಕ್ಕರು ವಿದ್ಯಾರಣ್ಯರ ಪ್ರೋತ್ಸಾಹದಿಂದ.....ವಿಜಯನಗರವನ್ನು ಸ್ಥಾಪಿಸಿದರು. ಕಂಪಲಿ ರಾಮನಾಥ (ಕುಮಾರ ರಾಮ)ರ ಬಲಿದಾನದಿಂದಲೂ ವಿದ್ಯಾರಣ್ಯರ ಅನುಗ್ರಹದಿಂದಲೂ.....ವಿಜಯನಗರ ಸ್ಥಾಪನೆಯಾಯಿತು. ಕರ್ನಾಟಕ ಸಾಮ್ರಾಜ್ಯವೆಂದು ಸ್ಪಷ್ಟವಾಗಿ ಅದಕ್ಕೆ ಹೆಸರು ಬಂದಿತು. ಸಂಸ್ಕೃತ, ಕನ್ನಡ, ತಮಿಳು, ತೆಲುಗು ಸಾಹಿತ್ಯಗಳು ಇಮ್ಮಡಿ ದೇವರಾಯನಿಂದ ಪೋಷಿತವಾದುವು. ಕರ್ನಾಟಕ ಸಂಗೀತ, ಚಿತ್ರ ಮತ್ತು ಶಿಲ್ಪಕಲೆಗಳು ಬೆಳೆದುವು.

—ಡಾ. ಎಸ್. ಶ್ರೀಕಂಠಶಾಸ್ತ್ರಿ,
ಮೈಸೂರು.

(೪) "ನಮ್ಮ ಜೀವನಕ್ಕೆ ಬೇಕಾದ ಸಕಲ ಸುಪತ್ತನ್ನೂ ನೀಡಿ, ನಮ್ಮನ್ನು ಪೋಷಿಸಿ, ರಕ್ಷಿಸಿಕೊಂಡು ಬರುತ್ತಿರುವ ನಮ್ಮ ತಾಯಿನಾಡಾದ ಈಗ ರೂಪುಗೊಂಡಿರುವ ಕರ್ನಾಟಕದ ಸ್ಥಾನ–ಸ್ವರೂಪ–ಜನಜೀವನಗಳನ್ನು ಸಂಕ್ಷಿಪ್ತವಾಗಿ ತಿಳಿಯೋಣ. ಕರ್ನಾಟಕವು ದಕ್ಷಿಣಾಪಥದ ಮಧ್ಯಭಾಗದಲ್ಲಿ ಪಶ್ಚಿಮದ ಕಡೆ ಇದೆ...ಭಾರತೀಯ ಸನಾತನ ಧರ್ಮ ಸಂಸ್ಕೃತಿಗಳನ್ನು ರಕ್ಷಿಸಿ, ಎತ್ತಿ ಹಿಡಿದು ನಿಲ್ಲಿಸಿ, "ಧರಣಿ ಮಂಡಲ ಮಧ್ಯದೊಳಗೆ...ಮೆರೆಯುತ್ತಿದೆ ಈ ಕರ್ನಾಟಕ ದೇಶ. ಕರ್ನಾಟಕವು ಮಹಾಭಾರತ ಕಾಲದಿಂದಲೂ ಪ್ರಸಿದ್ಧವಾಗಿದೆ. ಮೈಸೂರು ಅರಸರ..." ಕರ್ನಾಟಕ ರತ್ನ ಸಿಂಹಾಸನಾಧೀಶ್ವರನೆಂಬ ಬಿರುದಿನಲ್ಲಿಯೂ, ಶೃಂಗೇರಿ ಶ್ರೀಗಳವರ "ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ" ಎಂಬ ಬಿರುದಿನಲ್ಲಿಯೂ ಚರಿತ್ರೆಯ ಅನೇಕ ಅಂಶಗಳು ಅಡಕವಾಗಿವೆ. ಕರ್ನಾಟಕವು ಈಶಾನ್ಯ ಮಾರುತಗಳಿಗೆ ಒಳಪಟ್ಟಿದೆ. ಏಪ್ರಿಲ್–ಮೇ ವೇಳೆಗೆ ಸೂರ್ಯನು...ಕರ್ನಾಟಕದ ನೆತ್ತಿಯ ಮೇಲೆ ಬಂದಿರುವನು ..ಕರ್ನಾಟಕವು ಬದುಕುವುದು ಈ ಮುಂಗಾರು–ಹಿಂಗಾರು ಮಳೆಗಳಿಂದಲೇ : ಮುಂಗಾರು ಬೇಸಗೆಯಿಂದ ಬೆಂದು ತಪ್ತವಾಗಿ ಚಾತಕಪಕ್ಷಿಯಂತೆ ಮೋಡಗಳನ್ನೇ ನೋಡುತ್ತಿರುವ ಕರ್ನಾಟಕಕ್ಕೆ ನೀರೆರೆದು....ಹುಲ್ಲುಗಾವಲುಗಳನ್ನು ಪುನಃ ಹಚ್ಚಗೆ ಮಾಡುವುದು....

ತತ್‌ಕ್ಷಣವೇ ಇಡೀ ಕರ್ನಾಟಕವೇ ಎದ್ದು ಉತ್ತುಬಿತ್ತುವುದರಲ್ಲಿ ತ್ವರೆಗೊಂಡು ರಾಗಿ ಜೋಳ ಗಳನ್ನೂ, ದ್ವಿದಳ ಧಾನ್ಯಗಳನ್ನೂ ಬೆಳೆಯುವುದು."

—ಶ್ರೀ ಎಚ್. ರಾಮರಾಯರು,
ಬೆಂಗಳೂರು.

(ಇದು ಭೌಗೋಳಿಕ ವಿಷಯವಾದರೂ, ಬರೆಹಗಾರರು ಕರ್ನಾಟಕಕ್ಕೆ ಒಂದು ವ್ಯಕ್ತಿತ್ವವನ್ನೇ ಕಲ್ಪಿಸಿ ರಸಮಯವಾಗಿಸಿದ್ದಾರೆ.–ಸಂ.)

"ಕರ್ನಾಟಕ..." ಕರಿಯ ನಾಡು....ಕರುನಾಡು....ಎಂಬ ಶಬ್ದಗಳಿಂದ ನಿಷ್ಪನ್ನವಾಗಿ.... ಅದು ಸಂಸ್ಕೃತಮಯವೆನಿಸಿದಾಗ "ಕರ್ನಾಟಕ" ಎಂದಾಯಿತೆಂದೂ ವಿದ್ವಾಂಸರು ಹೇಳಿ ದ್ದಾರೆ. "ಕರ್ಣಯೋ : ಅಟತಿ ಇತಿ ಕರ್ಣಾಟ :" ಅಂದರೆ ಕೀರ್ತಿಶಾಲಿಯಾದ ದೇಶವು ಎಂದು ಸಂಸ್ಕೃತ ಕವಿ ವೆಂಕಟಾಧ್ವರಿ ಹೇಳಿದ್ದಾನೆ, "ಕಮ್ಮಿತು ನಾಡು'' ಅಂದರೆ 'ಸುವಾ ಸನೆಯ ಗಾಳಿಯಿಂದ ಕೂಡಿದ ನಾಡು' ಎಂದು ಮತ್ತೊಬ್ಬ ವಿದ್ವಾಂಸರು ಹೇಳಿದ್ದಾರೆ"... "ಕರ್ನಾಟಕ"ವು ಸಂಸ್ಕೃತಿಗಳ ಸಂಗಮಸ್ಥಳವೆಂದು ಇತಿಹಾಸಕಾರರು ಹೇಳಿದ್ದಾರೆ. ಶ್ರೀ ರಾಮಚಂದ್ರನಿಗೂ—ಸುಗ್ರೀವನಿಗೂ ಆದ ಸ್ನೇಹವು ಕರ್ನಾಟಕದ ಪಂಪಾಕ್ಷೇತ್ರದಲ್ಲಿ ನಡೆದು ದೆಂಬುದು ಸ್ಪಷ್ಟವಾಗಿದೆ....ಶ್ರೀ ರಾಮಚಂದ್ರನಿಗೆ ಬಂದಿರುವಷ್ಟೇ ಕೀರ್ತಿ ಗೌರವಗಳು... ಹನುಮಂತನಿಗೂ ಸಂದಿವೆ..."ದೇವರ ಕೃಪೆಯಿಂದ ಬಹುದಿನದ ಕನಸಾದ ಕರ್ನಾಟಕ ರಾಜ್ಯ ಇಂದು ನೆನಸಾಗಿದೆ. ಕನ್ನಡಿಗರ ರಾಜಕೀಯ, ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಔದ್ಯೋಗಿಕ ವಿಚಾರಗಳು ಇನ್ನು ಪ್ರಗತಿಯನ್ನು ಹೊಂದುತ್ತವೆ."

—ಪಂಡಿತರತ್ನ ಬಿ. ಶಿವಮೂರ್ತಿಶಾಸ್ತ್ರಿಗಳು.

ಕರ್ನಾಟಕ ಜನಪದ ಜೀವನದ ಸರ್ವತೋಮುಖ ಸ್ವರೂಪದ ಅರಿವು ಉಂಟಾಗಬೇಕಾದರೆ ಶಾಸನಗಳನ್ನು ಓದಬೇಕು. ದಕ್ಷಿಣ ಭಾರತದಲ್ಲಿ ಮೊಟ್ಟಮೊದಲು ಮುಸಲ್ಮಾನರನ್ನೆದುರಿಸಿದುದು ಹೊಯ್ಸಳ ಸಾಮ್ರಾಜ್ಯ. ದಕ್ಷಿಣಭಾರತದ ರಾಜ್ಯ ಸಾಮ್ರಾಜ್ಯ ಗಳ ಪತನ, ಪುನರುಜ್ಜೀವನ ಇವೆಲ್ಲ, ಸ್ವಲ್ಪ ಹೆಚ್ಚು ಕಡಿಮೆ ಕರ್ನಾಟಕದ ರಣಕ್ಷೇತ್ರಗಳಲ್ಲೇ ನಿರ್ಣಯವಾಗಿದೆ." "ಬಾದಾಮಿ ಚಾಳುಕ್ಯರೆಲ್ಲ ಸತ್ಯಾಶ್ರಯ ಕುಲತಿಲಕರು. ರಣಪರಾಕ್ರಮಿ ಗಳು, ರಣ ವಿಕ್ರಾಂತರು, ಪರ್ಶಿಯದ ಸಮ್ರಾಟನ ರಾಯಭಾರಕ್ಕೆ ಸ್ವಾಗತವಿತ್ತು. ಕರ್ನಾಟಕದ ರಾಯಭಾರವನ್ನು ಪರ್ಶಿಯಾದೇಶಕ್ಕೆ ಕಳುಹಿಸಿದ ಕೀರ್ತಿ ಇಮ್ಮಡಿ ಪುಲಿಕೇಶಿ ಯದು. "ಕರ್ನಾಟಕ ಚಕ್ರೇಶ್ವರ" ಕೀರ್ತಿ ಮೊದಲನೆಯ ವಿಕ್ರಮಾದಿತ್ಯನಿಗೆ ಸಲ್ಲುತ್ತದೆ ಗುಪ್ತರಾಜರಿಂದ ಗಂಗಾ ಯಮುನಾ ಧ್ವಜಗಳನ್ನು ತೆಗೆದುಕೊಂಡವ ವಿಜಯಾದಿತ್ಯ. ದಕ್ಷಿಣ ಸಮುದ್ರತೀರದಲ್ಲಿ ವಿಜಯಸ್ತಂಭ ಹಾರಿಸಿದವ ಇಮ್ಮಡಿ ವಿಕ್ರಮಾದಿತ್ಯ.....ಮಾನ್ಯ ಖೇಟದ ರಾಷ್ಟ್ರಕೂಟರು.....ಪೃಥ್ವಿವಲ್ಲಭರು ಎಲ್ಲೋರಾದ ಕೈಲಾಸನಾಥ ದೇವಾಲಯ

ವನ್ನು ಬೆಟ್ಟವನ್ನೇ ಕೊರೆಯಿಸಿ ಕಂಡರಿಸಿದವ ಮೊದಲನೆಯ ಕೃಷ್ಣ.....ನೃಪತುಂಗನ ಕೀರ್ತಿ ಭಾರತದ ಸೀಮಾರೇಖೆಗಳನ್ನು ದಾಟಿತ್ತು; ತರ್ಕಕ ಸುಲೇಮಾನನಂ ಇವನನ್ನು ಜಗತ್ತಿನ ನಾಲ್ಕು ಮಹಾಚಕ್ರವರ್ತಿಗಳಲ್ಲಿ ಒಬ್ಬನನ್ನಾಗಿ ಭಾವಿಸಿದ್ದಾನೆ. ದಕ್ಷಿಣಾಪಥೇಶ್ವರನೆನಿಸಿದ ಮುಮ್ಮಡಿ ಕೃಷ್ಣ ಮಧ್ಯಭಾರತದಲ್ಲೂ ತನ್ನ ಧ್ವಜ ಹಾರಿಸಿದ ಮೈಹರ ಸಂಸ್ಥಾನದ ಜುರಾ ಎಂಬಲ್ಲಿ ಇವನ ಪ್ರಶಸ್ತಿ ಶಾಸನ ಕನ್ನಡದಲ್ಲಿದೆ."

—ಶ್ರೀ ತಿರುಮಂಲ ತಾತಾಚಾರ್ಯ ಶರ್ಮ,
ಬೆಂಗಳೂರು.

"ಕನ್ನಡನಾಡು ಪ್ರಾಚೀನಕಾಲದಿಂದಲೂ ಪ್ರಖ್ಯಾತವಾದ ನಾಡು. ಕನ್ನಡ ನಾಡಿನ ಚರಿತ್ರೆಯೆಂದರೆ, ಹಿಂದಿನ ಒಂದು ಅವಧಿಯಲ್ಲಿ ಭಾರತದ ಬಹುಭಾಗದ ಚರಿತ್ರೆ ಯೆಂದೇ ಹೇಳಬೇಕು. ಏಕೆಂದರೆ, ಭಾರತದ ಅನೇಕ ಪ್ರಾಂತ್ಯಗಳು ಕನ್ನಡಿಗರ ಆಡಳಿತಕ್ಕೇ ಒಳಪಟ್ಟಿದ್ದವು. ಉಳಿದ ಪ್ರಾಂತ್ಯಗಳು ಕನ್ನಡಿಗರ-ಅಪೋಷವಾದ ಪ್ರಭಾವಕ್ಕೊಳಗಾಗಿ ಸ್ಫೂರ್ತಿಹೊಂದಿ ಲಾಭ ಪಡೆದಿದ್ದವು."

—ಶ್ರೀ ಸಿ. ಕೆ. ವೆಂಕಟರಾಮಯ್ಯನವರು.

"ಕನ್ನಡ ನಾಡು ವಾಸ್ತುಶಿಲ್ಪಕ್ಕೆ ಆತಿಪ್ರಸಿದ್ಧವಾದುದು. ಕರ್ನಾಟಕದ ವಾಸ್ತು ಶಿಲ್ಪದ ಬೆಳವಣಿಗೆಯಲ್ಲಿ ಕದಂಬರ ಪಾತ್ರ ಬಹಳ ಮಹತ್ತರವಾದದು. ಅವರೇ ಇಲ್ಲಿ ವಾಸ್ತುಶಿಲ್ಪದ ತಳಹದಿಯನ್ನು ಹಾಕಿದರು. ಸುಪ್ರಸಿದ್ಧ ಗೊಮ್ಮಟೇಶ್ವರ ವಿಗ್ರಹವು ಗಂಗರಾಜನಾದ ರಾಚಮಲ್ಲ ಸತ್ಯವಾಕ್ಯನ ಮಂತ್ರಿಯಾದ ಚಾವುಂಡರಾಯನಿಂದ ಕೆತ್ತಿ ಸಲ್ಪಟ್ಟಿತು. ಗೊಮ್ಮಟೇಶ್ವರ ವಿಗ್ರಹವು ಪ್ರಪಂಚದಲ್ಲೆಲ್ಲಾ ಅತ್ಯಂತ ಎತ್ತರವೂ ಮತ್ತು ಸುಂದರವೂ ಆದ ವಿಗ್ರಹಗಳಲ್ಲೊಂದಾಗಿದೆ. ಕರ್ನಾಟಕದ ವಾಸ್ತುಶಿಲ್ಪಕ್ಕೆ ಅಮೂಲ್ಯವಾದ ಕಾಣಿಕೆಯನ್ನು ಸಲ್ಲಿಸಿದವರು ಬಾದಾಮಿಯ ಚಾಳುಕ್ಯರು.....ಮಂಗಳೇಶ "ಚಾಲುಂಕ್ಯರ ಮಂಗಳೇಶ ಚಾಲುಕ್ಯರ ವಾಸ್ತುಶಿಲ್ಪದ ತಂದೆ.....ಐಹೊಳೆ ಚಾಲುಂಕ್ಯರ ವಾಸ್ತುಶಿಲ್ಪದ ತೌರುಮನೆ ; ಎಪ್ಪತ್ತು ದೇವಾಲಯಗಳಿವೆ. ಪಟ್ಟದಕಲ್ಲಿನಲ್ಲಿ ಚಾಲುಕ್ಯ ಶಿಲ್ಪದ ಅತ್ಯಂತ ಪ್ರಗತಿದಾಯಕ ಹಂತವನ್ನು ನೋಡಬಹುದು. ಪಾಪನಾಥ ಮೊದಲಾದ ದೇವಾಲಯಗಳು ಉತ್ತರ ಭಾರತದ ನಮೂನೆಗೂ.....ಸಂಗಮೇಶ್ವರ ಮೊದಲಾದುವು ದಕ್ಷಿಣ ಭಾರತ ಸಂಪ್ರದಾಯಕ್ಕೂ ಸೇರಿವೆ. ಬೆಳಗಾವಿಯ ಉಮಾಮಹೇಶ್ವರ ಚಾಲುಕ್ಯ ಶಿಲ್ಪದ ಒಂದು ಅತ್ಯಂತ ಕಲಾಪೂರ್ಣ ಕೃತಿಯಾಗಿದೆ, ಕರ್ನಾಟಕ ವಾಸ್ತುಶಿಲ್ಪದಲ್ಲಿ ಹೊಯ್ಸಳರ ಪಾತ್ರ ಅತಿಮುಖ್ಯವಾದದು. ಹೊಯ್ಸಳರು ಚಾಲುಕ್ಯರ ನಮೂನೆಯನ್ನೇ ಬೆಳೆಸಿ ಕೊಂಡುಬಂದರು, ಆದರೆ ಅವರ ಕೆತ್ತನೆಯ ಕೆಲಸವು ಅಕ್ಕಸಾಲಿಗರ ನೈಪುಣ್ಯಕ್ಕಿಂತಲೂ ಮಿಗಿಲಾದುದು, ಸೃಷ್ಟಿಕರ್ತನ ಜಗತಿಯಮೇಲೆ ಕಟ್ಟಿರುವುದರಿಂದ ವಾಸ್ತುಶಿಲ್ಪದ ರೀವಿ.

ಬೆಳಕು ನೆರಳಿನ ಪ್ರತಿಕ್ರಿಯೆ ಸ್ಪಷ್ಟವಾಗಿ ಕಾಣುವುದು, ಹೊಯ್ಸಳ ದೇವಾಲಯ ಭುವನೇಶ್ವರಿ ನವರಂಗದಲ್ಲಿ ಕೆತ್ತಲ್ಪಟ್ಟಿರುವ ಕಂಬಗಳು ತಮ್ಮದೇ ಆದ ವೈವಿಧ್ಯದಿಂದ ಕನ್ನಡಿಯಂತೆ ಕಾಣುವ ಹೊಳಪಿನಿಂದ ಕೂಡಿವೆ. ವಿಜಯನಗರದ ರಾಜ್ಯವು ಕರ್ನಾಟಕದಲ್ಲಿ ಮತ್ತು ಹಂಪೆಯಲ್ಲಿ ಅನೇಕ ಹೊಸ ಕಟ್ಟಡಗಳನ್ನು ಕಟ್ಟಿಸಿತು. ಮಹಾನವಮಿ ದಿಬ್ಬವು ಹಿಂದೆ ಸಿಂಹಾಸನದ ಜಗತಿಯಾಗಿತ್ತು; ಅದನ್ನು ಕೃಷ್ಣದೇವರಾಯನು ಒರಿಸ್ಸಾ ಗೆದ್ದ ಜ್ಞಾಪಕಾರ್ಥವಾಗಿ ಕಟ್ಟಿಸಿದನು. ಈ ಜಗತಿಯ ಬುಡವು ಅನೇಕ ಸುಂದರವಾದ ಶಿಲ್ಪಕೃತಿಗಳಿಂದ ಅಲಂಕೃತವಾಗಿದೆ. ಹಜಾರರಾಮಸ್ವಾಮಿ ದೇವಸ್ಥಾನದ ಕಂಬಗಳು ಚೆನ್ನಾಗಿ ಕೆತ್ತಲ್ಪಟ್ಟ ವಿಗ್ರಹಗಳಿಂದ ಕೂಡಿವೆ. ಸೊಗಸಾಗಿ ಕೆತ್ತಲ್ಪಟ್ಟ 22 ಅಡಿ ಎತ್ತರದ ಕುಳಿತಿರುವ (ಉಗ್ರ) ನರಸಿಂಹವಿಗ್ರಹವು ಒಂದೇ ಬಂಡೆಯಿಂದ ಕೆತ್ತಲ್ಪಟ್ಟಿತು. ಅದರ ಭವ್ಯತೆ ಈಗಲೂ ಕುಂದಿಲ್ಲ. ವಿಠ್ಠಲಸ್ವಾಮಿಯ ದೇವಾಲಯವು ಅಪೂರ್ಣವಾಗಿಯೇ ಉಳಿಯಿತು, ಸೊಗಸಾದ ಈ ದೇವಾಲಯದ ಶಿಲ್ಪವನ್ನೂ ಕಂಬಗಳನ್ನೂ ಮಹಮ್ಮದೀಯರು ಹೊಡೆದು ಹಾಕಿದರು. ಕಲ್ಲಿನ ರಥವೇನೋ ಹಾಗೇ ಉಳಿದುಬಂದಿದೆ. ವಿಜಯನಗರದಲ್ಲಿ ಬಹಳ ಪುರಾತನವಾದುದೆಂದರೆ ಪಂಪಾಪತಿಯದು. ವಿಜಯನಗರಕ್ಕಿಂತ ಮುಂಚೆಯೇ ಇದ್ದುದಂತೆ. ಕೃಷ್ಣದೇವರಾಯನು ರಂಗಮಂಟಪವನ್ನು ಕೀರೀಟಧಾರಣೆ ಮಹೋತ್ಸವದ ಜ್ಞಾಪಕಾರ್ಥವಾಗಿ ಕಟ್ಟಿಸಿದನು. ಈ ದೇವಾಲಯವು ಕನ್ನಡ ನಾಡಿನ ಹಿರಿಮೆಯನ್ನು ಹಾಳು ಹಂಪೆಯಲ್ಲಿ ಈಗಲೂ ಎತ್ತಿ ತೋರಿಸುವಂತೆ ಕಾಣುತ್ತದೆ.

—ಡಾ. ಎಂ. ಶೇಶಾದ್ರಿ, ಮೈಸೂರು.

"ಕನ್ನಡ ನಾಡಿನಲ್ಲಿ ನೆಲೆಸಿ ನಿಂತ "ಭರತನಾಟ್ಯ" ಕರ್ನಾಟಕ ಸಂಗೀತದೊಡನೆ ಇತರ ಪ್ರಾಂತಗಳಿಗೂ ವ್ಯಾಪಿಸಿತು. ಕನ್ನಡ ನಾಡಿನಲ್ಲಿ ಮುಖ್ಯವಾಗಿ ಮೈಸೂರು ಕನ್ನಡ ಜಿಲ್ಲೆಗಳಲ್ಲಿ ಉಳಿದ ಭರತನಾಟ್ಯದಲ್ಲಿ ಅಭಿನಯ, ಮುದ್ರಾಭಿನಯ, ಮುಖಾಭಿನಯಗಳಿಗೆ ಪ್ರಮುಖ ಸ್ಥಾನ. ಭರತನಾಟ್ಯ ನಮ್ಮನಾಡಿನಲ್ಲಿ ತನ್ನ ಕಲಾರೂಪವನ್ನು ಕಳೆದುಕೊಂಡಿಲ್ಲವೆಂದು ಹೆಮ್ಮೆಯಿಂದ ಹೇಳಬಹುದು. ಮೈಸೂರು ಸಂಪ್ರದಾಯ ಹದಿನಾರಾಣೆ ಕನ್ನಡ ನೃತ್ಯ. ಇದರ ಪ್ರತಿಯೊಂದು ಅಂಗವಿನ್ಯಾಸದಲ್ಲೂ ಅಭಿನಯದಲ್ಲೂ ಕನ್ನಡತನ ಎದ್ದು ಕಾಣಿಯುತ್ತಲಿದೆ."

—ಶ್ರೀ ಎನ್. ಎಸ್. ಸ್ವಾಮಿ, ಮೈಸೂರು.

"ಸಂಗೀತವು ಹುಟ್ಟಿದುದು ಕರ್ನಾಟಕದಲ್ಲಿ, ಬೆಳೆದುದು ಅಯೋಧ್ಯೆಯಲ್ಲಿ ಅದರ ಸಾವು ಪಂಜಾಬಿನಲ್ಲಿ" ಎಂಬ ಒಂದು ನಾಣ್ನುಡಿ 12ನೇ ಶತಮಾನದಲ್ಲಿ ಆಳಿದ (ಚಾಲುಕ್ಯ) ಸೋಮೇಶ್ವರನು ಮಾಡಿದ ಅನೇಕ ಸುಧಾರಣೆಗಳ ಫಲವಾಗಿ ಸಂಗೀತವು ಕರ್ನಾಟಕದ ಹೆಸರನ್ನು ಪಡೆಯಿತು. ದಕ್ಷಿಣ ಭಾರತದ ಸಂಗೀತ ಕ್ಷೇತ್ರದಲ್ಲಿ ಲಕ್ಷಣ ಮತ್ತು ಲಕ್ಷ್ಯಗಳ ಉಪಯೋಗ ಕೃತಿಗಳೆಲ್ಲಾ ಕರ್ನಾಟಕ ದೇಶೀಯರಿಂದಲೇ ಅದುವು ಗಮನಾರ್ಹವಲ್ಲದೆ

ಇವರಲ್ಲಿ ಕರ್ಣಾಟಕ ಸಂಸ್ಕೃತಿಯು ಕೇಂದ್ರವಾಗಿದ್ದ ವಿಜಯನಗರದ ಪಾತ್ರವೂ ಸರ್ವವಿದಿತವಾದುದು. ನಾವು ಕರ್ಣಾಟಕದ ಲಕ್ಷಣಕಾರ ಶಾರ್ಙ್ಗದೇವ, ವಿದ್ಯಾರಣ್ಯ, ರಾಮಾಮಾತ್ಯ ಮುಂತಾದವರನ್ನೂ, ಇಂದಿನ ಸಜೀವಕಲೆಯ ಆದ್ಯಪ್ರವರ್ತಕರಾದ ಪುರಂದರದಾಸರನ್ನೂ ನೆನೆಯುತ್ತೇವೆ. ಕರ್ಣಾಟಕ ಸಂಗೀತದ ಸಜೀವ ಭಾಗವು ರೂಪಿತವಾದುದು ವಿಜಯನಗರದಲ್ಲಿ ‡ಭಾರತೀಯ ಸಂಗೀತ ಕ್ಷೇತ್ರದಲ್ಲಿ ಒಂದೇ ಪದ್ಧತಿಯಿದ್ದಾಗಲೂ, ಅದು ಕವಲೊಡೆದಾಗಲೂ ಅನೇಕ ಕರ್ಣಾಟಕ ವಿದ್ವನ್ಮಣಿಗಳು ಕಲೆಯ ಅಭಿವೃದ್ಧಿಗಾಗಿ ದುಡಿದಿದ್ದಾರೆ.”

—ಶ್ರೀ ಬಿ. ವಿ. ಕೃಷ್ಣಶಾಸ್ತ್ರಿಗಳು, ಮೈಸೂರು

‡ಸಂಗೀತದ ಮೂಲ ಲಕ್ಷಣ ಗ್ರಂಥವಾದ ‘ಬೃಹದ್ದೇಶಿ’ಯೂ ಇದೇ ಶತಮಾನದಲ್ಲಿ ಹಂಪೆಯಲ್ಲೇ ಮತಂಗನಿಂದ ರಚಿತವಾಯಿತು.

ಕನ್ನಡತಿಯರು :—“ರಾಜ್ಯ–ಸಾಮ್ರಾಜ್ಯಗಳನ್ನು ಕಟ್ಟಿ ಆಳಿದ ಕನ್ನಡ ಮಹಾಯೋಧರ ಪರಂಪರೆಯನ್ನು, ಹೊತ್ತುಬಂದಾಗ ಕನ್ನಡತಿಯರು ನಡಿಸಿಕೊಂಡು ಬಂದಿದ್ದಾರೆ. ‘ಅಜಿತೆ’ ಇದ್ದಾಳೆ. ‘ಅಕ್ಕಾದೇವಿ’ ಇದ್ದಾಳೆ. ‘ಮಾಳಲದೇವಿ’ ಇದ್ದಾಳೆ. ‘ಕರ್ನಾಡರಾಣಿ’ ಇದ್ದಾಳೆ. ರಾಜಾರಾಮನಿಗೆ ಆಶ್ರಯಕೊಟ್ಟು, ಮೊಗಲರನ್ನು ಮಣಿಸಿ ಇಂದಿನ ಮಹಾರಾಷ್ಟ್ರದ ಪುಣ್ಯಕಟ್ಟಿಕೊಂಡ ಕೆಳದಿಯ ‘ಚೆನ್ನಮ್ಮಾಜಿ’ ಇದ್ದಾಳೆ. ಶಿವಾಜಿ ಮಹಾರಾಜನನ್ನೇ ಎದುರಿಸಿ ಹೋರಾಡಿದ ವೀರ ಬೆಳವಡಿ ಮಲ್ಲಮ್ಮಾಜಿ ಇದ್ದಾಳೆ. ಬ್ರಿಟಿಷರೊಡನೆ ಹೋರಾಡಿ ಫ್ಯಾಕರೆಯನ್ನು ಚಂಡಾಡಿದ ಕಿತ್ತೂರ ಚನ್ನಮ್ಮರಾಣಿ ಇದ್ದಾಳೆ. ಚಿತ್ರದುರ್ಗದ ಕೋಟೆಯಂನ್ನು ರಕ್ಷಿಸಿದ ‘ಓಬಿ’ಯನ್ನೂ ನಾವು ನೆನೆಯಬೇಕು. ಜ್ಞಾನ ಜ್ಯೋತಿಯಿಂದ ಕನ್ನಡದ ಕತ್ತಲೆಯನ್ನು ಕಳೆದ ವಿಜಯಕ್ಕೆ ಉಭಯ ಭಾರತಿ, ಕಂತಿ, ಲೀಲಾವತಿ, ಗಂಗಾದೇವಿ ಮೊದಲಾದವರು ಕನ್ನಡತಿಯರು. ಹೊನ್ನಮ್ಮ ಅತ್ತಿಮಬ್ಬೆ, ದೇಕಬ್ಬೆ, ಸುಗ್ಗಲದೇವಿ, ಸುಗ್ಗತಿ, ನೀಲಲೋಚನೆ, ಗಂಗಾಂಬಿಕೆ ಇನ್ನೂ ಅಸಂಖ್ಯಾತ ನಾರೀರತ್ನಗಳೆಲ್ಲ ಕನ್ನಡತಿಯರೇ...

—ಶ್ರೀಮತಿ ಜಯದೇವಿತಾಯಿ ಲಿಗಾಡೆ,
ಸೊಲ್ಲಾಪುರ.

‘ಕನ್ನಡಿಗರು ಆತ್ಮಾಭಿಮುಖಿಗಳೂ ಆಗಬೇಕು. ಆ ಆತ್ಮವಿರುವದು ಹಂಪೆಯಲ್ಲಿ. ನಮ್ಮನ್ನು ತಾಳಿಬಾಳಿಸುವ ಭುವನೇಶ್ವರಿಯ ಶಕ್ತಿ, ಸಾಂಸ್ಕೃತಿಕ ಹಿರಿಮೆಯ ಹೃದಯ... ಇದು ಕೇವಲ ಭಾವನೆಯ ಮಾತಲ್ಲ....ಸಮಗ್ರ ಕರ್ನಾಟಕದ ಸಾರಿಗೆ ಸಂಚಾರ ಸಂಪರ್ಕ ಸಮಸ್ಯೆಯನ್ನು ಸೂಕ್ಷ್ಮವಾಗಿ ಅಭ್ಯಸಿಸುತ್ತಿರುವಾಗ ಹಂಪೆ (ಹೊಸಪೇಟೆ) ಹೀಗೆ ನಮ್ಮ ಹೆದ್ದಾರಿಗಳ ಕೇಂದ್ರವಾಗಬಲ್ಲದೆಂಬುದೂ, ಭೌಗೋಲಿಕವಾಗಿಯೂ ನಮ್ಮ ಹೊಸರಾಜ್ಯದ ಹೃದಯವಾಗಬಲ್ಲುದೆಂಬುದೂ ನನ್ನ ನಿದರ್ಶನಕ್ಕೆ ಬಂದಿದೆ. ಅಲ್ಲವೆ ಸೊಂಡೂರು ಹೊಸ

ಪೇಟೆಗಳ ಬಳಿ ಒಂದು ಹಿರಿ ಔದ್ಯೋಗಿಕ ಕೇಂದ್ರ ಸಂಭಾವ್ಯವಿರುವುದರಿಂದ ನಮ್ಮ ನಾಡಿನ ಸಾಂಸ್ಕೃತಿಕ ಭೌಗೋಲಿಕ ಔದ್ಯೋಗಿಕ ಹೃದಯ ಹಂಪೆಯ ಪರಿಸರವೇ ಏಕಾಗಬಾರದು'?

—ಶ್ರೀ ಕಲ್ಲೂರ ಕೃಷ್ಣಕುಮಾರ.

ಟಿಪ್ಪಣಿ:—ಮೇಲ್ಕಂಡ ಹನ್ನೆರಡೂ ಉಲ್ಲೇಖಗಳು 1956ರ ನವೆಂಬರ್ 1 ರಂದು ರಾಜ್ಯ ಸರಕಾರ ಪ್ರಕಟಿಸಿದ್ದ 'ಉತ್ಸವಗ್ರಂಥ' ದಿಂದ ಆಯ್ದುಕೊಂಡವು. ಅಂದಿನ ಇಂದಿನ ಆಶೆ—ಆಶಯೆಗಳ ಹಿಮ್ಮೇಳ ಒಂದೇ ಆಗಿರುವುದನ್ನು ಇವು ಸ್ಪಷ್ಟಪಡಿಸುತ್ತವೆ. ಉತ್ತರ ಕರ್ನಾಟಕದ ಒಬ್ಬ ಮಿತ್ರರು ನನ್ನನ್ನು ಕೇಳಿದರು—ಮೈಸೂರು ಎಂದೇ ಉಳಿದಿದ್ದರೆ ನಿಮ್ಮಗಂಟೇನು [ಹೋಗುತ್ತಿತ್ತು ? ಗಂಟು ನನ್ನೊಬ್ಬನದೇ ಅಲ್ಲ ಭಾರತದ್ದೇ ಹೋಗುತ್ತಿತ್ತು; ಮೇಲಿನಉದ್ದೇಶಗಳಲ್ಲೆಲ್ಲ ನಮ್ಮ ನಾಡು ಹೇಗೆ ಭಾರತದ ಜೀವಾಳವೇ ಆಗಿದೆಯೆಂಬುದು ಸ್ಪಷ್ಟವಾಗುತ್ತದೆ. ಈ ಉಲ್ಲೇಖಗಳಲ್ಲಿ ಎಲ್ಲೆಲ್ಲಿ 'ಕರ್ನಾಟಕ' ಎಂದು ಬಂದಿದೆಯೋ ಅಲ್ಲಲ್ಲಿ ಮೈಸೂರು ಎಂಬುದನ್ನು ಇಟ್ಟುನೋಡಿರಿ; ಉಲ್ಲೇಖಗಳು ಹೆಚ್ಚಾಗಿ ಹಳೆಯ ಮೈಸೂರಿನ ಹಿರಿಯರವೇ ; ಕರ್ನಾಟಕ ಎಂದು ಬಂದಲ್ಲೆಲ್ಲ 'ಕನ್ನಡ ನಾಡು' ಎಂಬದೂ ಕೂಡ ಹಾಳಿತವಾಗಿ ಹೊಂದ ಲಾರದೆಂಬದು ನಿಮ್ಮ ನಿದರ್ಶನಕ್ಕೆ ಬಾರದಿರದು ಎಂದೊಡನೆ ಆ ಮಿತ್ರರೂ 15–20 ಕಡೆಯಲ್ಲಿ ಪ್ರಯತ್ನಿಸಿ ನೋಡಿ, 'ಗಲ್ಲ ಗಲ್ಲ ಬಡಕೋತೀನಿ' ತಪ್ಪಾಯಿತು ; ಎಂದು [ತೆಪ್ಪಗಾದರು. ಯಾವದು 1–11–56 ರಂದೇ ಅನಿವಾರ್ಯವಾಗಿತ್ತೋ ಅದು ಕೊನೆಗೂ ಅನಿವಾರ್ಯವೇ ಆಯ್ತು. ನಿಜವಾಗಿ ನೋಡಿದರೆ ''ಕರುನಾಡು'' ಎಂಬರ್ಥದಲ್ಲಿ 'ಕರ್ನಾಟಕ' ಎಂಬುದೂ ಮೈಸೂರು ಭಾಗದ್ದೇ ಮೂಲಹೆಸರು ; ಅಖಂಡ ಕರ್ನಾಟಕಕ್ಕೆ ಮೈಸೂರು ಭಾಗ ಕೊಟ್ಟ ಅತ್ಯಂತ ಮಹತ್ವದ ಕೊಡುಗೆ ಅದು. ತಮಿಳರು ಮೊತ್ತ ಮೊದಲು ಆ ಭಾಗದ ಕನ್ನಡಿಗರೇ 'ಕರುನಾಡರ್' ಎಂದವರಲ್ಲವೇ ; ಹೊಯ ಳರ ಕಾಲದಲ್ಲಿ ತುಂಗಭದ್ರೆಯ ದಕ್ಷಿಣ ಭಾಗಕ್ಕೆ ಹೆಚ್ಚಾಗಿ 'ಕರ್ನಾಟಕ' ಎನ್ನುತ್ತಿದ್ದರು. 1850ರ ಹೊತ್ತಿಗೆ ಮೈಸೂರು ಭಾಗದಲ್ಲಿ ಕನ್ನಡದ ಪುನರುಜ್ಜೀವನದ ಏರುಬಂದಾಗ ಅಲ್ಲಿಯ ಸಾಹಿತ್ಯಕ—ಸಾಂಸ್ಕೃತಿಕ ಉದ್ಯಮಗಳು ಹೆಚ್ಚಾಗಿ 'ಕರ್ನಾಟಕ'ದ ಹೆಸರಲ್ಲೇ [ನಡೆದುವೆಂಬದೂ ಅತ್ಯಂತ ಗಮನಾರ್ಹ. ಮುಮ್ಮಡಿ ಕೃಷ್ಣರಾಜರು 'ಕರ್ನಾಟಕ' ಜನಪದ ಸಂಪದಧಿಷ್ಠಾನಭೂತರಾಗಿ ಕರ್ಣಾಟಕಭಾಷೆ' ಯನ್ನೆತ್ತಿದರು ; ಕೃಷ್ಣರಾಜಕೃತ ಕರ್ಣಾಕ ವಚನ ರಚನಾಭಿ ಧಾನ 'ಕರ್ನಾಟಕ' ಭಾಷಾವ್ಯಾಖ್ಯಾನ ಚಾಮರಾಜೇಂದ್ರ ಕರ್ಣಾಟಕ ನಾಟಕ ಸಭೆ ''ಕರ್ನಾಟಕ'' ನಾಟಕ ನಿರ್ಮಾಪಕದ 'ಕರ್ನಾಟಕ' ಭಾಷೋಜ್ಜೀವಿನೀ ಪಾಠಶಾಲೆ 'ಕರ್ನಾಟಕ' ನಾಗಾನಂದ, 'ಕರ್ನಾಟಕ' ಕಲ್ಪದ್ರುಮ 'ಕರ್ನಾಟಕ' ಭಾಷಾಕರಂ, 'ಕರ್ನಾಟಕ' ಪ್ರಕಾಶಿಕಾ 'ಕರ್ನಾಟಕ' ಪ್ರತಾಪ ಸಿಂಹ 'ಕರ್ನಾಟಕ ಗ್ರಂಥಮಾಲೆ, 'ಕರ್ನಾಟಕಾ' ಮಂಜರಿ 'ಕರ್ನಾಟಕ' ಕಾವ್ಯ ಕಲಾನಿಧಿ 'ಕರ್ನಾಟಕ' ಶಬ್ದಮಂಜರಿ, 'ಕರ್ನಾಟಕ' ಕವಿಚರಿತ್ರೆ 'ಕರ್ನಾಟಕ' ವೈದ್ಯಚಿಂತಾಮಣಿ 'ಕರ್ಣಾಟಕ' ವ್ಯಾಕರಣ ಕೃಷ್ಣರಾಜೇಂದ್ರ 'ಕರ್ನಾಟಕ' ಸಾಹಿತ್ಯ ಪರಿಷತ್ತು, ಪ್ರಬುದ್ಧ 'ಕರ್ಣಾಟಕ ಮೈಸೂರು ನಂಜನಗೂಡು, ಅದಿಗಳ ಅನೇಕ 'ಕರ್ನಾಟಕ' ಸಂಘೆಗಳು, ಎಪಿಗ್ರಾಫಿಕಾ 'ಕರ್ಣಾಟಕೆ' ಎಂದು ಮುಂತಾಗಿ 'ಕರ್ಣಾಟಕ 'ಕರ್ಣಾಟಕ 'ಕರ್ಣಾಟಕಾ' ನಾಮ ಸಂಕೀರ್ತನೆ ಹಳೇ ಮೈಸೂರಿನಲ್ಲೆಲ್ಲ [ವಾಡಿಕೆಯಾಗಿ [ದುಮದುಮಿಸಿದ್ದು, ಕರ್ಣ ಗಳಲ್ಲಿ ಆಟನೆ ಮಾಡಿದ್ದು, ಆ ನಂತರ ಕರ್ಣಾಟಕದ ಮಿಕ್ಕೆಲ್ಲ ಭಾಗಗಳಲ್ಲೂ ಪ್ರತಿಧ್ವನಿತವಾಯಿತಷ್ಟೇ ; ಹೀಗಾಗಿ ಮಿಕ್ಕ ಭಾಗಗಳಲ್ಲಿ 'ಕರ್ನಾಟಕ' ಹಬ್ಬಿಬೇರೂಡಿದ್ದಕ್ಕೆ ಮೈಸೂರು ಆದ್ಯಪ್ರವರ್ತಕತೆಯೇ' ಕಾರಣವಾಯಿತು. ಶತಮಾನದ ನಂತರ, ಈಗ ಮತ್ತೆ ಓಲ್ಡ್ ಮೈಸೂರು ಭಾಗದಲ್ಲೇ ಪ್ರಕಟವಾದುದು ಇನ್ನೂ ಸ್ವಾಗತಾರ್ಹ,

ಬಿಡಿ ಉಲ್ಲೇಖಗಳು

(೧) "ಆಗಿನ ಕಾಲದ (2 ನೇ ಶತಮಾನ) ಗ್ರೀಕರಲ್ಲಿ ಹಲವರಿಗೆ ಕನ್ನಡ ಭಾಷೆಯ ಪರಿಚಯ ಚೆನ್ನಾಗಿತ್ತು'.

'ಕ್ರಿಸ್ತಶಕದ 2ರಿಂದ 4ನೇ ಶತಮಾನದ ತನಕ ಹಿಂದುಸ್ತಾನದ ಕೀರ್ತಿಯನ್ನು ಪಾಶ್ಚಾತ್ಯ ದೇಶಗಳಿಗೆ ಹರಡುವದರಲ್ಲಿ ಕರ್ಣಾಟಕವು ದೊಡ್ಡ ಪಾತ್ರವಹಿಸಿತ್ತೆಂಬುದು ನಿರ್ವಿವಾದ.

'ಕ್ರಿಸ್ತಶಕದ 1097 ಕ್ಕೆ ಕರ್ಣಾಟಕದ ಗಂಗಮನೆತನದ ಅರಸು (ನಾನ್ಯದೇವ) ನೇಪಾಲದ ಒಂದು ರಾಜವಂಶದ ಸ್ಥಾಪಕನೇ ಆದ (ಅವನ ಮರಿಮಮವುಗನ ಮೊಮ್ಮಗ ಕಾಠಮಾಂಡು ಸ್ಥಾಪಿಸಿದ್ದು.)

'ಬಂಗಾಳದ ಸೇನವಂಶಸ್ಥರು ಕರ್ನಾಟಕದವರೆಂಬುದು ತಿಳಿದ ವಿಷಯ. ಸಮಂತ ಸೇನ (1050–75) 'ಕರ್ಣಾಟಕ ಶಿರೋದ್ಧಾರ' ಎಂದಿದೆ "6 ನೇ ಶತಮಾನದಿಂದ 12 ನೇ ಶತಮಾನದ ಕೊನೆಯವರೆಗೆ ಕರ್ಣಾಟಕ ಸಂಸ್ಕೃತಿಯು ಬಹುಮಟ್ಟಿಗೆ ಹಿಂದುಸ್ತಾನದ ಎಲ್ಲ ಪ್ರಾಂತಗಳ ಮೇಲೂ ತನ್ನ ಪ್ರಭಾವವನ್ನು ಬೀರಿ ಒಂದಲ್ಲ ಒಂದು ರೀತಿಯ ಉತ್ತಮ ಪರಿಣಾಮ ಉಂಟುಮಾಡಿದ್ದನ್ನು ಕಾಣುತ್ತೇವೆ.''

'ವಿಜಯನಗರ...ಹಿಂದೂ ಸಂಸ್ಕೃತಿಯ ಹಿರಿಮೆಗೂ ಸಂಪ್ರದಾಯಕ್ಕೂ (ಯೂರೋಪದಲ್ಲಿ) ಒಂದು ಸಂಕೇತವೆನಿಸಿತ್ತು.

'ಹಿಂದುಸ್ತಾನದಲ್ಲಿ ಸಂಸ್ಕೃತಿ ಸಂಪ್ರದಾಯಗಳಿಗೆ ಒಂದು ಮೂರ್ತಸ್ವರೂಪವು ತಾಳಿಕೆಯೂ ಬರುವಂತೆ ಮಾಡಿದ ಶ್ರೇಯಸ್ಸು ಇತರ ಎಲ್ಲ ಭಾಗಗಳಿಗಿತಂಲೂ ಹೆಚ್ಚಾಗಿ ಕರ್ಣಾಟಕಕ್ಕೇ ಸಲ್ಲಬೇಕು...ಕರ್ಣಾಟಕದ ಏಳಿಗೆಯನ್ನು ಬಿಟ್ಟು ಭಾರತದ ಉದ್ಧಾರವಾದೀತು ಎಂದು ತಿಳಿಯುವುದು ತೀರ ತಪ್ಪು.

ಡಾ. ಬಿ. ಎ. ಸಾಲೆತೊರೆ, ಮಂಗಳೂರು.—

(೨) 'ಏಕವೂ ಅಖಿಂಡವೂ ಆದ ಪ್ರಾಂತವಾಗಿದ್ದುಕೊಂಡು ಏಕ ಚೈತನ್ಯವಾಗಿ ತನ್ನ ಪೂರ್ವಾತ್ಮವನ್ನು ಪುನರುಜ್ಜೀವಿಸಿಬದುಕಲು ಕರ್ಣಾಟಕಕ್ಕೆ ಅತ್ಯಂತ ಹೆಚ್ಚಿನ ಹಕ್ಕುಗಳು ಇವೆ. ಏಕೀಕೃತ ಕರ್ಣಾಟಕ ಸ್ವತಂತ್ರ ಭಾರತದ ನಿಧಿಯಾಗಿರುವದಲ್ಲದೆ, ನಮ್ಮ ನಾಡಿನ ಸತ್ತ್ಯ ಮಹತ್ಸ್ವಗಳ ಬೆಳವಣಿಗೆಯನ್ನು ಕೈಸಿದ್ಧಿಮಾಡಿ ಕೊಡುವಂತಹದಾಗಿರುತ್ತದೆ. ಕರ್ನಾಟಕ ಇತಿಹಾಸ, ಕರ್ನಾಟಕ ಎಂದಿನಿಂದಲೂ ಸಂಸ್ಕೃತಿಯ ತೊಟ್ಟಿಲು. ದರ್ಮಗಳ ನೆಲವೀಡು. ಸಾಮ್ರಾಜ್ಯಗಳ ತಾಯಿ ಎಂಬುದನ್ನು ತೋರಿಸಿಕೊಟ್ಟಿದೆ;—

ಡಾ. ಬಿ. ಎ, ಸಾಲೆತೊರೆ.—

(೩) ಕರ್ನಾಟಕದಲ್ಲಿ ಮೊದಲು ಭಕ್ತಿಮಾರ್ಗವನ್ನು ಬೋಧಿಸಿದವರು ಬಸವಣ್ಣನವರು. ಪ್ರಥಮತಃ ವಿಷ್ಣು ಭಕ್ತಿಯನ್ನು ಕರ್ನಾಟಕದಲ್ಲಿ ಬೋಧಿಸಿದವರು ರಾಮಾನುಜಾಚಾರ್ಯರು. ಅದನ್ನು ಪ್ರಚಾರಕ್ಕೆ ತಂದವರು ಮಧ್ವಾಚಾರ್ಯರು.

ಪ್ರೋ. ಡಿ. ಕೆ. ಭೀಮಸೇನರಾವ್, ಹೈದ್ರಾಬಾದ್.

(ಬಸವೇಶ್ವರರು, ಕಬೀರ್, ನಾನುಕರೇ ಮುಂತಾದ ಭಾರತದ ಎಲ್ಲ ಸಂತರಿಗಿಂತಲೂ ಮೊದಲಿಗರು)

(೪) ' ಮಧ್ವಾಚಾರ್ಯರ ವೈಷ್ಣವ ಪಂಥ ಕರ್ನಾಟಕ ಮತ್ತು ಮಹಾರಾಷ್ಟ್ರ ಪ್ರಾಂತ್ಯಗಳಲ್ಲಿ ಹುಟ್ಟಿದ ಅನೇಕ ಭಕ್ತಿಪಂಥಗಳಿಗೆ ಮೂಲವಾಯಿತು.

—ಪ್ರೊ. ಎಂ. ಯಾಮುನಾಚಾರ್ಯ, ಮೈಸೂರು.

ನುಡಿ ಮುತ್ತುಗಳು

1. " ಕರ್ನಾಟಕ " ಎಂಬುದಕ್ಕೆ ನಾಡು, ನುಡಿ, ಜನತೆ ಎಂಬ ರೂಢವಾದ ಮೂರು ಅರ್ಥಗಳಿವೆ. ಇಂಥ ವ್ಯಾಪಕ ಅರ್ಥವುಳ್ಳ ರಾಜ್ಯ—ನಾವು ಭಾರತದಲ್ಲೇ ವಿರಳ.

2. ಸಂಸ್ಕೃತಿ—ನಾಗರಿಕತೆಗಳಲ್ಲಿ " ಕರ್ನಾಟಕ " ದಕ್ಷಿಣೋತ್ತರಗಳ ಸಮೀಕರಣದ ಸಮನ್ವಯದ ಸಂಕೇತವಾಗಿದೆ.

3. " ಕರ್ನಾಟಕ "ವು ತನ್ನ ಎತ್ತರ—ಹರವು (ಕರು—ನಾಡು), ಕಸುವಿನ ಎರೆಭೂಮಿ (ಕರಿನಾಡು), ಕಂಪಿನ ಮಲಯಾದ್ರಿ (ಕಂನಾಡು), ಹಾಗೂ ಲೋಕದ ಕಿವಿಯಲ್ಲಿ ನಿನದಿಸುವಿಕೆ (ಕರ್ಣೇ ಲಟಿತಿ) ಈ ಚತುರ್ಗುಣ ಚತುರ್ವಿಧ ಹೆಸರನ್ನು ಪಡೆದಿರುವ ನಮ್ಮ ಸದಭಿಮಾನಕ್ಕೆ ಸಕಾರಣವಾಗಿದೆ.

4. " ನುಡಿಗಿಂತ ನಾಡು ಹೆಚ್ಚು : ನಾಡಿಗಿಂತ ನಾಡವರು ಹೆಚ್ಚು ;

5. ಹೆರವರನ್ನು ವಿರೋಧಿಸುತ್ತ ಕೂಡುವದು ನಮ್ಮ ದುರ್ಬಲತೆಯ ಹೆಗ್ಗುರುತು ; ಬೀಜಮಾತೆಂದರೆ, ನಾವು ಪ್ರಭಾವಶಾಲಿಗಳಾಗಬೇಕು ; ಇಂದಿನ ಉಜ್ವಲತೆ ಹಿಂದಿನ ಉಜ್ವಲತೆಯೊಂದಿಗೆ ಬೆರೆದು ಮುಂದುವರಿಯಬೇಕು.

6. " ಉನ್ನತಾದರ್ಶಗಳ ಉತ್ತುವದು, ಬಿತ್ತುವದು, ಜನತೆಯನ್ನೆತ್ತುವದಂ " ಕರ್ನಾಟಕತ್ವ " ನುಡಿದಂತೆ ನಡೆಯುವುದು, ಹಿಂದಡಿಯನಿಡದಿಹುದು " ಕರ್ನಾಟಕತ್ವ ".

7. ನಾಡಮಹಿಮೆಯ ಜೊತೆಗೆ ನಾವು ಮಹಿಮೆಯೂ ಬೆರೆದು ಜಗವಿತ್ತ ಮಾನ್ಯತೆಯು " ಕರ್ನಾಟಕತ್ವ ".

8. " ಜಯ ಕರ್ನಾಟಕ " ನಮ್ಮ ಮೂಲ ಮಂತ್ರ.

—ಕರ್ನಾಟಕ ದರ್ಶನ ಎಂಬ ಕಿರುಹೊತ್ತಿಗೆಯಿಂದ.

ದಿ. ಆಲೂರು ವೆಂಕಟರಾಯರ ಮುಂತ್ರೋಕ್ತಿಗಳು (ಸಂಕಲನ)

ಕರ್ನಾಟಕಾಂತರ್ಯಾಮಿಯಾದ ಭಾರತೀದೇವಿಗೆ ನಮೋ

ಭಾರತಾಂತರ್ಯಾಮಿಯಾದ ಭೂದೇವಿಗೆ ನಮೋ

ಸರ್ವದೇಶವು ಪುಣ್ಯದೇಶವು. ಸರ್ವಕಾಲವು ಪರ್ವಕಾಲವು. ಸರ್ವಜೀವರು ದಾನ ಪಾತ್ರರು—ಮೂರು ಲೋಕದೊಳು.

ರಾಷ್ಟ್ರಕ್ಕೂ ವ್ಯಕ್ತಿಗಿದ್ದಂತೆ ದೇಹ-ಮನಸ್ಸು-ಆತ್ಮಗಳಿವೆ. ಅವೆಲ್ಲವುಗಳ ಪೂರ್ಣ ವಿಕಾಸವೇ ರಾಷ್ಟ್ರೀಯತ್ವದ ಧ್ಯೇಯ.

ನಮ್ಮ ರಾಷ್ಟ್ರ ಜಾತ್ಯತೀತ ರಾಷ್ಟ್ರ. ಇಲ್ಲಿ ಎಲ್ಲ ಧರ್ಮ, ಪಂಥ, ಮತ, ಜಾತಿ, ಜನಾಂಗ, ಪಕ್ಷ ಪಂಗಡಗಳಿಗೂ ಇಂಬು ಇದೆ. ಸಮಾನ ಹಕ್ಕುಗಳು ಅವೆ.

ಭಾರತೀಯ ಸಂಸ್ಕೃತಿಯ ಅಭಿಮಾನವನ್ನು ತಾಳದವ ರಾಷ್ಟ್ರೀಯನಲ್ಲ. ಒಂದು ದೇಶದಲ್ಲಿ ಹುಟ್ಟಿದ ಮಾತ್ರಕ್ಕೆ ರಾಷ್ಟ್ರೀಯನಾಗುವುದಿಲ್ಲ. ತದ್ವಿರುದ್ಧವಾಗಿ ಹಾಗೆ ಅಭಿಮಾನ ತಾಳಿದವ ಪರದೇಶದಲ್ಲಿ ವಾಸಿಸಿದರೂ ಭಾರತೀಯನೇ.

ಕರ್ನಾಟಕತ್ವ :—

ಭಾರತೀದೇವಿಯು ವಿಶ್ವದ ಉತ್ಸವ ಮೂರ್ತಿಯು. ಕರ್ನಾಟಕದೇವಿಯು ಭಾರತ ದೇವಿಯ ಉತ್ಸವಮೂರ್ತಿಯು.

ಕರ್ನಾಟಕವು ಭಾರತದ ಒಂದು ಸಜೀವಭಾಗ. ಭಾರತೀ ದೇವಿಯ ಮಗಳು ಕರ್ನಾಟಕ ದೇವಿ, ಭಾರತವು ದೇಹ, ಕರ್ನಾಟಕವು ಅವಯವ ಮಾತ್ರ.

ಕರ್ನಾಟಕ ಸಂಸ್ಕೃತಿ ಭಾರತೀಯ ಸಂಸ್ಕೃತಿಯನ್ನು ತನ್ನದೇ ಆದ ವಿಶಿಷ್ಟರೀತಿಯಲ್ಲಿ ಬೆಳಿಸಿ ಪೋಷಿಸುತ್ತ ಬಂದಿದೆ.

ಅದೇ ಕರ್ನಾಟಕದ ವಿಶಿಷ್ಟ ಸಂಸ್ಕೃತಿ, ಕರ್ನಾಟಕವು ಧರ್ಮ, ಇತಿಹಾಸ, ಭಾಷೆ, ಕಲೆ, ಆಚಾರ, ವಿಚಾರ, ಪರಂಪರೆ, ಮುಂತಾದವುಗಳಿಗೆ ವಿಶಿಷ್ಟ ಸಂಸ್ಕಾರಗಳನ್ನು ಕೊಟ್ಟು ತನ್ನದೇ ಆದ ಒಂದು ಬಣ್ಣದಿಂದ ಮೆರಗು ಕೊಟ್ಟಿದೆ. ಆ ವಿಶಿಷ್ಟ ಸಂಸ್ಕೃತಿಯೇ ' ಕರ್ನಾಟಕ ಸಂಸ್ಕೃತಿ '.

ಕರ್ನಾಟಕ ಸಂಸ್ಕೃತಿಯಲ್ಲಿ ಭಾರತ ಸಂಸ್ಕೃತಿ ಅಂತರ್ಯಾಮಿಯಾಗಿದೆ.

ಕರ್ನಾಟಕತ್ವವೆಂದರೆ ಕೇವಲ ದೇಶಾಭಿಮಾನವಲ್ಲ. ಕೇವಲ ಭಾಷಾಭಿಮಾನವಲ್ಲ. ಕೇವಲ ಇತಿಹಾಸಾಭಿಮಾನವಲ್ಲ; ಇವೆಲ್ಲವುಗಳನ್ನು ಮೀರಿದ ಇವೆಲ್ಲವುಗಳನ್ನು ಒಳಗೊಂಡ ಪರಿಶುದ್ಧ ಭಾವನೆ.

ಅಖಂಡ ಕರ್ನಾಟಕವು ಮೊದಲು ಹೃದಯದಲ್ಲಿ. ನಾನು ಮೊದಲು ಭಾರತೀಯನು. ಅನಂತರ ಕರ್ನಾಟಕನು ಎಂಬುದು ಸರಿಯಲ್ಲ. ಇವುಗಳಲ್ಲಿ ಮೊದಲು ಹಿಂದುಗಳಿಲ್ಲ. ಎರಡೂ ಭಾವನೆಗಳು ಪರಸ್ಪರ ವಿರುದ್ಧಗಳಲ್ಲ. ವ್ಯಷ್ಟಿತ್ವವೂ ಸಮಷ್ಟಿತ್ವವೂ ಏಕಸಮಯೂವ ಚ್ಛೇದದಿಂದ ಬೇಕು.

ಕರ್ನಾಟಕವು ಭಾರತವನ್ನು ಪರಕೀಯರ ಭಯಂಕರ ಕುತ್ತಿನಿಂದ ಮೊಟ್ಟ ಮೊದಲು ಬದುಕಿಸಿದ ದೇಶ. ಅದಕ್ಕಾಗಿ ಸರ್ವ ಭಾರತವು ಕರ್ನಾಟಕಕ್ಕೆ ಚಿರಋಣಿಯಾಗಿರಬೇಕು.

ಆಲೂರು ವೆಂಕಟರಾಯರ ಸಂದೇಶ :—

" ನಾನು ಈ ಶುಭ ಪ್ರಸಂಗದಲ್ಲಿ ಕೇವಲ ನನ್ನ ಆಯುಷ್ಯದ ರಗಳೆಯನ್ನೇ ಹೇಳಿದ್ದರೂ ಕರ್ನಾಟಕಸ್ಥರಿಗೆ ಪದೆ ಪದೆ ನನ್ನ ಸಂದೇಶವನ್ನು ಕೊಡುತ್ತ ಬಂದಿರುವುದನ್ನೇ ಈಗಲೂ ಕೊಡುತ್ತೇನೆ. ಅವೆಂದರೆ, ನನ್ನನ್ನು ಪೂರಾ ಮರೆಯಿರಿ, ಕರ್ನಾಟಕವನ್ನು ಸದಾ ಸ್ಮರಿಸಿರಿ " ಎಂದು.

" ಈಗ ಮೈಸೂರು ರಾಜ್ಯ " ವೆಂದು ತಪ್ಪಾಗಿ ಹೆಸರಿಡಲ್ಪಟ್ಟ ಕರ್ನಾಟಕ ರಾಜ್ಯವು ಆಯುಷ್ಮಂತವಾಗಲಿ, ಆರೋಗ್ಯವಂತವಾಗಲಿ ಮತ್ತು ಭಾಗ್ಯವಂತವಾಗಲಿ ಎಂದು ಹಿರಿಯ ನಾದ ನಾನು ಹರಿಸುತ್ತೇನೆ.

' ಕರ್ನಾಟಕ ' ವೆಂಬುದೊಂದು ಶಬ್ದದಲ್ಲಿ ಎಂಥ ಮಾಂತ್ರಿಕ ಶಕ್ತಿ ತುಂಬಿರುತ್ತದೆಂಬುದು ಆದೊಂದೇ ಶಬ್ದವು ಇಡೀ ಕನ್ನಡ ನಾಡನ್ನು ಹೊಡೆದೆಬ್ಬಿಸಿದೆಂಬುದರಿಂದ ಗೊತ್ತಾಗುತ್ತದೆ.

ಕನ್ನಡನಾಡಿನ ಸರ್ವತೋಮುಖವಾದ ಅಭ್ಯುದಯಕ್ಕೆ ನಾವು ಕನ್ನಡಿಗರೆಲ್ಲರೂ ಒಂದಾಗಿ ದುಡಿಯೋಣ. ಕನ್ನಡಮ್ಮನ ಪವಿತ್ರ ಸೇವೆಯಿಂದ ಪುನೀತರಾಗೋಣ.

—ಯಾರಂ ಎಷ್ಟೇ ಪ್ರಯತ್ನಮಾಡಿದರೂ "ಕರ್ನಾಟಕ" ಶಬ್ದವನ್ನು ರೂಢಿಯೊಳಗಿಂದ ಕಿತ್ತೊಹಾಕುವುದಂ ಯಾರಿಗೂ ಶಕ್ಯವಿಲ್ಲ. ಹಾಗೆ ಅದು ಹೋದರೆ ಅದು ಕನ್ನಡಿಗರ ವಂನೋದೌರ್ಬಲ್ಯದ ಪರಿಣಾಮವಾದೀತು.

—೧೯೦೩ ರಲ್ಲಿ ಲಾರ್ಡ್ ಕರ್ಝನರು ಮೊದಲಂ ಹಂಪಿಯನ್ನು ಸಂದರ್ಶಿಸಿ ಅದರ ವೈಭವಕ್ಕೆ ಬೆರಗುಗೊಂಡಂ ಅಲ್ಲಿಯ ಕಟ್ಟಡಗಳನ್ನು ಸಂರಕ್ಷಿಸುವುದಂ ಅವಶ್ಯವೆಂದು ಮನಗಂಡಂ ಹಳೆಯ ಕಟ್ಟಡಗಳ ಸಂರಕ್ಷಣ ಕಾಯದೆಯಂನ್ನು ಅದೇ ಆಗ ಪಾಸಂ ಮಾಡಿ ಕೊಂಡಿದ್ದರಂ. ನಾನು ಅಲ್ಲಿಗೆ ಮೊದಲು ಹೋದಾಗ ಆ ಹೂಳಿಹೋದ ಹಾಳಂ ಹಂಪೆಯಂನ್ನು ಅಗೆದಂ ತೆಗೆಯುವ ಕಾರ್ಯ ಅದೇ ಪ್ರಾರಂಭವಾಗಿತ್ತು.

—ಇದೇ ಕಾಲಕ್ಕೇನೇ ನಾನೂ ಗುತ್ತಲ ರಂಗಾಚಾರ್ಯರೂ ಸಂಸ್ಕೃತ ರಾಮಾಯಣವನ್ನು ತಕ್ಕೊಂಡು ಅವರಲ್ಲಿಯ ವರ್ಣನೆಗಳಿಗೂ .ಈಗಿದ್ದ ಸ್ಥಿತಿಗೂ ಹೋಲಿಸಿ ನೋಡಿದೆವು. ಈಗಲೂ ಋಷ್ಯಮೂಕ ಪರ್ವತ, ಮಾತಂಗ ಪರ್ವತ, ಆಂಜನೇಯ ಬೆಟ್ಟ, ಪಂಪಾ ಸರೋವರ, ವಾಲಿಣಷ್ಮ, ವಾಲಿ ಭಾಂಡಾರ, ಮುಂತಾದವುಗಳೂ—ಶಬರಿ ಗುಹೆಯೂ ಇವೆ ; ಇವೆಲ್ಲವುಗಳನ್ನು ನೋಡಿ ಆಶ್ಚರ್ಯಪಟ್ಟೆವು. ಆ ಶಬರಿ ಗುಹೆಯಲ್ಲಿ ನಾವು ಒಳಹೊಕ್ಕಾಗ ಒಬ್ಬ ಹರೆಯದ ಹೆಣ್ಣುಮಗಳು ಒಳಗಿನಿಂದ ,ಮುಂದೆಬಂದು, ,, ಹಂ ಶಬರಿ ಹೈ" ಅಂದು ನಕ್ಕಳು. ಅವಳು ಉತ್ತರ ಹಿಂದುಸ್ತಾನದಿಂದ ಕಿಷ್ಕಿಂಧಾ ನೋಡಲಿಕ್ಕೆ ಬಂದ ಒಬ್ಬ ವಿರಾಗಿಣಿ. ಉತ್ತರ ಹಿಂದುಸ್ಥಾನದಿಂದ ಇಂಥ ಸನ್ಯಾಸಿಗಳು ಕಿಷ್ಕಿಂಧೆಯನ್ನು ನೋಡಲಿಕ್ಕೆ ಬಂದೇ ಬರುತ್ತಿರುವರು. ನಮ್ಮ ಕನ್ನಡಿಗರು ಕಿಷ್ಕಿಂಧೆಯನ್ನು ನೋಡಲಿಕ್ಕೆ ಎಷ್ಟು ಜನರು ಹೋಗುತ್ತಿರುವರು ?

—೧೯೨೮ ನೆಯ ಇಸ್ವಿಯಲ್ಲಿ ನಾವು ಧಾರವಾಡದವರು ಶ್ರೀ ವಿದ್ಯಾರಣ್ಯರ ಉತ್ಸವವನ್ನು ಪ್ರಾರಂಭಿಸಿದೆವು. ಮುಂದೆ ಅದು ಇಡೀ ಕರ್ನಾಟಕದ ತುಂಬೆಲ್ಲ ಹಬ್ಬಿತು. ಸ್ವರ್ವ ಎಂಬ ಮಾಸ ಪತ್ರಿಕೆಯಲ್ಲಿ ಸುಪಾದಕರಿಂದ ಸೂಚಿತವಾದ ನಾಡಹಬ್ಬದ ಕಲ್ಪನೆಯೂ ಬಲು ಬೇಗನೆ ಕರ್ನಾಟಕದಲ್ಲೆಲ್ಲ ಹಬ್ಬಿತು. ಮತ್ತು ವಿಜಯನಗರ ಸಾಮ್ರಾಜ್ಯದ ಬಗ್ಗೆ ಅಭಿಮಾನವು ಕನ್ನಡಿಗರ ಹೃದಯದಲ್ಲಿ ತುಂಬಾ ಉಕ್ಕೇರಿತ್ತು.

—ಗೆಳೆಯರ ಗುಂಪಿನವರು ನವರಾತ್ರಿಯ ೯ ದಿನಗಳ ಸಾಂಸ್ಕೃತಿಕ ಉತ್ಸವದ ಅಂದರೆ ನಾಡಹಬ್ಬದ ಕಲ್ಪನೆ ತೆಗೆದಾಗ, ಅದನ್ನು ನಾವು ಹೂಡಿದೆವು ಇಂದಿಗೂ ಅದೇ ನಮ್ಮ ಕರ್ನಾಟಕದ ರಾಷ್ಟ್ರೀಯ ಉತ್ಸವವಾಗಿದೆ.

—ಶ್ರೀ ಡಿ. ವ್ಹಿ. ಗುಂಡಪ್ಪನವರು ೧೯೧೩ರಲ್ಲಿ "ಕರ್ನಾಟಕ" ಎಂಬ ಇಂಗ್ಲಿಷ್ ಪತ್ರಿಕೆಯನ್ನು ಹೊರಡಿಸಿದರು. ಆ ಪತ್ರಿಕೆಯ ಮೊದಲನೆಯ ವರ್ಷದ ಮೊದಲನೆಯ (೧-೪-೧೯೩೦) ಸಂಚಿಕೆಯಲ್ಲಿ ನಾನು ಕನ್ನಡಿಗರ ಏಕೀಕರಣ ಎಂಬ ಲೇಖನ ಬರೆದೆ.

—ಮುಖ್ಯಿತಃ ಶ್ರೀ ನಂಜುಂಡಯ್ಯನವರು ಸಹಾನೂಭೂತಿಯಿಂದಲೂ, ಶ್ರೀ ವಿಶ್ವೇಶ್ವರಯ್ಯ ನವರ ಹೆಸರಿನ ಬಲದಿಂದಲೂ ಕರ್ನಾಟಕ ಸಾಹಿತ್ಯ ಸಮ್ಮೇಲನವು (೧೯೧೫ರಲ್ಲಿ) ಬೆಂಗಳೂರಲ್ಲಿ ಕೂಡಿ ಕರ್ನಾಟಕ ಸಾಹಿತ್ಯ ಪರಿಷತ್ತು ಸ್ಥಾಪಿತವಾಯಿತು.

—ಆಗ ಮೈಸೂರ ತರುಣರಲ್ಲಿಯೂ ಜಾಗೃತಿಯುಂಟಾಯಿತು. ಶ್ರೀ ನಿಟ್ಟೂರು ಶ್ರೀನಿವಾಸರಾಯರು, ಶ್ರೀ ಸಂಪದ್ಗಿರಿರಾಯರು, ಶ್ರೀ ತಿರುಮಲೆತಾತಾಚಾರ್ಯರೇ ಮುಂತಾದವರು ಅಖಿಲ ಕರ್ನಾಟಕ ವಿಶ್ವವಿದ್ಯಾಲಯದ ಬಗ್ಗೆ ಮುಂಚೆ ಚರ್ಚೆ ನಡೆಯಿತು.

—ಬಳ್ಳಾರಿಯಲ್ಲಿ ಅಖಿಲಕರ್ನಾಟಕ ವಿಶ್ವವಿದ್ಯಾಲಯ ಸಂಸ್ಥೆ ಹೊರಟಿತು. ಅದಕೆ ನಾನೂ ಲಿಂಗಾಯಿತ ಹಾಯ್‌ಸ್ಕೂಲಿನ ಹೆಡ್‌ಮಾಸ್ತರರಾದ ಶ್ರೀ ಬಸವನಾಳರೂ ಕಾರ್ಯದರ್ಶಿಗಳು,

—'ಕರ್ನಾಟಕ' ವೆಂದರೆ ಕೇವಲ ನಾಡಲ್ಲಿ, ಕೇವಲ ಕನ್ನಡ ಭಾಷೆಯಲ್ಲಿ ಕೇವಲ ಅದರ ಇತಿಹಾಸದಲ್ಲಿ ಕೇವಲ ಅದರ ಶಿಲ್ಪ ಕಲೆಯಲ್ಲಿ, ಇವೆಲ್ಲವುಗಳ ಉನ್ನತಿಯನ್ನು ಮಾಡಿದ ಮಾತ್ರಕ್ಕೆ ಕರ್ನಾಟಕದ ಜಯವನ್ನು ಪೂರ್ಣವಾಗಿ ಮಾಡಿದಂತಾಗಲಿಲ್ಲ.

—ಜಯಕರ್ನಾಟಕದ ಅರ್ಥದ ಮರ್ಮವನ್ನರಿಯದೆ ಅಪವಿತ್ರವಾದ ಭಾವನೆಯಿಂದ ಅದನ್ನುಚ್ಚರಿಸಿದರೆ ಅನೇಕ ಅನರ್ಥಗಳುಂಟಾಗುವ ಸಂಭವವುಂಟು.

ಕರ್ನಾಟಕದ ಸೂಕ್ಷ್ಮ ಶರೀರ' ಅಂದರೆ ಕರ್ನಾಟದ ವಿಶಿಷ್ಟ ಸಂಸ್ಕೃತಿಯು ಜ್ಞಾನವಾದರೂ ನಮಗೆ ಎಲ್ಲ ಆಗಿರುವದು ?

ನಾವು ಕರ್ನಾಟಕದ ಸ್ವಧರ್ಮವನ್ನರಿಯಬೇಕಾದರೆ ಇವೆಲ್ಲವುಗಳ ಮರ್ಮವನ್ನರಿಯಬೇಕು. ಕನ್ನಡ ಭಾಷೆಯು ವೈಶಿಷ್ಟ್ಯವೇನು ? ಕರ್ನಾಟಕದ ಇತಿಹಾಸದ ಮರ್ಮವೇನು ? ಕರ್ನಾಟಕ ಲಲಿತ ಕಲೆಯ ಇಂಗಿತವೇನು ? ಕನ್ನಡ ಗಾಯನ ಕಲೆಯ ಪದ್ಧತಿಯೇನು ? ಕರ್ನಾಟಕ ದೊಳಗಿನ ಧರ್ಮಗಳ ರಹಸ್ಯವೇನು ? ಇವೆಲ್ಲವುಗಳನ್ನು ತಿಳಿದುಕೊಂಡು ಕಾರ್ಯಕ್ಕೆ ಪ್ರವೃತ್ತರಾದರೆ ಮಾತ್ರವೇ ಕರ್ನಾಟಕದ ನಿಜವಾದ ಉದ್ಧಾರವಾಗವುದು.

ಉತ್ಕಟವಾದ ಕರ್ನಾಟಕದ ಅಭಿಮಾನವು ತಾಮಸ ಜನರಲ್ಲಿ ಪರಪ್ರಾಂತಗಳ ವಿಷಯಕವಾದ'ದ್ವೇಷಬುದ್ಧಿಯನ್ನು ತಾಳುವ ಸಂಭವವುಂಟು.

' ಜಯ ಕರ್ನಾಟಕ'ದ ಬಗ್ಗೆ ಜನರಲ್ಲಿ ತಪ್ಪು ತಿಳುವಳಿಕೆಯುಂಟಾದರೆ ಮೇಲಿಂದ ಮೇಲೆ ಅದರ ಯಥಾರ್ಥ ಜ್ಞಾನವನ್ನು ಮಾಡಿಕೊಡುವುದೇ ನಮ್ಮ ಧರ್ಮವು.

ಕವನ ವಿಭಾಗ

।। मंगलाष्टकम् ।।

भीमा वेदवती सरस्वति च सीना पंचगंगाख्यिका,
मार्कांडेय मलापहारि च हरिद्रा दुग्धगंगांकिता ।
धर्माद्रोणि हिरण्यकेशि शिमसा श्री वेदगंगांबिका,
वाराही च घटप्रभा भगवती तुंगा च भद्रान्विता ।।

कावेरी कपिनी कुमुद्वति तथा कृष्णा च कालिन्दिनी,
मंजीरात्वघनाशिनी च वरदा हेमावती वारणा ।
सीता चंद्रगिरी शरावति तथा नेत्रावती शाल्मला,
कुर्वन्तोः सुजलां सदैव सुफलां कर्णाटभूमिम् इमाम् ।।

ಭಾಗ-೧ ಹಿರಿಯ ಕವಿಗಳ ಹಾರ್ಯೆಕೆಗಳು

1

ಯಾರಂಕುಶಮಿಟ್ಟೊಡಂ ನೆನವುದೆನ್ನ ಮನಂ ಬನವಾಸಿ ದೇಶಮಂ "

—ಪಂಪ

2

ಗಾಡಿಯ ಸೀಮೆ ಚೆಲ್ವೊಗವ ತಾಣಮುಲಂಪಿನ ಸಂತೆ ಪೆಂಪು ಸಾ—
ರ್ದಾಡುವ ಭೂಮಿ ಸೌಖ್ಯದೆಡೆ ಪುಣ್ಯದ ಗೊತ್ತು ವಿನೋದದಾಗರಂ ;
ಮೋಡಿಯ ಮುಂಟಪಂ ಸಿರಿಯ ಪೆರ್ಚುಗೆಗೊಳ್ಮನೆ ಮುಕ್ತಿಕಾಂತೆ ಕೈ
ಗೂಡುವ ಬೀಡು ಕನ್ನಡದ ನಾಡು ವಿರಾಜಿಪುದೆಂತು ಬಣ್ಣಿಪೆಂ ; "

—ಚಿಕ್ಕುಪಾಧ್ಯಾಯಂ.

3

ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾರನಾ
ನೆಲನಂ ಮತ್ತಿನ ಮಾನಿಸರ್ ಪೊಗಳ್ವೀನಂ ಬಲ್ಲರೆಂಬೊಂದು ಬ-
ಲ್ಲುಲಿಯಂ ನೆಟ್ಟನೆ ತಾಳ್ದಿ ಕನ್ನಡಮೆನಿಪ್ಪಾನಾಡು ಚೆಲ್ವಾಯ್ತು ಮೆ—
ಲ್ಲೆಲರಿಂ ಪೂತ ಕೊಳಂಗಳಿಂ ಕೆರೆಗಳಿಂ ಕಾಲೂರ್ಗಳಿಂ ಕೆಯ್ಗಳಿಂ "

— ಆಂಡಯ್ಯ.

ಭಾಗ ೧ರಲ್ಲಿ ಸ್ಥಳ ಸಂಕೋಚದಿಂದಾಗಿ ಹಿರಿಕವಿಗಳ ಹಾರ್ಯೆಕೆಯ ಭಾಗ ಗಳನಷ್ಟೇ ಮುಖ್ಯತಃ ಆಯ್ದುಕೊಂಡಿದೆ.

4

ಶ್ರೀಕಂಠವಾಣಿ

ಓ ತಾಯಿ, ಕರ್ನಾಟಕಾಂಬೆ ಜಯಂಹೇ ;
ಮಾತಾಯಿಂ ಮಾಡುವೆವು ನಮನ ನಿನಗೆ ;
ಚಿನ್ನ ರನ್ನದ ನಾಡೆ, ಚೆಲುವು ಚೆಲ್ಲುವ ನಾಡೆ, ನವ್ಯೋದೆಯ ಇನಿಯ ಹಾಡೇ,
ಸೊಗಸು, ನಯ, ಗಾಂಭೀರ್ಯ, ನನಸು, ದಯ, ಔದಾರ್ಯ, ತಾಳ್ಮೆಗಳ
ತಾಯಿನಾಡೇ,
ಕಾವೇರಿ ಕೃಷ್ಣೆಯರ, ಸಹ್ಯಾದ್ರಿ ಸಾಗರದ ಸಂಪದದ ತವರಿನೂರೇ,
ನಿನ್ನ ಸಿರಿಯಂನು ಸವಿದು ತಣಿಯದರು, ಕುಣಿಯದರು, ಮಣಿಯದವರಾರೇ ;
ಹಾಳು ಹಂಪೆಯ ನಡುವೆ ಹೊಸಹುಟ್ಟು ನಡಕಟ್ಟಿ ಭಕ್ತಿಯಲಿ ಸಲಲಿ ನಿನಗೆ,
ನಾಡು ಸಿಂಗರವಾಗೆ, ಬೀಡು ಹೆಬ್ಬಳಕಾಗೆ, ಅದೆ ಹಿರಿಯ ಹಬ್ಬ ನಮಗೆ ;
ಧರ್ಮ ಸತ್ಯಗಳಿಂದ, ಪ್ರೇಮ-ಶಾಂತಿಗಳಿಂದ, ಸ್ವಾತಂತ್ರ್ಯದಿಂದ ಮೊಳಗಿ,
ಸುಖದಿಂದ ಸೌಂದರ್ಯದಾನಂದಲಿ ಸರ್ವಸಮಂದೃಷ್ಟಿಯಿಂದ ಬೆಳಗಿ,
ಓ ತಾಯಿ ಕನ್ನಡದ ಹಿರಿ ತಾಯಿ, ನವ್ಯೋವ್ವ, ಸಾಮ್ರಾಜ್ಞಿಯಾಗಿ ಬಾಳೆ ;

—ಶ್ರೀ

5

ಕನ್ನಡಾಂಬೆ

ಕನ್ನಡದ ಹೊಲ-ಮಣ್ಣು ; ಎನಗೆ ನವನಿಧಿ ಹೊನ್ನು ;
ಕನ್ನಡದ ತಿಳಿಜಲವು ; ಸಂಧ್ಯೆಯ ಪಲ್ಲವವು ;

ಕನ್ನಡದ ಹೂ-ಗಿಡವು ; ಎನ್ನೊಡಲಿಗದೆ ತೊಡವು
ಕನ್ನಡದ ಪಶು-ಪಕ್ಷಿ ; ಚೆಲುವಿಗವೆ ಸಾಕ್ಷಿ ;

ಕನ್ನಡಿಗರತಿಶಯವು ; ಭುವನೇಶ್ವರಿಯ ದಯವು ;
ಕನ್ನಡಿಗರಿಗೆ ಜಯವು ; ಹಂಪೆಯಾಶ್ರಯವು ;

ಕನ್ನಡದ ಜನಕುಲವು ; ಎನ್ನ ತೋಳಿಗೆ ಬಲವು ;
ಕನ್ನಡಾಂಬೆಯ ವುಂಕ್ತಿ ; ರಾವಣನಂತೆ ಶಕ್ತಿ ; "

—ಬೆನಗಲ್ ರಾಮರಾವ್.

6

ಅಖಂಡ ಕರ್ನಾಟಕ

" ಅಖಂಡ ಕರ್ನಾಟಕ
ಸರಸ್ವತಿಯೆ ರಚಿಸಿದೊಂದು ರಾಜಕೀಯ ತ್ರೋಟಕ
ಮೆರೆಯುಲಾತ್ಮ–ಸಂಸ್ಕೃತಿ
ಬೆಳಗೆ ಜೀವ ದೀಧಿತಿ
ಪರಮಾತ್ಮನ ಚರಣದೀಪ್ತಿ
ಶರಣ ಹೃದಯಂಗಳಲಿ ಹೊತ್ತಿ
ಉಸಿರುಸಿರಿನ ಹಣತಿ ಬತ್ತಿ, ಉರಿಯಂಲೆಂದು ತಣ್ಣಗೆ ;
ಬಾಳ್—ಸೊಡರ ಗುಡಿಯನೆತ್ತಿ
ತನ್ನ ಮುಡಿಯ ಬಾನಿಗೆತ್ತಿ
ಸೊಗಸಲೆಂದು ರಸಸ್ಫೂರ್ತಿ, ಭಗವಂತನ ಕಣ್ಣಿಗೆ ;
ಹಾಡುತಿಹೆನು ಕಂಡ ನಾನು
ದಿಟ್ಟಿಗೇಡೊ ? ಹುಟ್ಟು ಕುರುಡೊ ?
ಬುದ್ಧಿ ಬರಡೊ ? ಬೇರೆ ಹುರುಡೊ ?
ಪೆಳ್ಳಗಣ್ಣ ಕಾಣೆ ನೀನು ;
ಹೇಳು, ತಪ್ಪು ನನ್ನದೇನು ?
ಕರ್ನಾಟಕ ಎಂಬುದೇನು, ಹೆಸರೆ ಬರಿಯ ಮಣ್ಣಿಗೇ ?
ಮಂತ್ರಕಣಾ ; ಶಕ್ತಿಕಣಾ ;
ತಾಯಿಕಣಾ ; ದೇವಿ ಕಣಾ ;
ಬೆಂಕಿ ಕಣಾ ; ಸಿಡಿಲು ಕಣಾ ;
ಕಾವ, ಕೊಲುವ, ಒಲವ, ಬಲವ,
ಪಡೆದ ಚಲದ ಚಂಡಿ ಕಣಾ, ಋಷಿಯು ಕಾಣ್ಬ ಕಣ್ಣಿಗೆ ;
ವಿರೋಧಿಗಾಸ್ಫೋಟಕ
ಕಂಡ ಕವಿಗಖಂಡ ದೇವಿ ಕಣಾ, ಕರ್ನಾಟಕ ।
ಸರಸ್ವತಿಯೇ ರಚಿಸಿದೊಂದು ರಾಜಕೀಯ ತ್ರೋಟಕ
ವಿರೋಧಿಗಾಸ್ಫೋಟಕ, ಅಖಂಡ ಕರ್ನಾಟಕ
ಅಲ್ಲೋ ನಾವು ನಿರ್ಮಿಪೊಂದು ರಾಜಕೀಯ ನಾಟಕ
ಅಖಂಡ ಕರ್ನಾಟಕ ! ಅಖಂಡ ಕರ್ನಾಟಕ ॥
ಜಯ್, ಜಯ್, ಜಯ್, ಅಖಂಡ ಕರ್ನಾಟಕ ॥ "

— ಕುವೆಂಪು.

7

ಒಂದೇ ಕರ್ನಾಟಕ

" ಒಂದೇ, ಒಂದೇ. ಒಂದೇ । ಕರ್ನಾಟಕ ಒಂದೇ ।
ಇಂದೇ, ಮುಂದೆ, ಎಂದೇ, ಕರ್ನಾಟಕ ಒಂದೇ ।
ಜಗದೇಕತೆಯಾಗುವದಿದೆ ಕರ್ನಾಟಕದಿಂದೆ.
ಇಲ್ಲಿಯ ಜನ–ಮನ ಭಾಷೆಯು, ಕನ್ನಡವದು ಒಂದೇ ।
ಒಂದೇ ಜನವೂ, ಒಂದೇ ಮನವೂ, ಕನ್ನಡಿಗರು ಎಂದೇ ।
ಕುಲವೊಂದೇ, ಸ್ಥಲವೊಂದೇ, ನೀತಿಯ ನೆಲೆಯೊಂದೇ ।
ಹೀಗೆನ್ನದ ಹೆರವರು ಇವರಿದ್ದರು ಒಂದೇ,
ಇರದಿದ್ದರು ಒಂದೇ ।
ಕನ್ನಡವೆಂದೂ ಒಪ್ಪದು ಕರ್ನಾಟಕ ನಿಂದೆ,
ಒಂದೇ, ಒಂದೇ, ಒಂದೇ । ಕರ್ನಾಟಕ ಒಂದೇ ॥
ಕನ್ನಡವೂ ಭಾರತವೂ ಜಗವೆಲ್ಲವು ಒಂದೇ ।
ತುಂಬಿದೆ ಕನ್ನಡ ಕುಲವನ್ನೊಪ್ಪುವ ಕುಲದಿಂದೇ ।
ಕನ್ನಡ ದೀಕ್ಷೆಯ ಹೊಂದಿದ ಪ್ರತಿಯೊಬ್ಬನು ಆರ್ಯ ।
ಕನ್ನಡ ತೇಜವು ಸಾರಲಿ ಕನ್ನಡಿಗರ ಕಾರ್ಯ,
ಕನ್ನಡ-ನಡೆ ಇರದವರೇ ಶೂದ್ರರು ಅನಿವಾರ್ಯ,
ಇಂತರಿಯದ ಹೆರವರು ಅವರಿದ್ದರು ಒಂದೇ,
ಇರದಿದ್ದರು ಒಂದೇ,
ಉಗ್ಗಡಿಸಿರಿ ಜಯ, ಜಯ, ಜಯ, ಜಯವೆಂದೇ
ಒಂದೇ, ಒಂದೇ, ಒಂದೇ, ಕರ್ನಾಟಕ ಒಂದೇ ॥ "

—ಅಂಬಿಕಾತನಯ ದತ್ತ.

8

ಕನ್ನಡಿಗರ ತಾಯಿ

" ತಾಯೆ ಬಾರ, ಪೊಗವ ತೋರ, ಕನ್ನಡಿಗರ ಮಾತೆಯೆ,
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ ।
ನಮ್ಮ ತಪ್ಪನೆನಿತೊ ತಾಳ್ವೆ,
ಅಕ್ಕರೆಯಿಂದೆಮ್ಮನಾಳ್ವೆ,
ನೀನೆ ಕಣಾ ನಮ್ಮ ಬಾಳ್ವೆ ।
ನಿನ್ನ ಮರೆಯಲಮ್ಮೆವು ।

ತನು ಕನ್ನಡ, ಮನ ಕನ್ನಡ, ಧನ ಕನ್ನಡವೆಮ್ಮವು।
ಕುಗ್ಗದಂತೆ ಹಿಗ್ಗಿಪಂತೆ ನಿನ್ನ ಹೆಸರ ಟೆಕ್ಕೆಯಂ।
ನೀಗದಂತೆ ಸಾಗಿಪಂತೆ ನಿನ್ನ ಗುಡಿಯ ಧಕ್ಕೆಯಂ,
ನಮ್ಮೆದೆಯಂ ತಾಯೆ ಬಲಿಸು,
ಎಲ್ಲರ ಬಾಯಲ್ಲಿ ನೆಲಸು,
ನಮ್ಮ ಮನಮನೊಂದೆ ಕಲಸು
ಇದನೊಂದನೆ ಕೋರುವೆ—
ನಿನ್ನ ಮೂರ್ತಿ ಜಗತ್ಕೀರ್ತಿ, ಎಂದಿಗೆಮಗೆ ತೋರುವೆ?''

—ಗೋವಿಂದ ಪೈ.

9

ಎಮ್ಮ — ನಾಡವರ್

'' ಉನ್ನತಿವೆತ್ತ ದೇಶಮಿದು ಭಾರತದೇಶದ ನೂರು ದೇಶದೋಳ್,
ಮನ್ನಣೆಯಿಂದ ಬಾಳ್ದ ನುಡಿಯೆಮ್ಮಯ ಕನ್ನಡಮಾತು ಭಾವಿಸಲ್,
ಚೆನ್ನಿಗರಾಯನೊಲ್ಮೆಯಲಿ ಸುಂದರ-ಕಾವ್ಯ ಸುಶಿಲ್ಪ ಚಿತ್ರಮುಂ,
ಮುನ್ನ ನೆಗಳ್ದರಾ ಸದಮಲ ಪ್ರತಿಭಾಂಚಿತರೆಮ್ಮ ನಾಡವರ್।''.

—ಶ್ರೀನಿವಾಸ.

10

ಕರ್ನಾಟಕದ ಹಿರಿಮೆ

"ಕಾವೇರಿಯಿಂದಮಾಗೋ—
ದಾವರಿವರಮಿರ್ದ ನಾಡದಾ ಕನ್ನಡದೊಳ್।
ಭಾವಿಸಿದ ಜನಪದಂ ವಸು—
ಧಾವಳಯ ವಿಲೀನ ವಿಶದ ವಿಷಯ ವಿಶೇಷಂ॥
ಅದರೊಳಗಂ ಕಿಸುವೊಳಲಾ
ವಿದಿತ ಮಹಾಕೊಪಣನಗರದಾ ಪುಲಿಗೆರೆಯಾ।
ಸದಭಿಸ್ತುತಮಪ್ಪೊಂಕುಂ
ದದ ನಡುವಣದ ನಾಡೆ ನಾಡೆ ಕನ್ನಡದ ತಿರುಳ್।
ಪದನರಿತು ನುಡಿಯಲುಂ ನುಡಿ-
ದುದನರಿದಾರಯಲುಮಾರ್ಪರಾ ನಾಡವರ್ಗಳ್।
ಚದುರರ್ ನಿಜದಿಂ ಕುರಿತೋ—
ದೆದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್॥

—ನೃಪತುಂಗ

11. ಚೆಲುವ ಕನ್ನಡ ನಾಡು

''ಉದಯವಾಗಲಿ ನಮ್ಮ ಚೆಲುವ ಕನ್ನಡನಾಡಂ।
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು॥
ಪಾವನೆಯರಾ-ಕೃಷ್ಣೆ ಭೀಮೆಯರ ತಾಯ್ನಾಡು.
ಕಾವೇರಿ ಗೋದೆಯರು ಮೈದೊಳೆವ ನಲುನಾಡು :
ಆವಗಂ ಬಗೆಯ ನಗಿಸುವ ಕಬ್ಬಿಗರ ಹಾಡು,
ಕಾವ ಗದುಗಿನ ವೀರನಾರಾಯಣನ ಬೀಡು ! ''

—ಹುಯಿಲ್ಗೋಳ್ ನಾರಾಯಣರಾಯರು

12. ರಕ್ಷಿಸು ಕರ್ನಾಟಕ ದೇವಿ

ರಕ್ಷಿಸು ಕರ್ನಾಟಕ ದೇವೀ, ಸಂರಕ್ಷಿಸು ಕರ್ನಾಟಕ ದೇವೀ !

ಮತಸಂಸ್ಥಾಪಕ ಸ್ಥಾಪಿತಪ್ರಾಣೆ ।
ಶಿಲ್ಪ-ಕಲಾ-ಮಂಡಪ ಸಂಸ್ಥಾನೆ !
ಕವಿ-ಜನ ಕೀರ್ತಿತ ಸುಯಶಸ್ತ್ರಾಣೆ ।
ಸಾಧು-ಸತ್ಕಥಾ ಭೇರಿಧ್ವಾನೆ ।
ಸ್ವೇತಿಹಾಸನೀ ರಾಜನ ರಾಣೀ ॥

—ಶಾಂತಕವಿ

13. ಹೊನ್ನ ಕನ್ನಡ ನಾಡು

'' ಹೊನ್ನ ಕನ್ನಡ ನಾಡಿನಲಿ ಸ್ವರ್ಣಯುಗವಿಳಿದು ಪೊಳಗೀತು
ವಿಜಯದಂದಂ ।
ಆದಕಾಗಿ ಬಾಳೋಣ, ಅದಕಾಗಿ ತಾಳೋಣ ಮಂಥನದ ನಂಜನಿಂದು ॥

—ವಿನಾಯಕ

14. ನಾಡು ಕಟ್ಟಿದವರು

'' ಕಾಲಭೂತದ ಕಠಿಣ ಕತ್ತಲೆಯ ಸೆರೆಯಲ್ಲಿ
ಸಿಲುಕಿರುವ ಪುಲಿಕೇಶಿ-ನೃಪತುಂಗ-ಬಲ್ಲಾಳ-ಹರಿಹರರೇ,
ಇಲ್ಲಿಯೇ ಉಸಿರಾಡಿ ನಾಡಕಟ್ಟಿದಾ
ಎಲ್ಲರೇ ಮರಳುವದು ನಿಮ್ಮ ಸಿರಿ ಸೂರೆಗೊಡಲು !''

—ರಸಿಕರಂಗ

15. ನಾಡತಾಯಿ

'' ಎಲ್ಲ ಕುಲದ ತಾಯಿ । ಮೆಲ್ನುಡಿಗಳ ತಾಯಿ
ಚೆಲ್ವ ನಡೆಯ ತಾಯಿ । ಸೌಭಾಗ್ಯದಾಯಿ—''

—ವೀ. ಸಿ.

ಭಾಗ-೨ ಉದಿತ ಕರ್ನಾಟಕ

(ಈ ವಿಭಾಗದಲ್ಲಿ 'ಉದಿತ ಕರ್ನಾಟಕ'ಪ, ೨೭-೭-೭೨ರ ನಂತರದ, ಹಾಗೂ ಮುಖ್ಯತಃ ಹಂಪೆಯಲ್ಲಿ ೧-೧೧-೭೩ರಂದು ನಡೆಯುವ 'ಕರ್ನಾಟಕೋತ್ಸವದ'ಕ್ಕೆ ಸಾಕ್ಷಾತ್ ಸಂಬಂಧಪಟ್ಟ ಕವನಗಳಿವೆ.)

೧. 'ಕರ್ನಾಟಕ' ಹೆಸರೊಸಗೆ

ನಂದಾದೀಪವ ಹೊತ್ತಿಸುತಿಹೆವು ಪಂಪಾತೀರದಲಿ ನಾವಿಂದು,
ಎಂದೂ ನಂದದ ಆನಂದದ ಕರ್ನಾಟಕ ಜ್ಯೋತಿ ಬೆಳಗಲೆಂದು,
ಹಿಂದೊಮ್ಮೆ ಇಲ್ಲಿ ಪ್ರಜ್ವಲಿಸಿದ ಕನ್ನಡ ಪ್ರಭೆಯಿಂ ಪುಳಕಗೊಂಡು,
ಮಂದೆಯೂ ಕರ್ನಾಟಕ ಪ್ರಜಾತಂತ್ರ ಪ್ರತಿಭೆ ಬೆಳೆಯಲೆಂದು, ॥ ೧ ॥

ಕನ್ನಡದ ಈ ತಿಳಿಜ್ಯೋತಿ ಪಥದಿ ಅವಿಂತೋತ್ಸಾಹದಿ ನಿಂದು,
ಕನ್ನಡದ ದಿವ್ಯಭವ್ಯ ಸಾಹಸ ಆದರ್ಶಗಳ ಅಳವಡಿಸಿಕೊಂಡು,
ಕನ್ನಡದ ಜನಬಲ ಸಕಲ ಸಂಪನ್ಮೂಲಗಳ ತಾವ್ ಬಳಸಿಕೊಂಡು,
ಕನ್ನಡದ ಸುಭದ್ರ ಸಂಸಂಪನ್ನ ಅವಂರೆಕರ್ನಾಟಕ ಕಟ್ಟಲೆಂದು, ॥ ೨ ॥

ಅತ್ತಿ ಆಲ ಅಶ್ವತ್ಥ ವೃಕ್ಷಗಳ ವಟಬನವೊಂದನಿಲ್ಲಿ ರಚಿಸಿ,
ಮಂತ್ತೆ ಬಿಲ್ವ ಬನ್ನಿ ತುಲಸಿ ಹಲಸು ಬೇವು ಮಾವುಗಳ ತುಂಬಿ,
ಸುತ್ತ ಸಾಲಂ ವಂರಗಳ ಪಂಚಮಟೀ ಹಸಿರಂವನ ಪೆಂರೆಯಿಸಿ,
ಬತ್ತಿ ಬಾಡದ ತೇಜ ಓಜಗಳ ಸಂಕೇತ ರಾಯಂಗಂಬ ನಿಲಿಸಿ, ॥ ೩ ॥

ಸ್ಮರಿಸುವೆವು ಕನ್ನಡದ ನೆಲ ಜಲಕಾಗಿ ಹೋರಾಡಿದವರನೆಲ್ಲ;
ಪೆಂರೆಸುವೆವು ಶಿಲ್ಪ ಸಂಗೀತ ಸಂಸ್ಕೃತಿ ಸಾಹಿತ್ಯಾಭಿಮಾನಿಗಳನೆಲ್ಲ;
ಸ್ಫುರಣಗೊಂಡು ಕರ್ನಾಟಕಾಭಿಧಾನದ ಈ ಶುಭ ಮುಹೂರ್ತದಂದಂ
ಉತ್ಸವ ಸಂಚಿಕೆಯೊಂದ ಹೊರತಂದಿಹೆವು ಅಳಿಲ ಸೇವೆ ಎಂದಂ. ॥ ೪ ॥

ಕಾವೇರಿ ಗೋದೆಯರು ಮೈದೊಳೆವ ನಾಡ ಪಿಡಿದ ಗ್ರಹಣ ಬಿಡಿಸಿ,
ತುಂಗಭದ್ರಾ ಕೇಂದ್ರ ಚೈತನ್ಯದಿಂ ಜನಮನಭಾವ ಪ್ರೇರೇಪಿಸಿ,
ಸರ್ವತೋಮುಂಖ ಕಲ್ಯಾಣಕೆ ದುಡಿವಂತೆ ಯಂವಜನದ ಮನವೊಲಿಸಿ,
ಕನ್ನಡಮ್ಮನು ಕರುಣಿಸಲಿ ಎಂದು ಸದಾ ಮುಂಗಲ ಹಾಡಿ ಹರಸಿ, ॥ ೫ ॥

ಆದರಕೊ,

ಶ್ರೀಕಂಠರಾಕಂಠ ಕರೆಯುತಿದೆ ಇನ್ನೂ!
ಮಂತ್ರೊಂದು ಪಣವುಂಟು; ಹತ್ತದರಬಿನ್ನ!
'ಹಾಳುಹಂಪೆಯಲವರು ಅಲೆಯುತಿಹರಿಂದೂ,'
"ಕನ್ನಡಾಂಬೆಯುಂ ಪಟ್ಟವೇರುವಳು" ಎಂದು!!

ಆ ಅಭೀಪ್ಸವು ಈಗ ಕರೆಯುತಿದೆ ನಿನ್ನ,
ಕನ್ನಡಿಗ ನಡಕಟ್ಟು ; ತೊಡಗಿಲ್ಲಿ ಮುನ್ನ !
ಕವಿಕುಲದ, ಕಲಿಕುಲದ ಆಸೆ ಪೂರೈಕೆ,
ಮೂಡು ; ಮಡಿ, ಸಲ್ಲಿಸುತ ತಾಯ ಹಾರೈಕೆ !

ಇನ್ನೇನು, ಹೊಸಹೊಸತು ಕ್ಷಿತಿಜಗಳ ದಾಟಿ
ಕನ್ನಡಿಗ ಅಡಿಯಿಡಲು ದೊರಕಿಹುದು ಧಾಟಿ ;
ಮನಸು ಮಾಡಿದರವ ತ್ರಿವಿಕ್ರಮನ ಹೋಲ್ವ !
ಹಿಂದಿಂದು ಮುಂದುಗಳ ತ್ರೈಲೋಕ್ಯ ಗೆಲ್ವ !!

೫. ರತ್ನ ಸಿಂಹಾಸನ

ರತ್ನ ಸಿಂಹಾಸನಾ ! ಕರ್ನಾಟಕದ ರತ್ನ ಸಿಂಹಾಸನಾ !
ಇದರಲ್ಲಿ ಇದೆ ನಮ್ಮ ಸಂಸ್ಕೃತಿಯ ಜೋಪಾಸನಾ !!

ಸಜ್ಜುಗೊಳ್ಳಲಿ ಮತ್ತೆ ಸಾಮ್ರಾಜ್ಞಿ ಬರುತಿಹಳು,
ಗುಪ್ತಗಾಮಿನಿ ಗಂಗೆ ಕಂಗೊಳಿಸುತಿಹಳು ;
ಜನತೆಯೂಕಾಂಕ್ಷೆಗಳ ಹೊನ್ನಹಡದಿಯನುಂ ಹಾಸಿ ;
ಬರುವ ಕಾಲದ ಭವ್ಯ ಬಿಡದಿಯಂನು ಬೀಸಿ !

ಶಾಲಿವಾಹನರಿದಕೆ ಹೊಳವ ಹಾಕಿದರು ;
ಕದಂಬಾದಿಗಳಿದಕೆ ತಳವ ಹಾಕಿದರು ;
ಚಾಲುಕ್ಯ ತ್ರೈಲೋಕ್ಯಮಲ್ಲರಿಕ್ಕೆಲಗಳೊಟ್ಟಿಸಿದರಂ,
ಆ ರಟ್ಟರತಿರಮ್ಯ ಚೌಕಟ್ಟು ಕಟ್ಟಿಸಿದರು ;

ಹೊಯ್ಸಳರು ಹೊನ್ನಿನೆರಕವ ಹೊಯ್ಯಿಸಿದರು,
ನರಪತಿಗಳಿದ ರತ್ನ ವೃಷ್ಟಿಯಲಿ ತೊಯ್ಯಿಸಿದರು ;
ಆದಕಂತೆ ಇದಂ ಆಯ್ತು ಕರ್ನಾಟರತ್ನಸಿಂಹಾಸನ,
ಸನ್ನುತ ವರೇಣ್ಯ ವಿದ್ಯಾರಣ್ಯರೆಸೆದ ಪುಣ್ಯಾಸನ !

ಕಾಲರಕ್ಕಸನಡಿಯಂ ವಿಧ್ವಂಸಶಕ್ತಿ ಉಕ್ಕೇರಿ ಬರುತಿರಲು,
ವಿಪ್ಲವದ ಆಹತಿಗೆ ನಾಡುಂ ನಾಡುಗಳೆಲ್ಲ ನಡುಗುಂತಿರಲು,
ಆಹತಿಗೆ ಆಹುತಿಯು ಆಗದೊಲು ಮೈಸೂರು ಇದ ಕಾಯಿತಂತೆ !!
ಯಾಕಂತೆ ? ಬೇಕಂತೆ ! ಕಟ್ಟಿಯಾ ಕಲ್ಲು ಕಟ್ಟಿಗೆ ಕೂಡಲಂತೆ !!

ಪ್ರಾಚೀನ ಸಾಮ್ರಾಜ್ಯವಾದವದು ಹೋಗಿಹುದು ಮಣ್ಣುಗೂಡಿ,
ಸ್ವಾತಂತ್ರ್ಯ–ಸಾಮ್ರಾಜ್ಯ ಜನರೆದೆಯಲೆದ್ದಿಹುದು ಒಡೆದುಮೂಡಿ ;
ಆ ಹೃದಯಂ–ಸಾಮ್ರಾಜ್ಯದಧಿದೇವಿ,—ನಮ್ಮ ಕನ್ನಡದ ರಾಣಿ !
ರತ್ನಸಿಂಹಾಸನವನೇರುವಳು,—ಇದುವೆ ಶ್ರೀಕಂಠವಾಣಿ !!

೬ ಕನ್ನಡ ತೀರ್ಥ

ಕನ್ನಡದ ನೆಲದಲ್ಲಿ ಒಡಮೂಡಿಹುದು ಭೂಮಿಯಂಗಣ್ಮಪುಣ್ಯದ ಪಾಕವು !
ಸದಭಿಮಾನದಿ ಬಗೆದು ನೋಡುವ ಕನ್ನಡಿಗನಿಗೆ ಇದುವೆ ಭೂ-ಸ್ವರ್ಲೋಕವು!!

ಮಂಗಲೆಯರೀ ತುಂಗಭದ್ರೆಯರಮೃತಪಾನವು ಇಹುದು ಅವಗೆ ನಿರಂತರಾ !
ಕಾ-ವೇರಿ ತಾ ಕಾವೇರಿದಾಗಲೆ ಇಲ್ಲದಾಯಿತಂ ಭೂಮಿ-ಸಾಗರಕಂತರಾ !!
ಆ ಪುರಾತನ ಕೃಷ್ಣೆ ಬಯಲಿನ ತೃಷ್ಣೆ ಹರಿಸಿದಳಿಲ್ಲಿ ಯುಗದಿಯಂಗಾಂತರಾ !
ಮಂಲೆ-ನಾಡ ತಂದಿಯಲಿ ಮೋಡಗಳು ಮಲೆದಾಡೆ ಆಯಿತು ನಭದಿ ಜಂತರಮಂತರಾ!

ಗೋದೆ ಕನ್ನಡ ನಾಡಸಂಗವ ನೆನೆದು ಈಗಲು ಹರಿಯಂವಳು ಬಳಸಾರಿಯೇ,
ಗಿರಿ-ಘಟ್ಟಗಳ ಪ್ರಭೆಯೆನಿಸಿ ಇಬ್ಬರು ಅವಳಿ-ನದಿ ಮೊರೆಯುವರು ಸರಿಮಿಗಿಲಾಗಿಯೇ,
ಭೀವಂ ಭೀಮಾನದಿಯಂ ನಾಡನಂ ಬಳಸಿ ಬಂದಳು ಕೃಷ್ಣೆಯನುಂ ಹುಡುಕಾಡುಂತ,
ಕ-ನ್ನಡದ ನೆಲದಲಿ ಹರಿದ ಪುಣ್ಯವೆ ಸಾಕಂ ಎಂಬಳು ಅವಳ ತೋಳ್ಗಳಲಾಡುಂತ !!

ಸಾಗರವ ಕಂಡಾಗ ಸಾಗರಬಿದ್ದು ಪೈಪೋಟಿಯಲಿ ಘಟ್ಟಕೆ ಸುಳಿದರು !
ಕಾ-ಲಿಂದಿ ಶಾಲ್ಮಲೆ ದಿಬ್ಬಣಕೆ ಹೊರಟಂತೆ, ಅಗೋ, ಸಹ್ಯಾದ್ರಿ ದಿಬ್ಬವನಿಳಿದರಂ !!
ಅತ್ತಲಾ ಆಘನಾಶಿನಿಯು ಹಾರಿಕೆಯ ನಡೆತದಿ ಬರಲಂ ಸಾಗರವೆದ್ದಿತು !
ಅತಿ-ಭರದಿ ಧುಮ್ಮಿಕ್ಕುವ ಶರಾವತಿಯೊಡನೆ ಅವಳನು ಎದುರುಗೊಳ್ಳುತ ನಿಂದಿತಂ !

ಮಂಗಳೂರಿಗೆ ಕಂಗಳಾರತಿ ಎತ್ತಿದಂತಿದೆ, ನೋಡು, ಈ ನೇತ್ರಾವತೀ,
ಅಗೊ-ಸುತ್ತಣದ ನಾಡೆಲ್ಲ ಹಸುರಲಿ ಮೆರೆಸುವಂತಿದೆ ವಾರಣಾ-ಹೇಮಾವತೀ !
ವೇದವತಿ, ವಾರಾಹಿ, ಸೀತಾ, ವರದೆ, ಮಂಜೀರಾ, ಹರಿದ್ರಾ, ದ್ರೋಣಿಯುಂ !
ಶಿಮ-ಸಾ ಸರಸ್ವತಿ, ಕಪಿಲೆ, ಮಾರ್ಕಾಂಡೇಯ, ಕುಮುದ, ಹಿರಣ್ಯಕೇಶಿಯು ಶ್ರೇಣಿಯುಂ!

ಬಗೆದುಂ ಭಾವಿಸಿ ನೋಡಲಿವು ಪರಿಪೂತ ತೀರ್ಥಗಳೆಲ್ಲಿ ಕನ್ನಡ ನಾಡಿಗೆ !
ಸುರ-ಗಂಗೆ ನಾನಾ ರೂಪದಲಿ ಬಂದಿಹಳೊ ಎಂಬಂತಿಹುದು ತನ್ನಯ ಪಾಡಿಗೆ !!

೭. ಆಲೂರವರು

ಯೂಕವ್ವ ಕಣ್ಣೀರಂ ಕರ್ನಾಟಕಾಂಬೆ ?
ಯೂತಕೀ ನಿರ್ವೇದ ಕರ್ನಾಟಕಾಂಬೆ ?

ನಿನ್ನುದಯದುತ್ಸಾಹ ನಾಡ ತುಂಬಿರಲುಂ,
ನೀನೇಕೆ ತಾಯಿ ಈಪರಿ ಮ್ಲಾನಮುಖಳು?
ಯಾವ ಗ್ಲಾನಿಯುಂ ಎದೆಯನಾವರಿಸುತಿಹುದು?
ಯಾವ ಕೊರತೆಯು ಬಗೆದುಂ ಕಣ್ತುಳುಕುತಿಹುದು?

ಅರಿತೆನರಿತೆನು, ತಾಯಿ, ಇಂದು ನಿನ್ನುದಯದೊಸಗೆಯಲಿ,
ಆ-ಪೆಂಕಟನ ಮೊಗವ ನೀನರಸುತಿಹೆ ತೊಳಲಿಬಳಲಿ ;
ಮೂರು ಕೋಟಿಯ ಜನದ ಮಮತೆಯನು ಮೀರಿದವನವನಂ !
ಆತನೊಬ್ಬನ ಅವರ ಬಡಿದೆಚ್ಚರಿಸಿ ತೀರಿದವನು !

ಆಲೂರರಳಿದಿಲ್ಲ ; ಅಳಿಯುವಂಥವರಲ್ಲ, ತಾಯಿ, ಕೇಳಮ್ಮ,
ನಾಡ ನಾಡಿಯನಳೆದುಂ ಎಳೆದಂಥ ಗಾರುಡಿಗರವರಾದರಮ್ಮ ;
ಕನ್ನಡಿಗನೊಬ್ಬೊಬ್ಬನೆದೆಯಲ್ಲಿ ಅವರುಂ ಅವತರಿಸಿಹರು ಸಂದು,
ಕಂಣಾರೆ ಕಂಡಿಹೆನು; ಅದಕಂತೆ ನಿನ್ನೊಸಗೆ ಒದಗಿಹುದು ಇಂದು !

ಆಲೂರರೊಂದು ಹಿರಿ-ಆಲದಂತೂರಿಹರು ಜನದ ಮನಮನದಿ,
ನಾಡೆಲ್ಲಕೂ ಅವರು ನರಳಾಗಿ ಬಾಳುವರು, ನಿತ್ಯ ಹಿರಿತನದಿ ;
ಅದನರಿತು ನಗುಂ ತಾಯಿ, ನಿನ್ನ ನಗೆ ಈಗಾಗಲೌ ಸೊಗದ ಒರತೆ !
ನಿನ್ನ ಪಂಕ್ಕಳಲವರುಂ ಇಹರೆಂದು ಬಗೆ, ತಾಯಿ ; ಇನ್ನಾವ ಕೊರತೆ ?

ಈ ಮಕ್ಕಳಲಿ ನಿನ್ನ ಮೂರುತಿಯ ನಿಲಿಸವ್ವ, ಕನ್ನಡಿತಿ, ತಾಯೀ,
ಆಗ ಪ್ರತಿ ಕನ್ನಡಿಗ ಆಲೂರರಂತಾಗೆ, ನೀನವರ ಕಾಯಿ !
ಅಂತಾದ ತುಂಗ-ಭದ್ರೆಯರಂಥ ಮಿಲನದಲಿ ಜನತೆ ಬಾಳಿರಲಿ !
ಉತ್ತುಂಗ ಶಿಖರಗಳ ಮೀರುವ ದಶಾಂಗುಲದಿ ಅವರು ಬೆಳೆದಿರಲಿ !!

(೧೮-೮-೭೩)

೮. ವಿಜಯ ಧ್ವಜ

ಏರುತಿದೆ, ಹಾರುತಿದೆ ಕರ್ನಾಟಕದ ವಿಜಯಧ್ವಜವು !
ಭಾರತದ ಸಂಸ್ಕೃತಿಯ ಸಂಕೇತ-ಕೇತನವು ನಿಜವು !!

ಶಿರಬಾಗುವೆವು ನಾವು ಇದರ ಗೌರವಕೆ ವೈಭವಕೆ !
ಅಚಲಪ್ರತಿಜ್ಞೆ ಮಾಡುವೆವಿದರ ಮೂಸ ಕಾಯಲಿಕೆ !!

ಇದು ಕನ್ನಡಮ್ಮನೆಮಗಿತ್ತ ಆಶೀರ್ವಾದ ಛತ್ರ !
ಕನ್ನಡದ ಕುಲದ ಹಿರಿ-ಹಾರೈಕೆಗಳ ತಾಮ್ರಪತ್ರ !!

ನಮಗೆಲ್ಲ ಇದು ಸನಾತನ ಪರಂಪರೆಯ ಪ್ರತಿಬಿಂಬ !
ಇದರಲ್ಲಿ ನಾಡಿಗರ ಜಾಜ್ವಲ್ಯ ಭವಿತವ್ಯ ಕಾಂಬ !!

ಇದು ನಮ್ಮ ಸ್ವಾಭಿಮಾನದ ನವ್ಯ ದಿವ್ಯ ಪ್ರತೀಕ !
ಇದಕೆ ಸದಾ ಪದಲಿ ಸಲಿಸುವೆವು ನಮನಗಳನೇಕ !!

(೧೫-೮-೭೩)

೯. ಕರ್ನಾಟಕ ಧರ್ಮ

ಕನ್ನಡ ಮಾತೆಯ ನೆರೆನಂಬುವದೇ ಕರ್ನಾಟಕ-ಧರ್ಮ !
ಅವಳಲಿ ಎಲ್ಲವ ಕಾಂಬುದೆ ಭುವನೇಶ್ವರಿ ತತ್ತ್ವದ ಮರ್ಮ !!

೧೦. ನಿನಗಾಗಿ ತಾಯೀ

ಎಲ್ಲ ನಿನಗಾಗಿ ತಾಯೀ ! ನಿನಗಾಗಿ ತಾಯೀ !!

ಬೆಳೆದದ್ದು ಬದುಂಕಿದ್ದು, ನಿನಗಾಗಿ ತಾಯೀ !
ದುಡಿಯುವದು, ಮುಡಿಯಂವದು, ನಿನಗಾಗಿ ತಾಯೀ !
ಈ ವಿದ್ಯೆ-ಬುದ್ಧಿಗಳಂ, ನಿನಗಾಗಿ ತಾಯೀ !
ಈ ಗಳಿಕೆ-ಉಳಿಕೆಗಳು, ನಿನಗಾಗಿ ತಾಯೀ !
ಹಾರೈಕೆ-ಹರಕೆಗಳಂ, ನಿನಗಾಗಿ ತಾಯೀ !
ಭಾವೋರ್ಮಿಗಳ ಸೆಳವು, ನಿನಗಾಗಿ ತಾಯೀ !
ಹೃತ್ಕಂಪದುತ್ಕಂಪ ನಿನಗಾಗಿ ತಾಯೀ !
ಈ ಭಕ್ತಿ, ಅನುರಕ್ತಿ ನಿನಗಾಗಿ ತಾಯೀ !

ಅಂತೆ ನೀ ನನಗಾಗಿ ಬಂದಿರುವೆ, ತಾಯೀ!
ಅಯುಷ್ಯಕನಿವಾರ್ಯ ತಂದಿರುವೆ, ತಾಯೀ!
ಪಾಂಡವರ ಹನ್ನೆರಡು, ಕಿರಿದಾಯ್ತು, ತಾಯೀ!
ರಾಘವನ ಹದಿನಾಲ್ಕು, ಪರವಿಲ್ಲ, ತಾಯೀ!
ನಾನೂರಂ ವರ್ಷಗಳು ಸಾಲದೆನೆ, ತಾಯೀ!
ವಂತ್ತೆ ಹದಿನೇಳರಾ ವನವಾಸ, ತಾಯೀ!
ನಿನ್ನ ಪುನರುತ್ಥಾನಕೀಗಿಹುದು, ತಾಯೀ!
ಉದ್ಯಾಪನೆಯ ಸಮಾರಾಧನೆಯಂ, ತಾಯೀ!

ಕನ್ನಡದ ಜನತೆಯದ ನಡೆಸೀತು, ತಾಯೀ!
ಮಕ್ಕಳೆಂಬುವ ಹಂಗಂ ಅವರಿಗಿರೆ, ತಾಯೀ!
ನಿನ್ನ ದುಃಖಿಕ್ಕಿಂಬು ಅವರಲಿರೆ, ತಾಯೀ!
ಕನ್ನಡದ ಜನತೆಯದ ನಡೆಸೀತು, ತಾಯೀ!

ನಾನಂತು ಕಂಣೀರ ತಂದಿರುವೆ, ತಾಯೀ!
ಎದೆಯಲ್ಲಿ ಮುತ್ತೇನಂ ಉಳಿದಿಲ್ಲ, ತಾಯೀ!
ನಿನ್ನ ಅಭಿಷೇಕಕ್ಕೆ ಸಾಲದಿರೆ, ತಾಯೀ!
ಕಾಲ್ತೊಳೆಯುವಷ್ಟಂತು ತುಂಬಿಹುದು, ತಾಯೀ!

೨೨-೮-೭೩ —ಕಲ್ಲೂರ ಕೃಷ್ಣಕುಮಾರ

ಭಾಗ-೩ ಹಂಪೆಗಾಗಿ ಹಾಡುಗಳು

ನಮೋ ಕರ್ನಾಟಕಾಂಬೆ

ಓ ದೇವಿ ಕರ್ನಾಟಕಾಂಬಿ!
ನೀಪುಣ್ಯ ಪುರಾತನೆ!
ಭಾರತಿಯು ಸುತೆ ಭವ್ಯಜೀವನದಾತೆ;
ನಮಿಸುವೆವು ನಾವು ನಿನ್ನಡಿಗೆ ಮಾತೆ!
ನಿನ್ನ ಪುತ್ರರ ಹೃದಯದಲಿ ತುಂಬಿದ್ದ
ಹಿರಿಯಾಸೆ ಇಂದು ಫಲಿಸಿತೌ ತಾಯಿ!
ಶತ-ಶತಮಾನಗಳ ಹಿರಿಯ ಕನಸು
ಇಂದು ನನಸಾಗಿಹುದು ಹೇ ದೇವಿ!
ನಮ್ಮ ಹರ್ಷಕೆ ಮಿಗಿಲುಂಟೆ ತಾಯಿ!
ನಮ್ಮ ಭಾಗ್ಯಕೆಯಿನ್ನು ಸರಿಯುಂಟೆ ದೇವಿ,
ತಾಯಕೃಪೆ ನಮಗೆಲ್ಲ ದೊರಕಿತೌ ಇಂದು
ನಾವೀಗ ಮಣಿವೆವು ನಿನ್ನ ಪದಕವಂಲಕಿಂದು.
ಕನ್ನಡದ ನೆಲವ ಒಂದುಗೂಡಿಸಲು
ದುಡಿದಿಹರು ಹಲವಾರು ನೂರು ಜನರು
ಇಂದು ಎಲ್ಲಿದ್ದರೂ ಆ ಧರ್ಮಾತ್ಮರಿಗೆ
ಇದೋ ಭಕ್ತಿಪೂರ್ವಕ ನಮ್ಮ ನಮನ
ನಾಡನುಡಿ ಸೇವೆಯನು ಆರ್ತಿಯಿಂ ಗೈವೆವು
ಕನ್ನಡಾಂಬೆಯು ಹೆಸರ ಇಳೆಯೊಳಗೆ ಬೆಳಗುವೆವು
ನಾಡನುಡಿ ಸೇವೆಯಿಂ ಮುಂಕ್ತಿಯಂ ಕಾಣ್ವೆವು
ಕನ್ನಡದ ಸೇವೆಗೆ ಬದ್ಧ ಕಂಕಣರಿಹೆವು!
ನಮೋ ಓ! ಕರ್ನಾಟಕಾಂಬೆ!
ಹರಸು ನಮ್ಮನು ನೀ ಜಗದಂಬೆ!

--- ಕೃಪಾನಂದ

ಕನ್ನಡದ ದೀಪ

ಹೊತ್ತಿತೋ ಹೊತ್ತಿತು
ಕನ್ನಡದ ದೀಪ
ಮುಂಗಿಯಿತೋ ಮುಂಗಿಯಿತು
ಶತಮಾನಗಳ ಶಾಪ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!
ಕಣ್ಣು ಕುಕ್ಕಿಸುವಂತೆ
ದೇದೀಪ್ಯಮಾನ
ಹರ್ಷವುಕ್ಕಿಸುವಂತೆ
ಶೋಭಾಯಮಾನ
ಕನ್ನಡದ ಮನೆಮನೆಗೆ
ಜ್ಯೋತಿರ್ನಿಧಾನ
ಕನ್ನಡದ ಪ್ರಾಣ
ಕನ್ನಡದ ಮಾನ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!
ಕನ್ನಡದ ನನ್ನಿಗರ
ಕಣ್ಣ ಬರ ಹಿಂಗೆ
ಕನ್ನಡದ ಮಣ್ಣು ಸಹ
ಹೊರೆಯೇರಿ ಹೊಂಗೆ
ದಡಸೂಸಿ ಹರಿದಾಡೆ
ಆ ಕೃಷ್ಣ ತುಂಗೆ
ವೇದಾಂತರಂಗೆ
ಶುಭ-ಮಂಗಲಾಂಗೆ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!
ಬೆಳಕಿನಲೆ ಜಳಕವನು
ಮಾಡೆ ಭೂಗಗನ
ತಮಜಾರೆ ಮಗಮಗಿಸೆ
ಮಲಯ ಮಧುಪವನ
ನಭಕೇರೆ ಕನ್ನಡದ
ಮಂಗಳಧ್ವಾನ
ಕನ್ನಡದ ಪ್ರಾಣ
ಕನ್ನಡ ನಿಧಾನ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!
ಉರಿವವರು ಬೇಕಿನ್ನು
ಇದರೆಣ್ಣೆಯಾಗಿ
ಸುಡುವವರು ಬೇಕಿನ್ನು
ನಿಡುಬತ್ತಿಯಾಗಿ
ಧರಿಸುವರು ಬೇಕಿದನು
ಸಿರಿಹಣತೆಯಾಗಿ
ನನ್ನಿಯುಸಿರಾಗಿ
ಧರ್ಮಕ್ಕೆ ಬಾಗಿ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!
ಚಿರಕಾಲ ಬೆಳಗಲೀ
ಕನ್ನಡದ ದೀಪ
ಜನಕೆಲ್ಲ ಬೆಳಕಾಗಿ
ಪುಣ್ಯಪ್ರದೀಪ
ಭಾರತಕೆ ಬಲವಾಗಿ
ಭವ್ಯಪ್ರದೀಪ
ಕಳೆಯುತ್ತ ತಾಪ
ಬೆಳೆಸುತ್ತ ಸೈಪ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!

—ಸಿದ್ದಯ್ಯ ಪುರಾಣಿಕ

೧೧. ಹಂಪೆಯ ನೋಂಟ

ಹಂಪೆಯ ಹಾಳಿನ ಪ್ರತಿಯೊಂದು,
ಅವಶೇಷದ ತುಣುಕಗಳಿಂದು,
ಕನ್ನಡಿಗರ ಗಂಡಸುತನದ
ಬಲಿ ಕೇಳುತ್ತಿವೆ ಶಾಶ್ವತದ !

ಇಲ್ಲಿಯ ಪ್ರತಿದಿನದುದಯಗಳು,
ಕನ್ನಡಿಗನ ಕರೆಯುತ್ತಿಹವು ;
ಸತ್ತ್ವ-ಪರೀಕ್ಷೆಗೆ ಬಾರೆಂದು !
ಪೌರುಷವಿದ್ದರೆ ತೋರೆಂದು !!

ಹಂಪೆಯ ಕಲ್ಬಂಡೆಗಳೆಲ್ಲಾ
ಕನ್ನಡಿಗನ ಅಭಿಮಾನವನು,
ಚುಚ್ಚಿ, ಚುಚ್ಚಿ, ಮೂದಲಿಸುವವು,
ಹನುಮನ ಸಂತತಿ ನೀನೆಂದು !

ಇಲ್ಲಿಯ ವಾತಾವರಣದೊಳು
ರಾಘವಾಂಕ-ಹರಿಹರರುಸಿರು,
ಬೆರೆದು ನೆರೆದು ತಪಿಸುತ್ತಿಹುದು,
ಕನ್ನಡಿಗರ ಶಪಿಸುತ್ತಿಹುದು !

ಇಲ್ಲಿಯ ಗುಡಿ-ಗೋಪುರಗಳಲಿ
ಹುಂತಾತ್ಮರೆದೆ ನಿಶ್ವಾಸದಲಿ
ಸುಂಟರಗಾಳಿಯೆ ಬೀಸುತಿವೆ !
ಹಾಹಾಕಾರಗಳೀಸುತಿವೆ !!

ಕನ್ನಡಿಗರ ಕವಿಗಂಹರದಿ,
ಅವರ ಹೃದಯದಾರಣ್ಯದಲಿ,
ಆ ನಿಶ್ವಾಸದ ದಾವಾಗ್ನಿ,
ಪ್ರಜ್ವಲಿಸಲು ಅದೆ ಪ್ರಳಯಾಗ್ನಿ !

ಇಂದಿನ ಕನ್ನಡಿಗರ ಕಲ್-ತನವು
ವಿದ್ಯಾರಣ್ಯರ ನಾಚಿಸುತಿಹುದು !
ತುಂಗಭದ್ರ ತಬ್ಬಿಬ್ಬಾಗಿಹಳು !
ಭುವನೇಶ್ವರಿ ಅರೆ ಮಬ್ಬಾಗಿಹಳು !!

ಹಂಪೆಯಂ ಶಿಖರವ ಮುಟ್ಟುವ ತನಕ,
ಕನ್ನಡಿಗನಿಗಿದೆ ಹಂಗಿನ ನರಕ !
ಆದರುದ್ಧಾರಕೆ ಅವನೇ ಶಕ್ತ
ಕುದಿದರೆ ಅಂತಃಕರಣದ ರಕ್ತ !!

ಹಂಪೆಯ ಧಿಕ್‌ಧಿಕ್ಕಾರದ ಕೂಗಂ
ಊರೂರಿಗಂ ಪ್ರತಿ ಮನೆವಂನೆಯೊಳಗಂ,
ಕೇಳಲುಂ, ಹುಟ್ಟುವ ಹೊಸ ಕೂಸುಗಳುಂ,
ನಿಚ್ಚಳ ಕನ್ನಡತನ ಕಲಿತಾವು !

ಆಗ ಮತ್ತೆ ಈ ಹಂಪೆಯಂ ಕೊಂಪಿ !
ಪೂರೈಸುವದದು ತನ್ನಯಂ ನೋಂಪಿ !!
ಗಗನದ ಎತ್ತರಕೇರುವುದಾಗ !
ಇಂದಿನ ಕೃತಘ್ನರ ಕ್ಷಮಿಸುವುದಾಗ !!

೨೦-೧-೭೩

೧೨ ಆವ ಮನುಜನಲ್ಲ !

ಹಂಪೆಯನಂ ಕಂಣ್ಣಾರೆ ಕಾಣದವ ಕನ್ನಡಿಗನಲ್ಲಾ !
ಕೊಂಪೆಯಂಲಿ ಭ್ರಮೆಗೊಂಡು ತಿರುಗದವ ಕನ್ನಡಿಗನಲ್ಲಾ !
ಅದಕಾಗಿ ಮನದಲ್ಲಿ ಮರುಗದವ ಕನ್ನಡಿಗನಲ್ಲಾ !
ಮರುಗಿ ದಿನದಿನವು ಎದೆ ಕರಗದವ ಕನ್ನಡಿಗನಲ್ಲಾ !

ಈ ಕೊಂಪೆ ಕನ್ನಡದ ಭೀಷ್ಮ–ಶರ–ಪಂಜರಾ
ಇದರ ಮಹತಿಯನರಿಯದರ ಬಾಳು ಬಂಜರಾ
ನವ್ಮ ಆವಂಂಷ್ಮವಿದ್ದಷ್ಟು ದಿನದಿನಗಳಿಲ್ಲಾ
ತರ್ಪಣವ ನೀಡಿದರಂ ಹುತರ ರಿಣ ತೀರದಲ್ಲಾ

ಎತ್ತರದ ಈ ನಾಡನಿವಲೆಲ್ಲ ಎತ್ತಿ ಕಟ್ಟಿದರು,
ಯಶದ ಮುಂಗಿಲಿನ ತುದಿಯಂ ಮುತ್ತಿ ಮುಟ್ಟಿದರು;
ಈ ನೆಲದಿ ಅಡಗಿಹುದಂ ಅವರಮಿತ ಶಕ್ತಿ,
ಸ್ವರ್ಗಂಗೆಯನು ಒಲಿಸಿ ತರಬಲ್ಲ ಭಕ್ತಿ !

ಹಿರಿಯ ಸಂಸ್ಕೃತಿಯೊಂದಂ ಇಲ್ಲಿ ಉದಯಿಸಿತು
ರಾಮ-ಹನುಮರ ಸಖ್ಯವನ್ನು ಕುದುರಿಸಿತು
ಉತ್ತರದ ದಕ್ಷಿಣದ ಧ್ರುವಗಳಿಗೆ ಚುಂಬಕವಿದಾಯ್ತು
ರಾಷ್ಟ್ರ-ಭಾಷೆ ಕ್ಯತೆಯಂ ಸಂಭ್ರಮದ ಬಿಂಬಕವಿದಾಯ್ತು

ಹಲವು ಮಾನಸಪುತ್ರರವತಾರಗೈದರಿಲಿ ಇಲ್ಲಿ ।
ಕೆಲ ಜಿರಂಜೀವಿಗಳಂ ನಲಿದೊಲಿದಂ ನೆಲೆಸಿಹರಿದಿಲ್ಲಿ
ಅವರ 'ವಾರಸ' ವನ್ನು ನೆನೆಯುದವ ಕನ್ನಡಿಗನಲ್ಲಾ ।
ಅವರ ಪದಹತಿಯಲ್ಲಿ ನಡೆಯುದವ ಮನುಜನೇ ಅಲ್ಲಾ ॥

೧೧—೮—೧೯೭೩

೧೩ ಕನ್ನಡಿಗ। ಬರಿ ಡಿಗಾಡಿಗಾ!

ಹಂಪೆಯಂ ಹೃದಯದಿ ನೆನೆಯಂದ ಕನ್ನಡಿಗಾ ।
ಹೊಂಪುಳಿಯಂಲಿ ತನಂ ತೊನೆಯದ ಕನ್ನಡಿಗಾ
ಹಂಪೆಗೆ ಧಾವಿಸಿ ಬಾರದ ಕನ್ನಡಿಗಾ ।
ಕಂಣೀರ್ ಕಾಣಿಕೆ ತಾರದ ಕನ್ನಡಿಗಾ ।
ಅಂಥವನಲ್ಲವೊ ಕನ್ನಡಿಗಾ । ಅವ ಬರಿ ಡಿಗಾಡಿಗಾ ॥

ಹಂಪೆಯಂ ಹವಣಿಸಿ ನೋಡದ ಕನ್ನಡಿಗಾ ।
ಕಂಡೂ ಎದೆ ಮಿಡಂಕಾಡದ ಕನ್ನಡಿಗಾ ।
ಶ್ರದ್ಧಾಂಜಲಿಗಳ ಕೊಡದಿಹ ಕನ್ನಡಿಗಾ ।
ಉದ್ಧಾರಕೆ ಪಣ ತೊಡದಿಹ ಕನ್ನಡಿಗಾ ।
ಅಂಥವನಲ್ಲವೊ ಕನ್ನಡಿಗಾ। ಅವ ಬರಿ ಡಿಗಾಡಿಗಾ ॥

ಗತವೈಭವವನಂ ನೆನೆಸದ ಕನ್ನಡಿಗಾ ।
ಕರುಳಲಿ ಎಲಿ ಎಲಿ ಎನಿಸದ ಕನ್ನಡಿಗಾ ।
ಎನಿಸಿಯು ನೆತ್ತರ ಕಾಯದ ಕನ್ನಡಿಗಾ ।
ತನುಮನಧನ ಆದಕೀಯದ ಕನ್ನಡಿಗಾ ।
ಅಂಥವನಲ್ಲವೊ ಕನ್ನಡಿಗಾ । ಅವ ಬರಿ ಡಿಗಾಡಿಗಾ ॥

ಕಲ್ಬಂಡೆಯು ನಿಶ್ವಾಸವ ಕೇಳದ ಕನ್ನಡಿಗಾ ।
ಭಣಭಣ ರಣರಣದಳುಕನು ತಾಳದ ಕನ್ನಡಿಗಾ ।
ವಿದ್ಯಾರಣ್ಯರ ಮೌನಪನರಿಯದ ಕನ್ನಡಿಗಾ ।
ಭುವನೇಶ್ವರಿಯಿಂಗಿತವನು ತಿಳಿಯದ ಕನ್ನಡಿಗಾ ।
ಅಂಥವನೆಂದಿಗೂ ಅಲ್ಲವೊ ಕನ್ನಡಿಗಾ । ಅವ ಬರಿ ಡಿಗಾ ಡಿಗಾ ॥

ಸೋಲಿನ ಅವಹೇಳನಕೂ ಮಾಣದ ಕನ್ನಡಿಗಾ ।
ನಾಡಿನ ಭೂತಭವಿಷ್ಯವ ಕಾಣದ ಕನ್ನಡಿಗಾ ।
ಪುನರಪಿ ವಿಜಯದ ಕನಸನು ಕಟ್ಟದ ಕನ್ನಡಿಗಾ ।
ಹೊಸಹುಟ್ಟಿನ ಹಿರಿ–ಕಳಸವ ಮುಟ್ಟದ ಕನ್ನಡಿಗಾ ।
ಅಂಥವನೆಂದಿಗೂ ಅಲ್ಲವೊ ಕನ್ನಡಿಗಾ । ಅವ ಬರಿ ಡಿಗಾ ಡಿಗಾ ॥

೧೧—೮—೧೯೭೩

೧೪. ಜ್ಯೋತಿ–ವಂಶವೃಕ್ಷ—ಕೀರ್ತಿಸ್ತಂಭ

ಹಂಪೆಯಲಿ ಹೊತ್ತಿಸಿದ ಕರ್ನಾಟಕ ಜ್ಯೋತಿ ತೊಳಗಿ,
ಸಾಸಿರದ ಸಂಖ್ಯೆಯಲಿ ನಾಡ ತುದಿತುದಿಗಳಲಿ ಬೆಳಗಿ,
ಒಂದರಲಿ ಹಲವಾಗಿ ಹಲಪೆಲ್ಲ ಒಂದೆಂದು ತೋರಿ,
ಕನ್ನಡಿಗರೆದೆಯಲ್ಲಿ ನೆಲೆಸಿರಲಿ ಅಭಿಮಾನ ಬೀರಿ ।

೦ ೦ ೦

ಇದು ನಮ್ಮ ಕರ್ನಾಟಕದ ಕೋಟಿ ಕುಲ-ವಂಶವೃಕ್ಷ ।
ಇದರಲ್ಲಿ ಸಂದಿಹವು ನಮ್ಮಾಸೆ ಲಕ್ಷೋಪಲಕ್ಷ ॥
ಇದರ ಜತನಕ್ಕಾಗಿ ಕನ್ನಡಿಗರಿರಬೇಕು ದಕ್ಷ ।
ವರ್ಷಾನುವರ್ಷಗಳ ಅಭಿವೃದ್ಧಿ ಆಗಲಪರೋಕ್ಷ ।

೦ ೦ ೦

ನಾಡೆತ್ತರದ ಎತ್ತುಗಡೆಗಳಿಗೆ ಇಂದು ಪ್ರಾರಂಭ ।
ಯಾವದಕು ಬಾಗದಿಹ ಸಂಕಲ್ಪಗಳ ಸಮಾರಂಭ ।
ಇದು ನಾಡ ಮೇಲ್ಮೈಯನು ತೆರೆದಿಟ್ಟ ನಿತ್ಯದಾಲಂಬ ।
ಬರುವ ಶತಮಾನಗಳು ಸ್ವಾಗತಿಪ ಸತ್ಕೀರ್ತಿ-ಸ್ತಂಭ ।

೦ ೦ ೦

ಇವು ನಮ್ಮ ತಾಯ್ನಾಡ ಬಾಳಬೇರುಗಳ ಸಂಕೇತ ।
ನಮ್ಮ ಪ್ರಜ್ಞಾಬಲದ ಒರೆಗಲ್ಲು ನಿತ್ಯ-ಸನ್ನಿಹಿತ ।
ಈನಾಡ ಮೂಲೆ ಮೂಲೆಗಳ ಕನ್ನಡಿಗ ಪ್ರತಿಯೊಬ್ಬ ।
ಇಪರ ನೆರಳಲಿ ಬಾಳ ಬೆಳಗಿಸುವುದೇ ನಾಡ-ಹಬ್ಬ ॥

೬—೧೦—೭೩
(ವಿಜಯಂದಕಮಿ)

—ಕೃಷ್ಣಕುಮಾರ.

ಹಂಪೆಯಲ್ಲೊಂದು ದಿನ

ಪಾಳುಬಿದ್ದ ಕೋಟೆಕೊತ್ತಲ
ಎತ್ತನೋಡಿದರತ್ತ ಕಾಣುವುದಂ-
ಕೈಕಾಲು ಕೆತ್ತಿ ಬಿಸುಟಿಂತ
ಮೂರ್ತಿ,
ಆದರೂ ಅತಿ ಚೆಲುವು
ಅದಕುಂಟು—ಹಂಪೆ
ಕೊಂಪೆಯಾದರೂ, ಅತಿಶಯ ಉಂಟು
ನೆಲಸೊರಗಿದರೂ
ಅದಕುಂಟು ಹಳೆ ಇತಿಹಾಸ
ಅಳಿಸಲಾರದ ನೆನಹುಗಳ
ಸುರವ್ಮತೆಯು. ಬಂಡೆಮ್ಮನಂ
ಮುಂಕುರುವುದು.

ನೆಲಬತ್ತುವ ಮುನ್ನ
ಕರ್ನಾಟಕದ ಐಸಿರಿಯಂ
ಬೆಂಬರಿದುವೆ ಇಲ್ಲಿ
ಈ ಹಂಪೆಯಲ್ಲಿ
ಹಾದಿ ಬೀದಿಯಲೆಲ್ಲ
ಹೊನ್ನು - ಹೊತ್ತನೆಲ
ನೆಲಸಮವಾದರೂ
ವಿರೂಪಾಕ್ಷನೊಬ್ಬ ಸಾಕ್ಷಿಭೂತನಾಗಿ
ನಿಂತಿಹನಿಲ್ಲಿ
ಈ ಹಂಪೆಯಲ್ಲಿ
ಕನ್ನಡದ ಕುಲತಿಲಕ
ಕರ್ನಾಟಕದೊಡೆಯ.

—ಪ್ರೇಮಾಭಟ್

ಕನ್ನಡದ ಆಲ

(1—1—1928)

೧

ಬನ್ನಿರಿ, ಬನ್ನಿರಿ, ಕನ್ನಡಗೆಳೆಯರೆ ಕನ್ನಡ ಮಾತೆಯ ಪೂಜಿಸುವಾ,
ಚೆನ್ನುಡಿಯಿಂದಲಿ ಪಾಡುತೆ ಆಲದ ನೆರಳಲಿ ನಿಂದು ವಿರಾಜಿಸುವ,
ಆಲದ ಬೀಜವು ಮೊಳೆತಿಹುದು,
ಬಿಳಲನು ಬಿಡುತಲಿ ಬರುತಿಹುದು,
ಕಾಡನು ಮೆಟ್ಟುತೆ, ನಾಡನು ಬಳಸುತೆ-ಬೆಳೆವುದು ಕನ್ನಡ ವೃಕ್ಷವಿದು,
—ನಿಲುವುದು ಕನ್ನಡವೃಕ್ಷವಿದು।

೨

ಪಂಪನ, ರನ್ನನ, ಲಕ್ಷ್ಮೀಶನ, ಕವಿಮುದ್ದಣ, ಹೊನ್ನಮನೋಲುವೆಯಲಿ,
ಸಂಪದದೇಳ್ಗೆಯನೆಸಗುತೆ ಆಲದ ನೆರಳಲಿ ಕುಣಿಕುಣಿದಾಡುತಲಿ
ಪೂರ್ವಿಕರಂದವ ಕಾಣುತಲಿ—
ನಮ್ಮೆಯ ಜಾಣ್ಮೆಯ ತೋರುತಲಿ,
ಬಸವಳಿಯದೆ ಕಬ್ಬಿಗರನು ಕೂಡಿಸಿ, ಬೆಳೆವುದು ಕನ್ನಡ ವೃಕ್ಷವಿದು,
—ನಿಲುವುದು ಕನ್ನಡ ವೃಕ್ಷವಿದು।

೩

ಕವಿಗಳು, ಚಿತ್ರಿಕ, ಶಿಲ್ಪಿಗಳೆಲ್ಲರು, ಬಲ್ಲಿದ ಬಡವರು ಸಹಿತಾಗಿ,
ಜವದೊಳು ಕನ್ನಡ ನುಡಿ ತಿಲಕವ ನಿಜಫಣೆಯಲಿ ಧರಿಸುತೆ ಗೆಲುವಾಗಿ,
ಬಡವರಿಗನ್ನವ ನೀಡುತಲಿ,
ವಿದ್ಯಾದಾನವ ಗೈಯ್ಯುತಲಿ,
ಜಡತೆಯ ಬಿಡುತಲಿ, ಸ್ವಾರ್ಥವ ನೀಗುತೆ, ಬೆಳೆವುದು ಕನ್ನಡ ವೃಕ್ಷವಿದು,
—ನಿಲುವುದು ಕನ್ನಡ ವೃಕ್ಷವಿದು।

೪

ಧಾರುಣವಾಗಿಹ ದೇಶದ ಶಾಂತಿಯನೆಲ್ಲರು ರಕ್ಷಿಸುತಾದರದಿ,
"ಧೀರರು ನಾವು" ಎಂಬುವ ಚೇತನ ಮಂತ್ರವ ಜಪಿಸುತೆ ಸಂತಸದಿ,
ಐಕಮತ್ಯದಲಿ ಕೂಡುತಲಿ,
ಏಕಧರ್ಮದಲಿ ಬಾಳುತಲಿ,
ಶ್ರೀಕರದೇವನ ಕೃಪೆಯಿಂಬೆಳಗುತೆ ಬೆಳೆವುದು ಕನ್ನಡವಿದು,
—ಆಲದ ಕನ್ನಡ ವೃಕ್ಷವಿದು !

ಕವಿ—ಡಿ. ಆರ್. ರಾಮಯ್ಯ, ಬೆಂಗಳೂರು.

ಕರ್ನಾಟಕದ ಪ್ರಾಚೀನತೆ

* [ಸಂಗ್ರಹ :—ಡಾ॥ ಎಂ. ವಿ. ಕೃಷ್ಣರಾವ್ ಮತ್ತು ಎಂ. ಕೇಶವ ಭಟ್ಟ ಅವರು ರಚಿಸಿದ 'ಕರ್ನಾಟಕದ ಇತಿಹಾಸ ದರ್ಶನ' ಎಂಬ ಗ್ರಂಥದಿಂದ—ಸಂಪಾದಕ].

ಕರ್ನಾಟಕದ ನಾನಾ ಭಾಗಗಳಲ್ಲಿ ನವಶಿಲಾಯುಗ (ನಿಯೋಲಿತಿಕ್), ತಾಮ್ರ ಶಿಲಾಯುಗ (ಕ್ಯಾಲ್ಕೊಲಿತಿಕ್) ಮತ್ತು ಬೃಹತ್ ಶಿಲಾಯುಗ (ಮೆಗಾಲಿತಿಕ್) ಸಂಸ್ಕೃತಿಗಳಿದ್ದುದೆಂದು ಮಸ್ಕಿ ಮತ್ತು ಬ್ರಹ್ಮಗಿರಿ ಎಂಬಲ್ಲಿ ನಡೆದ ಭೂಶೋಧನೆಗಳಿಂದ ವ್ಯಕ್ತವಾಗಿದೆ. ಬ್ರಹ್ಮಗಿರಿ, ಚಂದ್ರವಳ್ಳಿ ಮೊದಲಾದ ಕಡೆ ಇತ್ತೀಚೆಗೆ ನಡೆದ ಭೂಶೋಧನೆಗಳು ಕನ್ನಡ ನಾಡಿನ ಆದಿಮಾನವನ ಜೀವನದ ಮೇಲೆ ಬೆಳಕು ಬೀರಿವೆ. ಆಗ ಬಳಕೆಯಲ್ಲಿದ್ದ ತಾಮ್ರ, ಕಂಚು, ಕಬ್ಬಿಣ ಮೊದಲಾದ ಲೋಹದ ಉಪಕರಣಗಳೂ, ಚಿನ್ನದ ಆಭರಣಗಳೂ ವೃಷಭ ಪೂಜೆ, ಚಂದ್ರಪೂಜೆ, ವೃಕ್ಷಪೂಜೆ, ನಾಗಪೂಜೆಗಳೂ, ದುರ್ಗಾರಾಧನೆಯೂ ಅತ್ಯುಚ್ಚ ಪುರಾತನ ಸಂಸ್ಕೃತಿಗೆ ದ್ಯೋತಕವಾಗಿವೆ. ಹೀಗಿರುತ್ತ, ಕರ್ನಾಟಕವು ಪ್ರಾಚೀನ ನಾಗರಿಕತೆಗೆ ಹುಟ್ಟುಪವರೂರಾಗಿತ್ತೆಂಬುದೇನೋ ನಿರ್ವಿವಾದ.

ಕರ್ನಾಟಕಕ್ಕೆ 'ಕುಂತಳ ದೇಶ' ಎಂಬ ಹೆಸರೂ ಇದ್ದಿತು. ಈಜಿಪ್ಟ್, ಸುಮೇರಿಯಾ, ಫಿನಿಷಿಯಾ ಮೊದಲಾದ ಪುರಾತನ ನಾಗರಿಕ ದೇಶಗಳೊಡನೆಯೂ ಕರ್ನಾಟಕಕ್ಕೆ ಸಂಪರ್ಕವಿದ್ದಿತು. ಸಿಂಧೂ ಜನರಿಗೂ ಕರ್ನಾಟಕದ ಜನರಿಗೂ ನಿಕಟ ಭಾಂಧವ್ಯವಿದ್ದಿತೆಂಬ ವಿಚಾರದಲ್ಲಿ ಸಂದೇಹವೇನೂ ತೋರುವುದಿಲ್ಲ. ಸಿಂಧೂ ನಿವಾಸಿಗಳಲ್ಲಿ ಬಳಕೆಯಲ್ಲಿದ್ದ ಕೆಲವಾರು ಅಮೂಲ್ಯ ರತ್ನಗಳು ಮೈಸೂರು ಮತ್ತು ನೀಲಗಿರಿಯಲ್ಲಿ ಮಾತ್ರ ಕಾಣಬಂದಿದೆ. ಇವೆರಡೂ ಪ್ರದೇಶಗಳ ಕುಂಭಕಲೆಯಲ್ಲೂ ಗಮನಾರ್ಹ ಸಾಮ್ಯವಿದೆ. ಇತ್ತೀಚೆಗೆ ಸಿಂಧೂ ಸಂಸ್ಕೃತಿಯ ಅವಶೇಷಗಳು ಅವುಗಳ ಮೂಲಸ್ಥಾನದಿಂದ ಎಷ್ಟೋ ದೂರದ ದಕ್ಷಿಣದಲ್ಲೂ ಗೋಚರವಾಗಿದೆ.

ಸಿಂಧೂ ಸಂಸ್ಕೃತಿಯ ಕಾಲದಲ್ಲಿ ಕರ್ನಾಟಕಕ್ಕೆ 'ಕಣ್ಣನಿರ್' ಎಂಬ ಹೆಸರಿತ್ತೆಂದು ಫಾದರ್ ಹೆರಾಸ್ ಅವರ ಅಭಿಪ್ರಾಯ.

ಕೆಲವು 'ಬ್ರಾಹ್ಮಣ'ಗಳಲ್ಲೂ 'ಆರಣ್ಯಕ'ಗಳಲ್ಲೂ ಕನ್ನಡ ನಾಡಿನ ಕೆಲವಾರು ಊರುಗಳ ಹೆಸರುಗಳಿವೆ. ಮತ್ಸ್ಯಪುರಾಣ, ಸ್ಕಾಂದ ಪುರಾಣಗಳು ಕನ್ನಡನಾಡನ್ನು ಕರ್ಣ ಮತ್ತು ಕರ್ಣಾಟ, ಕರ್ಣಾಟಕ ಎಂಬ ಹೆಸರುಗಳಿಂದ ಕರೆದಿವೆ. ಈಗಿನ ಹಾನಗಲ್ಲು ಮಹಾಭಾರತದ ಕಾಲದಲ್ಲಿ ಪಂತ್ಸ್ಯರಾಜನ ರಾಜಧಾನಿಯಾದ ವಿರಾಟನಗರಿ ಎಂದೂ ಪ್ರಸಿದ್ಧವಾಗಿದ್ದಿತು. ಪುರಾಣೇತಿಹಾಸಗಳಲ್ಲಿ ಕರ್ನಾಟಕದ ಸ್ಪಷ್ಟೋಲ್ಲೇಖವಿದೆ.

ದ್ರವಿಡಾ : ಕೇರಳಾ : ಪ್ರಾಚ್ಯಾ: ಮೂಷಿಕಾ ವನವಾಸಿಕಾ :
ಕರ್ಣಾಟಕಾ ಮಹಿಷಕಾ : ವಿಕಲ್ಪಾ: ಮೂಷಕಾಸ್ತಥಾ....
— ಮಹಾಭಾರತ, ಭೀಷ್ಮ ಪರ್ವ, 9.58-59.

ಪಂಹಾರಾಷ್ಟ್ರಾ: ಸಕರ್ಣಾಟಾ : ಗೋನದಾಶ್ಚಿತ್ರಕೂಟಿಕಾ :
—ಮಾರ್ಕಂಡೇಯ ಪುರಾಣ, 58, 23.

ರಾಮಾಯಣದಲ್ಲೂ ಕರ್ಣಾಟಕದ ಪಲವಾರು ಸ್ಥಳಗಳ ಉಲ್ಲೇಖವಿವೆ. ರಾಮಾಯಣದ ಕಿಷ್ಕಿಂಧೆಯೂ ನಮ್ಮ ಪಂಪಾಕ್ಷೇತ್ರವೂ ಅಭಿನ್ನವೆಂದು ತೋರುವುದು. ಮಹಾಭಾರತದಲ್ಲಿ ಅರ್ಜುನನನ್ನು ವರಿಸಿದ ಚಿತ್ರಾಂಗದೆಯ ತವರೂರಾದ ಮಣಿಪುರವು ಮೈಸೂರು ಜಿಲ್ಲೆಯ ಚಾಮರಾಜನಗರದ ಸಮೀಪದಲ್ಲಿದೆಯೆಂಬ ಒಂದು ಐತಿಹ್ಯವು ಪ್ರಚಲಿತವಾಗಿದೆ. ಕೇಕಯ ರಾಜನು ಸಂದರ್ಶಿಸಿದ ಅನೇಕ ನಗರಗಳಲ್ಲಿ ವೈಜಯಂತ (ಬನವಾಸಿ)ಯೂ ಒಂದಾಗಿದೆ. ಆ ದೇಶದ ಆಂದಿನ ರಾಜನ ಹೆಸರು 'ತಿಮಿರಧ್ವಜ' 'ವೇತಾಳ ಪಂಚವಿಂಶತಿ' ಯಲ್ಲಿ ಉಲ್ಲಿಖಿತನಾದ ಶೂದ್ರಕ ರಾಜನು ತನ್ನ ಪರಿಚಾರಕನಾದ ವೀರವರನನ್ನು ಲಾಟ ವಂತ್ತ ಕರ್ಣಾಟ ದೇಶಗಳಿಗೆ ಅರಸನನ್ನಾಗಿ ನಿಯಮಿಸಿದನೆಂಬ ಹೇಳಿಕೆಯಿದೆ. ಎಲ್ಲರಿಗಿಂತಲೂ ಮಿಗಿಲಾಗಿ ಪರಶುರಾಮನೇ ಮೊದಲಾದ ಪುರಾಣ ಪುರುಷರಿಗೂ ಕರ್ಣಾಟಕದ ಬಾಂಧವ್ಯವಿದೆ. ಪಶ್ಚಿಮ ಕರಾವಳಿಗೆ ಇಂದಿಗೂ 'ಪರಶುರಾಮ ಕ್ಷೇತ್ರ' ಎಂಬುವ ಹೆಸರಿದೆ.

ಸೋಮದೇವನು ಬರೆದ 'ಕಥಾಸರಿತ್ಸಾಗರ' ದಲ್ಲೂ ಕರ್ಣಾಟಕದ ಉಲ್ಲೇಖವಿದೆ, ಶೂದ್ರಕನು ರಚಿಸಿದ ಸಂಪ್ರಸಿದ್ಧ 'ಮೈಚ್ಛಕಟಿಕ' ನಾಟಕದಲ್ಲೂ ಕರ್ಣಾಟಕದ ಉಲ್ಲೇಖವಿದೆ. ನಾನ್ಯದೇವನೆಂಬ ಕರ್ಣಾಟಕದ ರಾಜನು ಸಮಗ್ರ ನೇಪಾಳವನ್ನು ಕ್ರಿಸ್ತಶಕ 889ರಲ್ಲಿ ಜಯಿಸಿದನೆಂದು 'ಸ್ವಯಂಭೂ ಪುರಾಣ' ಎಂಬ ನೇಪಾಳಿ ಗ್ರಂಥವು ತಿಳಿಸಿದೆ. ಇವನು ಗಂಗಕುಲದ ನನ್ನಿದೇವನಾಗಿರಬಹುದೆಂದು ಆರ್. ಶಾಮಶಾಸ್ತ್ರಿಗಳು ಊಹಿಸಿದ್ದಾರೆ. ಪಾಂಡ್ಯರಾಜ ಶಡೈಯನ್‌ಪರಾಂತಕನು ತನ್ನ ವೇರ್ಪಿಕುಡಿ ತಾಮ್ರಶಾಸನದಲ್ಲಿ ಕರ್ಣ ನಾಡುಗರನ್ನು ಹೆಸರಿಸುತ್ತಾನೆ. ತಮಿಳು ಭಾಷೆಯ 'ತೋಲ್ಕಾಪ್ಪಿಯಮ್' ಎಂಬ ಪ್ರಾಚೀನ ತಮಿಳಿನ ವ್ಯಾಕರಣ ಗ್ರಂಥದಲ್ಲಿ ಸಂಮಾರು ಕ್ರಿಸ್ತಶಕ ಎರಡನೆಯ ಶತಮಾನದ ಅವ್ವೈಯ್ಯಾರ್ ರಚಿಸಿದ ಕೃತಿಯಿಂದ ಉಧೃತವಾದ ಲಕ್ಷ್ಯ ಪದ್ಯವಿದೆ. ಆ ಪದ್ಯದಲ್ಲಿ ಕರುನಾಟಕರ ಉಲ್ಲೇಖವಿವೆ. ಆ ಪದ್ಯದಲ್ಲಿ 'ಪ್ರಾಜ್ಞರು ವಡುಗರನ್ನೂ (ಎಂದರೆ ತೆಲುಗರನ್ನೂ) ಆರುವಳರನ್ನೂ (ಎಂದರೆ ತಮಿಳುನಾಡಿನ ಒಂದು ಜನವರ್ಗದವರನ್ನೂ) ಕರುನಾಟಕರನ್ನೂ ಶ್ಮಶಾನ ಭೂಮಿಯನ್ನೂ ಭೂತ ಪ್ರೇತಗಳನ್ನೂ ಎಮ್ಮೆ ಕೋಣಗಳನ್ನೂ ಸಮೀಪಿಸುವುದಿಲ್ಲ ಎಂಬ 'ಸೂಕ್ತಿ' ಯಿದೆ. ಕನ್ನಡ ಲಿಪಿಗೆ ಮೂಲವಾದ ಬ್ರಾಹ್ಮೀ ಲಿಪಿಯು ಆದಿ ತೀರ್ಥಂಕರ ವೃಷಭದೇವನ ಪುತ್ರಿಯಾದ ಬ್ರಹ್ಮಿಯಿಂದ ಭೂಮಿಗೆ ಅವತರಿಸಿತಂತೆ. ಈಜಿಪ್ಟ್ ದೇಶದ ಆಕ್ಸಿರಿಂಕಸ್ ಎಂಬಲ್ಲಿ ಉಪಲಬ್ಧವಾದ ಒಂದು ಗ್ರೀಕ್ ಭಾಷಾ ಪ್ರಹಸನದಲ್ಲಿ ತದಿತರ ಭಾಷಾ ಪದಗಳೂ ಕೆಲವಿದೆ. ಗ್ರೀಕ್ ಕನ್ಯೆಯೊಬ್ಬಳನ್ನು ಅಪಹರಿಸಿ ಭಾರತಕ್ಕೆ ತಂದ ಕಥೆ ಈ ಪ್ರಹಸನದ ವಸ್ತು. ಕಥೆ ನಡೆದ ಸ್ಥಳ ದಕ್ಷಿಣ ಕನ್ನಡದ ರೇವುಪಟ್ಟಣವು ಪಂಲ್ಪೆ. ಈ ಗ್ರೀಕ್ ಕೃತಿ ಕ್ರಿಸ್ತಶಕ ಎರಡನೆಯ

ಶತಮಾನಕ್ಕೆ ಸೇರಿದುದೆಂದು ಈಗ ನಿರ್ಧಾರವಾಗಿದೆ. ಇದರಲ್ಲಿರುವ ಗ್ರೀಕ್ ಭಾಷಾಭಿನ್ನ ಪದಗಳು ಕನ್ನಡ ಪದಗಳಾಗಿರಬೇಕೆಂದು ಸುಪ್ರಸಿದ್ಧ ವಿದ್ವಾಂಸರಾದ ಹಾಕ್ಟರ್ ಹಲ್ಟ್‌ರವರು ಮೊತ್ತಮೊದಲು ಊಹಿಸಿದರು. ತರುವಾಯ ಈ ಪದಗಳನ್ನು ಕೂಲಂಕಷವಾಗಿ ವಿಮರ್ಶಿಸಿ ಇವು ಕನ್ನಡಪದಗಳೇ ಆಗಿರಬೇಕೆಂದು ಹಲವರು ಕನ್ನಡ ವಿದ್ವಾಂಸರಷ್ಟೇ ಅಲ್ಲ, ತಮಿಳು ವಿದ್ವಾಂಸರೂ ತೀರ್ಮಾನಿಸಿದ್ದಾರೆ. ಸುಪ್ರಸಿದ್ಧ ತಮಿಳು ವಿದ್ವಾಂಸರಾದ ದಿವಂಗತ ಡಾಕ್ಟರ್ ಎಲ್. ಡಿ. ಸ್ವಾಮಿ ಕಣ್ಣುಪಿಳ್ಳೈಯವರು ಈ ಪದಗಳ ಆಧಾರದಿಂದ ಕನ್ನಡ ಭಾಷೆಯು ತಮಿಳಿನ ಹಿರಿಯಕ್ಕನಾಗಿದ್ದರೂ ಇರಬಹುದೆಂದು ಸೂಚಿಸಿದ್ದಾರೆ. ಕ್ರಿಸ್ತಶಕ ಎರಡನೆಯ ಶತಮಾನದ ಹಾಲ ರಾಜನು ರಚಿಸಿದ 'ಗಾಥಾಸಪ್ತಸತಿ' ಎಂಬ ಪ್ರಾಕೃತ ಕಾವ್ಯ ಸಂಕಲನದಲ್ಲಿ ಕನ್ನಡ ಆಡುಮಾತಿನಲ್ಲಿ ಇಂದಿಗೂ ಬಳಕೆಯಲ್ಲಿರುವ ಹಲವಾರು ಕನ್ನಡ ಪದಗಳಿವೆ.

ಇತಿಹಾಸದ ಪ್ರಾರಂಭದ ಕಾಲದಲ್ಲೇ ಕರ್ನಾಟಕಕ್ಕೆ ಪರದೇಶಗಳೊಡನೆ ವಾಣಿಜ್ಯ ಸಂಬಂಧವಿದ್ದಿತು. ಭಟ್ಕಳ, ವಂಬೆ ಮತ್ತು ವಂಗಳೂರು ರೇವುಗಳು ಆ ಕಾಲಕ್ಕೆ ಕರ್ನಾಟಕದ ಪ್ರಮುಖ ರೇವುಗಳಾಗಿದ್ದುವು. ಬನವಾಸಿಯು ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿದ್ದಂತೆ ತೋರುವುದು. ಮೆಣಸು, ಶ್ರೀಗಂಧ, ಪ್ರಶಸ್ತ ರತ್ನಗಳು, ದಂತ, ಅಕ್ಕಿ, ತೇಗ ಮತ್ತು ಇನ್ನೂ ಬೇರೆ ಅನೇಕ ಪಣ್ಯ ವಸ್ತುಗಳು ಕರ್ನಾಟಕದ ಪಡಗುಗಳಲ್ಲಿ ಪರದೇಶಗಳಿಗೆ ನಿರ್ಯಾತವಾಗುತ್ತಿದ್ದುವು. ಬೆಂಗಳೂರಿನ ಸಮೀಪದ ಯಶವಂತಪುರದಲ್ಲಿ ಭೂಶೋಧನೆ ನಡೆದ ಕಾಲಕ್ಕೆ ರೋಮನ್ ಚಕ್ರವರ್ತಿ ಕ್ಯಾಲಿಗೂಲಾದ ಕೆಲವು ಸುವರ್ಣ ನಾಣ್ಯಗಳು ದೊರೆತವು. ಪಾಶ್ಚಾತ್ಯ ದೇಶಗಳೊಡನೆ ನಿರಂತರವಾಗಿ ನಡೆದ ವಾಣಿಜ್ಯ ವ್ಯವಹಾರಗಳು ಸಾಂಸ್ಕೃತಿಕ ಸಮೃದ್ಧಿಗೆ ಕಾರಣವಾದುವು. ಚಿತ್ರದುರ್ಗದ ಬಳಿ ಚಂದ್ರವಳ್ಳಿಯಲ್ಲಿ 'ಭೂಶೋಧನೆ ನಡೆಯುವ ಕಾಲಕ್ಕೆ ಚೀನೀ ಸಾರ್ವಭೌಮನಾದ ಹಾನ್-ವಾ-ಹಿ ಎಂಬಾತನ ಕಾಲಕ್ಕೆ ಸೇರಿದ ಹಿತ್ತಾಳೆ ನಾಣ್ಯವೊಂದು ಸಿಕ್ಕಿದ್ದಿತು. ಇದರಿಂದ, ಪಾಶ್ಚಾತ್ಯ ದೇಶ-ದೂರ ಪ್ರಾಚ್ಯ ದೇಶಗಳೊಡನೆ ಕರ್ನಾಟಕವು ವ್ಯಾಪಾರ ನಡೆಸುತ್ತಿದ್ದಿತೆಂದು ಸಿದ್ಧವಾಗುವುದು. ಇನ್ನು, ಭಾರತದ ಬೇರೆ ಬೇರೆ ಪ್ರಾಂತಗಳೊಡನೆಯೂ ಕರ್ನಾಟಕಕ್ಕೆ ನಿಕಟ ಸಂಪರ್ಕವಿದ್ದಿತು. ಈ ವಿಚಾರದಲ್ಲಿ ದಿವಂಗತ ಆರ್. ಜಿ. ಭಂಡಾರ್ಕರ್‌ರವರು ತಮ್ಮ 'ದಕ್ಷಿಣದ ಪ್ರಾಚೀನ ಚರಿತ್ರೆ' ಎಂಬ ಗ್ರಂಥದಲ್ಲಿ ಹೀಗೆನ್ನುತ್ತಾರೆ. 'ನಾನಾ ಪ್ರಾಂತಗಳೊಡನೆ ಸಂಚಾರಕ್ಕೆ ಅಷ್ಟೇನೂ ಕಷ್ಟವಿದ್ದಂತೆ ತೋರುವುದಿಲ್ಲ. ವೈಜಯಂತಿ ಮತ್ತು ಸೊಪ್ಪಕ ಇಲ್ಲವೆ ಸುಪಾರ ಎಂಬ ಸ್ಥಳಗಳ ನಿವಾಸಿಗಳು ಕೊಟ್ಟ ದತ್ತಗಳು ಕಾರ್ಲೆ ಗುಹೆಗಳಲ್ಲಿ ಲಿಖಿತವಾಗಿವೆ. ನಾಸಿಕದ ವ್ಯಾಪಾರಿಯೊಬ್ಬನು ಕೊಟ್ಟ ದತ್ತಿ ಜುನ್ನಾರ ಎಂಬಲ್ಲಿದೆ. ಉತ್ತರ ಭಾರತೀಯ ನಿವಾಸಿಗಳ ದತ್ತಿ ದಕ್ಷಿಣ ಸಿಂಧು (ಸಿಂಧು)ವಿನ ದತ್ತಮಿತ್ರ ಎಂಬಲ್ಲಿದೆ. ಜಬಲಪುರಕ್ಕೂ ಅಲಹಾಬಾದಿಗೂ ನಡುವಣ ಬರ್ಹಾನ ಎಂಬಲ್ಲಿರುವ ಸ್ತೂಪದಲ್ಲಿ ನಾಸಿಕದ ಮತ್ತು ಕರ್ನಾಟಕದ ನಿವಾಸಿಗಳು ಕೊಟ್ಟ ದಾನಶಾಸನಗಳಿವೆ.

(7) ಕರ್ನಾಟಕದಲ್ಲಿ ದೊರೆತ ಅಸಂಖ್ಯ ಶಿಲಾಲೇಖ ಮತ್ತು ತಾಮ್ರಪಟಗಳಲ್ಲಿ ಕರ್ನಾಟಕ ಶಬ್ದವು ಉಲ್ಲೇಖವು ಹೇರಳವಾಗಿ ಬಂದಿದೆ. ಅವುಗಳಲ್ಲಿ ಪ್ರಾಚೀನತರವಾದ ಒಂದನ್ನು ವಿಶೇಷವಾಗಿ ಗಮನಿಸುವುದು ಅವಶ್ಯ. ಕ್ರಿ. ಶ. 450ರ ಒಂದು ಕದಂಬವಂಶದ ತಾಮ್ರಪಟದಲ್ಲಿ ಕಾಕುತ್ಸವರ್ಮನ ಮಗನಾದ ಶಾಂತಿವರ್ಮನನ್ನು ಸಮಗ್ರ ಕರ್ನಾಟದೇಶ '' ಭೂವರ್ಗ ಭರ್ತಾರಂ" ಎಂದು ವರ್ಣಿಸಲಾಗಿದೆ. ಇಲ್ಲಿ '' ಕರ್ನಾಟ " ಶಬ್ದ ಬಂದಿರುವುದು ಮಾತ್ರವಲ್ಲ '' ಸಮಗ್ರ ಕರ್ನಾಟ " ದ ಕಲ್ಪನೆ ಅಪರೂಪವಾಗಿ ಬಂದಿದೆ. ಕದಂಬ ವಂಶದ ಮೂಲಪುರುಷನಾದ ಮಯೂರಶರ್ಮನು ಪಶ್ಚಿಮ ಸಮುದ್ರದಿಂದ ಶ್ರೀಶೈಲದವರೆಗಿದ್ದ ದೇಶವನ್ನು ಪಲ್ಲವರಿಂದ ತೆಗೆದುಕೊಂಡಾಗ ಬಳ್ಳಾರಿ ಜಿಲ್ಲೆಯ ದಕ್ಷಿಣ ಭಾಗವೂ ಅವನ ಹಸ್ತಗತವಾಗಿರಬೇಕೆಂದು ಇತಿಹಾಸಕಾರರು ಹೇಳಿದ್ದಾರೆ. ಇದರಿಂದ ಸ್ಥೂಲವಾಗಿ ದಕ್ಷಿಣ, ಪಶ್ಚಿಮ, ಪೂರ್ವ, ಉತ್ತರ ಈ ದಿಕ್ಕುಗಳಲ್ಲಿಯ ಸಮಗ್ರ ಕರ್ನಾಟವು ಅಂದರೆ ಬಹುಶಃ ಕಾವೇರಿಯಿಂದ ಗೋವಾಪರಿಯವರೆಗಿದ್ದ ಕರ್ನಾಟಕವು ಕದಂಬರಾಜರ ಅಂಕಿತದಲ್ಲಿತ್ತೆಂದು ತಿಳಿಯಬಹುದು. ಅಂತೇ ಶಾಂತಿವರ್ಮನ ವರ್ಣನೆಯಲ್ಲಿ ಸಮಗ್ರ ಕರ್ನಾಟದೇಶ ಭೂವರ್ಗ ಭರ್ತಾರ ಎಂಬ ಬಿರುದು ಯಥೋಚಿತವಾಗಿದೆ. ಕಾಕುತ್ಸವರ್ಮನ ನಂತರ ಶಾಂತಿವರ್ಮ, ಕೃಷ್ಣವರ್ಮರು ಕದಂಬ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಸ್ವತಂತ್ರರಾಗಿ ಆಳತೊಡಗಿದರೆಂದು ಇತಿಹಾಸಜ್ಞರ ಮತ. ಸಮಗ್ರ ಕರ್ನಾಟಕ್ಕೆ ಒಡೆಯನಾದ ಶಾಂತಿವರ್ಮನು ಕೆಲವು ಕಾಲವಾದ ಮೇಲೆ ಆಡಳಿತದ ಸೌಕರ್ಯಕ್ಕಾಗಿ ವಿಸ್ತಾರವಾದ ಕದಂಬ ರಾಜ್ಯದಲ್ಲಿಯ ಒಂದು ಭಾಗವನ್ನು ತನ್ನ ಅಳ್ವಿಕೆಗೆ ಒಳಪಡಿಸಿಕೊಂಡಿರಬಹುದು. ಮುಖ್ಯವಾಗಿ 1500 ವರ್ಷಗಳ ಹಿಂದೆ ಸಮಗ್ರ ಕರ್ನಾಟದ ಕಲ್ಪನೆ ತಲೆದೋರಿತ್ತೆಂಬುದು ನಾವು ಲಕ್ಷಿಸಬೇಕು. ಇಂದು ಅನೇಕ ವರ್ಷಗಳ ಪ್ರಯತ್ನದಿಂದ ಬೇರೆ ರಾಜಕೀಯ ಪರಿಸರದಲ್ಲಿ, ಹೊಸ ಅರ್ಥದಲ್ಲಿ '' ಸಮಗ್ರ ಕರ್ನಾಟ " ವು ರೂಪತಾಳಿದೆ. ಅದಕ್ಕೆ ಪ್ರಾಚೀನ ಪರಂಪರೆಯಿದೆ ಎಂಬುದನ್ನು ಕನ್ನಡಿಗರು ಅರಿತುಕೊಳ್ಳಬಹುದು. ಇನ್ನೊಂದು ಪ್ರಾಚೀನ ತಾಮ್ರಪಟವು (ಕ್ರಿ. ಶ. 634) ಗಂಗರಾಜ ಭೂವಿಕ್ರಮನದಾಗಿದೆ. ಅದು ಬಹುಮಟ್ಟಿಗೆ ಸಂಸ್ಕೃತ ಭಾಷೆಯಲ್ಲಿ ರಚಿತವಾಗಿದ್ದರೂ ಅದರಲ್ಲೂ ಕನ್ನಡದೇಶವನ್ನು '' ಕನ್ನಾಟಕ " ಎಂದು ಕರೆದಿದೆ. ಇದರಿಂದ ಕರುನಾಡು, ಕರ್ನಾಡು, ಕನ್ನಾಡು, ಕನ್ನಾಟ ಹೀಗೆ ರೂಪವ್ಯತ್ಯಾಸ ಹೊಂದುತ್ತ, ಕರ್ನಾಟಕ ಮತ್ತು ಕನ್ನಾಟಕ ಈ ನಿಲುಗಡೆಗೆ ಬಂದಿರಬೇಕೆಂದು ತೋರುತ್ತದೆ. ಕರ್ನಾಟಕ ಜನಪದ ಎಂಬ ರೂಪವು ಕೂಡ ಶಿಲಾಶಾಸನಗಳಲ್ಲಿ ಹಲವುಕಡೆ ಬಂದಿದೆ.

(8) ಪುರಾಣಗಳಲ್ಲಿ '' ಕರ್ನಾಟಕ '' ದ ಹೆಸರು ಅಲ್ಲಲ್ಲಿ ಕಂಡುಬಂದಿದೆ. ಮಸ್ಯ ಪುರಾಣ, ಸ್ಕಂದಪುರಾಣಗಳು ಕನ್ನಡನಾಡನ್ನು ಕರ್ಣಾ, ಕರ್ಣಾಟಕ, ಕರ್ನಾಟಕ ಎಂಬ ಹೆಸರುಗಳಿಂದ ಕರೆದಿವೆ. ಮಾರ್ಕಂಡೇಯ ಪುರಾಣದಲ್ಲಿ '' ಮಹಾರಾಷ್ಟ್ರಾ: ಸಕರ್ಣಾಟಾ: ಗೋನದಾಶ್ಚಿತ್ರ ಕೂಟಿಕಾ: " (58, 23) ಎಂದು '' ಕರ್ಣಾಟವು '' ಉಲ್ಲೇಖವನ್ನು ಪೊಂದಿದೆ. ಪುರಾಣಗಳ ಕಾಲನಿರ್ಧಾರವು ಖಚಿತವಾಗುವುದು ಸಾಧ್ಯವಿಲ್ಲ. ಸ್ಥೂಲವಾಗಿ

ಅವುಗಳಲ್ಲಿ ಕೆಲವು ಪ್ರಾಚೀನ, ಕೆಲವು ಉತ್ತರಕಾಲೀನ ಆಗುತ್ತವೆ. ಅವುಗಳಲ್ಲಿಯೂ ಪ್ರಕ್ಷೇಪಗಳು ಸೇರಿಕೊಂಡಿರುವುದರಿಂದ ನಿರ್ದಿಷ್ಟವಾಗಿ ಕಾಲವನ್ನು ಗೊತ್ತುಪಡಿಸುವು ದಾಗದು. ಆದರೂ ಇತರತ್ರ ಬಂದಿರುವ ಪ್ರಾಚೀನ ಉಲ್ಲೇಖಗಳ ಜೊತೆಗೆ ಇಲ್ಲಿಯ ಉಲ್ಲೇಖಗಳನ್ನು ತೆಗೆದುಕೊಂಡರೆ '' ಕರ್ನಾಟಕ '' ದ ಪ್ರಾಚೀನತೆಗೆ ಪುಷ್ಟಿ ದೊರೆಯುತ್ತದೆ.

(9) ಕೆಳಗಿನ ಪ್ರಾಚೀನ ಸಂಸ್ಕೃತಶಾಸನದಿಂದ '' ಕರ್ನಾಟಕ '' ರೂಪದ ಪ್ರಾಚೀನ ಅಸ್ತಿತ್ವವೂ ಮತ್ತು ಕರ್ನಾಟಕ ಸೈನ್ಯದ ಅಜೇಯತೆಯೂ ಏಕಕಾಲಕ್ಕೆ ತಿಳಿಯುತ್ತವೆ.

ಕಾಂಚೀಶ ಕೇರಲ ನರಾಧಿಪ ಜೋಲಪಾಂಡ್ಯ
ಶ್ರೀಹರ್ಷ ವಜ್ರಟ ವಿಭೇದ ವಿಧಾನ ದಷಂ
ಕಾರ್ನ್ನಾಟಕಂ ವಲಮನಂತಮಜೇಯಮನ್ಯೈ
ಬೃತ್ಯೈ: ಕಿಯದ್ಭಿರಪಿ ಯತ್ಸಹಸಾ ಜಿಗಾಯ

(ಕಾಲ ಕ್ರಿ. ಶ. 768)

ಕಾಂಚೀಶ, ಕೇರಲ ಮುಂತಾದ ದಕ್ಷಿಣದ ರಾಜರನ್ನು ಶ್ರೀಹರ್ಷನಂಥ ಉತ್ತರ ನರಾಧಿಪನನ್ನೂ ಸೋಲಿಸಿ ಕರ್ನಾಟಕ ಬಲವು ಅನಂತವೂ ಅನ್ಯರಿಂದ ಅಜೇಯವೂ ಆಗಿತ್ತು. ಚಾಲುಕ್ಯ ಪುಲಿಕೇಶಿ ನರ್ಮದಾತೀರದ ಯುದ್ಧದಲ್ಲಿ ಶ್ರೀಹರ್ಷನನ್ನು ಸೋಲಿಸಿ ಪರಮೇಶ್ವರ ಪದವಿಯನ್ನು ಪಡೆದ ಚಾರಿತ್ರಿಕ ಸಂಗತಿ ಇಲ್ಲಿ ಸೂಚಿತವಾಗಿದೆ. ಇಂಥ ಕರ್ನಾಟಕ ಬಲವನ್ನು ಚಾಲುಕ್ಯ ಎರಡನೆಯ ಕೀರ್ತಿವರ್ಮನೊಡನೆ ನಡೆದ ಕಾಳಗದಲ್ಲಿ ಕನ್ನಡಿಗನೇ

---

(1) ಎಪಿಗ್ರಾಫಿಕಾ ಕರ್ನಾಟಿಕಾ, ಸಂಪುಟ 6 ಕೆಡಿ 162.

(2) ಆಸ್ತಿ ಶ್ರೀಮಾನ್ ಜನಗದ : ಕರ್ನಾಟ ಇತಿ (11) ಕರ್ನಾಟಕ ಜನಪದ ಸಂಪ ದಧಿಷ್ಠಾನ ಭೂತ ಶ್ರೀಮಹೀಶೂರ ಮಹಾಸಂಸ್ಥಾನ ವಂಧ್ಯ ದೇದಿಪ್ಯಮಾನ.... ಇತ್ಯಾದಿ.

(1) ಈ ಸಂದರ್ಭದಲ್ಲಿ ಕರ್ಣಾಟಕ ಕರ್ನಾಟಕ, ಈ ಎರಡೂ ರೂಪಗಳ ಸಾಧುತ್ವ ವನ್ನೂ ಶಿಲಾಲೇಖನಗಳಲ್ಲಿ ಅವುಗಳ ಬಳಕೆಯನ್ನು ಕುರಿತು ಚರ್ಚೆಯುಳ್ಳ ಕೆಳಗಿನ ಲೇಖನಗಳನ್ನು ಓದಬಹುದು.

1 ತೀ. ನಂ. ಶ್ರೀಕಂಠಯ್ಯ " ಕರ್ನಾಟಕ " ಎಂಬ ರೂಪವು ಅಸಾಧುವೆ ?

2 ಜಿ. ಪಿ. ರಾಜರತ್ನಂ–ಕರ್ನಾಟ (ಕ)–ಕರ್ಣಾಟ (ಕ)
(ಕನ್ನಡ ಸಾಹಿತ್ಯಪರಿಷತ್ ಪತ್ರಿಕೆ–ಸಂಪುಟ 22–ಸಂಚಿಕ 3)

ಆದ ರಾಷ್ಟ್ರಕೂಟ ದಂತಿದುರ್ಗನಂ ಕೆಲವೇ ಸೈನಿಕರೊಂದಿಗೆ ಕೂಡಲೆ ಗೆದ್ದನು ಎಂದು ಮೇಲಿನ ಪದ್ಯದ ತಾತ್ಪರ್ಯ. ಕನ್ನಡಿಗರ ಶೌರ್ಯವರ್ಣನೆ ಇತರ ಸಂದರ್ಭಗಳಲ್ಲಿಯೂ ಬಂದಿದೆ. ಕಥಾ ಸರಿತ್ಸಾಗರದಲ್ಲಿಯ ಅವತರಣಿಕೆಯನ್ನು ಹಿಂದೆ ಕೊಟ್ಟಿದೆ. ಸು. 900ರಲ್ಲಿ ಬರೆಯಲಾದ ರಾಜಶೇಖರನ ಬಾಲರಾಮಾಯಣ ನಾಟಕದಲ್ಲಿ ಕರ್ಣಾಟದ ಅಖಂಡಿತ ಪೌರುಷವನ್ನು ಬಣ್ಣಿಸಲಾಗಿದೆ (ಅಖಂಡಿತ ಪ್ರಸರಾಹಿ ಪುರುಷಕಾರಾ : ಕರ್ಣಾಟಾನಾಂ—ಪ್ರಸ್ತಾವನಾ—ಪದ್ಯ 2—3 ರ ಮಧ್ಯೆ). ಅದೇ ಕವಿಯ "ವಿದ್ಧಶಾಲಭಂಜಿಕಾ" ದಲ್ಲಿ ಕರ್ಣಾಟೋ ಯುದ್ಧಶಂಶ್ರಿ ಚತುರಮತಿ : (4—19), ಸಮರಕರ್ಮಣಿ ನಿಸರ್ಗೋದ್ಭಟಾ ಏವ ಕರ್ಣಾಟಾ :—(4, 19—20 ರ ಮಧ್ಯೆ) ಎಂದು ಕನ್ನಡಿಗರ ಯುದ್ಧತಂತ್ರವನ್ನು ವರ್ಣಿಸಿದೆ.

(10) ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ರಾಜ—ರಾಣಿಯರನ್ನು ಕುರಿತು ಹೇಳುವಾಗ ಹಲವಾರು ಕಡೆಗಳಲ್ಲಿ ಕರ್ನಾಟಕ ಪದವನ್ನು ಬಳಸಲಾಗಿದೆ. ಚಾಲುಕ್ಯ ಸಾಮ್ರಾಜ್ಞದ ರಾಣಿಯನ್ನು "ಕರ್ನಾಟಕ ರಾಜಪ್ರಿಯಾ" ಎಂದು ಕರೆದದ್ದುಂಟು. ಬಿಲ್ಹಣನು ತನ್ನ "ವಿಕ್ರಮಾಂಕ ದೇವಚರಿತೆ" ಯಲ್ಲಿ ಅರನೇ ವಿಕ್ರಮಾದಿತ್ಯನನ್ನು "ಕರ್ನಾಟೇಂದು" ಎಂದು ಬಣ್ಣಿಸಿದ್ದಾನೆ. "ಕರ್ನಾಟಕುಲ ಕಮಲ ಮಾರ್ತಾಂಡ, ಕರ್ನಾಟ ವಂಶೋದ್ಭವ" ಇತ್ಯಾದಿ ಬಿರುದುಂಗಳು ಹೊಯ್ಸಳ ಶಾಸನಗಳಲ್ಲಿವೆ. ವಿಜಯನಗರದ ರಾಜರನ್ನು ಕನ್ನಡರಾಜ್ಯ ರಮಾರಮಣರೆಂದೂ ಕರ್ನಾಟಕ ರತ್ನ ಸಿಂಹಾಸನಾಧೀಶ್ವರರೆಂದೂ ಕರೆಯಲಾಗುತ್ತಿತ್ತು. ಅವರ ತರುವಾಯ ಮೈಸೂರು ಸಂಸ್ಥಾನದ ಮಹಾರಾಜರು ಕರ್ನಾಟಕ ರತ್ನ ಸಿಂಹಾಸನಾಧೀಶ್ವರರೆಂದೂ ಹೊಗಳಿಸಿಕೊಳ್ಳುತ್ತ ಬಂದಿದ್ದಾರೆ.

(11) ಮೊದಲನೆಯದಾಗಿ ಉಪಲಬ್ಧವಾದ "ಕವಿರಾಜಮಾರ್ಗ" (ಕಾಲ ಕ್ರಿ. ಶ. 9 ನೆಯ ಶತಕ) ವೆಂಬ ಕನ್ನಡ ಗ್ರಂಥದಲ್ಲಿ ಕರ್ನಾಟಕದ ಹೆಸರಿಲ್ಲ, ಆದರೆ "ಕನ್ನಡ" ಪದವು ದೇಶ ಮತ್ತು ಭಾಷೆ ಎರಡೂ ಅರ್ಥದಲ್ಲಿ ಇದರಲ್ಲಿ ಬಂದಿದೆ. "ಕಾವೇರಿಯಿಂದ ಮಾಗೋದಾವರಿಪರಮಿರ್ದ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಲಯ ವಿಲೀನ ವಿಶದ ವಿಷಯವಿಶೇಷಂ." (1—36). ಈ ಪ್ರಸಿದ್ಧವಾದ ಪದ್ಯವು ಕನ್ನಡನಾಡಿನ ಅಂದಿನ ವಿಸ್ತಾರವನ್ನು ನಮಗೆ ತಿಳಿಸಿಕೊಡುತ್ತದೆ. ತಿರುಳ್ಗನ್ನಡನಾಡಿನ ನಾಲ್ಕುದಿಕ್ಕಿನ ಮೇರೆಗಳನ್ನು ಸ್ಪಷ್ಟಗೊಳಿಸುತ್ತದೆ. "ಸಂಭಟರ್ಕಳ್ ಕವಿಗಳ್ ಸು ಪ್ರಭುಗಳ್ ಚೆಲ್ವರ್ಕಳ್ ಭಿಜಸರ್ಕಳ್ ಗುಣಿಗಳ್ ಅಭಿಮಾನಿಗಳ್ತ್ಯುದ್ರರ್ ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್ (2—28) ಎಂದು ನಾಡವರ್ಗಳ ಅಂದರೆ ಕನ್ನಡಿಗರ ಗುಣಗಳನ್ನು ಬಣ್ಣಿಸುತ್ತದೆ. ಈ ಕಾಲಕ್ಕಿಂತ ಪುರಾಂಚಿತವಾಗಿಯೇ "ಕರ್ನಾಟಕ" ಪದವು ರೂಢವಾಗಿತ್ತು ಎಂಬುದನ್ನು ಕದಂಬ, ಚಾಲುಕ್ಯ, ರಾಷ್ಟ್ರಕೂಟ ಶಾಸನಗಳು ಸಾರುತ್ತವೆ. ಆದರೆ "ಕವಿರಾಜಮಾರ್ಗ" ಕಾರನು "ಕನ್ನಡ" ಪದವನ್ನೇ ಮೆಚ್ಚಿಕೊಂಡಿದ್ದಾನೆ. ದೇಶ, ಭಾಷೆ ಎರಡನ್ನೂ ಅದು ಒಳಗೊಳ್ಳುತ್ತದೆ ಎಂದು ಅವನಿಗೆ ತೋರಿರಬೇಕು.

(12) ಕನ್ನಡದ ಆದಿಮಹಾಕವಿಯಾದ ಪಂಪನು (ಕ್ರಿ. ಶ. 941) ತನ್ನ ಆದಿ ಪುರಾಣದಲ್ಲಿ ಭರತ ಚಕ್ರವರ್ತಿಯು ದಿಗ್ವಿಜಯ ವರ್ಣನೆಯಲ್ಲಿ ವಿವರವಾಗಿ ದೀರ್ಘ ಸಂಸ್ಕೃತ ಸಮಾಸಗಳಲ್ಲಿ "ಕರ್ಣಾಟಬಲ" ವನ್ನು ವರ್ಣಿಸಿದ್ದಾನೆ (ಆಶ್ವಾಸ 13—45ವ). "ಅತಿಸುಭಟ ಮದೋತ್ಕಂಠ" ಎಂದು ಕರ್ಣಾಟ ಬಲವನ್ನು ವರ್ಣಿಸಿರುವುದನ್ನು ಗಮನಿಸಬೇಕು. ಇದರಿಂದ ಕನ್ನಡಿಗರ ಸೈನ್ಯದ ಬಗ್ಗೆ ಅವನ ಅಭಿಮಾನವು ವ್ಯಕ್ತವಾಗಿದೆ. ಪ್ರಾಚೀನ ಕಾವ್ಯ ಶಾಸ್ತ್ರ ಗ್ರಂಥಗಳಲ್ಲಿ ನಾಗವರ್ಮನ ಛಂದೋಂಬುಧಿ (ಸು. 990) ಯಲ್ಲಿ "ಕರ್ನಾಟ" ದೇಶದ ಹೆಸರು ಬಂದಿದೆ ಮಾತ್ರವಲ್ಲ "ಕರ್ಣಾಟಕ ವಿಷಯಜಾತಿ" ಎಂಬುದಾಗಿ ಕನ್ನಡಕ್ಕೆ ವಿಶಿಷ್ಟವಾದ ಛಂದೋರೂಪಗಳ ವರ್ಗವನ್ನು ವಿಶೇಷಿಕರಿಸಿ ಪಂಚಮಾಧಿಕಾರದಲ್ಲಿ ಅವನ್ನು ವಿವರಿಸಲಾಗಿದೆ. ಮುಂದೆ ಬಂದ ಕನ್ನಡ ಕವಿಗಳು ಸಂದರ್ಭೋಚಿತವಾಗಿ ಕರ್ಣಾಟದ ಉಲ್ಲೇಖ ಮಾಡಿದ್ದಾರೆ ; ಅದರ ಗುಣಗಾನ ಮಾಡಿದ್ದಾರೆ.

ಕರ್ನಾಟಕ—ಜನಪದ

ಡಾ. ರಂ. ಶ್ರೀ ಮುಗಳಿ

ಕರ್ನಾಟಕ ಜನಪದ ಅಂದರೆ ಕರ್ನಾಟಕದ ಜನರು ವಾಸಿಸುವ ದೇಶ. " ಕರ್ನಾಟಕ " ಪದವು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ಒಳಗೊಂಡ ಒಂದು ವ್ಯಾಪಕ ಮತ್ತು ಅರ್ಥಪೂರ್ಣವಾದ ಪ್ರತೀಕ. ಇದೆಷ್ಟು ಪ್ರಾಚೀನ ಎಂಬುದನ್ನು ಬಲ್ಲವರಿಗೆ ಇದು ಹೊಸ ವಿಷಯವಲ್ಲ. ಕರ್ನಾಟಕ ಏಕೀಕರಣದ ಪ್ರಜ್ಞೆ ಚಿಗುರೊಡೆದು ಬೆಳಯುತ್ತಿದ್ದ ಕಳೆದ 50-60 ವರ್ಷಗಳ ಅವಧಿಯಲ್ಲಿ ಇತಿಹಾಸ ಸಂಶೋಧಕರೂ ಸಾಹಿತ್ಯಕರೂ ಅನೇಕ ಆಧಾರಗಳಿಂದ ಕರ್ನಾಟಕದ ಪ್ರಾಚೀನತೆಯನ್ನು ಎತ್ತಿ ತೋರಿಸಿದ್ದಾರೆ. ಅದರ ನಿಷ್ಪತ್ತಿಯ ಕುರಿತು ಹಲವಾರು ಊಹೆಗಳನ್ನು ಮಾಡಿದ್ದಾರೆ. ಈ ಲೇಖನದಲ್ಲಿ ನಮಗೆ ಗ್ರಾಹ್ಯವೆಂದು ತೋರಿದ ಆಧಾರಗಳನ್ನು ಕೊಟ್ಟು ಬಲ್ಲವರು ಆರಿತ ವಿಷಯವನ್ನು ಎಲ್ಲರಿಗೆ ತಿಳಿಹೇಳುವ ಉದ್ದೇಶವಿದೆ. ಈ ರಾಜ್ಯಕ್ಕೆ "ಕರ್ನಾಟಕ " ನಾಮಕರಣದ ಸುಮುಹೂರ್ತವು ಸಂನಿಹಿತವಾದ ಸಂದರ್ಭದಲ್ಲಿ ಇದಕ್ಕೆ ಮಹತ್ವಬಂದಿದೆ. ಜನತೆಯಲ್ಲಿ ಹೊಸ ಜಿಜ್ಞಾಸೆ ಮೂಡಿದೆ, ಹೊಸ ಚೈತನ್ಯ ಚಿಮ್ಮಿದೆ. ಈ ಲೇಖನದಲ್ಲಿ ಕರ್ನಾಟಕದ ಪರ್ಯಾಯ ಪದಗಳಾದ ಕರ್ಣಾಟಕ, ಕರ್ನಾಟಕ, ಕರ್ನಾಟ ಕರ್ನ್ನಾಟ, ಇವನ್ನು ಸಮಾನವೆಂದು ಭಾವಿಸಲಾಗಿದೆ.

(1) ಕರ್ನಾಟಕದ ಪ್ರಾಚೀನತಮ ಉಲ್ಲೇಖವು ಮಹಾಭಾರತದ ಸಭಾಪರ್ವ ಮತ್ತು ಭೀಷ್ಮಪರ್ವಗಳ ಕೆಳಗಿನ ಶ್ಲೋಕಗಳಲ್ಲಿ ಬಂದಿದೆ.

(ಅ) ಕರ್ಣಾಟಾ :—ಕಾಂಸ್ಯಕುಟ್ಟಾಶ್ಚ ಪದ್ಮಜಾಲಾ : ಸತೀನರಾ ;

(ಸಭಾಪರ್ವ, 78—98)

(ಆ) ಅಥಪಾರ ಜನಪದಾ: ದಕ್ಷಿಣಾ: ಭರತಪರ್ಷಬ ದ್ರವಿಡಾ: ಕೇರಲಾ: ಪ್ರಾಚ್ಯಾ: ಮೂಷಿಕಾ ವನವಾಸಿಕಾ : ಕರ್ಣಾಟಕಾ ಮಹಿಷಕಾ ವಿಕಲ್ಪಾ ಮೂಷಕಾಸ್ತಥಾ ರಿಯಿಲ್ಲಿಕಾ: ಕುಂತಲಾಶ್ಚೈವ ಸೌಹೃದಾ ನಭಕಾನನಾ :

(ಭೀಷ್ಮಪರ್ವ, 9: 58—59)

(ಅ) ದ ಸಂದರ್ಭವಿಶೇಷದಲ್ಲಿ ಕರ್ನಾಟದ ಅರಸರು ಎಂದು "ಕರ್ಣಾಟಾ:"—ಇದಕ್ಕೆ ಅರ್ಥವಿದ್ದರೆ (ಆ) ದಲ್ಲಿ ಸ್ಪಷ್ಟವಾಗಿ ದಕ್ಷಿಣ ಜನಪದ ಅಂದರೆ ದಕ್ಷಿಣ ದೇಶಗಳಲ್ಲಿ ಒಂದು ದೇಶವೆಂದು "ಕರ್ಣಾಟಕ" ದ ನಿರ್ದೇಶವಿದೆ. ಪೂಣೆಯ ಭಾಂಡಾರ್‌ಕರ್ ಸಂಶೋಧನ ಸಂಸ್ಥೆ ಗ್ರಂಥ ಸಂಪಾದನೆಯ ಆಧುನಿಕ ಶಾಸ್ತ್ರವನ್ನು ಅನುಸರಿಸಿ ಅನೇಕ ವರ್ಷಗಳ ಪರಿಶ್ರಮದಿಂದ

ಸಿದ್ಧಪಡಿಸಿರುವ ಮಹಾಭಾರತದ ಆವೃತ್ತಿಯಲ್ಲಿ "ಕರ್ಣಾಟ"ಕ್ಕೆ ಎಡೆದೊರೆತಿಲ್ಲ. ಸಭಾಪರ್ವದ ಆ ಪದ್ಯಭಾಗವು ಕುಂಭಕೋಣಂ ಆವೃತ್ತಿಯಲ್ಲಿದ್ದು ಅದು ದಕ್ಷಿಣ ಭಾರತದ ಪ್ರತಿಕಾರರು ಸೇರಿಸಿದ ಪ್ರಕ್ಷೇಪವೆಂದು ಅಭಿಪ್ರಾಯ ಪಡಲಾಗಿದೆ. ಭೀಷ್ಮಪರ್ವದ ಪದ್ಯದಲ್ಲಿಯು "ಕರ್ಣಾಟಕಾ:" ಇದರ ಸ್ಥಾನದಲ್ಲಿ "ಉನ್ನತ್ಯಕಾ:" ಎಂಬ ಪಾಠವನ್ನು ಸ್ವೀಕರಿಸಲಾಗಿದೆ. ಆದರೆ ಬೇರೆ ಮೂರು ಸಂದರ್ಭಗಳಲ್ಲಿ "ಕುಂತಲಾ:" ಎಂಬ ಪಾಠವನ್ನು ಒಪ್ಪಿಕೊಳ್ಳಲಾಗಿದೆ. (ಆಕರ್ಷ : ಕುಂತಲಶ್ಚೈವ—ಸಭಾಪರ್ವ, 31—11, ದ್ರವಿಡಾ: ಸಹ ಕುಂತಲೈ :—ಉದ್ಯೋಗಪರ್ವ, 138—25, ಕುಂತಲೈಶ್ಚ ದಶಾರ್ಣೈಶ್ಚ—ಭೀಷ್ಮಪರ್ವ, 51—12) ಈ ಪಾಠನಿರ್ಣಯವು ಶಾಸ್ತ್ರೀಯ ರೀತಿಯಲ್ಲಿ ಆಗಿರುವುದರಿಂದ ಇದನ್ನು ಸುಲಭವಾಗಿ ಅಲ್ಲಗಳೆಯುವಂತಿಲ್ಲ ಮಹಾಭಾರತದಲ್ಲಿ ಅನೇಕ ಪ್ರಕ್ಷೇಪಗಳು ಅನೇಕರೀತಿಯಲ್ಲಿ ಬಂದಿರುವುದು ತಿಳಿದ ವಿಷಯವಾಗಿದೆ. ಇಷ್ಟಾದರೂ "ಕುಂತಲ" ಎಂಬ ಪಾಠಸ್ವೀಕಾರದಿಂದ ಕರ್ನಾಟಕದೇಶದ ಅಸ್ತಿತ್ವವನ್ನು ಒಪ್ಪಿಕೊಂಡಿರುವ ಕಾರಣ ಮತ್ತು ಬೇರೆ ಸ್ವತಂತ್ರ ಆಧಾರಗಳಿಂದ ಕರ್ನಾಟಕದ ಪ್ರಾಚೀನತೆ ಸಿದ್ಧವಾಗುವುದರಿಂದ " ಕರ್ನಾಟಕದ "ದ ಉಲ್ಲೇಖವು ಮಹಾಭಾರತದಲ್ಲಿ ಸಂಭವನೀಯ ಎಂದು ಹೇಳಲು ಅಡ್ಡಿಯಿಲ್ಲ. "ಕರ್ಣಾಟಕಾ:" ಇದರ ಬದಲಾಗಿ "ಉನ್ನತ್ಯಕಾ:" ಈ ಪಾಠವನ್ನು ಸ್ವೀಕರಿಸಲಾಗಿದೆ ಎಂದು ನೋಡಿದೆವು. ನಿಜವಾಗಿ "ಕರ್ಣಾಟಕಕ್ಕೆ" "ಉನ್ನತ್ಯಕ" ಇದು ಪರ್ಯಾಯಪದವೆಂದೇ ತೋರುತ್ತದೆ. ಉನ್ನತವಾದ ತಪ್ಪಲುಸೀಮೆಯಲ್ಲಿ ಇರುವುದೇ ಉನ್ನತ್ಯಕವೆಂಬ ಹೆಸರಿನ ದೇಶ. ಕರ್ನಾಟಕವು ಭೌಗೋಲಿಕವಾಗಿ ತನ್ನ ಬಹುಭಾಗದಲ್ಲಿ ಈ ಲಕ್ಷಣವನ್ನು ಹೊಂದಿದೆ. ಈ ಅಭಿಪ್ರಾಯವು ಸರಿಯಾಗಿದ್ದಲ್ಲಿ ಕರುನಾಡು ಅಂದರೆ ಎತ್ತರದ ಪ್ರದೇಶ ಎಂಬ ಪದಮೂಲದಿಂದ ಕರ್ನಾಟಕ ನಿಷ್ಪನ್ನವಾಗಿರಬೇಕೆಂಬುದಕ್ಕೆ ಇಲ್ಲಿ ಪ್ರಮಾಣ ದೊರೆಯುತ್ತದೆ. ಸದ್ಯ ಇದೊಂದು ಊಹೆ ಮಾತ್ರ ಎಂದು ಒಪ್ಪಬೇಕು.

ಮಹಾಭಾರತಕ್ಕಿಂತ ಪ್ರಾಚೀನವಾದ ರಾಮಾಯಣದಲ್ಲಿ ಕರ್ನಾಟಕದ ಉಲ್ಲೇಖವು ಎಲ್ಲಿಯೂ ಬಂದಿಲ್ಲ. ಆದರೆ ದಕ್ಷಿಣ ದೇಶದ ಪರ್ಣನೆಯಲ್ಲಿ ಗೋದಾವರಿ, ಕೃಷ್ಣವೇಣಿ, ಕಾವೇರಿ ಮುಂತಾದ ನದಿಗಳ ಹೆಸರು ಬಂದಿವೆ. ಜನಪದಗಳಲ್ಲಿ ರಿಷ್ಟಿಕ, ಮಾಹಿಷಕ, ಆಂಧ್ರ ಚೋಳ, ಕೇರಳ ಮುಂತಾದ ಹೆಸರು ಬಂದಿವೆ. ಅಶೋಕನ ಕಲ್ಬಂಡೆ ಬರಹಗಳಲ್ಲಿ ಬಂದಿರುವುದು ಇಲ್ಲಿಯ ರಿಷ್ಟಕವೇ ಆಗಿದ್ದು ಇದು ರಾಷ್ಟ್ರಕೂಟರ ಮೂಲಪ್ರದೇಶವಾಗಿ ಕರ್ನಾಟಕದ ಒಂದಂ ಭಾಗವಾಗಿರಬೇಕು. ಮಾಹಿಷಕವು ಎರುಮೈನಾಡು ಎಂದು ಹೆಸರಾದ ಮೈಸೂರು ಪ್ರದೇಶವಾಗಿರಬೇಕು. ವೈಜಯಂತವು ಬನವಾಸಿ ನಾಡಾಗಿರಬೇಕು. ಇದರಿಂದ ಕರ್ನಾಟಕದ ನೇರವಾದ ಉಲ್ಲೇಖವಿರದಿದ್ದರೂ ಕರ್ನಾಟಕದ ಭಾಗವಾಗಿದ್ದ ಪ್ರದೇಶಗಳ ಉಲ್ಲೇಖವು ರಾಮಾಯಣದಲ್ಲಿದೆ. ಮಹಾಭಾರತದಲ್ಲಿ ಸಹ ಕರ್ಣಾಟಕ-ಪದದೊಡನೆ ವನವಾಸಿಕ ಮಹಿಷಕ, ಕುಂತಲ ಈ ದೇಶನಾಮಗಳು ಬಂದಿವೆ. ಇವುಗಳ ಭೌಗೋಲಿಕ ಗರಿಮಿತಿಯೇನು, ಕರ್ನಾಟಕವು ಇವನ್ನೆಲ್ಲ ಒಳಗೊಂಡ ವಿಶಾಲದೇಶವಾಗಿತ್ತೇ ಎಂಬುದನ್ನು ನಿರ್ಧರಿಸಲು ಸ್ಪಷ್ಟ ಆಧಾರಗಳಿಲ್ಲ.

ಆದರೆ ಸ್ಥೂಲವಾಗಿ ಬನವಾಸಿನಾಡು, ಮೈಸೂರನಾಡು, ಬಡಗುನಾಡು ಎಂದು ಅನುಕ್ರಮವಾಗಿ ಅವಕ್ಕೆ ಅರ್ಥವಿದ್ದು ಕರ್ನಾಟಕವು ಅವನ್ನೆಲ್ಲ ಒಳಗೊಂಡ ವಿಶಾಲದೇಶವಾಗಿರಬೇಕು ಎಂದು ಊಹಿಸಬಹುದು. ಆದರೆ ಎಲ್ಲ ಸಂದರ್ಭಗಳಲ್ಲಿಯೂ ಈ ಅರ್ಥಯೋಜನೆ ಹೊಂದಿಕೊಳ್ಳುತ್ತದೆ ಎಂದು ಹೇಳಲು ಬರುವಂತಿಲ್ಲ.

ರಾಮಾಯಣ ಮಹಾಭಾರತಗಳ ಕಾಲನಿರ್ಧಾರವು ತುಂಬ ತೊಡಕಿನ ಪ್ರಶ್ನೆಯಾಗಿದೆ. ಅದನ್ನೀಗ ವಿಸ್ತಾರವಾಗಿ ಚರ್ಚಿಸುವ ಇಚ್ಛೆಯಿಲ್ಲ. ಆದರೆ ವಿದ್ವಾಂಸರ ಅಭಿಪ್ರಾಯಗಳಲ್ಲಿಯ ಸಮಾನ ಅಂಶಗಳನ್ನು ಮನಗಂಡು ಹೇಳುವುದಾದರೆ ಮೂಲ ರಾಮಾಯಣವು ಕ್ರಿ.ಶ. ಪೂರ್ವ 3 ಅಥವಾ 4ನೇ ಶತಕದ ತರುವಾಯ ಉದಯಿಸಿರಲಾರದು. ಹಾಗೇ ಸಂಪೂರ್ಣ ಮಹಾಭಾರತವು ಕ್ರಿ.ಶ. ನಂತರ 3 ಅಥವಾ 4ನೆಯ ಶತಕದೊಳಗಾಗಿ ಪೂರ್ಣಗೊಂಡಿರಬೇಕು. ಇದರಿಂದ ಮೂಲ ರಾಮಾಯಣದಲ್ಲಿ ಕಂಡುಬಾರದಿರುವ ಕರ್ನಾಟಕವು ಮಹಾಭಾರತವು ಪೂರ್ಣ ಆಗುವುದರೊಳಗೆ ಅಂದರೆ ಕ್ರಿ.ಶ. ಪೂರ್ವ 3 ಅಥವಾ 4ನೆಯ ಶತಕದಿಂದ ಕ್ರಿ.ಶ. 3 ಅಥವಾ 4ನೆಯ ಶತಕದೊಳಗೆ ಮೈವೆತ್ತಿರಬಹುದು. ಕೆಳಗಿನ 2, 3, ಈ ಪ್ರಮಾಣಗಳಿಂದ ಅದು ಕ್ರಿ.ಪೂ. ವಲ್ಲಿಯೇ ಇದ್ದಿರಬೇಕೆಂದು ಸಿದ್ಧವಾಗುತ್ತದೆ.

(2) ಪ್ರಸಿದ್ಧ ಸಂಸ್ಕೃತ ವೈಯ್ಯಾಕರಣಿಯಾದ ನಾಗರಿಕರು ಗಣಪಾಠದಲ್ಲಿ ''ಕರ್ನಾಟಕ''ದ ಹೆಸರು ಯಸ್ಕಾದಿಭ್ಯೋಗೋತ್ರೆ (II Ch IV), (ಸೂತ್ರ 63) ಈ ಸೂತ್ರದ ಪ್ರಯೋಗಗಳಲ್ಲಿ 10ನೆಯದಾಗಿ ''ಕರ್ಣಾಢಕ'' ಎಂಬ ರೂಪದಲ್ಲಿ ಗೋತ್ರ ನಾಮವಾಗಿ ಬಂದಿದೆ. ಈ ''ಕರ್ಣಾಢಕ''ದಲ್ಲಿ ಕರುನಾಡು, ಕರ್ನಾಡು ಇವುಗಳಲ್ಲಿಯ ಡಕಾರವು ಮಹಾಪ್ರಾಣವಾಗಿ ಉಳಿದಿರುವುದನ್ನು ಗಮನಿಸಬೇಕು. ಪಾಣಿನಿಯ ಕಾಲ ಅನಿಶ್ಚಿತ. ಆದರೂ ಅವನು ಯಾಸ್ಕ ಮತ್ತು ಶಾನಕ ಇವರ ತರುವಾಯದವನೆಂದೂ ಬಹುಶಃ ಪ್ರಾಚೀನ ಉಪನಿಷತ್ತು ಮತ್ತು ಬ್ರಾಹ್ಮಣಗ್ರಂಥಗಳ ನಂತರ ವೈದಿಕಸೂತ್ರಗಳ ಕಾಲದಲ್ಲಿ ಜೀವಿಸಿದ್ದನೆಂದೂ ಇತರ ಆಧಾರಗಳಿಂದ ಅವನು ಕ್ರಿ.ಪೂ. 4ನೆಯ ಶತಮಾನಕ್ಕಿಂತ ಹಿಂದಿನವನಲ್ಲವೆಂದೂ ಪಾಣಿನಿಯ ವ್ಯಾಖ್ಯಾನಕಾರನಾದ ಕಾತ್ಯಾಯನನು ಕ್ರಿ.ಪೂ. 3ನೆಯ ಶತಕದಲ್ಲಿ ಬಹುಶಃ ಇದ್ದವನಾದ್ದರಿಂದ ಪಾಣಿನಿ ಕ್ರಿ.ಪೂ. 350 ರಲ್ಲಿ ಜೀವಿಸಿರಬೇಕು ಎಂದೂ ಡಾ. ಕೀಥ್ ಅಭಿಪ್ರಾಯ ಪಟ್ಟಿದ್ದಾರೆ.

(3) ಶೂದ್ರಕನ ಮೃಚ್ಛಕಟಿಕ ನಾಟಕದಲ್ಲಿ ಚಂದನಕ ವೀರಕರ ಸಂಭಾಷಣೆಯಲ್ಲಿ ''ಕರ್ಣಾಟ'' ದೇಶ. ''ಕರ್ಣಾಟಕಲಹ'' ಇವುಗಳ ಉಲ್ಲೇಖ ಬರುತ್ತದೆ (ಕರ್ಣಾಟಕಲರಂ ಪ್ರಯೋಗಂ ಕರೋಮಿ–ಅಂಕ 6 ಪದ್ಯ 20-21ರ ನಡುವೆ). ಈ ನಾಟಕದ ಕರ್ತೃತ್ವವಿಚಾರ. ಕಾಲ ವಿಚಾರ ಸಾಕಷ್ಟು ಚರ್ಚೆಯಾಗಿದೆ. ಹಲವು ಸಂಬಲರ್ಹವಾದ ಆಧಾರಗಳಿಂದ ಈ ನಾಟಕಕಾರನು ಭಾಸ ಮತ್ತು ಕಾಲಿದಾಸ ಇವರ ನಡುವಿನ ಕಾಲಾವಧಿಯಲ್ಲಿ ಕ್ರಿ.ಪೂ. 2ನೆಯ ಶತಮಾನದಲ್ಲಿ ಜೀವಿಸಿರಬೇಕೆಂದು ತೋರಿಸಿಕೊಡಲಾಗಿದೆ. ಈ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಕ್ರಿ.ಶ. ಕ್ಕೆ ಹಿಂದೆ ಮುಂದೆ ಹತ್ತಿರದ ಕಾಲದಲ್ಲಿ ಮೃಚ್ಛಕಟಿಕ ನಾಟಕ ರಚನೆ

ಯಾಗಿರಬೇಕೆಂದು ಹೇಳಬಹುದು. ಇದರಿಂದ ಕರ್ನಾಟಕ ದೇಶವು ಎರಡುಸಾವಿರ ವರ್ಷ ಗಳಷ್ಟು ಪ್ರಾಚೀನ ಎಂಬುದು ತಿಳಿದುಬರುತ್ತದೆ. ಈ ನಾಟಕದ ಕರ್ತೃವಾದ ಶೂದ್ರಕರಾಜನು ದಾಕ್ಷಿಣಾತ್ಯನಿರಬೇಕೆಂದು ಬಾಹ್ಯ ಮತ್ತು ಆಂತರಿಕ ಪ್ರಮಾಣಗಳಿಂದ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಇತರ ದಾಕ್ಷಿಣಾತ್ಯ ಭಾಷೆ ಮತ್ತು ಪ್ರದೇಶಗಳ ಪರಿಚಯವು ಅವನಿಗೆ ನಿಕಟವಾಗಿರಬೇಕು. ''ಕರ್ನಾಟಕಲಹ''ದ ಉಲ್ಲೇಖವು ಅಂದಿನ ಕನ್ನಡಿಗರ ಬಗ್ಗೆ ನಿಂದಾವ್ಯಂಜಕವಾಗಿದ್ದರಿಂದ ಶೂದ್ರಕನು ಕನ್ನಡಿಗನಾಗಿರಲಾರನು ಎಂದು ತೋರುತ್ತದೆ.

(4) ಸೋಮದೇವನ ಕಥಾಸರಿತ್ಸಾಗರ (ಕಾಲ. ಸು. 1100)ದಲ್ಲಿ ''ಕರ್ಣಾಟಕ'' ಶಬ್ದವು ಬಂದಿದೆ. ಈ ಕೃತಿ ಪೈಶಾಚೀಭಾಷೆಯಲ್ಲಿ ಗುಣಾಢ್ಯನು ಬರೆದ ಬೃಹತ್ಕತೆಯನ್ನು ಪಂಂಡಿತ ಆಕರವಾಗಿ ಉಪಯೋಗಿಸಿ ಬರೆದಂತಹುದು. ಬೃಹತ್ಕಥೆಯಲ್ಲಿಯೂ ''ಕರ್ಣಾಟ'' ಶಬ್ದ ಬಂದಿರಬೇಕು. ಹಾಗಿದ್ದರೆ ಆದು ಕ್ರಿ.ಶ. 1—2 ಶತಮಾನದಷ್ಟು ಪ್ರಾಚೀನವಾಗುತ್ತದೆ. ಕಥಾಸರಿತ್ಸಾಗರದ ಅವರತಣಿಕೆಯಲ್ಲಿ ಒಬ್ಬ ಕನ್ನಡಿಗನು ಯುದ್ಧದಲ್ಲಿ ಶೌರ್ಯದಿಂದ ರಾಜನನ್ನು ಸಂತೋಷಪಡಿಸಿದನೆಂದಿದೆ. [ಕರ್ಣಾಟ: ಕೋಪಿಭೂಪಂಸ್ಮರಣೆ ಶಾರ್ಯಾದತೋಷಯತ್ (61—323)].

(5) ಸುಮಾರು ಕ್ರಿ.ಶ. 2ನೆಯ ಶ. ದಲ್ಲಿ ರಚಿತವಾದ ''ಶಿಲಪ್ಪದಿಗಾರಂ'' ಎಂಬ ತಮಿಳುಕಾವ್ಯದಲ್ಲಿ ''ಕರುನಾಡರ್'' ಎಂಬ ಪ್ರಯೋಗವೂ ಶಡೈಯನ್ ಪರಾಂತಕನ್ ಎಂಬ ಪಾಂಡುರಾಜನು ಸು. 770ರಲ್ಲಿ ಕೊಟ್ಟ ವೇಳ್ವಿಕುಡಿ ತಾಮ್ರ ಶಾಸನದಲ್ಲಿ ''ಕರುನಾಡಗನ್'' ಎಂಬ ಶಬ್ದವೂ ದೊರೆಯುತ್ತದೆ. ಇವು ''ಕರ್ನಾಟರ್, ಕರ್ನಾಟಕನ್'' ಎಂಬುದರ ತಮಿಳುರೂಪಗಳಾಗಿರಬೇಕು. ಇಲ್ಲವೆ ಅವುಗಳಿಗೂ ಮೂಲವಾದ ಕನ್ನಡ ರೂಪಗಳನ್ನೇ ಇವು ಸೂಚಿಸುತ್ತಿರಬೇಕು. ಅಂತೂ ಕರ್ನಾಟಕದ ಪ್ರಾಚೀನತೆಗೆ ಸಾಹಿತ್ಯ ಮತ್ತು ಶಾಸನಗಳಲ್ಲಿಯೇ ದೊರೆಯುವ ಈ ಆಧಾರಗಳನ್ನು ಗಮನಿಸಬೇಕು.

(6) ಕ್ರಿ. ಶ. 6ನೆಯ ಶತಮಾನದ ಆದಿಭಾಗದಲ್ಲಿದ್ದ ವರಾಹಮಿಹಿರನು ತನ್ನ ಬೃಹತ್ ಸಂಹಿತೆಯಲ್ಲಿ "ಕರ್ಣಾಟ" ಎಂಬ ಹೆಸರನ್ನು ಹೇಳಿದ್ದಾನೆ. ಸು. 900 ರಲ್ಲಿದ್ದ ರಾಜಶೇಖರನು ತನ್ನ ''ಕಾವ್ಯಮೀಮಾಂಸಾ'' ಗ್ರಂಥದ ಕೆಳಗಿನ ಪದ್ಯದಲ್ಲಿ "ಕರ್ಣಾಟ" ಪದವನ್ನು ಬಳಸಿದ್ದಾನೆ.

ರಸ: ಕೋಪ್ಯಸ್ತು ಕಾಪ್ಯಸ್ತು ರೀತಿ: ಕೋಪ್ಯಸ್ತು ವಾಗುಣ:
ಸಗರ್ವಂ ಸರ್ವ ಕರ್ಣಾಟಾ: ಟಂಕಾರೋತ್ತರಪಾಠಿನ:

ಇಲ್ಲಿ "ಕರ್ಣಾಟ" ಎಂದರೆ ಕರ್ನಾಟಕದ ಜನ, ಕನ್ನಡಿಗ ಎಂಬ ಸಾಮಾನ್ಯಾರ್ಥವಿದೆ. ಕರ್ನಾಟಕದ ಕಾವ್ಯಪಾಠಕರು ಅಥವಾ ಗಮಕಿಗಳು ಎಂಬ ವಿಶೇಷಾರ್ಥವು ಸೂಚಿತವಾಗಿರಬಹುದು.

ಕರ್ನಾಟಕದಲ್ಲಿ ಉದ್ದಿಮೆಗಳ ಪ್ರಗತಿ

ಮಾನ್ಯ ಶ್ರೀ ಕೆ. ಎಚ್. ಪಾಟೀಲ,
ಕರ್ನಾಟಕ ರಾಜ್ಯದ ವ್ಯವಸಾಯ ಮತ್ತು ಅರಣ್ಯ ಇಲಾಖೆಯ ಮಂತ್ರಿಗಳು.

ಕರ್ನಾಟಕವು ಐತಿಹಾಸಿಕ ರಾಜ್ಯ. ಭಾರತ ದೇಶದಲ್ಲಿಯೂ ಸಹ ತನ್ನ ಪೂರ್ವಜರ ಚಿರಸ್ಮರಣೀಯವಾದ ಕೃತಿಗಳಿಂದ, ಸಂಸ್ಕೃತಿ ವಿಶೇಷಗಳಿಂದ, ಅಳಿದುಳಿದ ಸ್ಮಾರಕಗಳಿಂದ ಹಿರಿದಾದ ಸ್ಥಾನ ಪಡೆದಿದೆ. ಭಾರತದ ಬುಧವಿಮೋಚನೆಯಲ್ಲಿಯೂ ಸಹ ತನ್ನದೇ ಆದ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬಂದ ರಾಜ್ಯ. ಪೂಜ್ಯ ದಿವಂಗತ ಮಹಾತ್ಮಾ ಗಾಂಧೀಜಿಯವರ ಪ್ರೀತ್ಯಾದರಗಳಿಗೆ ಪಾತ್ರವಾಗಿ ಗಾಂಧೀಪ್ರಾಂತವೆಂದೂ ಸಹ ಖ್ಯಾತಿ ಪಡೆದಿರುವ ಭಾಗ್ಯ ಈ ಕರ್ನಾಟಕಕ್ಕೆ ಇದೆ. ಭಾರತದ ನಕ್ಷೆಯಲ್ಲಿ ಕರ್ನಾಟಕವಿನ್ನೂ ಪೂರ್ಣಕಾಣುವಂತಿಲ್ಲ. ಬೇರೆ ಬೇರೆ ಅಕ್ಕಪಕ್ಕದ ರಾಜ್ಯಗಳಲ್ಲಿ ಅನೇಕ ಕಾರಣಗಳ ಮೂಲಕ ಹರಿದು ಹಂಚಿಹೋಗಿರುವ ಕನ್ನಡ ನಾಡು ಐತಿಹಾಸಿಕ ಸ್ಮರಣೀಯವಾಗಿರುವ ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತೀರ್ಣತೆ ಪಡೆದಿದ್ದರೂ, ಆ ಪರಿಪೂರ್ಣತೆಯನ್ನು ಕಾಣುವ ಭಾಗ್ಯ ಕರ್ನಾಟಕಕ್ಕೆ ಇನ್ನೂ ಬಂದಿಲ್ಲ. 1956ನೆಯ ನವೆಂಬರದಲ್ಲಿ ಕನ್ನಡ ಭಾಷೆಯನ್ನಾಡುವ ಪ್ರದೇಶಗಳು ಬೇರೆ ಬೇರೆ ರಾಜ್ಯಗಳಿಂದ ಬೇರ್ಪಟ್ಟು ಮೈಸೂರ ಪ್ರಾಂತವೆಂದು ರಚಿತವಾಯಿತು. ವಿಸ್ತೀರ್ಣಗೊಂಡ ಮೈಸೂರೇ ಇಂದು ಕರ್ನಾಟಕವೆಂದು ನಾಮಕರಣ ಹೊಂದಿದೆ. ಈಗಲೂ ಸಹ ನಮ್ಮ ಕನ್ನಡ ನಾಡಿನ, ಕನ್ನಡ ನುಡಿಯಾಡುವ ಜನರನೇಕರು ಬೇರೆ ಬೇರೆ ಪ್ರಾಂತಗಳಲ್ಲಿಯೇ ಇರುವಂತಾಗಿರುವುದು ನಮ್ಮ ಕರ್ನಾಟಕದ ಪರಿಪೂರ್ಣತೆಗಿನ್ನೂ ಅವಕಾಶವನ್ನಿತ್ತಿಲ್ಲ. ಕನ್ನಡ ನಾಡಾದ ಈ ಕರ್ನಾಟಕವು, ಕರಿನಾಡು ಎಂದೂ ಪ್ರಸಿದ್ಧಿಪಡೆದಿದೆ. ನೈಸರ್ಗಿಕ ಸೊಬಗು, ಸಿರಿಸೌಂದರ್ಯಗಳನ್ನು ಕರ್ನಾಟಕದಲ್ಲಿ ಕಾಣದೆ ಇನ್ನೆಲ್ಲಿ ಕಾಣಬಹುದು ? ಎಂದು ಹೇಳುವಷ್ಟರ ಮಟ್ಟಿಗೆ ನಮ್ಮ ಸಂಪತ್ತು ಅಧಿಕವಾಗಿದೆ, ವ್ಯವಸಾಯದಲ್ಲಿ ಇಲ್ಲಿ ಬೆಳೆಯಲಾರದ ವಸ್ತುಗಳೇ ಇಲ್ಲವೇನೋ ಎಂಬುವಷ್ಟರ ಮಟ್ಟಿಗೆ ಕೀರ್ತಿ ಪಡೆದ ನಮ್ಮ ರಾಜ್ಯ ಅನೇಕ ಹೊಳೆಗಳು, ಹಳ್ಳಿಗಳು ಅಣೆಕಟ್ಟುಗಳನ್ನು ಹೊಂದಿ ವಿಪುಲವಾಗಿ ಬೆಳೆಯುವ ಪ್ರದೇಶವಾಗಿದೆ. ಒಂದೇ ಶರಾವತಿಯಿಂದಲೇ ದೊರಕುವ ವಿದ್ಯುತ್ ಉಳಿದ ಪ್ರದೇಶಗಳಿಗಿಂತ ಅಧಿಕವಾಗಿ ಕಾಣುತ್ತಿದ್ದರೂ ಹಿಂದೆಂದೂ ಕಾಣದ ಉದ್ದಿಮೆಯ ಪ್ರಗತಿಯಿಂದಾಗಿ ಇನ್ನೂ ಹೆಚ್ಚು ವಿದ್ಯುದ್ದೀಪ ಬೇಕೆಂದು ಯೋಜಕರ ಅಭಿಪ್ರಾಯ. ಎಷ್ಟೇ ಬೇಡಿದರೂ ಪೂರೈಸಬಲ್ಲೆವು ಎಂದು ಎದೆತಟ್ಟಿ ಹೇಳುವಂತೆ ಕಾಳೀ ಯೋಜನೆಯಿಂದ ಭಾಸವಾಗುತ್ತಿದೆ. ಇದರ ಅಡಿಗಲ್ಲು ನಮ್ಮ ಪ್ರಧಾನಿಯವರಿಂದ ದಿನಾಂಕ 29ನೇ ಅಕ್ಟೋಬರ್ 1973ರಂದು ಇಡಲ್ಪಟ್ಟಿದೆ. ಶರಾವತಿಗಿಂತ ಒಂದೂವರೆ

ಪಟ್ಟಿ ಹೆಚ್ಚು ವಿದ್ಯುತ್‌ಪೂರೈಕೆಯನ್ನು ಈ ಯೋಜನೆಯಿಂದ ನಿರೀಕ್ಷಿಸಲಾಗಿದೆ. ಇದೊಂದೇ ಅಲ್ಲ. ಚಿಕ್ಕದಾದರೂ ಜೊಕ್ಕವಾಗಿರುವ ಕಾರವಾರಜಿಲ್ಲೆ ಕರ್ನಾಟಕ ರಾಜ್ಯಕ್ಕೆ ಒಂದು ಉತ್ತಮ ಕೊಡುಗೆ. ಅಲ್ಲಿರುವ ಶರಾವತಿ, ಕಾಳಿ, ಗಂಗೊಳಿ, ಅಘನಾಶಿನಿ ಮೊದಲಾದ ನದಿಗಳೆಲ್ಲವೂ ಸಮಸಮ ಪ್ರಮಾಣದಿಂದ ವಿದ್ಯುತ್ತನ್ನು ಪೂರೈಸುವ ಶ್ರೇಷ್ಠತೆಯನ್ನು ಹೊಂದಿವೆ. ಇವೆಲ್ಲ ಪೂರ್ತಿಯಾದರೆ ಕೇವಲ ಕರ್ನಾಟಕವಷ್ಟೇ ಅಲ್ಲ, ಅಕ್ಕಪಕ್ಕದ ರಾಜ್ಯಗಳಿಗೂ 'ಕರ್ನಾಟಕ' ವಿದ್ಯುತ್ಪೂರೈಕೆಯ ಕೇಂದ್ರವಾಗುವುದರಲ್ಲಿ ಸಂದೇಹವಿಲ್ಲ. ಉದ್ದಿಮೆಗಳ ಪ್ರಾರಂಭಕ್ಕೆ ಉತ್ತಮ ಹವ, ನೀರು, ವಿದ್ಯುತ್ ಹಾಗೂ ಉದ್ದಿಮೆಗಳಿಗನುಕೂಲವಾದ ಕಚ್ಚಾಮಾಲುಗಳು ಅವಶ್ಯ. ಇವೆಲ್ಲವುಗಳನ್ನು ಮೊದಲಿನಿಂದಲೂ ಪಡೆದಿರುವ ಭಾಗ್ಯ ಕರ್ನಾಟಕಕ್ಕೆ ಇದೆ. ಇದಲ್ಲದೆ ಉದ್ದಿಮೆಗಳಿಗೆ ಆಧಾರ ಸ್ತಂಭರಾದ ಉದ್ಯೋಗ ಶಿಲ್ಪಿಗಳೂ ಸಹ ನಮ್ಮ ಕರ್ನಾಟಕದಲ್ಲಿ ಆಗಿ ಹೋಗಿದ್ದಾರೆ. ಅಂತೆಯೇ ಭಾರತದಲ್ಲಿಯ ಬಹು ಪುರಾತನ ಕಾಲದ ಸಕ್ಕರೆ ಉದ್ದಿಮೆಯನ್ನು ಗಮನಿಸಿ ಮಂಡ್ಯದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸರ್ ಎಂ. ವಿಶ್ವೇಶ್ವರಯ್ಯನವರ ಸಲಹೆಯಂತೆ ಪ್ರಾರಂಭವಾಗಿದೆ. ಆದಿನ್ನೂ ಉತ್ತಮವಾಗಿ ನಡೆದು ಇಂದು ತನ್ನದೇ ಆದ 'ವೈಶಾಲ್ಯತೆ ವಿಸ್ತೀರ್ಣತೆಗಳನ್ನು ಪಡೆಯಲಿದೆ. ಭದ್ರಾವತಿ ಕಬ್ಬಿಣ ಕಾರ್ಖಾನೆಯ ಶ್ರೇಯಸ್ಸು ಪೂರ್ಣವಾಗಿ ಅವರಿಗೇ ಸಲ್ಲತಕ್ಕದ್ದು. ಅಂದಿನಿಂದಲೂ ಉತ್ತಮವಾದ ಹೊಸ ಹೊಸ ಕಾರ್ಯಾರಂಭ ಮಾಡುತ್ತಿರುವುದಲ್ಲದೆ ತನ್ನ ವಿಸ್ತೀರ್ಣತೆಗಾಗಿ ಕೇಂದ್ರ ಸರ್ಕಾರದ ಸಹಾಯ ಪಡೆದಿದೆ. ಇಲ್ಲಿಯ ಕಬ್ಬಿಣವು ಭಾರತದಲ್ಲಾಗುವ ಶ್ರೇಷ ಕಬ್ಬಿಣಗಳ ಮಾಲಿಕೆಯನ್ನು ಪಡೆದಿರುವುದೂ ಕನ್ನಡಿಗರಿಗೊಂದು ಹೆಮ್ಮೆ. ಮುಂದಾಗಲಿರುವ ಹೊಸಪೇಟೆ ಹತ್ತಿರದ ಕಬ್ಬಿಣ ಕಾರ್ಖಾನೆಯೂ ಸಹ ವಿಜಯನಗರ ಉಕ್ಕಿನ ಕಾರ್ಖಾನೆಯಾಗಿ ನಾಮಾಂಕಿತವಾಗಲಿರುವುದೂ ಸಹ ಕನ್ನಡಿಗರಿಗೆ ಹೆಮ್ಮೆಯ ಮಾತಾಗಿದೆ. ಸಣ್ಣ ಸಣ್ಣ ಕಬ್ಬಿಣದ ಗಣಿಗಳೂ ಹಾಗೂ ಅದನ್ನಾಧರಿಸಿರುವ ಕಾರ್ಖಾನೆಗಳೂ ಸೊಂಡೂರ ಮೊದಲಾದ ಕಡೆಗಳಲ್ಲಿವೆ. ರಾಜ್ಯಕ್ಕಾಗಿ ಬೇಕಾಗುವ ಸಿಮೆಂಟನ್ನೂ ಸಹ ನಮ್ಮಲ್ಲಿಯೇ ಹುಟ್ಟುವಳಿ ಮಾಡುವ 6 ಸಿಮೆಂಟ್ ಕಾರ್ಖಾನೆಗಳಿಂದು ಇದ್ದರೆ, ಇನ್ನೂ ಕೆಲವು ತೀವ್ರದಲ್ಲಿಯೇ ಪ್ರಾರಂಭವಾಗಲಿವೆ. ರಾಜ್ಯದಲ್ಲಿ ನೀರಾವರಿ ಪ್ರದೇಶ ಹೆಚ್ಚಿದಂತೆಲ್ಲ ಸಕ್ಕರೆ ಕಾರ್ಖಾನೆಗಳೂ ಬೆಳೆಯಲಿವೆ. ಈಗ 13 ಕಾರ್ಖಾನೆಗಳಾದರೆ ಇನ್ನೂ 6 ಕಾರ್ಖಾನೆಗಳು ಹೊಸದಾಗಿ ನಿರ್ಮಾಣಗೊಳ್ಳುವ ಲಕ್ಷಣಗಳಿವೆ. ಕಬ್ಬಿಣ, ಸಕ್ಕರೆ ಕಾರ್ಖಾನೆಗಳಷ್ಟೇ ಕರ್ನಾಟಕದ ಔಚಿತ್ಯವಲ್ಲ. ವ್ಯವಸಾಯ ಪ್ರಬಲವಾದ ಈ ಪ್ರಾಂತದಲ್ಲಿ ವ್ಯವಸಾಯಗಾರನಿಗೆ ಸಹಾಯಕವಾಗುವ ಅನೇಕ ಉದ್ದಿಮೆಗಳಿವೆ. ಹತ್ತಿನೂಲಿನ ಗಿರಣಿಗಳು ಎಣ್ಣೆ ತೆಗೆಯುವ ಕಾರ್ಖಾನೆಗಳು, ಅಕ್ಕಿಗಿರಣಿ, ಅಕ್ಕಿ ತೌಡಿನಿಂದ ಎಣ್ಣೆತೆಗೆಯುವ ಕಾರ್ಖಾನೆ, ದನಗಳಿಗೆ ಪೌಷ್ಟಿಕ ಆಹಾರ ತಯಾರಿಸುವ ಕಾರ್ಖಾನೆ ಶೀತಲೀಕರಣದ ಉದ್ದಿಮೆಗಳೂ ಅಲ್ಲಲ್ಲಿ ತಲೆ ಎತ್ತುತ್ತಿರುವುದನ್ನು ನಾವು ಕಾಣುತ್ತೇವೆ. 1972ನೇ ಇಸವಿಯಿಂದಂತೂ ಉದ್ದಿಮೆಗಳ ಪ್ರಗತಿಯೆಡೆಗೆ ಶ್ರೀ ದೇವರಾಜ ಅರಸ್ ಮಂತ್ರಿಮಂಡಲವು ವಿಶೇಷ ಆಸ್ಥೆ ವಹಿಸಿರುವುದರಿಂದ ವಿಶೇಷ ಪ್ರಗತಿ ಕಾಣುತ್ತಿದ್ದೇವೆ, ವ್ಯವಸಾಯವನ್ನಾಧರಿಸಿ ಬರುವ ಉದ್ದಿಮೆಗಳಷ್ಟೇ ಅಲ್ಲ.

ಈ ಪ್ರಾಂತದಲ್ಲಿ ಹೇರಳವಾದ ಅರಣ್ಯ ಸಂಪತ್ತಿದೆ. ಅದನ್ನಾಧರಿಸಿ ಪ್ಲೈಯವುಡ್ ಫ್ಯಾಕ್ಟರಿ ಗಳನೇಕ ಕಾರ್ಯಾರಂಭ ಮಾಡುತ್ತಿವೆ. ಕಾಗದದ ಕಾರ್ಖಾನೆಗಳೂ ಹಾಗೂ ಅನೇಕ ಕಟ್ಟಿಗೆ ಕೊರೆಯುವ ಮತ್ತು ಫರ್ನೀಚರಗಳನ್ನು ಮಾಡುವ ಉದ್ದಿಮೆಗಳೂ ವಿಪುಲವಾಗಿ ಕಾರ್ಯಾಚರಣೆಯಲ್ಲಿವೆ. ಅರಣ್ಯ ಪ್ರದೇಶದಲ್ಲಿ ದೊರಕಲಿರುವ ಹೇರಳವಾದ ಸಂಪತ್ತನ್ನು ಉಪಯೋಗಿಸಿಕೊಂಡು ಬೇರೆ ಬೇರೆ ಉದ್ದಿಮೆಗಳನ್ನು ರಾಜ್ಯದಾದ್ಯಂತ ಪ್ರಾರಂಭಿಸಲೆಂದೆ 'ಕರ್ನಾಟಕ ಸ್ಟೇಟ್ ಫಾರೆಸ್ಟ್ ಇಂಡಸ್ಟ್ರೀಜ ಕಾರ್ಪೊರೇಷನ್' ದಿನಾಂಕ 18-4-1973 ರಂದು ಜನ್ಮ ತಾಳಿದೆ. ಅದರ ಮುಖಾಂತರ ಕರ್ನಾಟಕ ಸರ್ಕಾರವು ತನ್ನ ನಿರೀಕ್ಷಿಸಿದ ಕಾರ್ಯಾಚರಣೆಯಿಂದ ಹೊಸ ಉದ್ದಿಮೆಗಳನ್ನು ತ್ವರಿತಗತಿಯಿಂದ ಪ್ರಾರಂಭಿಸಲಿವೆ. ಇದ ರಂತೆ ಆಗ್ರೋ ಇಂಡಸ್ಟ್ರೀಜದವರೂ ಸಹ ಉದ್ದಿಮೆ ಪ್ರಾರಂಭಿಸಲಿದ್ದಾರೆ. ಕರ್ನಾಟಕದ ಜನರೇ ಮಾತ್ರ ಉದ್ದಿಮೆಗನುಗುಣವಾದ ಸೌಕರ್ಯಗಳಿಂದ ಆಕರ್ಷಿತರಾಗಿಲ್ಲ. ಕೇಂದ್ರ ಸರ್ಕಾರವೂ ಸಹ ಇಲ್ಲಿಯ ಸೌಕರ್ಯ ಹಾಗೂ ಉದ್ದಿಮೆಗನುಗುಣವಾದ ವಾತಾವಾರಣವನ್ನು ಗಮನಿಸಿ ಈ ಕೆಳಗಿನ ಉದ್ದಿಮೆಗಳನ್ನು ಪ್ರಾರಂಭಿಸಿದ್ದಾರೆ ;

(1) ಹಿಂದುಸ್ತಾನ ವಿರೋನಾಟಿಕ್ಸ್ ಲಿಮಿಟೆಡ್
(2) ಹಿಂದೂಸ್ತಾನ ಪೆಪಿನ್ ಟೂಲ್ಸ್ ಲಿಮಿಟೆಡ್
(3) ಹಿಂದೂಸ್ತಾನ ವಾಚ್ ಫ್ಯಾಕ್ಟರಿ ಲಿಮಿಟೆಡ್
(4) ಸೆಂಟ್ರಲ್ ಪೆಪಿನ್ ಟೂಲ್ಸ್ ಲಿಮಿಟೆಡ್
(5) ಭಾರತ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(6) ಇಂಡಿಯನ್ ಟೆಲಿಫೋನ್ಸ್ ಇಂಡಸ್ಟ್ರೀಸ್

ಮೊದಲಾದ ಕೇಂದ್ರ ಸರ್ಕಾರದಿಂದ ನಡೆಸಲ್ಪಡುವ ನಾಮಾಂಕಿತ ಉದ್ದಿಮೆಗಳೂ ಇಲ್ಲಿ ಪ್ರಗತಿಪರವಾಗಿ ಕಾರ್ಯಮಾಡುತ್ತಿವೆ. ಹುಬ್ಬಳ್ಳಿಯಲ್ಲಿರುವ ರೈಲ್ವೆ ವರ್ಕ್‌ಷಾಪ್ ದೊಡ್ಡ ಪ್ರಮಾಣದಲ್ಲಿ ಕಾರ್ಯಮಾಡುತ್ತಿದೆಯಲ್ಲದೆ, ತನ್ನ ದಕ್ಷತೆ ಹಾಗೂ ಗುಣಾನುಗ್ರಹದಿಂದ ಭಾರತದಲ್ಲಿಯೇ ಶ್ರೇಷ್ಠವಾಗಿದೆಯೆಂದು ಕೇಂದ್ರ ಸರ್ಕಾರದ ರೈಲ್ವೆ ಸಚಿವರಾಗಿದ್ದ ಶ್ರೀ ಹನುಮಂತಯ್ಯನವರು ನುಡಿದಿದ್ದರು. ಬೆಳಗಾಂವಿಯಲ್ಲಿರುವ ದೊಡ್ಡ ಪ್ರಮಾಣದ ಅಲ್ಯುಮಿನಿಯಮ್ ಕಾರ್ಖಾನೆಯೂ ಸಹ ಈ ರಾಜ್ಯಕ್ಕೆ ಮೆರುಗು ತರುವಂತಹವಾಗಿದೆ. ಕೇವಲ ನೀರು ಹಾಗೂ ವಿದ್ಯುತ್ಶಕ್ತಿಯನ್ನೇ ಈ ಕಾರ್ಖಾನೆಯ ಕಚ್ಚಾವಸ್ತುಗಳಾಗಿರುವುದನ್ನು ಗಮನಿಸಿದಾಗ ಕರ್ನಾಟಕ ಪ್ರದೇಶವೇ ಮಾತ್ರ ಇದಕ್ಕೆ ಯೋಗ್ಯ ಸ್ಥಳವಾಗಿದೆ. ಇದರಿಂದ ನಿರ್ಮಾಣಗೊಳ್ಳುವ ವಸ್ತುಗಳನ್ನು ರಕ್ಷಣಾ ಖಾತೆಯವರೂ ಉಪಯೋಗಿಸುವರು.

ಕೇಂದ್ರ ಸರ್ಕಾರವು ಒಂದೆಡೆ ದೊಡ್ಡ ಪ್ರಮಾಣದಲ್ಲಿ ಉದ್ದಿಮೆಗಳನ್ನು ಪ್ರಾರಂಭಿಸಿದ್ದರೆ ನಾನಾ ಪ್ರಕಾರದ ಉದ್ದಿಮೆಗಳನ್ನು ರಾಜ್ಯ ಸರ್ಕಾರ ನಡೆಸುತ್ತಿವೆ ರಾಜ್ಯ ಸರ್ಕಾರವು.

(1) ಗಂಧದ ಎಣ್ಣೆಯ ಕಾರ್ಖಾನೆ
(2) ಮೈಸೂರು ಸಾಬೂನು ಕಾರ್ಖಾನೆ

(3) ಮೈಸೂರು ರೇಷ್ಮೆ ನೇಯುವ ಕಾರ್ಖಾನೆ
(4) ರೇಡಿಯೋ ಮತ್ತು ಇಲೆಕ್ಟ್ರಿಕಲ್ ಮ್ಯಾನುಫ್ಯಾಕ್ಚರಿಂಗ್ ಕಾರ್ಖಾನೆ
(5) ಮಂಡ್ಯ ನ್ಯಾಷನಲ್ ಪೇಪರ್ ಕಂಪನಿ.
(6) ಮೈಸೂರು ಆಯರ್ನ್ ಅಂಡ್ ಸ್ಟೀಲ್ ಕಂಪನಿ ;
(7) ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್.

ಮೊದಲಾದ ಉದ್ದಿಮೆಂಗಳಲ್ಲಿ ಪ್ರತ್ಯಕ್ಷ ಭಾಗವಹಿಸಿ ನಡಸುತ್ತಿದ್ದರೆ ಅನೇಕ ಉದ್ದಿಮೆಗಳನ್ನು ಸಹಕಾರೀ ಸಂಘಗಳ ಮುಖಾಂತರ ನಡೆಸಲು ಸಹಾಯ ಮಾಡುತ್ತಿವೆ. ಸಹಕಾರೀ ರಂಗದಲ್ಲಿ ಗದಗಿನಲ್ಲಿರುವ ನಾನಾ ಪ್ರಕಾರದ ಸಂಘಗಳು ಸಹಕಾರೀ ಚಳವಳಿಗೆ ಮೆರುಗು ತರುವಂಥಹವಾಗಿವೆ. ಹತ್ತಿಕಾಳಿನಿಂದ ಎಣ್ಣೆ ತೆಗೆಯುವ ಕಾರ್ಖಾನೆ, ಹತ್ತಿ ಸಹಕಾರಿ ಮಿಲ್ಲು, ಕ್ಯಾಟಲ್ ಫೀಡ್ಸ್ ಸಂಘ, ಸೇಂಗಾ ಎಣ್ಣೆ ತೆಗೆಯುವ ಸಂಘ. ಡೈರಿ ಪ್ರೊಸೆಸ್ಸಿಂಗ್ ಸಂಸ್ಥೆಗಳೇ ಮೊದಲಾದವುಗಳು ಪ್ರಸಿದ್ಧಿಯಾಗಿದ್ದರೆ ಮಂಡ್ಯದಲ್ಲಿ, ಮಂಗಳೂರು, ಕೊಡಗುಗಳಲ್ಲಿ ಮತ್ತು ಕಾರವಾರ ಜಿಲ್ಲೆಗಳಲ್ಲಿ ಅನೇಕ ಪ್ರೊಸೆಸಿಂಗ್ ಸಂಸ್ಥೆಗಳಿರುವುದನ್ನು ಕಾಣಬಹುದು, ಎಲ್ಲೆಡೆಗೆ ಹತ್ತಿ ನುರಿಸುವ ಜಿನ್ನಿಂಗ್ ಫ್ಯಾಕ್ಟರಿ ಹಾಗೂ ಹತ್ತಿ ನುರಿಸುವ ಮಿಲ್ಲುಗಳನ್ನು ಕಾಣಬಹುದು. ಖಾಸಗೀ ರಂಗದಲ್ಲಿಯೂ ಸಹ ಉದ್ದಿಮೆಗಳು ಅನೇಕ ಎಲ್ಲ ಉದ್ದಿಮೆಗಳನ್ನಿಲ್ಲಿ ವಿವರಿಸುವ ಸಾಹಸವನ್ನು ನಾನು ಮಾಡಲಾರೆ. ಅವುಗಳಲ್ಲಿ

(1) ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್ ;
(2) ಇಂಡಿಯನ್ ಪ್ಲೈಯವುಡ್ ಫ್ಯಾಕ್ಟರಿ ;
(3) ಡಾಯ್‌ಮಂಡ್ ಸಿಮೆಂಟ್ಸ್ ;
(4) ಮೈಸೂರು ಸಿಮೆಂಟ್ಸ್ ;
(5) ಬಾಗಲ್‌ಕೋಟ್ ಸಿಮೆಂಟ್ ಕಂಪನಿ ;
(6) ಕಿರ್ಲೋಸ್ಕರ್ ಇಲಿಕ್ಟ್ರಿಕಲ್ ಕಂಪನಿ ;
(7) ಬಿನ್ನಿಗಾರ್ಮೆಂಟ್ ಫ್ಯಾಕ್ಟರಿ. ಬೆಂಗಳೂರು.
(8) ಜಾವಾ ಸ್ಕೂಟರ್ಸ್ ಲಿಮಿಟೆಡ್, ಮೈಸೂರು ;
(9) ಇಂಟರ್‌ನ್ಯಾಷನಲ್ ಇನ್ಸ್‌ಟ್ರುಮೆಂಟ್ಸ್ ಲಿಮಿಟೆಡ್ ;
(10) ಮೋಟಾರ್ ಇಂಡಸ್ಟ್ರಿಯಸ್ ಲಿಮಿಟೆಡ್ ;
(11) ಪವರ್ ಟಿಲರ್ಸ್;
(12) ಗ್ಲಾಸ್ ಫ್ಯಾಕ್ಟರಿ, ವೈಟ್‌ಫೀಲ್ಡ್ ;
(13) ಇಂಡಿಯನ್ ಟೋಬ್ಯಾಕೋ ಲಿಮಿಟೆಡ್ ;
(14) ಗೋಡಂಬಿ ಪ್ರೊಸೆಸ್ಸಿಂಗ್ ಕಾರ್ಖಾನೆಗಳು, ಮಂಗಳೂರು ;
(15) ಸ್ಪಿನ್ನಿಂಗ್ ವೀವಿಂಗ್ ಮಿಲ್ಲುಗಳು, ದಾವಣಗೆರೆ.

ಇವಲ್ಲದೆ ಇನ್ನೂ ಅನೇಕ ಭಾಗಗಳಲ್ಲಿ ಬೇರೆ ಬೇರೆ ಪ್ರಕಾರದ ಉದ್ದಿಮೆಗಳು ಪ್ರಾಮುಖ್ಯವಾಗಿವೆ, ಧಾರವಾಡ, ವಿಜಾಪುರ, ಬೆಳಗಾಂವಿ, ಗುಲ್ಬರ್ಗ ಜಿಲ್ಲೆಗಳಲ್ಲಿ ಕೈಮಗ್ಗ ಹಾಗೂ ಪವರ್‌ಲೂಮ್ ಉದ್ದಿಮೆಗಳೂ ವಿಪುಲವಾಗಿವೆ. ಹೆಬಸೂರ್ ಗುಡಾರಗಳೂ ನವಲಗುಂದ ಜಮಖಾನೆಗಳೂ ಗುರ್ಲಹೊಸೂರ ಖಾದಿಬಟ್ಟೆಗಳೂ ಖಾನಾಪುರದ ಮಣ್ಣಿನ ಪಾತ್ರೆಗಳೂ ಮಂಗಳೂರಿನ ಹಂಚಿನ ಕಾರ್ಖಾನೆಗಳೂ ಕೊಳ್ಳೇಗಾಲ ಹಾಗೂ ಚನ್ನಪಟ್ಟಣ ಗಳಲ್ಲಿಯ ರೇಶ್ಮೆ ಬಟ್ಟೆಗಳೂ ಕರ್ನಾಟಕ ಉದ್ದಿಮೆಗಳಲ್ಲಿಯ ಹಿರಿಮೆಯನ್ನು ತೋರಿಸುವ ಚಿಕ್ಕಚಿಕ್ಕ ಉದ್ದಿಮೆಗಳಾಗಿವೆ. ಬೆಂಗಳೂರು, ಹುಬ್ಬಳ್ಳಿ, ಮೈಸೂರು ಬೆಂಗಳೂರು ಮೊದಲಾದ ನಗರಗಳಲ್ಲಿ ಇಂಡಸ್ಟ್ರಿಯಲ್ ಎಸ್ಟೇಟುಗಳು ನಿರ್ಮಾಣಗೊಂಡಿವೆ; ಉದ್ದಿಮೆಗಳ ಪ್ರಗತಿ ಹೆಚ್ಚಾಗಿ ಕಾಣುವುದು, ಮೊದಲಿನಿಂದಲೂ ಬೆಳೆಯುತ್ತ ಬಂದ ಹಳೇ ಮೈಸೂರು ಪ್ರದೇಶದಲ್ಲಿ. ಇದಕ್ಕೆ ಅಂದಿನ ಜನಪ್ರಿಯ ಮಹಾರಾಜರ ಪ್ರೋತ್ಸಾಹನೆ, ಅವರಿಗೆ ದೊರೆತಿದ್ದ ಪ್ರತಿಭಾವಂತ ದಿವಾಣರು ಹಾಗೂ ಸಲಹೆಗಾರರೂ ಬಹುಮಟ್ಟಿಗೆ ಕಾರಣರೆಂದು ಒಪ್ಪಲೇಬೇಕಾಗುವುದು. ಈ ಮೊದಲು ಸಮರ್ಥನೀಯವಾದ ಕಾರ್ಯಕ್ರಮಗಳನ್ನು ಸರ್ಕಾರ ಕೈಕೊಳ್ಳಲಿಲ್ಲವೆಂದು ರಾಜ್ಯದ ಎಲ್ಲೆಡೆಗಳಲ್ಲಿ ನಿರೀಕ್ಷಿಸಿದ ಪ್ರಗತಿ ಕಾಣಲಿಲ್ಲ; ಇದನ್ನಿಂದು ತುಂಬಬೇಕಾಗಿದೆ. ಈ ಭಾರ ಸರ್ಕಾರದ ಮೇಲೆ ಬಿದ್ದಿದೆ; ಸುದೈವದಿಂದ ಶ್ರೀಮಾನ್ ಎಸ್. ಎಂ. ಕೃಷ್ಣರವರಂಥ ಪ್ರತಿಭಾನ್ವಿತ ಮಂತ್ರಿಗಳ ಕೈಯಲ್ಲಿ ಈ ಉದ್ದಿಮೆ ಶಾಖೆ ದೊರತಿರುವುದರಿಂದ ನಮ್ಮ ನಿರೀಕ್ಷಣ್ಣ ಸಾಧಿಸಿ ಇಡೀ ಕರ್ನಾಟಕದ ಜನತೆ ಹರ್ಷಗೊಳ್ಳುವಂತೆ ಬೇರೆ ಬೇರೆ ಸಣ್ಣ ದೊಡ್ಡ ಉದ್ದಿಮೆಗಳು ಪ್ರಾರಂಭವಾಗುವುದರಲ್ಲಿ ಸಂದೇಹವಿಲ್ಲ; ಇದಕ್ಕೆಲ್ಲ ಜನತೆಯ ಸಹಕಾರವೂ ಅವಶ್ಯ.

ಕರ್ನಾಟಕದಲ್ಲಿ ಮಂಗಳೂರು ಕಾರವಾರಗಳೆರಡೂ ಉತ್ತಮ ದರ್ಜೆಯ ಬಂದರ ಗಳಾಗಬಲ್ಲವು. ಕಾರವಾರವಂತೂ ಅತ್ಯಲ್ಪ ಖರ್ಚಿನಲ್ಲಿಯೇ ಉತ್ತಮ ದರ್ಜೆಯ ಬಂದರವಾಗುವಂತಿದೆ. ನೈಸರ್ಗಿಕ ಸಂರಕ್ಷಣೆಯಿಂದ ಸುಸಜ್ಜಿತವಾದ ಈ ಬಂದರದ ಉಪಯೋಗವಾಗುವಂತಾದರೆ ಜಗತ್ತಿನಲ್ಲಿ ಇನ್ನೊಂದು ಕಡಿಮೆ ಖರ್ಚಿನ ಹಾಗೂ ಶ್ರೇಷ್ಠ ದರ್ಜೆಯ ಬಂದರವಾಗುವುದು. ಕರ್ನಾಟಕದ ತುಂಬಿಲ್ಲ ವಿಪುಲವಾಗಿ ದೊರಕುತ್ತಿರುವ ನಾನಾಪ್ರಕಾರದ ಖನಿಜ ಪದಾರ್ಥಗಳನ್ನು ಪರ ರಾಷ್ಟ್ರಕ್ಕೆ ಕಳಿಸಲು ಈ ಬಂದರುಗಳು ಅತಿ ಸಹಾಯಕವಾಗುವವು. ಇವುಗಳ ಅಭಿವೃದ್ಧಿಗೆ ಕರ್ನಾಟಕದ ಸರ್ವ ಪ್ರಯತ್ನ ಮುಂದು ವರಿಯಲಿ. ಕರ್ನಾಟಕದ ಒಂದಂಚಿನಲ್ಲಿ ಮಂಗಳೂರ ಬಂದರದಲ್ಲಿ ಗೊಬ್ಬರ ತಯಾರಿಕೆಯ ಕಾರ್ಖಾನೆ, ಮೀನುಗಳ ಪರಿಷ್ಕರಣ ಕಾರ್ಖಾನೆ, ಗೋಡಂಬಿ ಪರಿಷ್ಕರಣ ಕಾರ್ಖಾನೆಗಳಿದ್ದು ಅವೆಲ್ಲವುಗಳೂ ರಾಜ್ಯಕ್ಕೆ ಪರರಾಷ್ಟ್ರದ ಸಂಪತ್ತು ಪಡೆಯುವ ಸಾಧನಗಳಾಗಿವೆ. ಕಾರವಾರ ಬಂದರವಾದಾಗ ಇವೆಲ್ಲ ಕಾರ್ಖಾನೆಗಳೂ ಸುಲಭ ಸಾಧ್ಯವಷ್ಟೇ ಅಲ್ಲದೆ ಕಾರವಾರದ ಉತ್ತಮ ಹವೆಯ ಪರಿಣಾಮವಾಗಿ ಅಲ್ಲಿ ವಿಪುಲವಾಗಿ ಬೆಳೆಯುವ ಉತ್ತಮ ತರಗತಿಯ ಅನಾನಸ್ ಮೊದಲಾದ ಹಣ್ಣು ಹಂಪಲಗಳನ್ನೂ ಕಾರವಾರ ಜಿಲ್ಲೆಯಲ್ಲಿ ದೊರಕಲಿರುವ

ಮ್ಯಾಂಗನೀಸ್ ಮೊದಲಾದ ಖನಿಜ ಪದಾರ್ಥಗಳನ್ನೂ ಪರರಾಷ್ಟ್ರಗಳಿಗೆ ಕಳಂಹಿಸಲೂ ಅನುಕೂಲವಾಗುವುದು. ಇದಷ್ಟೇ ಅಲ್ಲದೆ ಚಿತ್ರದುರ್ಗ ಜಿಲ್ಲೆಯಲ್ಲಿ ದೊರಕಿರುವ ಇಂಗಳಧಾಳ ಖನಿಯಿಂದ ಹೇರಳವಾಗಿ ದೊರಕಬಹುದೆಂದು ನಿರೀಕ್ಷಿಸಲಾಗಿರುವ ತಾಮ್ರವೂ ಸಹ ನಮ್ಮ ರಾಜ್ಯದ ಸಂಪತ್ತಿಗೆ ಸಹಾಯಕವಾಗುವುದು. ರಾಜ್ಯದ ಹಿತದೃಷ್ಟಿಯಿಂದ ಕಾರವಾರ—ಹುಬ್ಬಳ್ಳಿ ರೈಲ್ವೆ ನಿರ್ಮಾಣವೂ ಸಹ ಅತ್ಯವಶ್ಯ. ಇದರ ರಚನೆಯಾದಾಗ ಇಂದು ವಾಹನದ ವೆಚ್ಚ ಅಧಿಕವಾಗಬಹುದಾದ ಈ ಖನಿಜ ಪದಾರ್ಥಗಳ ರವಾನೆಯೂ ಆಕರ್ಷಕವಾದೀತು.

ಇಷ್ಟೆಲ್ಲ ಉದ್ದಿಮೆಗಳಿದ್ದರೂ, ಅವು ಕಡಿಮೆ. ಕರ್ನಾಟಕದ ಸಂಪತ್ತು ಗಮನಿಸಿದಾಗ ಉದ್ದಿಮೆಗಳಿಗೆ ಅವಕಾಶ ಅತಿಯಾಗಿದೆ. ಕಚ್ಚಾಮಾಲು ವಿಶೇಷವಾಗಿವೆ. ವಿದ್ಯುದ್ದೀಪ ಸಾಕಷ್ಟು ಸಿಗುವ ಸಾಧನಗಳಿವೆ. ನೀರು, ಭೂಗುಣ, ಹವಾಮಾನಗಳೆಲ್ಲವೂ ಅನುಕೂಲವಾಗಿವೆ. ಅದೇಕೆ, ಇಲ್ಲಿಯ ಕೆಲಸಗಾರರ ಮನೋವೃತ್ತಿಯೂ ಸಹ ಉಳಿದ ಭಾಗಗಳಿಗಿಂತ ಸಮಾಧಾನ ಸ್ವಭಾವವಾಗಿರುವುದೂ ಸಹ ನಮ್ಮಲ್ಲಿ ಉದ್ದಿಮೆ ಬೆಳೆಯಲು ಅನುಕೂಲವಾಗಿದೆ. ಬೇರೆ ಬೇರೆ ಕಡೆಗಳಿಂದಲೂ ಜನರು ಆಕರ್ಷಿತರಾಗಿ ಮುಂದೆ ಬರಹತ್ತಿದ್ದಾರೆ. ಅತಿ ಹಿಂದುಳಿದ ಧಾರವಾಡ ಜಿಲ್ಲೆಯಂಥ ಪ್ರದೇಶಗಳಲ್ಲಿಯೂ ಸಹ ಇಂದು ಉದ್ದಿಮೆಗಳ ಕ್ರಾಂತಿಯಾಗಬಹುದೆಂಬ ವಾತಾವರಣವಿದೆ. ಧಾರವಾಡ ಹುಬ್ಬಳ್ಳಿಗಳ ನಡುವೆ ಬೆಳೆದು ಬರಲಿರುವ ಉದ್ದಿಮೆಗಳು ಖಾಸಗಿ ರಂಗದ ಹಿರಿಮೆ ತೋರಿಸುವಂತಾಗಿದ್ದರೆ ಅದಕ್ಕೆ ಸ್ಪರ್ಧಾತ್ಮಕ ದೃಷ್ಟಿಯಿಂದ ಗದಗ—ಹುಲಕೋಟಿಗಳ ನಡುವೆ ಸಹಕಾರಿ ರಂಗದಲ್ಲಿ ನಾನಾ ಪ್ರಕಾರದ ಉದ್ದಿಮೆಗಳು ಬೆಳೆದು ಬರಹತ್ತಿವೆ. ಇನ್ನೂ ಹೆಚ್ಚು ಉದ್ದಿಮೆಗಳು ಬೆಳೆಯಬೇಕು. ಕಾರವಾರ ಜಿಲ್ಲೆಯಲ್ಲಿ ದೊರಕಲಿರುವ ವಿಪುಲವಾದ ಅರಣ್ಯ ಸಂಪತ್ತನ್ನುಪಯೋಗಿಸುವ ಸಾಧನಗಳನ್ನು ನಾವಿಂದು ಉಪಯೋಗಿಸಿ ಪ್ರತಿ ತಾಲೂಕಿನಲ್ಲೂ ಉದ್ದಿಮೆ ಪ್ರಾರಂಭಿಸಬೇಕು. ಅದೇ ರೀತಿ ದಟ್ಟಾರಣ್ಯವಿರುವ ಜಿಲ್ಲೆಗಳಲ್ಲೆಲ್ಲ ಉದ್ದಿಮೆಗಳನ್ನು ಪ್ರಾರಂಭಿಸಬೇಕು. ಇದರಿಂದ ಬಡಜನತೆಯಲ್ಲಿ ಮೂಡಿರುವ ಅರಣ್ಯ ಭೂಮಿ ಪಡೆಯಬೇಕೆಂಬ ದಾಹ ಕಡಿಮೆಯಾಗಿ ಅವರು ಸಹ ಉದ್ದಿಮೆಗಳಲ್ಲಿ ಪಾಲ್ಗೊಂಡು ತಮ್ಮ ಆರ್ಥಿಕ ಸಂಪತ್ತು ದೊರಕಿಸಲು ಅನುಕೂಲವಾಗುತ್ತದೆ. ಪ್ರಾಮುಖ್ಯವಾಗಿ ವ್ಯವಸಾಯ ಅರಣ್ಯಗಳೇ ಕರ್ನಾಟಕದ ಮೂಲ. ಅವುಗಳಿಗೆ ಅನುಕೂಲವಾದ ಉದ್ದಿಮೆಗಳ ಪ್ರಾರಂಭವೇ ಜನತೆಯ ನಿಜ ಸುಖಸಾಧನಗಳ ಮಾರ್ಗ. ಆ ದಿಶೆಯಲ್ಲಿಂದ ಸರ್ಕಾರದ ಪ್ರಯತ್ನ ನಡೆದಿದೆ. ಅದಕ್ಕೆ ಕನ್ನಡಿಗರೆಲ್ಲ ಸಹಕಾರ ಹಸ್ತವನ್ನಿಟ್ಟು ಉದ್ದಿಮೆಕರಣದಲ್ಲಿ ಕರ್ನಾಟಕದ ಕೀರ್ತಿ ಭಾರತದಲ್ಲಿ ಬೆಳಗುವಂತಾಗಲಿ. ವಿಪುಲವಾದ ಉದ್ಧಿಮೆಗಳನ್ನು ಕರ್ನಾಟಕದಾದ್ಯಂತ ಕಂಡಾಗ ದಿವಂಗತ ಸರ್ ಎಂ. ವಿಶ್ವೇಶ್ವರಯ್ಯನವರು ಹೇಳಿದಂತೆ 'Industrialise or Perish' ಎಂಬ ವಾಕ್ಯದ ನಿಜವಾದ ಅನುಕರಣೆ ಮಾಡಿದ ಗೌರ್ವ ಕರ್ನಾಟಕಕ್ಕೆ ಬರಲಿ ಎಂದು ಹಾರೈಸುವೆ.

ಕರ್ನಾಟಕ---ಇಂದು

ಶ್ರೀ ಬಿ. ಜಿ. ಕುಲಕರ್ಣಿ, ಡ್ಯಾರೆಕ್ಟರ್, ವಾರ್ತಾ ಇಲಾಖೆ.

ಎರಡು ಕೋಟಿ ಕನ್ನಡ ಜನರ ಬಹುದಿನದ ಕನಸು ನನಸಾಗಿ 1956ರಲ್ಲಿ ಕನ್ನಡನಾಡು ಒಂದಾಯಿತು—ಏಕೀಕೃತ ರಾಜ್ಯವು ನಿರ್ಮಾಣ ಹೊಂದಿತು. ಈಗ ಮೂರು ಕೋಟಿ ಕನ್ನಡ ಜನತೆಯ ಒಕ್ಕೊರಲಿನ ಒಮ್ಮನದ ಬೇಡಿಕೆಯ ಫಲವಾಗಿ ಆ ರಾಜ್ಯವು ಉಜ್ವಲ ಪರಂಪರೆಯ ತನ್ನ ಹೆಸರನ್ನು ಪುನಃ ತಳೆದು ಕರ್ನಾಟಕ ರಾಜ್ಯವಾಗುತ್ತಿದೆ. ಈ ಮಧ್ಯಂತರದ ಹದಿನೇಳು ವರುಷಗಳಲ್ಲಿ ರಾಜ್ಯವು ಸುಮಾರು 1200 ಕೋಟಿ ರೂ. ಧನಸ್ನಾನದ ಹಾಗು ಜನತೆಯ ಜಪತಪಗಳ ಫಲವಾಗಿ ಹೆಚ್ಚಿನ ಶಕ್ತಿಯನ್ನೂ ಪುಷ್ಟತೆಯನ್ನೂ ಪಡೆದಿದೆ.

ಚಿನ್ನದ ನಾಡು

ದ್ವಿತೀಯ ಪಂಚವಾರ್ಷಿಕ ಯೋಜನೆಯಿಂದ ಪ್ರಾರಂಭವಾದ ರಾಜ್ಯದ ಅಭಿವೃದ್ಧಿ ಕಾರ್ಯವು ಮೂರು ಪಾಂಚವಾರ್ಷಿಕ ಹಾಗೂ ಮೂರು ವಾರ್ಷಿಕ ಯೋಜನೆಗಳ ಪ್ರಯೋಜನ ಪಡೆದು ಬೇಗನೆ ಐದನೆ ಪಾಂಚವಾರ್ಷಿಕ ಯೋಜನೆಯ ಭವ್ಯ ಹೊಸ್ತಿಲವನ್ನು ಹತ್ತಲಿದೆ. ಈ ಹದಿನೇಳು ವರುಷಗಳ ಅವಧಿಯಲ್ಲಿ ರಾಜ್ಯದ ಯೋಜನಾ ಕಾರ್ಯಗಳಿಗಾಗಿ ಸುಮಾರು 1200 ಕೋಟಿ ರೂ. ವಿನಿಯೋಗವಾಗಿದೆ.

ಕನ್ನಡ ನಾಡು ಒಂದಾಗಿ ಹೊಸದೊಂದು ರಾಜ್ಯವು ನಿರ್ಮಾಣವಾದಾಗ ಅದು ಬೇಗನೆ ಹಾಗು ತಪ್ಪದೆ ಚಿನ್ನದ ನಾಡಾಗಬಲ್ಲದೆಂಬ ಆಶೆ ಆಕಾಂಕ್ಷೆ ಎಲ್ಲರ ಮನಸ್ಸಿನಲ್ಲಿದ್ದುದು ಸಹಜವಾಗಿದೆ. ನಿಸರ್ಗದಿಂದ ವೈವಿಧ್ಯಮಯವಾದ ಉದಾರವಾದ ಕೊಡುಗೆಗಳನ್ನೂ ಪಡೆದ ನಾಡು ಚಿನ್ನದ ನಾಡಾಗದೆ ? ಅದರಲ್ಲೂ ಯಥಾರ್ಥವಾಗಿ ಚಿನ್ನದ ನಾಡಾದ ರಾಜ್ಯವು ತಥ್ಯಾರ್ಥದಲ್ಲೂ ಚಿನ್ನದ ನಾಡಾಗದಿರುವುದೇ ? ಬಂಗಾರದಿಂದ ಸುಣ್ಣದ ಕಲ್ಲಿನವರೆಗೆ ಬಗೆ ಬಗೆಯ ಹಾಗು ಹೇರಳವಾದ ಖನಿಜಸಂಪತ್ತು, ಅಲ್ಲದೆ ಅಪ್ಪಟವಾದ ಕರಿ-ಹೊನ್ನು (ಕಾರ್ಬೊನ್ನು=ಕಬ್ಬಿಣ) ನೈಸರ್ಗಿಕವಾದ ಬಂದರುಗಳುಳ್ಳ ಕರಾವಳಿ, ಯಾವುದೇ ಬಗೆಯ ಬೆಳೆಯನ್ನು ಬೆಳೆಯಬಲ್ಲ ಮಣ್ಣು ಹಾಗೂ ವಾಯುಮಾನ, ಭೂಮಿಯು ಫಲವತ್ತತೆಯನ್ನು ನೀರಿನಿಂದಲೂ ರೇವಿನಿಂದಲೂ ಹೆಚ್ಚಿಸುವ ದೊಡ್ಡದೊಡ್ಡ ಪೂರ್ವವಾಹಿನಿಗಳು, ಕಲ್ಲಿದ್ದಲಿನ ಅಭಾವವನ್ನು ಹಿಂಗಿಸಿ, ಬೆಳಕನ್ನೂ ಶಕ್ತಿಯನ್ನೂ ಧಾರಾಳವಾಗಿ ಒದಗಿಸಬಲ್ಲ ಅಮೋಘ ಪಶ್ಚಿಮವಾಹಿನಿಗಳು, ತಮ್ಮ ಸಮೃದ್ಧತೆ ಹಾಗೂ ಸತ್ವದಿಂದ ಹಸಿರು ಹೊನ್ನು ಎಂದು ಹೆಸರು ಗಳಿಸಿದ ಅರಣ್ಯಗಳು, ಹಾಗು ಧರ್ಮ, ಸಂಸ್ಕೃತಿ, ವಿಜ್ಞಾನ, ಸಾಹಸ, ಬುದ್ಧಿಮತ್ತೆ ಇವೆಲ್ಲದರಲ್ಲೂ ಖ್ಯಾತಿವೆತ್ತ ಜನಸಂಪತ್ತು ! ಇನ್ನೇನು ಬೇಕು ?

ಆದಾಯವು ಪ್ರಗತಿಯ ಅಳತೆಗೋಲು. ನಿರ್ಮಾಣದಂದಿನಿಂದ ಈ ನವರಾಜ್ಯದ ಆದಾಯವು ಭರದಿಂದ ಬೆಳೆಯುತ್ತಿದೆ. 1956-57ರಲ್ಲಿ ಸುಮಾರು 495 ಕೋಟಿ ರೂ. ಯಷ್ಟಿದ್ದ ರಾಜ್ಯದ ವಾರ್ಷಿಕ ಆದಾಯವು (ಅದೇ ವರುಷದ ಕ್ರಯಗಳಂತೆ ಲೆಕ್ಕಹಾಕಿದರೂ) 1971-72ರಲ್ಲಿ ಸುಮಾರು 930 ಕೋಟಿಯಷ್ಟು ಏರಿತು. ಜನಸಂಖ್ಯೆಯು ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗಿದ್ದರೂ ರಾಜ್ಯದ ತಲಾ ಆದಾಯವು ಆ ಅವಧಿಯಲ್ಲಿ 230 ರೂ. ಯಿಂದ 314 ರೂ.ಗೆ ಏರಿದ್ದು ಕಂಡುಬರುತ್ತದೆ. ಆ ವರುಷ ಪ್ರಚಲಿತವಿದ್ದ ಕ್ರಯಗಳ ನ್ವಯ ಲೆಕ್ಕ ಹಾಕಿದರೆ ರಾಜ್ಯದ ಆದಾಯವು 1971-72ರಲ್ಲಿ 1630 ಕೋಟಿ ರೂ. ಹಾಗು ತಲಾ ಆದಾಯ 550 ಕೋಟಿ ರೂ. ಆಗುವುವು.

ಕೃಷಿ ಪ್ರಧಾನ ರಾಜ್ಯ

ಭಾರತವು ಕೃಷಿ ಪ್ರಧಾನ ದೇಶವಾದರೆ ಕರ್ನಾಟಕ ಹೆಚ್ಚಿನ ಅಂಶದಲ್ಲಿ ಕೃಷಿ ಪ್ರಧಾನ ವಾದುದು. ಸಮಸ್ತ ಭಾರತದ ಆದಾಯದಲ್ಲಿ ನೂರಕ್ಕೆ ಅರ್ಧದಷ್ಟು ಮಾತ್ರ ಬೇಸಾಯ ದಿಂದ ಬಂದುದು. ಆದರೆ ಕರ್ನಾಟಕದಲ್ಲಿ ಆದಾಯದ ಶೇಕಡ ೬೦ ರಷ್ಟು ಕೃಷಿಯಿಂದ ಬರುತ್ತದೆ. ಅದೇ ರೀತಿ ಸಮಸ್ತ ಭಾರತದಲ್ಲಿ ಸರಾಸರಿಯಾಗಿ ನೂರಕ್ಕೆ ೭೦ರಷ್ಟು ಜನ ಹಳ್ಳಿಗಳಲ್ಲಿದ್ದರೆ ಈ ರಾಜ್ಯದಲ್ಲಿ ಗ್ರಾಮನಿವಾಸಿಗಳ ಪ್ರಮಾಣವು ನೂರಕ್ಕೆ ೭೫ರಷ್ಟಿದೆ. ನೂರರಲ್ಲಿ ೬೭ ಜನ ಪ್ರತ್ಯಕ್ಷವಾಗಿ ಬೇಸಾಯದಿಂದ ಉಪಜೀವಿಸುತ್ತಾರೆ. ಆದ್ದರಿಂದ ಕರ್ನಾಟಕದ ಮುನ್ನಡೆಯು ಬೇಸಾಯದ ಪ್ರಗತಿಯನ್ನು ಅವಲಂಬಿಸಿದೆ.

ರೈತರ ಯಶಸ್ಸು—

ಕರ್ನಾಟಕದ ಒಟ್ಟು ಸುಮಾರು ೧೯೦ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ೧೨೩ ಲಕ್ಷ ಹೆಕ್ಟೇರ್ ಸಾಗುವಳಿಗೆ ಯೋಗ್ಯವಾಗಿದೆ. ಅದರಲ್ಲಿ ೧೦೨ ಲಕ್ಷ ಹೆಕ್ಟೇರ್ ಕ್ಷೇತ್ರದಲ್ಲಿ ಬಿತ್ತನೆ ಯಾಗುತ್ತದೆ. ಕ್ಷಾಮಡಾಮರುಗಳು ಅಡ್ಡಬಂದರೂ ಜನಸಂಖ್ಯೆ ಬೆಳೆಯುತ್ತಿದ್ದರೂ ರಾಜ್ಯವು ಆಹಾರ ಧಾನ್ಯಗಳಲ್ಲಿ ಸ್ವಾವಲಂಬಿಯಾಗುವುದಲ್ಲದೆ ಹೆಚ್ಚಳವನ್ನು ಸಾಧಿಸುತ್ತಿದೆ. ೧೯೫೬ರಲ್ಲಿ ಸುಮಾರು ೩೮ ಲಕ್ಷ ಟನ್ನಿನಷ್ಟು ಆಹಾರ ಧಾನ್ಯಗಳ ಉತ್ಪತ್ತಿಯಿತ್ತು. ಈಗ ಈ ಉತ್ಪಾದನೆಯ ಪ್ರಮಾಣವು ಸುಮಾರು ೬೦ ಲಕ್ಷ ಟನ್ನಿನಷ್ಟು ಹೆಚ್ಚಿದೆ. ಕಳೆದ ವರುಷದ ಭೀಕರ ಕ್ಷಾಮದಿಂದಾಗಿ ಉತ್ಪಾದನೆ ೪೮ ಲಕ್ಷ ಟನ್ನಿಗೆ ತಗ್ಗಿದ್ದರೂ ಈ ವರುಷ ೬೧ ಲಕ್ಷ ಟನ್ನು ಉತ್ಪಾದನೆಯಾಗಬಹುದೆಂದು ನಿರೀಕ್ಷೆಯಿದೆ. ಬೇಸಾಯದ ಉತ್ಪಾದನೆ ಹೆಚ್ಚಾಗಲು ಪಲವಾರು ಕಾರಣಗಳುಂಟು, (೧) ಹಸಿರು ಕ್ರಾಂತಿಯ ಪ್ರಭಾವ, ಉತ್ತಮ ಬೀಜ ಗೊಬ್ಬರ ಕೀಟನಾಶಕಗಳ ಬಳಕೆಯಲ್ಲಾದ ಕ್ರಾಂತಿ (೨) ನೀರಾವರಿ—ನೀರಾವರಿ ಕ್ಷೇತ್ರವು ಈಗ ಇಮ್ಮಡಿಯಾಗಿದೆ ಆದರಿಂದಾಗಿ ಎರಡು ಬೆಳೆಗಳನ್ನು ಬೆಳೆಯುವ ಕ್ಷೇತ್ರವೂ ವಿಸ್ತಾರ ಗೊಳ್ಳುತ್ತಿದೆ, (೩) ಮಣ್ಣಿನ ಸಾರರಕ್ಷಣೆ—೧೪ ಲಕ್ಷ ಹೆಕ್ಟೇರ್ ಕ್ಷೇತ್ರದಲ್ಲಿ ಒಡ್ಡುಗಳ ರಚನೆ ಯಾಗಿದೆ (೪) ಬೇಸಾಯ ಸಂಶೋಧನೆ ಮತ್ತು ವಿಸ್ತರಣಾ ಕಾರ್ಯದಲ್ಲಿ ಹೆಚ್ಚಿನ ಪ್ರಗತಿ

ಕೃಷಿವಿಜ್ಞಾನಕ್ಕೆ ಮೀಸಲಾದ ವಿಶ್ವವಿದ್ಯಾಲಯದ ಸ್ಥಾಪನೆ—ಕೃಷಿಶಾಲೆಗಳ ಸ್ಥಾಪನೆ, ರೈತರಿಗೆ ತರಬೇತಿ ನೀಡುವ ಯೋಜನೆಗಳು, ಪ್ರಾತ್ಯಕ್ಷತೆಗಳು ಇತ್ಯಾದಿ (೫) ಪ್ರಗತಿಪರ ಭೂ ಸುಧಾರಣೆ ಕಾನೂನು (೬) ರಾಷ್ಟ್ರೀಕೃತ ಬ್ಯಾಂಕುಗಳಿಂದ ರೈತರಿಗೆ ಧನ ಸಹಾಯ.

ಉತ್ಪಾದನೆಯ ತಂತ್ರವು ಉತ್ತಮಗೊಂಡುದರ ಫಲವಾಗಿ ಕಡಿಮೆ ಕ್ಷೇತ್ರದಲ್ಲಿ ಹೆಚ್ಚು ಉತ್ಪಾದನೆಯಾಗುತ್ತಿದೆ. ಪರಿಣಾಮವಾಗಿ ಆಹಾರ ಧಾನ್ಯಗಳ ಕ್ಷೇತ್ರವು ಕಡಿಮೆಯಾಗುತ್ತಿದೆ. ಹೆಚ್ಚಿನ ಕ್ಷೇತ್ರವು ಎಣ್ಣೆಕಾಳು, ಕಬ್ಬು, ಹತ್ತಿ ಇತ್ಯಾದಿ ರೊಕ್ಕದ ಬೆಳೆಗಳಿಗೆ ದೊರೆಯು ವಂತಾಗುತ್ತಿದೆ ; ಇದೊಂದು ಶುಭಚಿನ್ಹೆ, ಯಾಕೆಂದರೆ ಈಗ ಎಣ್ಣೆ ಹಾಗೂ ಹತ್ತಿಗಳ ಆಮದಿ ಗಾಗಿ ದೇಶವು ಹೇರಳ ಧನವನ್ನು ತೆರುತ್ತಿದೆ. ಮಲಪ್ರಭಾ, ಘಟಪ್ರಭಾ ಯೋಜನೆಗಳ ಕಕ್ಷೆಯಲ್ಲಿ ಬರುವ ಪ್ರದೇಶಗಳು ಎಣ್ಣೆಕಾಳು ಮತ್ತು ಹತ್ತಿಯನ್ನು ಬೆಳೆಯಲು ಉತ್ತಮ ವಾಗಿವೆ. ಬೇಗನೇ ಈ ಸರಕುಗಳ ಉತ್ಪಾದನೆ ಅಲ್ಲಿ ಹೆಚ್ಚಾಗುವುದೆಂದು ನಿರೀಕ್ಷೆಯಿದೆ. ಇದರಿಂದ ಎಣ್ಣೆ ಮತ್ತು ಹತ್ತಿಯ ಆಮದು ಕಡಿಮೆಯಾಗಬಹುದು, ಅಲ್ಲದೆ ಸಂಬಂಧಪಟ್ಟ ಉದ್ದಿಮೆಗಳ ಬೆಳವಣಿಗೆಗೂ ಸಹಾಯವಾಗಬಹುದು.

ನೀರಾವರಿಯು ಬೇಸಾಯದ ಜೀವಾಳ. ನೀರಾವರಿಯಿಲ್ಲದ ಬೇಸಾಯವು ಒಂದು ಬಗೆಯ ಜೂಜು ಎಂದು ಹೇಳುತ್ತಾರೆ. ರಾಜ್ಯವು ಕಳೆದ ಹದಿನೇಳು ವರುಷಗಳಲ್ಲಿ ನೀರಾವರಿ ಕ್ಷೇತ್ರಗಳಲ್ಲಿ ಎದ್ದು ಕಾಣುವಷ್ಟು ಪ್ರಗತಿಯನ್ನು ಸಾಧಿಸಿದೆ. ಆದರೂ ಇನ್ನೂ ಸಾಧಿಸ ಬೇಕಾದದು ಬಹಳಷ್ಟಿದೆ. ೧೯೫೬ರಲ್ಲಿ ಸುಮಾರು ೭.೪೦ ಲಕ್ಷ ಹೆಕ್ಟೇರ್ ಕ್ಷೇತ್ರ ನೀರಾವರಿ ಸೌಕರ್ಯ ಪಡೆದಿತ್ತು. ಅಂದರೆ ಬಿತ್ತನೆಯಾದ ಕ್ಷೇತ್ರದಲ್ಲಿ ಶೇಕಡ ೭.೪ ರಷ್ಟು ಭೂಮಿ ಮಾತ್ರ ನೀರಿನ ಆಸರೆ ಹೊಂದಿತ್ತು. ಈ ಕ್ಷೇತ್ರವು ಬಿತ್ತನೆ ಕ್ಷೇತ್ರದ ಶೇಕಡ ೧೪ ರಷ್ಟು ಆಗಿದೆ. ೧೪ ಲಕ್ಷ ಹೆಕ್ಟೇರ್ ಕ್ಷೇತ್ರವು ಈಗ ನೀರಾವರಿ ಹೊಂದಿದೆ. ಭಾರತದ ನೀರಾವರಿ ಕ್ಷೇತ್ರದ ಸರಾಸರಿಯು ನೂರಕ್ಕೆ ೨೬ ರಷ್ಟು ಇದೆ. ಇದರಿಂದ ನೀರಾವರಿ ವಿಷಯದಲ್ಲಿ ಈ ರಾಜ್ಯವು ಎಷ್ಟು ಹಿಂದೆ ಎಂಬುದು ಸ್ಪಷ್ಟವಾಗುವುದು. ಆದ್ದರಿಂದ ರಾಜ್ಯ ಸರ್ಕಾರವು ಕೃಷ್ಣಾ ಮತ್ತು ಕಾವೇರಿ ನದಿಗಳ ಹಾಗು ಉಪನದಿಗಳ ಯಥಾಯೋಗ್ಯ ಪ್ರಯೋಜನವನ್ನು ಪಡೆಯಲು ರಾಜ್ಯ ಸರಕಾರವು ಮುಂದಾಗಿದೆ. ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಲು ಹೊಸ ಉಪಕ್ರಮಗಳನ್ನು ಯೋಜಿಸಲಾಗಿದೆ. ಮೊದಲನೆಯದಾಗಿ ಯಾತದ ನೀರಾವರಿ ಗಾಗಿ ವಿದ್ಯುಚ್ಛಕ್ತಿಯ ಬಳಕೆ ಮತ್ತು ಎರಡನೆಯದಾಗಿ ಭೂಗತ ನೀರನ್ನು ಪಡೆಯುವ ಎತ್ತುಗಡೆ. ೧೯೬೯ರಲ್ಲಿ ಕೇವಲ ೯೧,೦೦೦ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿತ್ತು. ಈ ವಿದ್ಯುಚ್ಛಕ್ತಿ ಪಡೆಯುವ ಪಂಪುಸೆಟ್ಟುಗಳ ಸಂಖ್ಯೆ ೧,೯೦,೦೦೦ಕ್ಕೆ ಏರಿದೆ. ಭೂಗತ ನೀರಿನ ಪರಿಶೋಧನೆಯನ್ನು ಕೈಕೊಳ್ಳಲಾಗಿದ್ದು ಇನ್ನೂ ಸುಮಾರು ೫ ಲಕ್ಷ ಬಾವಿಗಳಿಗಾಗುವಷ್ಟು ನೀರು ಭೂಮಿಯ ಒಡಲಿನಲ್ಲಿದೆಯೆಂದು ಕಂಡುಬಂದಿದೆ. ರಾಷ್ಟ್ರೀಕೃತ ಬ್ಯಾಂಕುಗಳ ಸಹಾಯದಿಂದ ಕೊಳವೆ ಬಾವಿಗಳನ್ನು ತೋಡಲಾಗುತ್ತಿದೆ.

ಕೃಷಿ ಪ್ರಧಾನವಾದ ನಾಡಿನಲ್ಲಿ ಜೀವನಾಯಕ್ಕೆ ಸಂಭಂಧಪಟ್ಟ ಉದ್ಯೋಗಗಳಿಗೆ ಅದರಷ್ಟೇ ಮಹತ್ವವಿದೆ. ಇವುಗಳಲ್ಲಿ ಪಶುಸಂಗೋಪನೆಯು ಒಂದು. ಹೈನದ ಅಭಿವೃದ್ಧಿಯಲ್ಲಿ ರಾಜ್ಯವು ಸಾಧಿಸಿದ ಪ್ರಗತಿಯು ಉಲ್ಲೇಖನೀಯವಾಗಿದೆ. ಶಿವಮೊಗ್ಗ, ಬೆಳಗಾವಿ, ಕಲಬುರಗಿ, ಮಂಗಳೂರು, ಮೈಸೂರು ಮತ್ತು ದಾವಣಗೆರೆಗಳಲ್ಲಿ ಹಾಲಿನ ಡೈರಿ ಗಳನ್ನು ಪ್ರಾರಂಭಿಸಲಾಗಿದೆ. ಬೆಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡ ಡೈರಿಗಳನ್ನು ವಿಸ್ತರಿಸಲಾಗಿದೆ. ಇವುಗಳಲ್ಲಿ ದಿನಾಲು ಸುಮಾರು ೧ ಲಕ್ಷ ಲೀಟರ ಹಾಲು ಪರಿಷ್ಕೃತ ವಾಗಿ ವಿತರಣೆ ಹೊಂದುತ್ತಿದೆ. ಡೈರಿಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೈನದ ದನಗಳನ್ನು ಸಾಕುವುದು ಲಾಭದಾಯಕವಾಗಿದೆ.

ಬೇಸಾಯದಷ್ಟೇ ತೋಟಗಾರಿಕೆಯಲ್ಲೂ ರಾಜ್ಯವು ಹೆಸರುಗಳಿಸಿದೆ. ವಿವಿಧ ಬಗೆಯ ಭೂಮಿ ಹಾಗು ಹವಾಮಾನ ಅದಕ್ಕೆ ಅನುಕೂಲವಾಗಿವೆ. ವಿವಿಧ ಬೆಳೆಗಳ ತೋಟಗಳ ಕ್ಷೇತ್ರವು ೧೯೫೬ರಲ್ಲಿ ೩ ಲಕ್ಷ ಹೆಕ್ಟೇರ್ ಇದ್ದುದು ಈಗ ಸುಮಾರು ೬ ಲಕ್ಷ ಹೆಕ್ಟೇರ್ ಆಗಿದೆ. ದ್ರಾಕ್ಷಿ ತೋಟಗಳಲ್ಲಿ ಗಣನೀಯ ಪ್ರಗತಿಯಾಗಿದೆ. ಭಾರತದಲ್ಲಿನ ದ್ರಾಕ್ಷಿ ಕ್ಷೇತ್ರದಲ್ಲಿ ಮೂರರ ಒಂದ ರಷ್ಟು ನಮ್ಮ ರಾಜ್ಯದಲ್ಲಿದೆ. ಹೊಸ ಹಾಗೂ ಉತ್ತಮ ಬಗೆಯ ದ್ರಾಕ್ಷಿಗಳನ್ನು ಬೆಳೆಯಲಾ ಗುತ್ತಿದೆ. ಮೀನುಗಾರಿಕೆಯಲ್ಲೂ ರಾಜ್ಯವು ಗಣನೀಯ ಪ್ರಗತಿಯನ್ನು ಸಾಧಿಸಿದೆ. ಮೀನಿನ ಉತ್ಪಾದನೆಯು ಕಳೆದ ಐದು ವರುಷಗಳಲ್ಲಿ ೧.೩೦ ಲಕ್ಷ ಟನ್ನಿನಿಂದ ೧.೯೦ ಲಕ್ಷಟನ್ನಿನಷ್ಟು ಹೆಚ್ಚಾಗಿದೆ. ಮೀನುಗಾರಿಕೆ ಅಭಿವೃದ್ಧಿ ಕಾರ್ಪೂರೇಶನ್ ಸ್ಥಾಪನೆಯಿಂದಾಗಿ ಮೀನಿನ ಸಂಗ್ರಹ, ಪರಿಷ್ಕರಣ ಸಾಗಾಟ ಮತ್ತು ಮಾರಾಟಕ್ಕೆ ಬಹಳ ಅನುಕೂಲವಾಗಿದೆ. ರಾಜ್ಯದ ೧೯ ಬಂದರು ಗಳಲ್ಲಿ ೧೮ ಮೀನುಗಾರಿಕೆ ಬಂದರುಗಳಾಗಿ ಅಭಿವೃದ್ಧಿ ಹೊಂದಿವೆ. ಒಳನಾಡಿನ ಮೀನು ಗಾರಿಕೆಯೂ ಬೆಳೆಯುತ್ತಿದೆ.

ರೇಶಿಮೆಯು ಸಿರಿವಂತರ ಬಟ್ಟೆಯಾಗಿದ್ದರೂ ರೇಶಿಮೆ ಉದ್ಯೋಗವು ಬಡಜನರಿಗೆ ಜೀವನಾಧಾರವಾಗಿದೆ. ಭಾರತಲ್ಲಿ ನಿರ್ಮಾಣಹೊಂದುವ ಹಿಪ್ಪುನೇರಳೆ ರೇಶಿಮೆಯಲ್ಲಿ ನೂರಕ್ಕೆ ೮೦ರಷ್ಟು ಕರ್ನಾಟಕದಲ್ಲಿ ಸಿದ್ಧವಾಗುತ್ತದೆ. ೨೦ ಲಕ್ಷ ಜನರು ಅದರಿಂದ ಉಪಜೀವಿಸು ತ್ತಾರೆ. ನಾಲ್ಕನೆ ಪಾಂಚವಾರ್ಷಿಕ ಯೋಜನೆಯಲ್ಲಿ ರೇಶಿಮೆ ಉತ್ಪಾದನೆಯು ೧೪ ಲಕ್ಷ ಕೆಲೋ ಇದ್ದಿತು. ಈ ವರುಷದ ಕೊನೆಗೆ ಅದು ೨೦ ಲಕ್ಷ ಕಿಲೊ ಆಗಬಹುದು. ಅದರಂತೆ ಹಿಪ್ಪು ನೇರಳೆ ಕ್ಷೇತ್ರವೂ ಹೆಚ್ಚಿದೆ. ರೇಶಿಮೆ ವ್ಯವಸಾಯದ ಅಭಿವೃದ್ಧಿಗಾಗಿ ೮೦ ಕೋಟಿ ರೂಪಾಯಿ ವಿಶೇಷ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಾಗಿದೆ. ಹೊಸಮಿಶ್ರತಳಿಯ ರೇಷ್ಮೆ (ಬಾಯವೊಲ್ಟಿನ) ಹುಳುವನ್ನು ಈಗ ಬಿಡುಗಡೆ ಮಾಡಲಾಗುತ್ತಿದೆ. ಅದು ಹೆಚ್ಚಿನ ಪ್ರಮಾಣದಲ್ಲಿ ಉತ್ತಮ ಗುಣದ ರೇಷ್ಮೆಯನ್ನು ಕೊಡುತ್ತದೆ. ಇದರಿಂದ ರೇಷ್ಮೆ ವ್ಯವಸಾಯದಲ್ಲಿ ಹೊಸ ಅಧ್ಯಾಯವು ಪ್ರಾರಂಭವಾಗಬಲ್ಲದು.

ವಿದ್ಯುಚ್ಛಕ್ತಿ

ಏಶಿಯಾ ಖಂಡದಲ್ಲಿಯೇ ದೊಡ್ಡದೆನಿಸಿದ ಶರಾವತಿ ಯೋಜನೆಯಿಂದ ರಾಜ್ಯವು ವಿದ್ಯುಚ್ಛಕ್ತಿಯಂ ಉತ್ಪಾದನೆಯಲ್ಲಿ ಔದ್ಯೋಗಿಕ ಹಾಗೂ ಬೇಸಾಯದ ಪ್ರಗತಿಯಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಿದೆ. ರಾಜ್ಯವು ನಿರ್ಮಾಣವಾದಗ ೩,೩೦೦ ಹಳ್ಳಿಪಟ್ಟಣಗಳು ವಿದ್ಯುಚ್ಛಕ್ತಿಯಂ ಸೌಕರ್ಯವನ್ನು ಹೊಂದಿದ್ದುವು. ಈಗ ಆ ಸಂಖ್ಯೆ ೧೫,೦೦೦ಕ್ಕೆ ಏರಿದೆ. ೧೯೫೬ರಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆ ಸಾಮರ್ಥ್ಯವು ೧೭೯ ಮ್ಯಾಗಾವಾಟ್ ಇತ್ತು. ಈಗ ೯೬೭ ಮ್ಯಾಗಾವಾಟ್ ಇದೆ. ರಾಜ್ಯವು ನೆರೆಹೊರೆಯ ರಾಜ್ಯಗಳಿಗೂ ವಿದ್ಯುಚ್ಛಕ್ತಿಯನ್ನು ಪೂರೈಸುತ್ತದೆ. ವಿದ್ಯುಚ್ಛಕ್ತಿಯ ಬೇಡಿಕೆಯೂ ಅಷ್ಟೇಭರದಿಂದ ಹೆಚ್ಚಾಗುತ್ತಿದೆ. ಆದುದರಿಂದ ರಾಜ್ಯಸರಕಾರವು ಶರಾವತಿಗಿಂತ ಬೃಹದಾಕಾರವುಳ್ಳ ಕಾಳೀನದಿಯೋಜನೆಯನ್ನು ಪ್ರಾರಂಭಿಸಿದೆ. ವಿದ್ಯುಚ್ಛಕ್ತಿಯ ಉತ್ಪಾದನೆಯ ಯೋಜನೆಗಳನ್ನು ನೋಡಿಕೊಳ್ಳಲು ಒಂದು ಹೊಸ ಕಾರ್ಪೊರೇಶನ್ನನ್ನು ಸ್ಥಾಪಿಸಲಾಗಿದೆ.

ಉದ್ದಿಮೆಗಳ ವಿಕಾಸ

ಔದ್ಯೋಗಿಕ ಕ್ಷೇತ್ರದಲ್ಲಿ ಈ ರಾಜ್ಯವು ಮೊದಲಿನಿಂದಲೂ ಮುಂದಾಗಿದೆ. ಶರಾವತಿ ಯೋಜನೆಯಿಂದಾಗಿ ಉದ್ದಿಮೆಗಳ ಪ್ರಗತಿಗೆ ವಿಶೇಷ ಚಾಲನೆ ದೊರೆತಿದೆ. ಖನಿಜ ಸಂಪತ್ತು, ಅರಣ್ಯದ ಸರಕು ಸಾಮಗ್ರಿಗಳು ಹಾಗು ಕೃಷಿ ಉತ್ಪಾದನೆ ಹಾಗು ವಿದ್ಯುಚ್ಛಕ್ತಿಯ ಪೂರೈಕೆ ಚೆನ್ನಾಗಿರುವುದರಿಂದ ಉದ್ದಿಮೆಗಳ ವಿಕಾಸಕ್ಕೆ ಇಲ್ಲಿ ಉತ್ತಮ ಅವಕಾಶವಿದೆ. ಆದರೂ ಉದ್ದಿಮೆದಾರರ ಅಭಾವದಿಂದಾಗಿ ಔದ್ಯೋಗಿಕ ಪ್ರಗತಿಯಿನ್ನೂ ಸಾಕಷ್ಟಾಗಿಲ್ಲ. ಆದ್ದರಿಂದ ರಾಜ್ಯಸರಕಾರ ತಾನೇ ಎಷ್ಟೋ ಹೊಸ ಉದ್ದಿಮೆಗಳನ್ನು ಪುರಸ್ಕರಿಸುತ್ತಿದೆ. ಅಲ್ಲದೆ ಉದ್ದಿಮೆದಾರರಿಗೆ ವಿವಿಧ ಸೌಕರ್ಯ ಸೌಲಭ್ಯಗಳನ್ನೂ ಒದಗಿಸಿದೆ.

೧೯೫೯ ರಲ್ಲಿ ಕಾರ್ಯಾಗಾರಗಳ ಸಂಖ್ಯೆ ಕೇವಲ ೪೮೪ ಇದ್ದಿತು. ೧೯೬೯ ರಲ್ಲಿ ಅವುಗಳ ಸಂಖ್ಯೆ ೯೬೫೭ ಆಯಿತು.

ವಿಜಯನಗರ ಉಕ್ಕಿನ ಕಾರ್ಖಾನೆಗೆ ಶ್ರೀಕಾರವನ್ನು ಹಾಕಲಾಗಿದೆ. ಅದೇ ಗಾತ್ರದ ಇನ್ನೊಂದು ಕಾರ್ಖಾನೆಗೂ ರಾಜ್ಯದಲ್ಲಿ ಅವಕಾಶವಿದೆ. ಇತ್ತೀಚೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ತಾಮ್ರದ ಸಾರವನ್ನು ತಯಾರಿಸುವ ಕಾರ್ಖಾನೆಯು ಪ್ರಾರಂಭವಾಗಿದೆ. ಇಂಥ ಇನ್ನೆರಡು ಕಾರ್ಖಾನೆಗಳು ಪ್ರಾರಂಭವಾಗಲಿವೆ. ಸಕ್ಕರೆ, ಬಟ್ಟೆ, ಎಣ್ಣೆ ಹಾಗು ರಾಸಾಯನಿಕ ಕಾರ್ಖಾನೆಗಳ ಸಂಖ್ಯೆ ಬೆಳೆದಿದೆ. ಭಾರತದಲ್ಲಿ ಉತ್ಪಾದನೆ ಹೊಂದುವ ಬಂಗಾರವು ಈ ರಾಜ್ಯದಲ್ಲೆ ಹೊರಡುತ್ತದೆ. ರಾಜ್ಯದಲ್ಲಿ ಇನ್ನು ಕೆಲವೆಡೆಗೆ ಬಂಗಾರವನ್ನು ಉತ್ಪಾದಿಸಬಹುದೊ ಹೇಗೆಂಬ ಬಗ್ಗೆ ಪರಿಶೀಲನೆ ನಡೆದಿದೆ.

ಗ್ರಾಮೋದ್ಯೋಗಗಳು ಹಾಗು ಚಿಕ್ಕ ಪ್ರಮಾಣದ ಉದ್ದಿಮೆಗಳು ಹಳ್ಳಿಗಳಲ್ಲಿ ಇರುವವರಿಗೆ ಹಾಗು ಬಡವರಿಗೆ ಪ್ರಯೋಜನಕಾರಿಯಾಗಿರುವುದರಿಂದ ಅವುಗಳಿಗೆ ವಿಶೇಷ ಪ್ರೋತ್ಸಾಹ ಕೊಡಲಾಗುತ್ತಿದೆ. ಔದ್ಯೋಗಿಕ ಕ್ಷೇತ್ರದಲ್ಲಿ ಹಿಂದುಳಿದ ಜಿಲ್ಲೆಗಳಲ್ಲಿ ಉದ್ದಿಮೆ ವಿಕಾಸಕ್ಕೆ ವಿಶೇಷ ಗಮನವನ್ನು ಕೊಡಲಾಗುತ್ತಿದೆ. ರಾಯಚೂರ, ಧಾರವಾಡ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸ್ಥಾಪಿತವಾಗುವ ಉದ್ದಿಮೆಗಳಿಗೆ ವಿಶೇಷ ಸಹಾಯಧನವನ್ನು ಕೊಡಮಾಡಿದೆ.

ರಾಜ್ಯದ ಅರಣ್ಯಗಳ ಕ್ಷೇತ್ರವು ಅಖಿಲ ಭಾರತ ಸರಾಸರಿಗಿಂತ ತೀರ ಕಡಿಮೆಯಿದ್ದರೂ ಅವುಗಳ ಸಮೃದ್ಧತೆಯು ಉಲ್ಲೇಖನೀಯವಾಗಿದೆ. ಅರಣ್ಯದ ಆದಾಯವು ವರುಷ ವರುಷಕ್ಕೆ ಬೆಳೆಯುತ್ತದೆ. ಹಲವಾರು ಉದ್ದಿಮೆಗಳಿಗೂ ಅರಣ್ಯಗಳು ಆಧಾರವಾಗಿವೆ. ಕಾಗದ, ಪ್ಲಾಯವುಡ್ ಇತ್ಯಾದಿ ಕಾರ್ಖಾನೆಗಳಿಗೆ ಬೇಕಾಗುವ ಮೃದು ಕಟ್ಟಿಗೆಗಳನ್ನು ಲಾಭದಾಯಕ ರೀತಿಯಲ್ಲಿ ಬೆಳೆಸಲು ಹಾಗು ಹೊಸ ಅರಣ್ಯ ಉದ್ದಿಮೆಗಳು ಪ್ರಾರಂಭಿಸಲು ರಾಜ್ಯ ಸರಕಾರವು ಎರಡು ಕಾರ್ಪೊರೇಶನ್‌ಗಳನ್ನು ಸ್ಥಾಪಿಸಿದೆ. ರಬ್ಬರ್, ಕೋಕೊ, ಲಿನೋಲಿಂ, ಮಸಾಲೆ ಸಾಮಾನು, ಕಾಫಿ ಮತ್ತು ಗೇರು ಗಿಡಗಳ ವನಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳಿಸಲಾಗುತ್ತಿದೆ. ಅರಣ್ಯಗಳು ರಾಜ್ಯದ ದೊಡ್ಡ ಸೊತ್ತು.

ಸಾರಿಗೆ ಸೌಕರ್ಯ

ರೇಲ್ವೆ ಸೌಕರ್ಯದ ವಿಷಯದಲ್ಲಿ ರಾಜ್ಯವು ಹೆಚ್ಚು ಕಡಿಮೆ ಅದೇ ಸ್ಥಿತಿಯಲ್ಲಿದೆ. ರಾಷ್ಟ್ರೀಯ ಸರಾಸರಿಯ ದೃಷ್ಟಿಯಿಂದ ನೋಡಿದರೆ ಹಿಂದುಳಿದಿದೆ. ಅಖಿಲ ಭಾರತ ಸರಾಸರಿಯು ೧೦೦೦ ಚ.ಕಿ.ಮಿ. ಗೆ ೧೮ ಕಿ.ಮಿ. ಇದ್ದರೆ ಈ ರಾಜ್ಯದಲ್ಲಿ ಅದು ೧೪ ಕಿ.ಮಿ. ಇದೆ. ಆದರೆ ರಸ್ತೆ ಸೌಕರ್ಯದ ವಿಷಯದಲ್ಲಿ ಪ್ರಗತಿಯು ಚೆನ್ನಾಗಿ ಆಗಿದೆ. ಪ್ರತಿ ಚ.ಕಿ.ಲೊ.ಮಿ. ೦.೩೬ ಕಿ.ಮೊ. ರಸ್ತೆಯನ್ನು ೧೯೮೦ರ ಒಳಗಾಗಿ ರಚಿಸಬೇಕೆಂದು ರಾಷ್ಟ್ರೀಯ ರಸ್ತೆ ಯೋಜನೆ ಸಂಕಲ್ಪ. ಆದರೆ ನಮ್ಮ ರಾಜ್ಯದಲ್ಲಿ ಈಗ ಪ್ರತಿ ಚ.ಕಿ.ಮಿ. ಗೆ ೦.೪೦ ಕಿಲೋಮೀಟರ ರಸ್ತೆ ಇದೆ. ಆದರೆ ರಾಷ್ಟ್ರೀಯ ಗುರಿಯನ್ನು ಎಷ್ಟೋ ವರುಷ ಮೊದಲೆ ಸಾಧಿಸಿದಂತಾಗಿದೆ. ಸಾರಿಗೆ ವಿಷಯದಲ್ಲಿ ಹಿಂದುಳಿದ ಜಿಲ್ಲೆಗಳಿಗೆ ವಿಶೇಷ ಗಮನವನ್ನು ಕೊಡಲಾಗುತ್ತಿದೆ. ಬೀದರ್, ಗುಲಬರ್ಗಾ ಮತ್ತು ಬಳ್ಳಾರಿ ಜಿಲ್ಲೆಗಳು ಹಾಗು ಬೇರೆ ಜಿಲ್ಲೆಗಳ ಕೆಲವು ತಾಲ್ಲೂಕುಗಳು ಹಿಂದುಳಿದವುಗಳೆಂದು ಗುರುತಿಸಲಾಗಿದೆ. ರಾಜ್ಯದ ಶೇಕಡ ೭೦ ರಷ್ಟು ಭಾಗದಲ್ಲಿ ಎಂ.ಎಸ್.ಆರ್.ಟಿ.ಸಿ. ಬಸ್ಸುಗಳು ಓಡಾಡುತ್ತವೆ.

ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಪ್ರಗತಿಯಾಗಿದೆ. ರಾಜ್ಯದ ಆರ್ಥಿಕ ಹಾಗು ಸಾಮಾಜಿಕ ಪ್ರಗತಿ ಅನುಗುಣವಾಗಿ ಶೈಕ್ಷಣಿಕ ಸೌಕರ್ಯಗಳು ಹೆಚ್ಚಲೇ ಬೇಕು. ಶಾಲೆ ಕಾಲೇಜುಗಳ ವಿದ್ಯಾರ್ಥಿಗಳ ಹಾಗು ಶಿಕ್ಷಕರ ಸಂಖ್ಯೆಯು ಭರದಿಂದ ಬೆಳೆಯುತ್ತಿದೆ. ತೀರ ಸಮೀಪದಲ್ಲಿ

ಶಾಲೆ ಇದ್ದರೂ ೯-೧೦ ವರುಷದ ಎಲ್ಲ ಮಕ್ಕಳು ಶಾಲೆಗೆ ಬರುತ್ತಿಲ್ಲ. ಕಡ್ಡಾಯ ಪ್ರಾಥಮಿಕ ಶಿಕ್ಷಣದ ಗುರಿ ಸಾಧಿಸಿಲ್ಲ. ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ಕಡೆಗೂ ಗಮನವನ್ನು ಹರಿಸಲಾಗುತ್ತಿದೆ. ಎರಡು ವರುಷದ ಪಿ. ಯು. ಸಿ. ಶಿಕ್ಷಣಕ್ರಮವನ್ನು ಪ್ರಾರಂಭಿಸಲಾಗಿದೆ. ತಾಂತ್ರಿಕ ಶಿಕ್ಷಣ ಸೌಕರ್ಯಗಳನ್ನು ಹೆಚ್ಚಿಸಲಾಗಿದೆ. ಸಾಕ್ಷರರ ಪ್ರಮಾಣವು ಶೇಕಡ ೩೧-೫೫ ಕ್ಕೆ ಏರಿದ ರಾಷ್ಟ್ರೀಯ ಪ್ರಮಾಣವು ೨೯.೪೬ ಇದೆ. ಕೃಷಿ ವಿಶ್ವವಿದ್ಯಾಲಯವು ಸ್ಥಾಪನೆಗೊಂಡು ಈಗಾಗಲೆ ಹೆಸರುಗಳಿಸಿದೆ. ಆರೋಗ್ಯ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವ ಎತ್ತುಗಡೆ ನಡೆದಿದೆ.

ಶೋಷಣೆ ರಹಿತವಾದ ಸಮಾಜವನ್ನು ನಿರ್ಮಿಸುವ ಉತ್ತಮಸಾಧನವೆಂದರೆ ಸಹಕಾರಿ ಆಂದೋಲನ. ರಾಜ್ಯದಲ್ಲಿ ಸಹಕಾರಿ ಆಂದೋಲನವು ವಿವಿಧ ಕ್ಷೇತ್ರಗಳನ್ನು ಆವರಿಸಿದೆ. ರೈತರಿಗೆ ಸಾಲ ಮತ್ತು ಇತರ ಸೌಲಭ್ಯಗಳನ್ನು ಒದಗಿಸುವುದಲ್ಲದೆ, ಸರಕುಗಳ ಪರಿಷ್ಕರಣ ಮಾರಾಟಕ್ಕೂ ಉತ್ತಮ ವ್ಯವಸ್ಥೆ ಕಲ್ಪಿಸಿದೆ. ಸಹಕಾರಿ ಕ್ಷೇತ್ರದಲ್ಲಿ ಹಲವಾರು ಉದ್ದಿಮೆಗಳೂ ಪ್ರಾರಂಭವಾಗಿವೆ.

ದೇಶದ ಬಡತನವನ್ನು ಹಿಂಗಿಸುವದು ಆರ್ಥಿಕ ಪ್ರಗತಿಯ ಮುಖ್ಯ ಗುರಿಯಾಗಬೇಕು. ಬಡತನವನ್ನು ಹೋಗಲಾಡಿಸಬೇಕಾದರೆ ನಿರುದ್ಯೋಗತೆಯನ್ನು ನಿವಾರಿಸಬೇಕು. ಶೋಷಣೆಯನ್ನು ತಡೆಗಟ್ಟಬೇಕು. ಯಾರಿಗೂ ಅನ್ಯಾಯವಾಗದಂತೆ ಸಮಾಜ ರಚನೆ ಹಾಗು ಆದಾಯದ ವಿತರಣೆಮಾಡಬೇಕು. ಆರ್ಥಿಕ ಪ್ರಗತಿಯ ಪ್ರಯೋಜನವು ಸಮಾಜದ ದುರ್ಬಲ ವರ್ಗಗಳಿಗೂ ಮುಟ್ಟಬೇಕು. ರಾಜ್ಯ ಸರಕಾರವು ಈ ದಿಸೆಯಲ್ಲಿ ದಿಟ್ಟ ಹೆಜ್ಜೆಗಳನ್ನು ಇಡುತ್ತಿದೆ. ಐದನೆ ಪಾಂಚವಾರ್ಷಿಕ ಯೋಜನೆಯೂ ಇದೇ ಗುರಿಯನ್ನು ಇಟ್ಟುಕೊಂಡಿದೆ.

ಸಾಗರದಾಚೆಗಿನ ನಾಡಾದ ಶ್ರೀ ವಿಜಯರಾಜ್ಯಡ (ಇಂಡೋನೇಶ್ಯ) ದೊರೆ ಐರ್ಲಂಡಿನ (೧೦೧೯-೧೧೪೮) ಒಂದು ಶಾಸನದಲ್ಲಿ ಅವನ ರಾಜ್ಯಕ್ಕೆ ದಕ್ಷಿಣ ಭಾರತದ ಸಿಂಘಳ, ಕರ್ನಾಟಕ, ಚೋಳಿಕ, ಮಲೆಯಾಳ ಮುಂತಾದ ರಾಜ್ಯಗಳ ವ್ಯಾಪಾರಿಗಳು ಬರುತ್ತಿದ್ದರೆಂದು ಹೇಳಿದೆ. ಸಾಗರದಾಚೆಯೂ "ಕರ್ನಾಟಕ" ಪ್ರಚಲಿತವಾಗಿತ್ತೆಂದು ತಿಳಿದುಬರುತ್ತದೆ.

ಡಾ॥ ಸೂರ್ಯನಾಥ ಕಾಮತ್.

ಕರ್ನಾಟಕ ರಾಜ್ಯದಲ್ಲಿ ಶಿಕ್ಷಣದ ಪ್ರಗತಿ

ಶ್ರೀ ಮ. ಗು. ಹಂದ್ರಾಳ, ಎಂ. ಎಲ್. ಸಿ.

ಕರ್ನಾಟಕ ರಾಜ್ಯದಲ್ಲಿ ಶಿಕ್ಷಣದ ಗಾತ್ರ ಹೆಚ್ಚಾಗುತ್ತಲೇ ಇದೆ. ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಸಂಸ್ಥೆಗಳು ಹೆಚ್ಚಿವೆ. ಶಾಲೆ, ಕಾಲೇಜುಗಳಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ, ಅಧ್ಯಾಪಕರ ಸಂಖ್ಯೆ ಮಿತಿಮೀರಿ ಹೆಚ್ಚಾಗಿದೆ. ರಾಜ್ಯ ಸರಕಾರದ ಒಟ್ಟು ವೆಚ್ಚದ ಐದರಲ್ಲಿ ಒಂದುಪಾಲು ಶಿಕ್ಷಣಕ್ಕಾಗಿಯೇ ವೆಚ್ಚ ವಾಗುವುದು.

1. ಪ್ರಾಥಮಿಕ ಶಿಕ್ಷಣ

ಪ್ರಾಥಮಿಕ ಶಾಲೆಗಳ ಸಂಖ್ಯೆ 1955-56 ರಲ್ಲಿ 22,500 ಇತ್ತು. 1972-73 ರಲ್ಲಿ 32,840 ಕ್ಕೆ ಏರಿದೆ. ಸಂಖ್ಯೆ ಏರಿದ ಮೇಲೆ ಕಟ್ಟಡಗಳ ಕೊರತೆಯು ಹೆಚ್ಚುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಎಷ್ಟೋ ಶಾಲೆಗಳು ದೇವಾಲಯಗಳಲ್ಲಿ, ಮುಸೀದಿಗಳಲ್ಲಿ, ಚರ್ಚ ಆವಾರಗಳಲ್ಲಿ ನಡೆಯುತ್ತಿವೆ. ಜಾತ್ಯಾತೀತ ರಾಷ್ಟ್ರವನ್ನು ಕಟ್ಟುವುದು ಭಾರತದ ಧೋರಣೆ. ಎಲ್ಲ ಶಾಲೆಗಳಿಗೂ ಪ್ರತ್ಯೇಕ ಕಟ್ಟಡಗಳಾಗಬೇಕು. ನಗರಗಳಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ ಕಟ್ಟಡಗಳ ಪರಿಸ್ಥಿತಿ ಇನ್ನೂ ಶೋಚನೀಯ. ಅನೇಕ ಶಾಲೆಗಳಲ್ಲಿ ಶಿಫ್ಟ್ ಪದ್ಧತಿಯುಂಟು. ಯೋಗ್ಯ ವಿದ್ಯಾಭ್ಯಾಸಕ್ಕೆ ಇದೊಂದು ಆತಂಕ. ಪ್ರಾಥಮಿಕ ಶಾಲೆಗಳ ಸುಧಾರಣೆಗೋಸ್ಕರ ರಾಜ್ಯದಲ್ಲಿ 30,500 ಶಾಲಾ ಸುಧಾರಣಾಸಮಿತಿಗಳನ್ನು ಸಂಘಟಿಸಲಾಗಿದೆ. ಈ ಸಮಿತಿಗಳು ಹಣ ಸಂಗ್ರಹಿಸುತ್ತವೆ. ಪೀಠೋಪಕರಣಗಳಿಗಾಗಿ ಈ ಹಣವನ್ನು ವೆಚ್ಚಮಾಡಲು ಅನುಕೂಲವಾಗಿದೆ. ತರಗತಿಕೋಣೆಗಳನ್ನು ಕಟ್ಟಿಸುವುದಕ್ಕೆ ತಗಲುವ ವೆಚ್ಚವನ್ನು ಕೊಡುವ ದಾನಿಗಳ ಹೆಸರುಗಳನ್ನು ಆಯಾ ಕೋಟೆಗಳಿಗೆ ಇಡುವ ಯೋಜನೆಯನ್ನು ಸರಕಾರ ರೂಪಿಸಿದೆ. 'ಕೇರ್' ಸಂಸ್ಥೆಯವರ ನೆರವಿನಿಂದ 8 ಲಕ್ಷ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಉಪಾಹಾರ ಯೋಜನೆಯನ್ನು ವಿದ್ಯಾ ಇಲಾಖೆ ಕೈಕೊಂಡಿದೆ. ಇದಕ್ಕೆ ರಾಜ್ಯ ಸರಕಾರವು 45 ಲಕ್ಷ ರೂಪಾಯಿಗಳನ್ನು ವೆಚ್ಚಮಾಡುತ್ತದೆ. ಅಲ್ಲದೆ, ಪ್ರಾಥಮಿಕ ಶಾಲೇ ಗಳಲ್ಲಿಯ ಬಾಲಕಿಯರಿಗೆ ಹಾಜರಿ ಶಿಷ್ಯವೇತನವನ್ನು ಕೊಡಲಾಗುತ್ತಿದೆ. ಬಡ ಮಕ್ಕಳಿಗೆ ಹರಿಜನ, ಗಿರಿಜನ ಮಕ್ಕಳಿಗೆ ಪಾಠಪುಸ್ತಕಗಳನ್ನು ಉಚಿತವಾಗಿ ಕೊಡಲಾಗುತ್ತದೆ. ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಎತ್ತರಿಸುವುದಕೋಸ್ಕರ ಹಲವು ಹಿರಿಯ ಪ್ರಾಥಮಿಕ ಶಾಲೆಗಳನ್ನು ಮಾದರೀಯ ಶಾಲೆಗಳನ್ನಾಗಿ ಪರಿವರ್ತಿಸಿ ಅಲ್ಲಿ ಪದವೀಧರರನ್ನು ಮುಖ್ಯಾಧ್ಯಾ ಪಕರನ್ನಾಗಿ ಸರಕಾರ ನೇಮಿಸಿದೆ. ಈ ಶಾಲೆಗಳಿಗೆ ಯುನಿಶೆಫ್ ನೆರವಿನಿಂದ ವಿಜ್ಞಾನ ಉಪ ಕರಣಗಳನ್ನು ಒದಗಿಸುವ ಯೋಜನೆಯನ್ನು ಸರಕಾರ ರೂಪಿಸಿದೆ. ಇಂದು ಪ್ರತಿ ಶತ 81.7 ರಷ್ಟು ಪ್ರಮಾಣದಲ್ಲಿ ತರಬೇತಿಹೊಂದಿದ ಶಿಕ್ಷಕರು ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯ ಮಾಡುತ್ತಿರುವರು.

ರಾಜ್ಯದಲ್ಲಿ 907 ಶಿಶುವಿಹಾರಗಳಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಇವು ಸಾಕಷ್ಟಿಲ್ಲ. ಒಂದು ವರ್ಷದ ಪೂರ್ವಪ್ರಾಥಮಿಕ ಶಿಕ್ಷಣವು ಪ್ರಾಥಮಿಕ ಶಿಕ್ಷಣದಲ್ಲಿ ಸಮಾವೇಶವಾಗಬೇಕು. ಆಗ ಪ್ರಾಥಮಿಕ ಶಿಕ್ಷಣವು ಭದ್ರ ಬುನಾದಿಯಮೇಲೆ ನಿಲ್ಲುವುದು. ಸಾರ್ವತ್ರಿಕವಾಗಿ ಶಿಶು ವಿಹಾರಗಳೂ ಹೆಚ್ಚುವುವು. ಶಿಶುವಿಹಾರಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ತೆರೆಯುವುದು ಅವಶ್ಯವಿದೆ. ರಾಜ್ಯಸರಕಾರಕ್ಕೆ ಕೇಂದ್ರಸರಕಾರವು ಈ ಕಾರ್ಯಕ್ಕೆ ಧನ ಸಹಾಯ ನೀಡುವ ನಿರೀಕ್ಷೆಯುಂಟು. ಉಳ್ಳವರು ಮಾತ್ರ ಶಿಶುವಿಹಾರಗಳ ಲಾಭ ಪಡೆಯುತ್ತಿರುವರು. ಸಮಾಜವಾದದ ನೀತಿಗೆ ಇದು ಒಗ್ಗುವುದಿಲ್ಲ. ಸರಕಾರ ಈ ವಿಷಯದತ್ತ ವಿಶೇಷ ಗಮನ ನೀಡುವುದು ಅಗತ್ಯವಾಗಿದೆ.

2. ಮಾಧ್ಯಮಿಕ ಶಿಕ್ಷಣ.

ರಾಜ್ಯದಲ್ಲಿ 1955-56 ರ ಹೊತ್ತಿಗೆ 486 ಹೈಸ್ಕೂಲುಗಳಿದ್ದವು. ಈಗ ರಾಜ್ಯದಲ್ಲಿ 2,680 ಹೈಸ್ಕೂಲ್‌ಗಳಿವೆ, ಅಲ್ಲಿ ಉಚಿತ ಶಿಕ್ಷಣವು ದೊರೆಯುತ್ತಲಿದೆ.

3. ಕಾಲೇಜ ಶಿಕ್ಷಣ.

ಉಚ್ಚ ಶಿಕ್ಷಣವೂ ಸಾಕಷ್ಟು ಪ್ರಗತಿ ಪಡೆದಿದೆ. ಸುಮಾರು 300 ಜ್ಯೂನಿಯರ್ ಕಾಲೇಜುಗಳೂ, 300 ಪದವೀ ಕಾಲೇಜುಗಳು ಇಂದು ರಾಜ್ಯದಲ್ಲಿ ನಡೆಯುತ್ತವೆ. ರಾಜ್ಯ ದಲ್ಲಿ ಮೂರು ಸಾಮಾನ್ಯ ವಿಶ್ವವಿದ್ಯಾನಿಲಯಗಳಿವೆ. ಅಲ್ಲದೆ ಒಂದು ಕೃಷಿ ವಿಶ್ವವಿದ್ಯಾಲ ಯವುಂಟು. ಮುಂದಿನ ವರ್ಷ ಇನ್ನೊಂದು ಕೃಷಿ ವಿಶ್ವವಿದ್ಯಾಲಯ ರೂಪುಗೊಳ್ಳಲಿದೆ, ಒಂದು ವೈದ್ಯಕೀಯ ವಿಶ್ವವಿದ್ಯಾಲಯವೂ, ಒಂದು ತಾಂತ್ರಿಕ ವಿಶ್ವವಿದ್ಯಾಲಯವೂ ರೂಪ ಗೊಳ್ಳಲಿವೆ.

ರಾಜ್ಯದಲ್ಲಿ ಶಿಕ್ಷಣದ ಗಾತ್ರ ಬಹುಮುಖವಾಗಿ ಬೆಳೆಯುತ್ತಲಿದೆ. ಶಿಕ್ಷಣದ ಗುಣ ಮಟ್ಟವನ್ನು ಎತ್ತರಿಸುವುದು ಅಧ್ಯಾಪಕರ ಕೈಯಲ್ಲಿದೆ. ಹಕ್ಕು, ಹೊಣೆ ಇವು ಒಂದೇ ನಾಣ್ಯದ ಎರಡು ಮೈಗಳು. ಅಧ್ಯಾಪಕರು ಕಳಗೆ ತೋರಿಸಿದ ಪಂಚಶೀಲಗಳನ್ನು ಪಾಲಿಸಿ ದಾಗ ರಾಜ್ಯದ ಶಿಕ್ಷಣದ ನಿಜವಾದ ಪ್ರಗತಿಯಾಗುವುದು.

(1) ಕರ್ತವ್ಯ ನಿಷ್ಠೆ
(2) ಮಕ್ಕಳ ಮೇಲಿನ ಅಪಾರ ಪ್ರೇಮ.
(3) ಮಕ್ಕಳೇ ನಾಡಶಕ್ತಿ ಎಂಬ ನಂಬಿಗೆ.
(4) ಮಕ್ಕಳ ಕಲ್ಯಾಣವೇ ಶಿಕ್ಷಕನ ಚಿಂತನೆ.
(5) ಅಧ್ಯಯನ, ಅಧ್ಯಾಪನ ಜೀವನ ಸಿದ್ಧಿ.

ಶಿಕ್ಷಕರು ರಾಷ್ಟ್ರದ ಶಿಲ್ಪಿಗಳು. ಅವರಿಂದಲೇ ಶಿಕ್ಷಣಕ್ಕೆ ನೂತನ ಚೇತನ ದೊರೆತು ನೂತನ ಭಾರತ ನಿರ್ಮಾಣವಾಗಬೇಕು, ಅಂಥ ಶುಭಕಾಲ ಶೀಘ್ರದಲ್ಲಿ ಒದಗಿ ಬರಲಿ.

ಕರ್ನಾಟಕದ ಏಕೀಕರಣ — ಕಲ್ಪನೆಯ ವಿಕಾಸ ಮತ್ತು ಸಾಧನೆ

ವೆಂಕಟೀಶ ಸಾಂಗಲಿ

ಯಾವುದೊಂದು ಅಪಾಯದ ಅಂಚಿನಲ್ಲಿದ್ದಾಗ, ಸ್ವಂತಬಲದಿಂದ ಅದರ ನಿವಾರಣೆ ಅಸಾಧ್ಯವೆನಿಸಿದಾಗ ಇತರರೊಂದಿಗೆ ಕೂಡಿಕೊಂಡು ಹೋರಾಡುವುದು ಅಗತ್ಯವಾಗುತ್ತದೆ, ವೈಯುಕ್ತಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಎಲ್ಲ ರಂಗಗಳಲ್ಲಿಯೂ ಕಂಡುಬರುವ ಸಹಜ ಧರ್ಮ ಇದು. ಹಾಗೆಯೇ ಸ್ವರೂಪ, ಸ್ವಭಾವಗಳಿಗನುಗುಣವಾಗಿ ಇಂಥ ಒಕ್ಕೂಟಗಳು ನಿರ್ಮಾಣವಾಗಿ ನಾಡಿನ ಉಳಿವು-ಏಳ್ಗೆಗೆ ಕಾರಣವಾಗುತ್ತವೆ. ಸಂರಕ್ಷಣೆ ಪ್ರಗತಿ, ಈ ಬಗೆಯ ಒಗ್ಗಟ್ಟಿನ ಮೂಲ ಉದ್ದೇಶ.

ಕಳೆದ ಶತಮಾನದ ಪೂರ್ವಭಾಗದಲ್ಲಿ ಕರ್ನಾಟಕದ ಸ್ಥಿತಿಯು ಇಂಥ ಒಂದು ಸಾಂಸ್ಕೃತಿಕ ಆಘಾತಕ್ಕೆ ಒಳಗಾಗಿತ್ತು. ಮೈಸೂರು, ಮುಂಬಯಿ, ಮದ್ರಾಸು ಹಲವಾರು ದೇಶಿಯ ಸಂಸ್ಥಾನ ಮುಂತಾದ ಆಡಳಿತ ವಿಭಾಗಗಳಿಂದ ಪ್ರತ್ಯೇಕಿಸಲ್ಪಟ್ಟ ಕನ್ನಡಿಗರ ಅವಸ್ಥೆ ಒಂದೊಂದು ಕಡೆಯಲ್ಲಿ ಒಂದೊಂದು ತರ. ಮೈಸೂರು ಸಂಸ್ಥಾನದಲ್ಲಿ ಪರಿಸ್ಥಿತಿ ಸ್ವಲ್ಪ ಮೇಲು. ರಾಜಕೀಯ ಅಧಿಕಾರಗಳು ಕಮಿಷನರ ಕೈಯಲ್ಲಿದ್ದರೂ ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲೆಗಳಿಗೆ ಮುಮ್ಮಡಿ ಕೃಷ್ಣರಾಜ ಒಡೆಯರು ಮಹಾಪೋಷಕರು. ಅನಂತರ ಅಧಿಕಾರಕ್ಕೆ ಬಂದ ಸಮರ್ಥ ದಿವಾನರು, ಶಿಕ್ಷಣ, ಕೈಗಾರಿಕೆ ಮೊದಲಾದ ಕ್ಷೇತ್ರಗಳಲ್ಲಿ ಸಂಸ್ಥಾನವನ್ನು ಪ್ರಗತಿ ಪಥದಲ್ಲಿ ನಡೆಸಿಕೊಂಡು ಬಂದರು. ಜನತೆಯ ಆಶೋತ್ತರಗಳ ಸಂರಕ್ಷರು ಒಡೆಯರೇ ಆಗಿದ್ದರಿಂದ ಮೈಸೂರಿಗೆ ಯಾವ ಬಗೆಯ ಕಾವು ತಟ್ಟಿರಲಿಲ್ಲ.

ಒಟ್ಟು ಕನ್ನಡಿಗರ ಸುಮಾರು ಅರ್ಧದಷ್ಟು ಜನ ಮೈಸೂರು ಸಂಸ್ಥಾನದ ಪ್ರಜೆಗಳು. ಇನ್ನುಳಿದವರು ಕೆಲವರು ದಕ್ಷಿಣ ಮಹಾರಾಷ್ಟ್ರವೆಂದು ವಿಖ್ಯಾತನಾಮದಿಂದ ಕರೆಯಲ್ಪಡುತ್ತಿದ್ದ. ದೇಶೀಯ ಸಂಸ್ಥಾನಗಳ ಪ್ರಜೆಗಳು, ಹಾಗೂ ನಿಜಾಮ ಪ್ರಭುತ್ವದ ಪ್ರಜೆಗಳು. ರಾಜಕೀಯವಾಗಿಯೂ ಸಾಂಸ್ಕೃತಿಕವಾಗಿಯೂ ದಾಸ್ಯಜೀವನದಲ್ಲಿ ತೊಳಲಾಡುತ್ತಿದ್ದವರು ಅವರು. ಇನ್ನುಳಿದುದು ಮುಂಬಯಿ ಕರ್ನಾಟಕ, ಮುಂಬಯಿ, ಪುಣೆನಗರಗಳಲ್ಲಿ ಮೂಡಿ ಬಂದ ಶೈಕ್ಷಣಿಕ ಜಾಗೃತಿಯಿಂದ ಇವರು ಬೇಗ ಎಚ್ಚೆತ್ತು, ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಕಾರ್ಯಪ್ರವೃತ್ತರಾದರು. ಭಾಷಾ–ಸಂಸ್ಕೃತಿಯೇ ನವಸಮಾಜದ ಅಡಿಗಲ್ಲು ಎಂಬುದನ್ನು ಮನವರಿಕೆ ಮಾಡಿಕೊಂಡು ಕನ್ನಡ ಭಾಷೆಯ ಪುನರುದ್ಧಾರಕ್ಕೆ ಟೊಂಕ ಕಟ್ಟಿದರು.

ಈ ಜಾಗೃತಿಯ ಪರಿಣಾಮವಾಗಿ ಉತ್ತರ ಕರ್ನಾಟಕದಲ್ಲಿ ಹಿಂದೆ ಇದ್ದ ಮರಾಠೀ ಶಾಲೆಗಳ ಬದಲು ಕನ್ನಡ ಶಾಲೆಗಳು ಕಾಣಲಾರಂಭಿಸಿದವು. ಅದಕ್ಕಾಗಿ ಕನ್ನಡ ಶಿಕ್ಷಕರ ತರಬೇತಿ ಏರ್ಪಟ್ಟಿತು. ಪಠ್ಯ-ಪುಸ್ತಕಗಳ, ಅಚ್ಚುಕೂಟಗಳ ನಿರ್ಮಾಣ, ಕನ್ನಡ ಗ್ರಂಥ ರಚನೆಯಂ ಉತ್ಸಾಹ—ಹೀಗೆ ಭಾಷಾಭಿವೃದ್ಧಿಯ ಚಟುವಟಿಕೆ ಮುಂದುವರಿದವು. ಎಲ್ಲೆಲ್ಲಿಯೂ ಹೊಸಜೀವನದ ಲಕ್ಷಣ ಮೂಡಿದವು.

ಕೇವಲ ಶಿಕ್ಷಣ ರಂಗಕ್ಕೆ ಸೀಮಿತವಾಗಿದ್ದ ಈ ಪ್ರಯತ್ನಗಳು ಸಂಘಟಿತ ರೂಪದಲ್ಲಿ ವ್ಯಕ್ತವಾದದ್ದು 1890ರಲ್ಲಿ. ಅಂದಿನ ಸುಶಿಕ್ಷಿತ ಸಮಾಜ ಸಾಮಾನ್ಯವಾಗಿ ಮರಾಠೀ ಭಾಷೆಯ ಪ್ರಭಾವಕ್ಕೆ ಒಳಗಾದವರು. ಆದುದರಿಂದ ಮರಾಠಿಯು ಸಾರ್ವಜನಿಕ ವೇದಿಕೆಯ ಭಾಷೆಯೂ ಆಗಿದ್ದಿತು. ಈ ಪರಿಸ್ಥಿತಿಯನ್ನು ಹೋಗಲಾಡಿಸುವುದು ಮತ್ತು ಆಡಳಿತಶಾಹಿಯಿಂದ ಕನ್ನಡ ಭಾಷೆ ಮತ್ತು ಜನತೆಗೆ ಆಗುತ್ತಿದ್ದ ಅನ್ಯಾಯವನ್ನು ತಡೆಗಟ್ಟುವುದು—ಇವು ಅಂದಿನ ಮುಖ್ಯ ಸಮಸ್ಯೆಗಳು. ರಚನಾತ್ಮಕ ಮತ್ತು ಸಂಘಟಿತ ಪ್ರಯತ್ನಗಳ ಮೂಲಕವಾಗಿಯೇ ಈ ಸಮಸ್ಯೆಗಳ ಪರಿಹಾರವಾಗಬೇಕೆಂಬುದು ಅಂದಿನ ಅಭಿಮಾನಿಗಳ ಹಂಬಲವಾಗಿತ್ತು. ದಿನಾಂಕ 20-7-1890ರಂದು ಧಾರವಾಡದಲ್ಲಿ ಸೇರಿದ್ದ ಸಾರ್ವಜನಿಕ ಸಭೆಯಲ್ಲಿ 'ಕರ್ನಾಟಕ ವಿದ್ಯಾವರ್ಧಕ ಸಂಘ'ವು ಸ್ಥಾಪಿತವಾಯಿತು. 'ಕರ್ನಾಟಕ' ಪದದಲ್ಲಿ ಸಮಗ್ರ ಕನ್ನಡ ಜನತೆಯ ಆಶೋತ್ತರಗಳನ್ನು ಸೂಚಿಸುವ ಪ್ರಥಮ ಪ್ರಯತ್ನ ಇದು ಎಂದು ಕಾಣುತ್ತದೆ. ಅದು ಕೇವಲ ಭಾಷಾಸೂಚಕವಾಗಿರದೆ ಜನತೆಯ ಬದುಕಿನ ಹೆದ್ದಾರಿ ಎಂದು ಅವರು ಗುರುತಿಸಿದರು. 'ಸಾರ್ವಜನಿಕ ಸಭೆಗಳಲ್ಲಿ ಮಾತಾಡುವುದಕ್ಕೆ ಉತ್ತೇಜನ ಕೊಡುವುದು ಈ ಸಂಘದ ಮೊದಲ ಉದ್ದೇಶ. ಕನ್ನಡದ ಅಂದಿನ ಅವಮಾನಕರ ಸ್ಥಿತಿಯನ್ನು ತಿಳಿಯಲು ಬೇರೆ ನಿದರ್ಶನ ಬೇಕೇ ? ಕನ್ನಡ ಗ್ರಂಥ ಪ್ರಕಾಶನ, ಲೇಖಕರಿಗೆ ಪ್ರೋತ್ಸಾಹ, ಪುಸ್ತಕ ಭಂಡಾರದ ಸ್ಥಾಪನೆ, ನಿಯತಕಾಲಿಕೆಯ ಪ್ರಕಟನೆ-ಇವು ಸಂಘವು ಇರಿಸಿಕೊಂಡಿದ್ದ ಇತರ ಉದ್ದೇಶಗಳು. ಕಾರ್ಯಕ್ರಮಗಳು ಸಣ್ಣಪ್ರಮಾಣದಲ್ಲಿ ಆರಂಭವಾದರೂ ಅವರು ಕಟ್ಟಿ ಕೊಂಡ ಕನಸು, ರೂಪಿಸಿಕೊಂಡ ಧ್ಯೇಯ ಕನ್ನಡಿಗರ ಪರಂಪರೆಗೆ ತಕ್ಕವು. ಶ್ರೀರಂಗ ಪಟ್ಟಣದ ಪತನದೊಂದಿಗೆ ಕಡಿದು ಹೋಗಿದ್ದ ಮೈಸೂರಿನ ಸಂಬಂಧವನ್ನು ಮತ್ತೆ ಚಿಗುರಿಸಿದವರು ಈ ಸಂಘದ ಕಾರ್ಯಕರ್ತರು. ತಮ್ಮ ಕಾರ್ಯದಲ್ಲಿ ಮೈಸೂರು ಮಹಾರಾಜರ ಉದಾರ ಆಶ್ರಯವನ್ನು ಪ್ರಾರಂಭದಿಂದಲೇ ಕೂರಿದರು. ಮೈಸೂರು ಸಂಸ್ಥಾನದ ವಿದ್ಯಾ ಇಲಾಖೆಯ ಡೈರೆಕ್ಟರರನ್ನು ಬರಮಾಡಿಕೊಂಡರು. ಮಹಾರಾಜರ ಪಟ್ಟಾಭಿಷೇಕ ಸಮಾರಂಭದಲ್ಲಿ ಸಂಘದ ಪ್ರತಿನಿಧಿಗಳು ಭಾಗವಹಿಸಿ ಸಮಸ್ತ ಕನ್ನಡಿಗರ ಪರವಾಗಿ ಪ್ರೀತಿ ಗೌರವಗಳನ್ನು ಸಮರ್ಪಿಸಿದರು. ಈ ಸಾಂಸ್ಕೃತಿಕ ಸಂಪರ್ಕವು 1900ರಿಂದ ಇನ್ನೂ ಬಲಗೊಂಡು, ಪ್ರತಿವರ್ಷವೂ ಮೈಸೂರು ಸರಕಾರದ ಪರವಾಗಿ ವಿದ್ವಾಂಸರು ಬಂದು ಸಂಘದ ವಾರ್ಷಿಕ ಸಮಾರಂಭಗಳಲ್ಲಿ ಭಾಗವಹಿಸತೊಡಗಿದರು.

ಈ ಮಧ್ಯೆ ಸಂಘದ 'ಪಾಗ್ಬೂಷಣ' ಮಾಸಪತ್ರಿಕೆಯು ಹೊಸ ಲೇಖಕರ ಸಾಧನರಂಗ ವಾಗಿ ನಾಡಿನ ಎಲ್ಲ ಭಾಗಗಳ ವಿದ್ವಾಂಸರನ್ನು ಆಕರ್ಷಿಸಿತ್ತು. ಬಿ. ರಾಮರಾವ್, ಎಚ್. ಚಿದಂ ಬರಯ್ಯ, ವಿ. ನರಸಿಂಹ ಮೂರ್ತಿ, ಸಿದ್ಧಾಂತಿ, ಶಿವಶಂಕರಶಾಸ್ತ್ರೀ, ಕೆ. ರಾಮಸ್ವಾಮಿ ಅಯ್ಯಂಗಾರ್, ಬಿ. ವೆಂಕಟಾಚಾರ್, ಕುಂಡಲಗಿರಿಯಾಚಾರ್ಯ, ಸಿ. ವೆಂಕಟರಮಣಯ್ಯ, ಪಾಸ್ಯಂ ಸುಂದರಶಾಸ್ತ್ರೀ, ಎ. ಎನ್. ನರಹರಯ್ಯ—ಮೊದಲಾದ ಮೈಸೂರು ಮತ್ತು ಮದರಾಸು ಭಾಗದ ಲೇಖಕರು ಉತ್ತರ ಕರ್ನಾಟಕದ ಸಾಹಿತ್ಯಾಭಿಮಾನಿಗಳಿಗೆ ಪರಿಚಿತ ರಾದುದು 'ಪಾಗ್ಬೂಷಣ'ದ ಮೂಲಕವೇ.

ಮಂಗಳೂರಿನ 'ಸುವಾಸಿನಿ' ಮಾಸ ಪತ್ರಿಕೆಯನ್ನು ಈ ಸಂದರ್ಭದಲ್ಲಿ ಹೆಮ್ಮೆಯಿಂದ ನೆನೆಯಬೇಕು. ಬಿ. ವಿಠ್ಠಲರಾಯರು ಪ್ರಕಾಶಕರು. ಬೆನಗಲ್ಲಂ ರಾಮರಾಯರು ಪತ್ರಿಕೆಯ ಸಂಪಾದಕರು. ರಾಮರಾಯರು ಕರ್ನಾಟಕ ಏಕೀಕರಣದ ಕ್ರಿಯಾಶೀಲ ಧುರೀಣರು. ಅವರ ತಂದೆ ಬೆನಗಲ್ಲ ಮಂಜುನಾಥಯ್ಯನವರು ಎಲ್ಲ ಕನ್ನಡ ಪ್ರದೇಶಗಳನ್ನು ಒಳಗೊಂಡ ಸಮಗ್ರ ಕರ್ನಾಟಕದ ಭೂಪಟವನ್ನು ರಚಿಸಿ ಏಕೀಕರಣದ ಕಲ್ಪನೆಗೆ ಒಂದು ರೂಪವನ್ನು ಕೊಟ್ಟವರು. ರಾಮರಾಯರು ವಿದ್ಯಾವರ್ಧಕ ಸಂಘದೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದವರಾಗಿ, ಮದ್ರಾಸು, ಮೈಸೂರು, ಮುಂಬಯಿ ಪ್ರದೇಶಗಳಲ್ಲಿ ಕೆಲಸಮಾಡಿ ಅಖಿಲ ಕರ್ನಾಟಕದ ಸಾಮರಸ್ಯದ ಸಾಧಕರಾಗಿದ್ದರು. ಅವರ ದೃಷ್ಟಿ, ದೋರಣೆ 'ಸುವಾಸಿನಿ'ಯಂ ಮೂಲಕ ಸ್ಪಷ್ಟವಾಯಿತು. 'ಮಂಗಳೂರು, ಬೆಂಗಳೂರು, ಧಾರವಾಡವೆಂಬ ಪ್ರಾದೇಶಿಕ ಅಭಿಮಾನವನ್ನುಳಿದು, 'ಇದು ಮಂಗಳೂರಿನ ಪತ್ರಿಕೆ' ಎಂದು ಭೇದವೆಣಿಸದೆ, 'ನಾವೆಲ್ಲ ಒಂದೇ ನಾಡಿನವರು' ಎಂಬುದನ್ನು ಅವರು ಕಾರ್ಯತಃ ಸಾಧಿಸಿದರು.

ಈ ಹಿನ್ನೆಲೆಯಲ್ಲಿ ಕನ್ನಡಿಗರ ಒಕ್ಕೂಟದ ಇನ್ನೊಂದು ಹಂತ ನಿರ್ಮಾಣವಾಗುತ್ತದೆ. ಕನ್ನಡ ನಾಡಿನ ವಿವಿಧ ಪ್ರಾದೇಶಿಕ ಭೇದಗಳನ್ನು ಅರಿತು ಅವುಗಳ ನಿವಾರಣೋಪಾಯ ಗಳನ್ನು ಕೈಕೊಳ್ಳುವ ಪ್ರಯತ್ನಕ್ಕೆ ಸಂಘವು ಸಿದ್ಧವಾಯಿತು. ಈ ಭೇದ ಭಾವಗಳಿಂದ ಕನ್ನಡದ ಬೆಳವಣಿಗೆಗೆ ಹಲವು ಬಗೆಯ ಆತಂಕಗಳು; ಒಂದು ಭಾಗದ ಪುಸ್ತಕಗಳನ್ನು ಮತ್ತೊಂದು ಭಾಗದವರು ಕೊಳ್ಳುತ್ತಿಲ್ಲ. ಓದುಗರ ಅಭಾವದಿಂದ ಸಾಹಿತ್ಯ ಮತ್ತು ಪ್ರಕಾಶನವೃತ್ತಿ ಹಿಮ್ಮುಖವಾಗುತ್ತಿವೆ. ಇತರ ದೇಶ-ಭಾಷೆಗಳ ಪ್ರಗತಿಯ ಮಾನದಿಂದ ಕನ್ನಡದ ಹೆಜ್ಜೆ ತೀರ ನಿಧಾನ. ಈ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವ ಉದ್ದೇಶದಿಂದ 1907 ರ ಜೂನ್ ತಿಂಗಳಲ್ಲಿ ಸಂಘದ ವಾರ್ಷಿಕ ಸಮಾರಂಭದ ಕಾಲಕ್ಕೆ, ಅಖಿಲ ಕರ್ನಾಟಕ ಗ್ರಂಥಕರ್ತರ ಸಮ್ಮೇಲನವೊಂದನ್ನು ಏರ್ಪಡಿಸಲಾಯಿತು. ಎರಡು ದಿನಗಳ ಈ ಸಮ್ಮೇಲನಕ್ಕೆ ಬೇರೆ ಬೇರೆ ಭಾಗಗಳಿಂದ ವಿದ್ಯಾಧಿಕಾರಿಗಳೂ ಶಿಕ್ಷಕರೂ ಗ್ರಂಥಕರ್ತರೂ ಆಗಮಿಸಿದ್ದರು.

(1) ಗ್ರಂಥಸ್ಥ ಭಾಷೆಗೆ ವಿಕರೂಪತೆಯನ್ನು ತರುವುದು ಸಾಧ್ಯ ಮತ್ತು ಅವಶ್ಯಕ.

(2) ಅಕ್ಷರ ಸಂಯೋಜನೆ, ಶಬ್ದರೂಪ ವಾಕ್ಯರಚನೆ-ಇವೆಲ್ಲ ವ್ಯಾಕರಣ ಶುದ್ಧವಾಗಿದ್ದು, ಭಾಷಾ ವಿಕರೂಪತೆಯು ಸಾಧಿತವಾಗಬೇಕು.

ಈ ತತ್ವಗಳ ಆಧಾರವನ್ನನುಸರಿಸಿ ಕನ್ನಡದ ವಿಕೀಕರಣವನ್ನು ಸಾಧಿಸಬೇಕೆಂದೂ, ಈ ಕಾರ್ಯ ಯೋಜನೆಗೆ ಸಮ್ಮೇಲನದ ಅಧ್ಯಕ್ಷರಾಗಿದ್ದ ಎಸ್. ಜಿ. ನರಸಿಂಹಾಚಾರ್ಯರ ನೇತೃತ್ವದಲ್ಲಿ ಒಂದು ಉಪಸಮಿತಿಯನ್ನು ರಚಿಸಬೇಕೆಂದೂ ನಿರ್ಧರಿಸಲಾಯಿತು, ಈ ಸಮಿತಿಯ ಆಶ್ರಯದಲ್ಲಿ 'ಕರ್ನಾಟಕ ಗ್ರಂಥಮಾಲೆ' ಎಂಬ ಹೆಸರಿನಿಂದ, ಕರ್ನಾಟಕದ ಎಲ್ಲ ಭಾಗಗಳಿಗೂ ಸಮ್ಮತವಾಗುವ ರೀತಿಯಲ್ಲಿ ಕೆಲವು ಗ್ರಂಥಗಳನ್ನು ಸಿದ್ಧಪಡಿಸಬೇಕೆಂದು ನಿರ್ಣಯಿಸಲಾಯಿತು. ಇನ್ನೊಂದು ಮಹತ್ವದ ತೀರ್ಮಾನವೆಂದರೆ, ಕರ್ನಾಟಕದ ಎಲ್ಲ ಭಾಗದ ಶಾಲೆಗಳಲ್ಲಿ ಉಪಯೋಗಿಸುವ ಎಲ್ಲ ಪುಸ್ತಕಗಳು ಭಾಷಾವಿಷಯದಲ್ಲಿ ಒಂದೇ ಆಗುವುದು ಇಷ್ಟವಾಗಿದೆ.—ಎಂಬುದು. ''ಮೈಸೂರು, ಮದರಾಸು, ಹೈದರಾಬಾದ ಹಾಗೂ ಮುಂಬಯಿ ಸರಕಾರದವರಿಗೆ ಈ ಸಮ್ಮೇಳನದ ಸಂಗತಿಯನ್ನು ತಿಳಿಸುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಡತಕ್ಕದ್ದು''—ಎಂದೂ ತೀರ್ಮಾನಿಸಲಾಯಿತು.

ಮರುವರ್ಷ ಗ್ರಂಥಕರ್ತರ ಎರಡನೆಯ ಸಮ್ಮೇಳನವು ಸಂಘದ ಆಶ್ರಯದಲ್ಲಿಯೇ ಸೇರಿತ್ತು. ರಂಗಭೂಮಿಗಾಗಿ ನಾಟಕಗಳನ್ನು, ಕರ್ನಾಟಕದ ಇತಿಹಾಸವನ್ನೂ, ಶಾಸ್ತ್ರೀಯ ಮತ್ತು ಪಾರಿಭಾಷಿಕ ಶಬ್ದಗಳನ್ನು ರಚಿಸುವುದಕ್ಕಾಗಿ ಬಹುಮಾನ ನೀಡುವ ಯೋಜನೆಗಳನ್ನು ಈ ಸಮ್ಮೇಳನದಲ್ಲಿ ಸಿದ್ಧಪಡಿಸಲಾಯಿತು.

ಮುಂದಿನ ಸಮ್ಮೇಳನವು ಬೆಂಗಳೂರಿನಲ್ಲಿ ಸೇರಬೇಕೆಂದು ಗೊತ್ತಾಯಿತು. ಆದರೆ ವಂಗಭಂಗ, ಸ್ವದೇಶಿ ಚಳುವಳಿ-ಅವುಗಳ ರಾಜಕೀಯ ಪರಿಣಾಮ ಅಡ್ಡಬಂದು ಈ ಪ್ರಯತ್ನವನ್ನು ಮುಂದೂಡಿದವು. ಮೈಸೂರು ಸಂಪದಭ್ಯುದಯ ಸಮಾಜವು ೧೯೧೪ರಲ್ಲಿ ಒಂದು ಸೂಚನೆ ಮಾಡಿತು. ಕರ್ನಾಟಕ ಭಾಷೆಯಲ್ಲಿ ವಿವಿಧ ಗ್ರಂಥಗಳನ್ನು ರಚಿಸುವವರ ಪ್ರೋತ್ಸಾಹಕ್ಕಾಗಿ ಸ್ವತಂತ್ರಾಧಿಕಾರವುಳ್ಳ ಪರಿಷತ್ತೊಂದು ಇರಬೇಕು ಮತ್ತು ಸರಕಾರದವರು ಅದಕ್ಕೆ ವಿಶೇಷ ಸಹಾಯ ಮಾಡುವುದು ಉಚಿತ. ಈ ಸೂಚನೆಯ ಅನುಷ್ಠಾನಕ್ಕಾಗಿ ರಚಿತವಾದ ಉಪಸಮಿತಿಯು, ಹಿಂದೆ ಗ್ರಂಥಕರ್ತರ ಸಮ್ಮೇಳನವು ರೂಪಿಸಿಕೊಂಡ ದಾರಿಯನ್ನೇ ಅನುಸರಿಸಿತು. ಅಖಿಲ ಕರ್ನಾಟಕದ ವಿದ್ವಾಂಸರನ್ನು ಸಮ್ಮೇಳನಕ್ಕೆ ಆಹ್ವಾನಿಸಿ, ಕೆಳಗೆ ಸೂಚಿಸಿದ ವಿಷಯಗಳ ಬಗ್ಗೆ ಪ್ರಬಂಧ ಬರೆಯಲು ಸೂಚಿಸಲಾಯಿತು.

(೧) ಕನ್ನಡ ನಾಡಿನ ನಾನಾ ಭಾಗಗಳ ಗ್ರಂಥಕರ್ತರಲ್ಲಿ ಸ್ನೇಹ-ಸೌಹಾರ್ದವನ್ನು ಬೆಳೆಸುವ ಉಪಾಯ ಯೋಜನೆಗಳು.

(೨) ಕನ್ನಡ ಭಾಷೆಯ ಏಕರೂಪತೆಯ ಮಾರ್ಗಗಳು.

(೩) ಎಲ್ಲ ಭಾಗಗಳಲ್ಲಿ ಒಂದೇ ಬಗೆಯ ಪಠ್ಯಪುಸ್ತಕಗಳನ್ನು ಸೂಚಿಸುವುದು.

(೪) ಕನ್ನಡದಲ್ಲಿ ಸುಲಭ ಶಾಸ್ತ್ರೀಯ ಗ್ರಂಥಗಳ ರಚನೆ ಮತ್ತು ಪ್ರಸಾರ.

(೫) ಪಾರಿಭಾಷಿಕ ಶಬ್ದಗಳ ವಿಚಾರ.

ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯು ಹಿನ್ನೆಲೆ ಇದು. ೧೯೧೫ರ ಮೇ ತಿಂಗಳ ಮೊದಲವಾರದಲ್ಲಿ ರಾಜಸಭಾಭೂಷಣ ಕೆ. ಪುಟ್ಟಣ್ಣಚೆಟ್ಟಿ ಅವರ ಅಧ್ಯಕ್ಷತೆಯಲ್ಲಿ, ಮಹಾರಾಜರ ಉದಾರಾಶ್ರಯದಲ್ಲಿ ಕನ್ನಡ ನಾಡಿನ ಪ್ರತಿನಿಧಿಗಳ ಪ್ರಥಮ ಸಭೆ. "ಕರ್ನಾಟಕ ಭಾಷಾ ಸಂಸ್ಕರಣಕ್ಕಾಗಿಯೂ ಗ್ರಂಥಾವಳಿಯ ಅಭಿವೃದ್ಧಿಗಾಗಿಯೂ ಬೆಂಗಳೂರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಎಂಬ ಹೆಸರಿನೊಡನೆ ಪ್ರಧಾನ ಸಭೆಯೊಂದು ಸ್ಥಾಪಿತವಾಗಬೇಕು. ಬೊಂಬಾಯಿ, ಮದರಾಸು, ಹೈದರಬಾದು, ಕೊಡಗು ಪ್ರಾಂತಗಳಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಶಾಖೆಗಳಿರಬೇಕು : ಮತ್ತು ಈ ಪರಿಷತ್ತಿನ ಉದ್ದೇಶಗಳನ್ನೇ ಇಟ್ಟುಕೊಂಡು ಕೆಲಸಮಾಡುವ ಇತರ ಸಂಘಗಳನ್ನು ತನ್ನಜೊತೆಗೆ ಸೇರಿಸಿಕೊಳ್ಳುವುದಕ್ಕೆ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಅಧಿಕಾರವಿರಬೇಕು."—ಈ ಧ್ಯೇಯ, ಉದ್ದೇಶಗಳೊಂದಿಗೆ ದಿ. ೫–೫–೧೯೧೫ ರಂದು ಕರ್ನಾಟಕ ಸಾಹಿತ್ಯ ಪರಿಷತ್ತು ಕಾರ್ಯಸನ್ನದ್ಧವಾಯಿತು.

ಪರಿಷತ್ತಿನ ಸಾಧನೆ ಅಪಾರವಾದುದು. ಪ್ರಾಚೀನ ಗ್ರಂಥಗಳ ಪರಿಷ್ಕರಣ, ಪ್ರಕಟನೆ, ಸಾಹಿತ್ಯ-ಭಾಷಾ ಸಂಶೋಧನೆ, ಪಂಡಿತರಿಗೆ ಪುರಸ್ಕಾರ, ಸಾಹಿತ್ಯೋತ್ಸವಗಳು, ಗಮಕ ಕಲೆಯ ಪ್ರಚಾರ-ತರಬೇತಿ, ಗ್ರಂಥಪ್ರದರ್ಶನಗಳು, ವಿದ್ವಾಂಸರ ಉಪನ್ಯಾಸಗಳು, ವಿಚಾರಗೋಷ್ಠಿಗಳು, ಗ್ರಂಥಕರ್ತರಿಗೆ ಪ್ರೋತ್ಸಾಹ, ಕೋಶ ರಚನೆ—ಪರಿಷತ್ತಿನ ಯೋಜನೆ ಮತ್ತು ಕಾರ್ಯಗಳ ಪಟ್ಟಿ ಹೀಗೆಯೇ ಬೆಳೆಯುತ್ತದೆ. ಏಕೀಕರಣದ ಗುರಿಯೇ ಪರಿಷತ್ತಿನ ದಾರಿ. ಭಾಷಿಕ ಭೇದಗಳನ್ನು ನಿವಾರಿಸಿ ಕನ್ನಡಿಗರನ್ನು ಒಮ್ಮುಖಗೊಳಿಸಿದ ಶ್ರೇಯ ಪರಿಷತ್ತಿಗೆ ಸಲ್ಲುತ್ತದೆ. ಸಾಹಿತ್ಯ ಸಮ್ಮೇಳನಗಳ ಮೂಲಕ ಭಾಷಾಭಿಮಾನವನ್ನು ನಾಡಿನಲ್ಲಿ ಜಾಗೃತಗೊಳಿಸಿ ರಾಜಕೀಯ ಏಕೀಕರಣಕ್ಕೆ ನಾಂದಿಯನ್ನು ಹಾಡಿದ ಕೀರ್ತಿಯೂ ಪರಿಷತ್ತಿಗೇ. ಇಷ್ಟಾದರೂ ಪರಿಷತ್ತಿನ ಪಾತ್ರದ ಪೂರ್ತಿ ಪರಿಚಯವಾದಂತಲ್ಲ. ಏಕೀಕೃತ ಕರ್ನಾಟಕವನ್ನು ಕೃಷ್ಣರಾಜಸಾಗರಕ್ಕೆ ಹೋಲಿಸಿದರೆ ಪರಿಷತ್ತು ತಲಕಾವೇರಿಯಾಗುತ್ತದೆ. ಜನತೆಯ ಭಾವನೆಗಳನ್ನು ಉದ್ದೀಪಿಸುವುದು ಸಾಹಿತ್ಯದ ಕಾರ್ಯ. ಇಂಥ ಸಾಹಿತ್ಯವನ್ನು ಪಚ್ಚ-ಹಸುರಾಗಿ ಇರಿಸುವುದು ಪರಿಷತ್ತಿನ ಧ್ಯೇಯ. ಅಂತೆಯೇ ಒಂದಾದ ಕರ್ನಾಟಕದ ವಿಕಾಸ, ಅಭಿವೃದ್ಧಿಗಾಗಿ ಜನತೆಯನ್ನು ಸನ್ನದ್ಧಗೊಳಿಸುವುದೂ ಪರಿಷತ್ತಿನ ಕಾರ್ಯ; ನಿರಂತರವಾಗಿ ಸಾಗಬೇಕಾದ ಕೆಲಸ.

ಕರ್ನಾಟಕದ ಸಾಂಸ್ಕೃತಿಕ ಏಕೀಕರಣವು ಈ ಹಂತ ಮುಟ್ಟುವಷ್ಟರಲ್ಲಿ, ರಾಜಕೀಯ ಬಿರುಗಾಳಿ ದೇಶದಲ್ಲಿ ಬೀಸಿ, ಹಲವು ಪ್ರತಿಕ್ರಿಯೆಗಳನ್ನು ಉಂಟುಮಾಡಿತ್ತು. ವಂಗಭಂಗ ಮತ್ತು ಸ್ವದೇಶೀ ಚಳುವಳಿಯ ತೆರೆಗಳು ಉತ್ತರ ಕರ್ನಾಟಕವನ್ನು ತಟ್ಟಿದವು. ವಂಗ ದೇಶದ ಕೆಲವು ಜಿಲ್ಲೆಗಳ ಪ್ರತ್ಯೇಕೀಕರಣವು ದೇಶದ ಉಗ್ರ ಆಂದೋಲನಕ್ಕೆ ಕಾರಣವಾದರೆ ಜರಾಸಂಧನ ದೇಹದಂತೆ ಚೂರು ಚೂರಾಗಿದ್ದ ಕರ್ನಾಟಕದ ಜನತೆ, ಏನೂ ಹೇಳದೆ ಮಾಡದೆ ಇರುವರಲ್ಲ! ೧೯೦೨ರಲ್ಲಿ 'ವಾಗ್ಭೂಷಣ' ಪತ್ರಿಕೆಯಲ್ಲಿ ಅಲೂರು ವೆಂಕಟ

ರಾಯರು ಬರೆದ ಲೇಖನವೇ ರಾಜಕೀಯ ವಿಕೇಕರಣದ ಬಗ್ಗೆ ಕನ್ನಡಿಗರು ವ್ಯಕ್ತಪಡಿಸಿದ ಪ್ರಥಮ ಬೇಡಿಕೆ ಎಂದು ಕಾಣುತ್ತದೆ. ಅಂದಿನ ಕರ್ನಾಟಕದ ರಾಜಕೀಯ ಚಳುವಳಿಗಳು ಮಹಾರಾಷ್ಟ್ರದ ಅನುಕರಣೆ, ಕರ್ನಾಟಕಕ್ಕೆ ಸ್ವತಂತ್ರ ಅಸ್ತಿತ್ವವೇ ಇರಲಿಲ್ಲ. ದುಡಿಯುವವರು ಕನ್ನಡಿಗರು, ಆ ದುಡಿಮೆಯ ಶ್ರೇಯ ಬೇರೆಯವರಿಗೆ. ನಾವು ದಾಸರು. ಅವರು ಪ್ರಭುಗಳು. ರಾಜಕೀಯ ಮತ್ತು ಸಾಮಾಜಿಕ ರಂಗದಲ್ಲಿ ನಡೆದಿದ್ದ ಈ ಅನ್ಯಾಯವನ್ನು ವಿರೋಧಿಸಿ ಕನ್ನಡ ಅಭಿಮಾನಿಗಳ ತಂಡವೊಂದು ಧಾರವಾಡದಲ್ಲಿ ಕಾರ್ಯ ಪ್ರವೃತ್ತವಾಯಿತು. ೧೯೧೬ರಲ್ಲಿ ಸ್ಥಾಪಿತವಾದ ಈ ಸಂಘವು ಆಲೂರು ವೆಂಕಟರಾಯರ ನೇತೃತ್ವದಲ್ಲಿ ಕರ್ನಾಟಕದ ಸರ್ವತೋಮುಖ ಏಳ್ಗೆಗಾಗಿ ಪಣತೊಟ್ಟಿತು. ಕಡಪಾ ರಾಘವೇಂದ್ರ ರಾಯರು ಕರ್ನಾಟಕ ಸಭೆಯ ಪ್ರಾಣಸ್ವರೂಪರು. 'ಹೊಂ ರೂಲ್' ಚಳುವಳಿಯಲ್ಲಿ ಕರ್ನಾಟಕಕ್ಕೆ ಸ್ವತಂತ್ರ ಘಟಕವನ್ನು ಪಡೆದ ಶ್ರೇಯಸ್ಸು ಈ ಸಭೆಗೆ ಸಲ್ಲಬೇಕು.

ಕ. ವಿ. ವ. ಸಂಘವು ದಿನಾಂಕ ೭-೧೦-೧೯೧೨ ರಂದು ಈ ಕೆಳಗಿನ ಗೊತ್ತುವಳಿಯನ್ನು ಸ್ವೀಕರಿಸಿತು :—

" ಬ್ರಿಟಿಶ್ ಅಧಿಕಾರಕ್ಕೆ ಒಳಗಾದ ಎಲ್ಲ ಕನ್ನಡ ಊರು, ತಾಲ್ಲೂಕು, ಜಿಲ್ಲೆಗಳೆನ್ನು ಒಟ್ಟುಗೂಡಿಸಿ ಒಂದು ರಾಜಕೀಯ ವಿಭಾಗವನ್ನು ಮಾಡಿ, ಅದಕ್ಕೆ ಕರ್ನಾಟಕ ಪ್ರಾಂತ ವೆಂದು ಕರೆಯುವ ಬಗ್ಗೆ ಸರಕಾರಕ್ಕೆ ವಿನ್ನಹ ಮಾಡಬೇಕು. ಉದಾಹರಣಾರ್ಥ, ಸೊಲ್ಲಾಪುರ ಜಿಲ್ಲೆಯ ಕೆಲವು ಭಾಗ ಕನ್ನಡವಿರಂತ್ತದೆ. ಮದ್ರಾಸ ಇಲಾಖೆಯಲ್ಲಿ ಬಳ್ಳಾರಿ, ದಕ್ಷಿಣ ಕನ್ನಡ ಈ ಜಿಲ್ಲೆಗಳು ಪೂರ್ಣ ಕನ್ನಡವಿದ್ದು. ಕಡಪಾ ಕರ್ನೂಲು, ಅನಂತಪುರ ಮುಂತಾದ ಜಿಲ್ಲೆಗಳಲ್ಲಿ ಎಷ್ಟೋ ಹಳ್ಳಿಗಳೂ, ತಾಲ್ಲೂಕುಗಳೂ, ಕನ್ನಡ ಇರುತ್ತವೆ. ಇವುಗಳೆನ್ನೆಲ್ಲ ಒಟ್ಟುಗೂಡಿಸಿ ಒಂದು ಕರ್ನಾಟಕ ಇಲಾಖೆ ಅಥವಾ ಪ್ರಾಂತವೆಂಬ ರಾಜಕೀಯ ವಿಭಾಗವನ್ನು ಮಾಡಿದರೆ, ಕನ್ನಡಿಗರ ಐಕ್ಯಕ್ಕೂ ಬೆಳವಣಿಗೆಗೂ ಅನುಕೂಲವಾಗುವದು."

ಇದೀಗ ವಿಕೇಕರಣವು ಚಳುವಳಿಯ ಸ್ವರೂಪತಾಳಿ ೧೯೨೦ ರಲ್ಲಿ ಧಾರವಾಡದಲ್ಲಿ ಕರ್ನಾಟಕ ರಾಜಕೀಯ ಪರಿಷತ್ತಿನ ಮುಂಖ್ಯ ವಿಷಯವಾಯಿತು. ಮೈಸೂರಿನ ಹಿಂದಿನ ದಿವಾಣರಾಗಿದ್ದ ವಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಸೇರಿದ್ದ ಈ ಪರಿಷತ್ತು ಸ್ವತಂತ್ರ ಕರ್ನಾಟಕ ಪ್ರಾಂತದ ಬೇಡಿಕೆಯನ್ನು ಪ್ರಭಾವಯುತವಾಗಿ ಮೂಡಿಸಿತು.

ಈ ಸಮ್ಮೇಳನದ ಪರಿಣಾಮವಾಗಿ ಜನತೆಯಲ್ಲಿ ವಿಲಕ್ಷಣ ಜಾಗೃತಿ ಉಂಟಾಗಿ, ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವತಂತ್ರ ಪ್ರಾಂತಿಕ ಕಾಂಗ್ರೆಸ್ ಘಟಕವನ್ನು ಪಡೆಯುವಂತಾಯಿತು. ಮೈಸೂರು ಸಂಸ್ಥಾನ, ಕೊಡಗು, ಮುಂಬಯಿ, ಮದರಾಸು, ಹೈದರಾಬಾದು ಕನ್ನಡ ಭಾಷಾ ಪ್ರದೇಶಗಳು ಮತ್ತು ಕರ್ನಾಟಕ ದೇಶೀಯ ಸಂಸ್ಥಾನಗಳು ಸೇರಿದ್ದ ರಾಷ್ಟ್ರಸಭೆಯಿಂದ ಪುರಸ್ಕೃತವಾದ ಈ ಕರ್ನಾಟಕ ಘಟಕವು ಕನ್ನಡಿಗರ ಬಹುದಿನಗಳ ಆಸೆಗೆ ಗರಿಮೂಡಿಸಿತು. ರಾಷ್ಟ್ರೀಯ ಮಹಾಸಭೆಯು ಬೆಳಗಾವಿಯಲ್ಲಿ ಮಹಾತ್ಮಾ

ಗಾಂಧಿಯವರ ಅಧ್ಯಕ್ಷತೆಯಲ್ಲಿ ಸೇರಿದಾಗ (1924) ಕನ್ನಡಿಗರ ರಾಷ್ಟ್ರೀಯ ಭಾವನೆಯು ಗಂಗಾಪ್ರವಾಹದಂತೆ ಉಕ್ಕೇರಿತು.

ಅದೇ ವರ್ಷ ಕರ್ನಾಟಕ ಏಕೀಕರಣ ಸಂಘವು ಸ್ಥಾಪಿತವಾಗಿ ಚಳುವಳಿಗೆ ಹೆಚ್ಚಿನ ಚಾಲನೆಯನ್ನುಂಟುಮಾಡಿತು. ಪಲವು ಸಂದರ್ಭಗಳಲ್ಲಿ ಪ್ರಾಂತಿಕ ಪರಿಷತ್ತು, ಕರ್ನಾಟಕ ಏಕೀಕರಣ ಪರಿಷತ್ತು ಸೇರಿಯೇ ಸಮ್ಮೇಳಗಳನ್ನು ನಡೆಸಿ ಜನಜಾಗೃತಿಯನ್ನುಂಟು ಮಾಡಿದವು. ಈ ಎರಡೂ ಸಮಿತಿಗಳ ಪ್ರತಿನಿಧಿಯಾಗಿ ರಂ. ರಾ. ದಿವಾಕರ ಅವರು ನೆಹರೂ ಸಮಿತಿಯ ಮುಂದೆ (1928) ಕರ್ನಾಟಕ ಏಕೀಕರಣದ ಸಮರ್ಥನೆಯನ್ನು ಮಾಡಿದರು. ''ಏಕಪ್ರಾಂತಕ್ಕೆ ಕರ್ನಾಟಕಸ್ಥರು ಬಾಧ್ಯಸ್ಥರಾಗಿದ್ದಾರೆ; ಅವರಿಗೆ ಏಕ ಪ್ರಾಂತವನ್ನು ಕೊಡುವುದು ಯೋಗ್ಯವೆಂಬುದನ್ನು ಕರ್ನಾಟಕಸ್ಥರು ಸಿದ್ಧ ಮಾಡಿದ್ದಾರೆ'' ಎಂದು ಆ ಸಮಿತಿಯು ಅಭಿಪ್ರಾಯ ಪಟ್ಟಿತು. ಕರ್ನಾಟಕ ಏಕೀಕರಣವು (ಆಗಸ್ಟ್ 1928, 28 ರಿಂದ 31) ಸರ್ವಪಕ್ಷ ಪರಿಷತ್ತಿನ ಒಪ್ಪಿಗೆ ಪಡೆಯಿತು.

1938 ರಲ್ಲಿ ಕಾಂಗ್ರೆಸ್ ಕಾರ್ಯಸಮಿತಿಯು, ಒಂದು ಗೊತ್ತುವಳಿಯಲ್ಲಿ ಕೇಂದ್ರ ಸರಕಾರದಲ್ಲಿ ಕಾಂಗ್ರೆಸ್ಸು ಅಧಿಕಾರರೂಢವಾದ ಕೂಡಲೆ ಭಾಷಾನ್ವಯ ಪ್ರಾಂತರಚನೆಯನ್ನು ಕೈಗೆ ಎತ್ತಿಕೊಳ್ಳುವುದಾಗಿ ಸಾರಿತು. "ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವನ್ನಾಗಿ ಸೃಷ್ಟಿಸುವುದನ್ನು ತಡೆಯಲು ಸಾಧ್ಯವಿಲ್ಲ. ಹಾಗೂ ಕರ್ನಾಟಕ ಪ್ರಾಂತ ರಚನೆಯಾಗುವ ವಿಚಾರವನ್ನು ಮನಸಾ ನಾನು ಸ್ವಾಗತಿಸುತ್ತೇನೆ'' ಎಂದು ಮಹಾತ್ಮಾ ಗಾಂಧಿಯವರು ಒಪ್ಪಿಕೊಂಡದ್ದು ಆಗಲೇ.

ಮುಂಬಯಿ ಪುತ್ತು ಮದ್ರಾಸು ಶಾಸನ ಸಭೆಗಳಲ್ಲಿ ಅದೇ ವರ್ಷ ಭಾಷಾನುಗುಣ ಪ್ರಾಂತರಚನೆಗೆ ಬೆಂಬಲನೀಡಿ, ಕನ್ನಡ ಭಾಷೆಯನ್ನಾಡುವ ಪ್ರದೇಶಗಳನ್ನು ಒಂದುಗೂಡಿಸಿ ಕರ್ನಾಟಕ ಪ್ರಾಂತವನ್ನು ರಚಿಸಬೇಕೆಂಬ ಗೊತ್ತುವಳಿ ಸ್ವೀಕೃತವಾದವು.

ಕರ್ನಾಟಕ ಏಕೀಕರಣದ ದೃಷ್ಟಿಯಲ್ಲಿ ದಾವಣಗೆರೆಯ 'ಕರ್ನಾಟಕಸ್ಥರ ಮಹಾಸಭೆ'ಯು ಒಂದು ದೊಡ್ಡ ಹೆಜ್ಜೆ. 31-8-46 ರಂದು ಸೇರಿದ್ದ ಈ ಮಹಾಸಭೆಯ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ, ಕರ್ನಾಟಕ ಏಕೀಕರಣ ಸಂಘ ಹಾಗೂ ಇತರ ಪ್ರಾತಿನಿಧಿಕ ಸಂಸ್ಥೆಗಳ ಅಭಿಪ್ರಾಯಗಳನ್ನು ಸಮರ್ಥಿಸಿ ಕರ್ನಾಟಕ ಏಕೀಕರಣದ ಬಗ್ಗೆ ಮೈಸೂರು ಜನತೆಯ ನಿಲುವನ್ನು ಸ್ಪಷ್ಟಪಡಿಸಿತು, ಒಂದೇ ಆಡಳಿತವುಳ್ಳ ಸರಕಾರ ಸ್ಥಾಪಿತವಾಗುವುದರಿಂದ ಅಖಂಡ ಕರ್ನಾಟಕದ ಹಿತಸಾಧನೆಯಾಗುವುದೆಂದು ಈ ಮಹಾಪರಿಷತ್ತು ಸಾರಿತು. ಅದೇ ವರ್ಷ ಬೆಂಗಳೂರಿನಲ್ಲಿ ಸೇರಿದ್ದ ಮೈಸೂರು ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಅಧ್ಯಕ್ಷರಾದ ಕೆ. ಸಿ. ರೆಡ್ಡಿಯವರು, ಕರ್ನಾಟಕ ಪ್ರಾಂತ ರಚನೆಯ ನಿರ್ಣಯವನ್ನು ಸ್ವಾಗತಿಸಿದರು. ಅಲ್ಲದೆ ಸಣ್ಣ ಸಂಸ್ಥಾನಗಳನ್ನು ಕರ್ನಾಟಕ ಪ್ರಾಂತದಲ್ಲಿ ವಿಲಯನಗೊಳಿಸಬೇಕೆಂಬ ಗೊತ್ತುವಳಿ ಈ ಅಧಿವೇಶನದಲ್ಲಿಯೇ ಸ್ವೀಕೃತವಾಯಿತು.

೧೯೪೭ರಲ್ಲಿ, ಮೈಸೂರಿನಲ್ಲಿ ಜನಪ್ರಿಯ ಸರಕಾರವು ಅಸ್ತಿತ್ವದಲ್ಲಿ ಬಂದ ನಂತರ ಬೀರೂರಿನಲ್ಲಿ ನೆರೆದ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಆರು ಜನರ ಒಂದು ಸಮಿತಿಯನ್ನು ರಚಿಸಿ ಭಾವೀ ಕರ್ನಾಟಕ ಪ್ರಾಂತವನ್ನು ಕುರಿತು ಪರದಿ ಮಾಡಲು ಸೂಚಿಸಿತು. ಈ ಸಮಿತಿಯು ಮೈಸೂರು ಸಂಸ್ಥಾನವನ್ನೊಳಗೊಂಡ ಕರ್ನಾಟಕ ಪ್ರಾಂತವನ್ನು ರಚಿಸುವುದು ಕನ್ನಡ ಜನತೆಯ ಹಿತದ ದೃಷ್ಟಿಯಿಂದ ಅವಶ್ಯವೆಂದು ಸೂಚಿಸಿತು.

ಇವು ಮುಖ್ಯವಾದ ಘಟ್ಟಗಳು. ಆನಂತರ ಆಂಧ್ರಪ್ರಾಂತ ಅಸ್ತಿತ್ವಕ್ಕೆ ಬಂತು. ರಾಜ್ಯ ಪುನರ್ಘಟನಾ ಆಯೋಗದ ರಚನೆ—ಆಯೋಗದ ಪರದಿ. ಈ ಮಧ್ಯೆ ಕನ್ನಡಿಗರು ಎಷ್ಟೆಷ್ಟೋ ಕಂದರಗಳನ್ನು ದಾಟಿದರು, ಪರೀಕ್ಷೆಗೆ ಗುರಿಯಾದರು. ಸುಮಾರು 70ವರ್ಷ ಯಾವ ಧ್ಯೇಯ ಸಾಧನೆಗಾಗಿ ಹೋರಾಡಿದರೋ ಆ ಶುಭಮುಹೂರ್ತ ೧-೧೧-೫೬ ರಂದು ಒದಗಿ ಬಂತು. ಕರ್ನಾಟಕವು ಮೈಸೂರಿನ ಹೆಸರು ಹೊತ್ತು ಭಾರತದ ಭೂಪಟದಲ್ಲಿ ವಿರಾಜಮಾನವಾಯಿತು; ಕನ್ನಡಿಗರಿಗೆ ಸಂಭ್ರಮವನ್ನುಂಟುಮಾಡಿತು.

ಹದಿನೇಳು ವರ್ಷಗಳ ಅಂತರದಲ್ಲಿ ಇಂದು ಮೈಸೂರು ತನ್ನ ನಿಜನಾಮಧೇಯವನ್ನು ಮಹಿಸಿಕೊಳ್ಳಲಿದೆ—.'ಕರ್ನಾಟಕ' ಎಂದು ಗುಣ ಸ್ವಭಾವ ವಿಶಿಷ್ಟತೆಗಳನ್ನೂ ಗುರುತಿಸುವುದೇ ಹೆಸರಿಸುವ ಉದ್ದೇಶ. ಕರ್ನಾಟಕದ ಮಹತ್ವ ಅಲ್ಲಿಯೇ.

''ಕರ್ನಾಟಕಾಂತರ್ಗತ ಭಾರತ ಮಾತೆಗೆ ನಮಸ್ಕಾರ.''

ಕಲ್ಹಣಕವಿ ತನ್ನ ಐತಿಹಾಸಿಕ ಕಾವ್ಯ 'ರಾಜತರಂಗಿಣಿ'ಯಲ್ಲಿ ಕಾಶ್ಮೀರದಮೇಲೆ ಕರ್ನಾಟಕದ ಪ್ರಭಾವವನ್ನು ನಿವೇದಿಸುತ್ತಾ ಆ ನಾಡಿನ ವಿಲಾಸವತಿಯರು ಕನ್ನಡ ಮಹಿಳೆಯ ಸೊಬಗು—ಶೃಂಗಾರಕ್ಕೆ ಮಾರುಹೋಗಿದ್ದರು ಎಂದು ಹೇಳಿರುವನು.

ವೇವಾಡದ ಹಮ್ಮೀರ ನರೇಂದ್ರನ ಶುಭ್ರ ಕೀರ್ತಿಯನ್ನು ವರ್ಣಿಸಿದ ರಾಜಸ್ಥಾನದ ಕವಿ 'ಆದು ಕೈಲಾಸಪತಿಯ ನಗೆಯಂತೆ, ಕನ್ನಡ ರಮಣಿಯ ದಂತಪಂಕ್ತಿಯಂತೆ ಅಚ್ಚಬಿಳಿದಾಗಿತ್ತು' ಎಂದು ನುಡಿದಿರುವನು. ಒಡಿಸ್ಸದ ಗಜಪತಿ ಪ್ರತಾಪರುದ್ರ ರಾಜನು ಇದೇ ವಿಧವಾಗಿ ತನ್ನ ಪೂರ್ವಜ ಕಪಿಲೇಂದ್ರನ ಕೀರ್ತಿಯನ್ನು ಕೊಂಡಾಡುತ್ತ 'ಆದು ಶಿವನ ಹಾಸ್ಯ' ಚಂದ್ರನ ಬೆಳದಿಂಗಳು. ಕನ್ನಡ ಸುಹಾಸಿನಿಯ ವದನ ಕಾಂತಿಗೆ ಸಮನಾಗಿತ್ತು, ಎಂದು ತನ್ನ ಕಾವ್ಯದಲ್ಲಿ ಹೇಳಿರುವನು.

ಕುಲ ಶೀಲ ಸೌಜನ್ಯ ಸಂಪನ್ನ ; ಸುಸಂಸ್ಕೃತೆ ಯಾದ ಕರ್ನಾಟಕ ಮಹಿಳೆಗೆ ಸಲ್ಲ ಬೇಕಾದ, ಇದಕ್ಕೂ ಮಿಗಿಲಾದ ಕೀರ್ತಿ ಗೌರವವಿದೆಯೇ ? ಇದುವೆ ಕರ್ನಾಟಕ ನಾಗರೀಕತೆ, ಕರ್ನಾಟಕ ಸಂಸ್ಕೃತಿ.

ಡಾ. ।ಪಿ. ಬಿ. ದೇಸಾಯಿ.

ವಿಜಯನಗರ ಸ್ಥಾಪನಾಚಾರ್ಯ ಶ್ರೀ ವಿದ್ಯಾರಣ್ಯ

ಲೇಖಕರು :—ಮ. ಗ. ಶಿಟ್ಟಿ

ವಿದ್ಯಾತೀರ್ಥಾಜ್ಜನಿ ಮತಿಶುಭೇ ಭಾರತೀತೀರ್ಥಪದ್ಮೇ
ನಿತ್ಯಂ ವೃತ್ತಾದ್ವಯ ಚಿದಮೃತಾನಂದ ಸೌರಭ್ಯ ಭಾಜಿ
ವಿದ್ಯಾರಣ್ಯ ದ್ಯುಮಣಿ ಮಹಿಮಾಪ್ರಾಪ್ತ ಲಕ್ಷ್ಮೀವಿಲಾಸೇ
ಭೂಯೋ ಭೂಯೋ ವಿರಹತಿ ಸುಖೀ ಬುಕ್ಕ ಭೂಪಾಲಹಂಸಃ ॥೧॥

ಬುಕ್ಕ ರಾಜನೆಂಬ ಹಂಸವು ವಿದ್ಯಾತೀರ್ಥರಿಂದ ಉತ್ಪನ್ನವಾದ, ಅದ್ವೈತ ಜ್ಞಾನಾನಂದವೆಂಬ ಸುಗಂಧವುಳ್ಳ ವಿದ್ಯಾರಣ್ಯರೆಂಬ ಸೂರ್ಯನ ಕಿರಣದಿಂದ ಪ್ರಫುಲ್ಲವಾದ ಭಾರತೀತೀರ್ಥರೆಂಬ ಪದ್ಮದ ಸಮೀಪದಲ್ಲಿ ಸುಖವಾಗಿ ವಿಹರಿಸುತ್ತದೆ.

ಹೀಗೆಂದು ಗುರುವಂಶ ಕಾವ್ಯದಲ್ಲಿ ವಿದ್ಯಾರಣ್ಯರ ಮಹಿಮೆಯನ್ನು ವರ್ಣಿಸಿದೆ. ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರಾದ ಅಂಥ ಪುಣ್ಯಪುರುಷರನ್ನು, ಕರ್ನಾಟಕ ನಾಮಕರಣೋತ್ಸವದಲ್ಲಿ ಸ್ಮರಿಸಿ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವುದು ಕನ್ನಡಿಗರೆಲ್ಲರ ಆದ್ಯಕರ್ತವ್ಯವಾಗಿದೆ.

ವಿದ್ಯಾರಣ್ಯ ಕಾಲಜ್ಞಾನದಲ್ಲಿ ವಾರಂಗಲ್ಲಿನ ಹುಕ್ಕ ಬುಕ್ಕ ಸಹೋದರರ ವಿಚಾರವಾಗಿ ಹೇಳಿದ ಚರಿತ್ರೆಯನ್ನೇ ಗುರುವಂಶ ಕಾವ್ಯವೂ ಅನುಸರಿಸಿದೆ. ಹರಿಹರ ಬುಕ್ಕರು ಮುಮ್ಮಡಿ ಬಲ್ಲಾಳನಿಂದ ಸೋಲಿಸಲ್ಪಟ್ಟು, ವಿರೂಪಾಕ್ಷ ದೇವಸ್ಥಾನದ ಸಮೀಪದಲ್ಲಿದ್ದ ಶ್ರೀ ವಿದ್ಯಾರಣ್ಯರ ಸನ್ನಿಧಿಗೆ ಹೋಗಿ ಅವರ ತಪಃಪ್ರಭಾವದ ರಕ್ಷಣೆಯನ್ನು ಪಡೆದು ಪುನಃ ಯುದ್ಧ ಮಾಡಿ ಹಿಂದೆ ಕಳೆದುಕೊಂಡುದನ್ನು ಗೆದ್ದುಕೊಂಡರು. ಬಳಿಕ ಗುರುಗಳ ಅನುಜ್ಞೆಯಂತೆ ನಡೆದು ರಾಜ್ಯವನ್ನು ವಿಸ್ತರಿಸಿ ಅನೆಗುಂದಿಗೆ ಎದುರಿಗಿರುವ ತುಂಗಭದ್ರಾತೀರದಲ್ಲಿ ಒಂದು ನಗರವನ್ನು ನಿರ್ಮಿಸಿದರು. ಈ ನಗರದ ಅಸ್ತಿವಾರವನ್ನು ಶಕೆ ೧೨೫೮ ಧಾತುಸಂವತ್ಸರದ ವೈಶಾಖ ಶುಕ್ಲದಲ್ಲಿ (೧೮ನೇ ಏಪ್ರಿಲ್ ೧೩೩೬ರಲ್ಲಿ) ಸ್ಥಾಪಿಸಿ, ಶ್ರೀಚಕ್ರದ ಸಂಕೇತದಂತೆ ನವದ್ವಾರಗಳೊಳಗೆ ನಗರವು ರಚಿಸಲ್ಪಟ್ಟಿತು. ಆಗ ನಾಲ್ಕೂ ಕಡೆಗಳಿಂದ ಕಪ್ಪ ಕಾಣಿಕೆಗಳು ಬಂದು ಸುವರ್ಣವೃಷ್ಟಿಯಾಯಿತು.

ಶ್ರೀ ವಿದ್ಯಾರಣ್ಯರು ರಾಜ್ಯ ಸ್ಥಾಪನೆಯನ್ನು ಮಾಡುವ ಸಂದರ್ಭದಲ್ಲಿ ಮುಸಲ್ಮಾನರ ಆಕ್ರಮಣವನ್ನು ಎದುರಿಸಲು ದಕ್ಷಿಣದ ಹಿಂದೂ ಅರಸರಲ್ಲಿ ಐಕ್ಯತೆಯುಂಟಾಗಿತ್ತು. ಶ್ರೀ ವಿದ್ಯಾತೀರ್ಥ ಗುರುಗಳ ಪ್ರಭಾವ ಒಂದೆಡೆ; ಇನ್ನೊಂದುಕಡೆ ಮಹಾಪಂಡಿತರಾದ ವೇದಾಂತ ದೇಶಿಕರ ಉಪದೇಶ, ಮತ್ತೊಂದು ಕಡೆಯಲ್ಲಿ ಅಕ್ಷೋಭ್ಯತೀರ್ಥ ಮುನಿಗಳ ತತ್ವಪ್ರಚಾರ, ಇವೆಲ್ಲದರ ಜೊತೆಗೆ ಕ್ರಿಯಾ ಶಕ್ತ್ಯಾಚಾರ್ಯರು ಮೊದಲಾದ ಪರಮೇಶ್ವರ ಬೋಧನೆ. ಹೀಗೆ ನಾನಾ ರೀತಿಗಳಲ್ಲಿ ಜನರ ಧರ್ಮೋತ್ಸಾಹವು ಉಕ್ಕೇರಿ ಬಂದು ಹರಿಹರನಿಗೆ ಬೆಂಬಲವಾಗಿ, ವಾತಾವರಣವು ಅನುಕೂಲವಾಗಿತ್ತು.

ಅವಿಸ್ಮರಣೀಯ ಕೃತಿ :

ಕನ್ನಡಿಗನ ಸರ್ವಸ್ವ ಅಥವಾ ಸಂಯುಕ್ತ ಕರ್ನಾಟಕ ಪ್ರಾಂತ.—1924

ಲೇಖಕರು ಮತ್ತು ಪ್ರಕಾಶಕರು :—ಆರ್. ಬಿ. ಕುಲಕರ್ಣಿ, ಕಾವ್ಯರತ್ನ, ಬೆಳಗಾವಿ
ಕರ್ನಾಟಕ ನವಜೀವನ ಗ್ರಂಥಮಾಲೆ ಗ್ರಂಥ—1.

" ಅಭಿಮಾನವಿಲ್ಲದ ಮನುಷ್ಯನು ತನ್ನ ಯೋಗ್ಯತೆಯನ್ನು ತಿಳಿಯದವನಾಗಿರುತ್ತಾನೆ. ಆದ್ದರಿಂದ ರಾಷ್ಟ್ರೀಯ ಭಾವನೆಗಳಿಗೆ ಅಭಿಮಾನವೇ ಮೂಲ. ತಾನು ಯಾರು ? ತನ್ನ ನಾಡು ಯಾವುದು ? ತನ್ನ ಬಾಂಧವರು ಯಾರು ? ನಾಡಿನ ನುಡಿಯ ಬಗ್ಗೆ ತನ್ನ ಕರ್ತವ್ಯ ವೇನು ? / ಕರ್ನಾಟಕದ ಈ ದುರ್ದೆಸೆಯ ಕಾಲದಲ್ಲಿ ನಮಗೆ ಏನಾದರೂ ವಿಶಿಷ್ಟವಾದ ಕರ್ತವ್ಯವು ಇರುವದೋ ಹೇಗೆ ? ಇವೇ ಮೊದಲಾದ ಪ್ರಶ್ನೆಗಳನ್ನು ಹಗಲಿರುಳು ತನ್ನ ಮನಸ್ಸಿನಲ್ಲಿ ವಿಚಾರಿಸುತ್ತಾ ಹೋದರೆ ಒಮ್ಮೆಲ್ಲೊಮ್ಮೆ ಸ್ವಾರ್ಥವನ್ನು ತ್ಯಜಿಸಿ, ದೇಶಕ್ಕಾಗಿ ಆತ್ಮವನ್ನು ಆಹುತಿಗೈಯಲು ಪ್ರವೃತ್ತನಾಗುವನು. ಕರ್ನಾಟಕ ಪ್ರಾಂತವು ತುಂಡು ತುಂಡಾಗಿ ಹೋಗಿರುವುದರಿಂದ, ಯಾವ ಪ್ರಾಂತದಿಂದ ನಮ್ಮ ರಾಷ್ಟ್ರೀಯ ಭಾವನೆಯು ಜಾಗೃತವಾಗ ತಕ್ಕದ್ದೋ ಅದೇ ಇಲ್ಲದ್ದರಿಂದ ಹೊಡೆದತ್ತ ಹೋಗುವ ಕುರಿಗಳಂತೆ ಕನ್ನಡಿಗರ ಸ್ಥಿತಿ ಯಾಗಿದೆ."

1924ರಲ್ಲಿ ಪ್ರಕಟವಾದ "ಕನ್ನಡಿಗನ ಸರ್ವಸ್ವ ಅಥವಾ ಸಂಯುಕ್ತ ಕರ್ನಾಟಕ ಪ್ರಾಂತ" ಎಂಬ ಪುಸ್ತಕದಿಂದ ಮೇಲಿನ ಮಾತುಗಳನ್ನು ಉದ್ಧರಿಸಲಾಗಿದೆ. ಏಕೀಕರಣದ ಕಲ್ಪನೆಯು ಕೇವಲ ವೇದಿಕೆಯ ಭಾಷಣ ಮತ್ತು ಗೊತ್ತುವಳಿಗಳ ಸ್ವರೂಪದಲ್ಲಿ ತೇಲಾಡುತ್ತಿದ್ದ ಸಮಯ ದಲ್ಲಿ, ಖಚಿತವಾದ ಒಂದು ಯೋಜನೆಯ ರೀತಿಯಲ್ಲಿ ನಾಡಿನ ಎದುರು ಮಂಡಿಸಿದ ಕೀರ್ತಿ ಈ ಪುಸ್ತಕದ ಲೇಖಕರಿಗೆ ಸಲ್ಲಬೇಕಾಗಿದೆ.

ಇದನ್ನು ಬರೆದು ಪ್ರಕಟಿಸಿದವರು ಬೆಳಗಾವಿಯಲ್ಲಿ ಶಿಕ್ಷಕರಾಗಿದ್ದ ರಾವಜಿಬಾಳಾಜಿ ಕುಲಕರ್ಣಿ. ಪುಣೆಯ ಪ್ರಸಿದ್ಧ ಸಾಹಿತಿಗಳಾಗಿದ್ದ ವಾಮನ ಮಲ್ಲಾರ ಜೋಶಿಯವರ ಬಳಿ ಯಲ್ಲಿ ಓದಿ ಪಾಲಿ, ಸಂಸ್ಕೃತ ಭಾಷೆಗಳನ್ನು ಕಲಿತು ಕಲಕತ್ತೆಯ ನಿಖಿಲ ಭಾರತ ಸಾಹಿತ್ಯ ಸಂಘದ ' ಕಾವ್ಯರತ್ನ ' ಪ್ರಶಸ್ತಿ ಪಡೆದರು. 1920 ರಿಂದ 1925ರ ವರೆಗೂ ಬೆಳಗಾವಿಯ ಕನ್ನಡ ಸಾಹಿತ್ಯ ಚಟುವಟಿಕೆಗಳಿಗೆ ಆಧಾರವಾಗಿದ್ದರು; ಎಂದಿಗೂ ಎಲೆ ಮರೆಯ ಕಾಯಿ, ಪತ್ರಿಕೆಗಳಿಗೆ ಅಜ್ಞಾತ ಲೇಖಕರು.

'ಕನ್ನಡಿಗನ ಸರ್ವಸ್ವವು' ಆ ವಿಷಯದ ಪ್ರಥಮ ಕೃತಿ ಮಾತ್ರವೇ ಅಲ್ಲ; ಏಕೀಕರಣ ಪ್ರಶ್ನೆಯ ಕೂಲಂಕಷ ವಿವರಣೆಯೂ ಆಗಿದೆ. ಭಾರತದ ಆಡಳಿತ, ಸಂವಿಧಾನ, ಆಯ ವ್ಯಯ ಭಾಷಾನ್ವಯ ಪ್ರಾಂತನಿರ್ಮಾಣದಲ್ಲಿ ಬಂಗಾಲ, ಓಡಿಸಾ, ಆಂಧ್ರ ಜನತೆಯ ಜಳುವಳಿ-ಇವೆಲ್ಲವುಗಳ ಮನನದಿಂದ ಕರ್ನಾಟಕದ ಸಮಸ್ಯೆಯನ್ನು ಪರಿಶೀಲಿಸಲಾಗಿದೆ. ಭಾಷಾ ಸಂಸ್ಕೃತಿಯ ಆಡಿಗಲ್ಲಿನ ಮೇಲೆ ಭೋಗೋಲಿಕ ಸಂಲಗ್ನತೆ, ಆಡಳಿತ ಸೌಲಭ್ಯ, ಆರ್ಥಿಕ ಸುಭದ್ರತೆಯುಳ್ಳ ಸ್ವತಂತ್ರ ಕರ್ನಾಟಕ ಪ್ರಾಂತದ ಸೌಧವನ್ನು ಲೇಖಕರು ನಿರ್ಮಿಸಿದ್ದಾರೆ. 1924 ರಿಂದ 56ರ ವರೆಗಿನ ಅವಧಿಯಲ್ಲಿ ಹಲವಾರು ರಾಜಕೀಯ ಬದಲಾವಣೆಯಾಗಿವೆ. ಕೇವಲ ಬ್ರಿಟಿಶ್ ಆಡಳಿತೆಯ ಕನ್ನಡಭಾಗಗಳ ಏಕೀಕರಣವನ್ನು ಅವರು ಸೂಚಿಸಿದ್ದರೆ ದೇಶೀಯ ಸಂಸ್ಥಾನಗಳ ವಿಲಯನದ ಪರಿಣಾಮವಾಗಿ ವಿಶಾಲ ಕರ್ನಾಟಕವು ನಿರ್ಮಾಣವಾಗಿದೆ ಈಗ.

ಬೇರೆ ಬೇರೆ ಆಡಳಿತಗಳಲ್ಲಿ ಕನ್ನಡಿಗರು ಅಲ್ಪ ಸಂಖ್ಯಾತರಾಗಿದ್ದು ಅವನತಿಯಂ ಪಥದಲ್ಲಿದ್ದಾರೆ. ಅವರ ಶೈಕ್ಷಣಿಕ, ಔದ್ಯೋಗಿಕ ಪ್ರಗತಿಗೆ ಕರ್ನಾಟಕ ಏಕೀಕರಣವೊಂದೇ ಪರಮಸಾಧನ. "ಕೇವಲ ಗ್ರಂಥಪ್ರಸಾರದಿಂದ ಬೇರೆ ಕಡೆಗೆ ಸಿಡಿದು ಬಿದ್ದ ಕನ್ನಡ ಜಿಲ್ಲೆಗಳು ಜಾದೂಗಾರನ ಮಾಟದಂತೆ ಒಟ್ಟುಗೂಡಲಾರವು. ಕರ್ನಾಟಕದ ಅಭ್ಯುದಯಕ್ಕೆ ಕರ್ನಾಟಕ ಪ್ರಾಂತವನ್ನು ಪಡೆಯುವದೊಂದೇ ತರಣೋಪಾಯವು. ಇದು ಸಾವಿತ್ರಿಯ ವರದಂತೆ ಇದೆ. ಇದೊಂದು ಕೈಗೂಡಿದರೆ ಎಲ್ಲವೂ ತಾವೇ ಕೈಗೂಡುವುವು. ಆದ್ದರಿಂದ ಇದು ಪ್ರತಿಯೊಬ್ಬ ಕನ್ನಡಿಗನ ಸರ್ವಸ್ವವಾಗಿರುವುದು. ಈ ವಿಷಯವನ್ನು ಸಾದ್ಯಂತವಾಗಿ ಚರ್ಚಿಸಿದ ಈ ಗ್ರಂಥಕ್ಕೆ ಕನ್ನಡಿಗನ ಸರ್ವಸ್ವವೆಂದೇ ಹೆಸರಿಟ್ಟಿದೆ."

ಏಕೀಕರಣದ ಚರಿತ್ರೆಯಲ್ಲಿ ಇದೊಂದು ಮುಖ್ಯ ಕೃತಿ, ಆವರ ಸ್ಮರಣೆ ನಮ್ಮ ಕರ್ತವ್ಯ.

—ವೆಂಕಟೇಶ ಸಾಂಗಲಿ.

ಕರ್ನಾಟಕದ ಕೃಷಿ ಅಭಿವೃದ್ಧಿಗೆ ಸಂಶೋಧನೆಯ ಕೊಡುಗೆ

ಡಾ|| ಎನ್. ಜಿ. ಪಾಟೀಲ,
ಸಂಶೋಧನಾ ಡೈರೆಕ್ಟರ್,
ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.

ಕರ್ನಾಟಕಕ್ಕೆ ಸುಮಾರು 5,000 ವರ್ಷಗಳ ಕೃಷಿಯ ಸಂಪ್ರದಾಯವಿದೆ. ಅದರೆ ಇದುವರೆಗೆ ಬಹುಕಾಲ ಜೀವನ ಮತ್ತು ಸಂಪ್ರದಾಯವಾಗಿ ಬೆಳೆದು ಬಂದ ವೃತ್ತಿಯಾಗಿತ್ತು. ಕಳೆದ 50 ವರ್ಷಗಳಲ್ಲಿ ಬಲವತ್ತರವಾಗಿ ನಡೆದ ಕೃಷಿ ಸಂಶೋಧನೆಯಿಂದಾಗಿ ಅದು ವೈಜ್ಞಾನಿಕವಾಗಿ ಮುಂದುವರಿಯಲು ಸಾಧ್ಯವಾಗಿದೆ. ಹೈಬ್ರಿಡ್ಜ್ ತಳಿಗಳನ್ನು ಶೋಧಿಸಿ ಕಂಡುಹಿಡಿದಂದಿನಿಂದ ಕೃಷಿ ವಿಜ್ಞಾನದಲ್ಲಿ ಹೊಸ ಅಧ್ಯಾಯವೇ ಪ್ರಾರಂಭವಾಗಿದೆ.

ಕೃಷಿ ಸಂಶೋಧನೆಯಲ್ಲಿ ಅದ್ವಿತೀಯ ಸಾಧನೆ :

ಕರ್ನಾಟಕ ರಾಜ್ಯದಲ್ಲಿ ಸುಮಾರು 100 ವರ್ಷಗಳ ಕೃಷಿ ಸಂಶೋಧನೆಯ ಪರಂಪರೆ ಇದೆ. ಈ ಶತಮಾನದ ಪ್ರಾರಂಭದ 60 ವರ್ಷಗಳಲ್ಲಿ ಸಾಧಿಸದಿದ್ದನ್ನು ಕಳೆದ ಹತ್ತು ವರ್ಷಗಳಲ್ಲಿ ಸಾಧಿಸಲಾಗಿದೆ. ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಕಳೆದ 8 ವರ್ಷಗಳಲ್ಲಿ ಸಂಶೋಧನೆ ತೀವ್ರಗತಿಯಿಂದ ಸಾಗಿದೆ. ಹೈಬ್ರಿಡ್ ಮತ್ತು ಅಧಿಕ ಇಳುವರಿ ಕೊಡುವ ಬೀಜಗಳನ್ನು ಹುಡುಕಿ ತೆಗೆದಿದ್ದು ಈ ಸಂಶೋಧನೆಯ ಮುಖ್ಯ ಅಂಶ. ಇಂದು ರಾಜ್ಯದಲ್ಲಿ ಬೀಸುತ್ತಿರುವ 'ಹಸಿರು ಕ್ರಾಂತಿ'ಗೆ ಇದು ಮೂಲ ಕಾರಣ.

ಕೃಷಿ ವಿಶ್ವವಿದ್ಯಾನಿಲಯವು ಸುಮಾರು 22 ಹೊಸ ತಳಿಗಳನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಹೈಬ್ರಿಡ್ ಹತ್ತಿ, ಹೈಬ್ರಿಡ್ ಹುಲ್ಲು, ಅಧಿಕ ಇಳುವರಿ ಕೊಡುವ ಭತ್ತ, ರಾಗಿ, ಜೋಳ, ಮತ್ತು ಕಬ್ಬಿನ ತಳಿಗಳನ್ನು ಬಿಡುಗಡೆ ಮಾಡಿದ್ದು ಮುಖ್ಯವಾಗಿವೆ. ಹೈಬ್ರಿಡ್ ಹತ್ತಿ ಸಂಶೋಧನೆಯು ಅದ್ವಿತೀಯವಾಗಿದೆ. ಇದರಿಂದ ವಿದೇಶಗಳಿಂದ ಆಮದು ಮಾಡುವ ಅವಶ್ಯಕತೆಯನ್ನು ಕಡಿಮೆ ಮಾಡಲು ಸಹಾಯಕವಾಗಿದೆ. ನಮ್ಮ ರಾಜ್ಯದಲ್ಲಿ ಹುಡುಕಿ ತೆಗೆದ ಹೊಸ ಹತ್ತಿ, ಭತ್ತ, ರಾಗಿ ಮತ್ತು ಹುಲ್ಲಿನ ತಳಿಗಳು ನೆರೆರಾಜ್ಯಗಳ ನಮ್ಮವರಿಗೆ ಪಾತ್ರವಾಗಿವೆ. ಇದಲ್ಲದೆ, ಹೊಸ ಕೃಷಿ ವಿಧಾನಗಳನ್ನು ಮತ್ತು ಸಸ್ಯ ಸಂರಕ್ಷಣೆಯ ವಿಧಾನಗಳನ್ನು ಕಂಡುಹಿಡಿಯಲಾಗಿದೆ. ಅಧಿಕ ಇಳುವರಿ ಕೊಡುವ ತಳಿಗಳ ಪ್ರಸರಣದಿಂದಾಗಿ ಇಂದು ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಆಹಾರಧಾನ್ಯಗಳನ್ನು ಉತ್ಪಾದಿಸಲು ಸಾಧ್ಯವಾಗಿದೆ.

ಆಹಾರ ಸ್ವಾವಲಂಬನೆ—1973–74ನೇ ಸಾಲಿನಲ್ಲಿ 60 ಲಕ್ಷ ಟನ್ ಆಹಾರಧಾನ್ಯಗಳ ಉತ್ಪಾದನೆ ಅಂದಾಜು.

ರಾಜ್ಯದಲ್ಲಿ ಆಹಾರ ಸ್ವಾವಲಂಬನೆಯನ್ನು ಪಡೆಯಬೇಕೆಂಬ ಕನಸು ಇಂದು ನನಸಾಗಿದೆ. ಹೊಸ ಬೀಜ, ನೀರಾವರಿ ಸೌಲಭ್ಯ, ರಾಸಾಯನಿಕ ಗೊಬ್ಬರಗಳ ಉಪಯೋಗದಿಂದಾಗಿ ರಾಜ್ಯದ ಆಹಾರ ಉತ್ಪಾದನೆ 35 ಲಕ್ಷ ಟನ್‌ಗಳಿಂದ 65 ಲಕ್ಷ ಟನ್ ಉತ್ಪಾದನೆಯಾಗುವ ಅಂದಾಜು ಇದೆ. ಅಧಿಕ ಇಳುವರಿ ತಳಿಗಳ ಕ್ಷೇತ್ರ 66 ಸಾವಿರ ಹೆಕ್ಟೇರಿನಿಂದ ಪ್ರಾರಂಭವಾಗಿ, ಈ ಕ್ಷೇತ್ರ ಪ್ರತಿ ವರ್ಷ ಶೇಕಡಾ 100ರಷ್ಟು ಹೆಚ್ಚುತ್ತಾ ಇದೆ.

ಈ ಅಧಿಕ ಇಳುವರಿ ಕೊಡುವ ತಳಿಗಳ ಕ್ಷೇತ್ರ, ಆಹಾರಧಾನ್ಯಗಳು ಒಟ್ಟು ಸಾಗುವಳಿಯಲ್ಲಿದ್ದ ಕ್ಷೇತ್ರದೊಡನೆ ಹೋಲಿಸಿ ನೋಡಿದಲ್ಲಿ ಇದು ಕೇವಲ ಶೇಕಡಾ 5 ರಷ್ಟು ಇರುತ್ತದೆ. ಆದಾಗ್ಯೂ ಅತಿವೇಗದಿಂದ ಬೆಳೆಯುತ್ತಿರುವ ಜನಸಂಖ್ಯೆಗೂ ಕೂಡ ಸಾಕಷ್ಟು ಪ್ರಮಾಣದಲ್ಲಿ ಆಹಾರಧಾನ್ಯಗಳನ್ನು ಉತ್ಪಾದಿಸಲು ಸಾಧ್ಯವಾಗಿದೆ. ಅಧಿಕ ಇಳುವರಿ ತಳಿಗಳ ಕ್ಷೇತ್ರದ ಪ್ರಮಾಣವನ್ನು ಹೆಚ್ಚಿಸಲು ಸಾಕಷ್ಟು ಸಾಧ್ಯವಿದೆ. ಇನ್ನು ಮುಂದೆ ಈ ದಿಶೆಯಲ್ಲಿ ತೀವ್ರ ಕ್ರಮ ತೆಗೆದುಕೊಳ್ಳುವುದು ಅವಶ್ಯ.

ಜನಸಂಖ್ಯೆಯ ಬೆಳವಣಿಗೆ :

ಕರ್ನಾಟಕ ರಾಜ್ಯ ಪುನರ್ವಿಂಗಡನೆಯಾದ ಸಮಯದಲ್ಲಿ ರಾಜ್ಯದ ಜನಸಂಖ್ಯೆ 2 ಕೋಟಿ ಇತ್ತು. 1960ನೇ ಸಾಲಿನಲ್ಲಿ 2·25 ಕೋಟಿಯಾಯಿತು. ಬೆಳವಣಿಗೆಯ ಪ್ರಮಾಣ ಶೇಕಡಾ 2·15 ರಷ್ಟು ಇತ್ತು. ಈ ಅವಧಿಯಲ್ಲಿ ಜನಸಂಖ್ಯೆ ಶೇಕಡಾ 2·65ರಷ್ಟು ಪ್ರಮಾಣದಲ್ಲಿ ಬೆಳೆದಿದೆ. ಜನಸಂಖ್ಯೆಯ ಮುಂದ್ಗೋರಣೆಯನ್ವಯ 1975 ರಲ್ಲಿ ರಾಜ್ಯದ ಜನಸಂಖ್ಯೆ 3·35 ಕೋಟಿಗೆ ಮತ್ತು 1981 ರಲ್ಲಿ 3·68 ಕೋಟಿಗೆ ಹೆಚ್ಚುವ ಸಂಭವವಿದೆ. ಕರ್ನಾಟಕ ರಾಜ್ಯದ ಜನಸಂಖ್ಯೆಯು ಬೆಳವಣಿಗೆ ಉಳಿದ ದಕ್ಷಿಣ ರಾಜ್ಯಗಳಾದ ಆಂಧ್ರ ಪ್ರದೇಶ, ತಮಿಳುನಾಡು ರಾಜ್ಯಗಳಿಗಿಂತ ಹೆಚ್ಚು ಇದೆ. ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಜನಸಂಖ್ಯೆಯ ಬೆಳವಣಿಗೆಯ ಪ್ರಮಾಣ ಕಡಿಮೆಯಾಗುವುದು ಅವಶ್ಯ. ಇದರಿಂದ ವ್ಯಕ್ತಿಯ ಪರಮಾನ ಮತ್ತು ಆದಾಯವನ್ನು ಹೆಚ್ಚಿಸಲು ಸಾಧ್ಯ. ಈ ಬಗ್ಗೆ ಕುಟುಂಬ ಯೋಜನೆ, ಜನಸಂಖ್ಯೆ ಬೆಳವಣಿಗೆಯ ಬಗ್ಗೆ ಶಿಕ್ಷಣವನ್ನು ತ್ವರಿತಗತಿಗೊಳಿಸುವದು ಅವಶ್ಯ.

ಕೃಷಿ ವಸ್ತುಗಳ ಬೆಲೆಗಳ ಏರಿಕೆ :

ಕೃಷಿ ವಸ್ತುಗಳ ಉತ್ಪಾದನೆಯಲ್ಲಿ ಏರಿಳಿತದಿಂದಾಗಿ, ಬೆಲೆಗಳು ಅತಿಯಾಗಿ ಹೊಯ್ದಾಡಿವೆ. ಇಂದಿಗೂ ಬೆಲೆಗಳು ಸಾಮಾನ್ಯವಾಗಿ ಏರುತ್ತಲೇ ಇವೆ. ಈ ಬೆಲೆಗಳು ಗಗನಕ್ಕೆ ಏರಿ ಐತಿಹಾಸಿಕ ದಾಖಲೆಗಳನ್ನು ಸ್ಥಾಪಿಸಹೊರಟಿವೆ. ಬೆಲೆಗಳ ಏರಿಕೆಯನ್ನು ಸ್ತಿಮಿತಗೊಳಿಸಬೇಕಾದರೆ, ಬೆಳೆಗಳ ಅಧಿಕ ಉತ್ಪಾದನೆ ಒಂದೆ ಮಾರ್ಗ.

ನೀರಾವರಿ ಸೌಲಭ್ಯಗಳು :

ರಾಜ್ಯದಲ್ಲಿ ನೀರಾವರಿ ಸೌಲಭ್ಯಗಳು ಸುಮಾರು 7 ಲಕ್ಷ ಹೆಕ್ಟೇರಿನಿಂದ 14 ಲಕ್ಷ ಹೆಕ್ಟೇರಿಗೆ ಹೆಚ್ಚಾಗಿದೆ. 7 ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಹೆಚ್ಚು ನೀರಾವರಿ ಸೌಲಭ್ಯಗಳು ದೊರಕಿದ್ದು ಶೇಕಡಾ 14ರಷ್ಟು ಸಾಗುವಳಿ ಕ್ಷೇತ್ರವು ನೀರಾವರಿಯ ಲಾಭ ಪಡೆದಂತಾಗಿದೆ. ಇತ್ತೀಚೆಗೆ ಚಿಕ್ಕ ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಲು ವಿಶೇಷ ಗಮನ ಕೊಡಲಾಗಿದೆ. ನಮ್ಮ ರಾಜ್ಯದಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಲು ಸಾಧ್ಯತೆಗಳಿವೆ. ನೀರಾವರಿಯ ಸೌಲಭ್ಯಗಳನ್ನು ಶೇಕಡಾ 30 ರಿಂದ 50 ರಷ್ಟು ಹೆಚ್ಚಿಸ ಬಹುದೆಂದು ತಜ್ಞರ ಅಭಿಪ್ರಾಯವಾಗಿದೆ. ನೀರಿನ ಸಂಪನ್ಮೂಲಗಳನ್ನು ಹೆಚ್ಚಿಸಿ, ನೀರನ್ನು ಸಾಮರ್ಥ್ಯದಿಂದ ಬಳಸುವದರಿಂದ ಕೃಷಿ ಅಭಿವೃದ್ಧಿಯನ್ನು ತ್ವರಿತಗತಿಯಿಂದ ಸಾಧಿಸಲು ಸಾಧ್ಯ. ಇದು ಇನ್ನು ಮುಂದೆ ಕೈಕೊಳ್ಳಬಹುದಾದ ಅವಶ್ಯಕ ಕ್ರಮ.

ನೀರಾವರಿಯಿಂದ ಉಂಟಾಗುವ ಲಾಭಗಳು ಈ ಕೆಳಗೆ ವಿವರಿಸಿದ ಅಂಕಿ ಸಂಖ್ಯೆಗಳಿಂದ ಸ್ಪಷ್ಟವಾಗುತ್ತದೆ. ನೀರನ್ನು ಪೂರೈಸುವುದರಿಂದ ಆಹಾರಧಾನ್ಯಗಳ ಉತ್ಪಾದನೆ ಸಾಮಾನ್ಯವಾಗಿ ಹೆಕ್ಟೇರಿಗೆ 775 ಕೆ.ಜಿ. ಯಿಂದ 2715 ಕೆ.ಜಿ. ಗೆ ಹೆಚ್ಚಿದೆ. ರಾಗಿ ಉತ್ಪಾದನೆ 910 ಕೆ.ಜಿ. ಯಿಂದ 2260 ಕೆ.ಜಿ. ಗೆ, ಹೈಬ್ರಿಡ್ ಜೋಳ ಮತ್ತು ಮುಸುಕಿನ ಜೋಳ ಉತ್ಪಾದನೆ 4000 ಕೆ.ಜಿ. ಗಳಷ್ಟು ಹೆಚ್ಚಿದೆ. ಇದರಿಂದ ಒಟ್ಟಿನಲ್ಲಿ ಹೆಕ್ಟೇರಿನ ಆದಾಯ 1,000 ರೂ. ನಿಂದ 3,125 ರೂ. ಗಳಿಗೆ ಹೆಚ್ಚಿದೆ. ಹಣದ ಬೆಳೆಗಳ ಆದಾಯ 2,715 ರೂ. ನಿಂದ 6,955 ರೂ. ಗಳಿಗೆ ಹೆಚ್ಚಿದ್ದು ಕಂಡುಬಂದಿತು. ನೀರಾವರಿ ಸೌಲಭ್ಯಗಳನ್ನು ಒದಗಿಸುವ್ರದರಿಂದ, ಬೆಳೆಗಳ ಉತ್ಪಾದನೆ ಮತ್ತು ಆದಾಯ ಗಮನಾರ್ಹವಾಗಿ ಹೆಚ್ಚಿದು ಕಂಡುಬಂದಿತು.

ರಾಸಾಯನಿಕ ಗೊಬ್ಬರಗಳ ಪೂರೈಕೆ :

ಅಧಿಕ ಇಳುವರಿ ತಳಿಗಳಿಂದ ಪೂರ್ಣ ಲಾಭ ಪಡೆಯಬೇಕಾದರೆ. ಅವುಗಳಿಗೆ ತಕ್ಕಂತೆ ಯೋಗ್ಯ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರವನ್ನು ಪೂರೈಸುವುದು ಮುಖ್ಯ. ಅದರಲ್ಲಿಯೂ ಸಾರಜನಕ ಗೊಬ್ಬರವನ್ನು ಪೂರೈಸುವುದು ಅವಶ್ಯ. ಸಪ್ರಮಾಣದಲ್ಲಿ ಸಮತೋಲ ಗೊಬ್ಬರವನ್ನು ಉಪಯೋಗಿಸಿದಲ್ಲಿ, ಕೇವಲ ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸುವುದರಿಂದ ಇಳುವರಿಯು ಶೇಕಡಾ 50 ರಿಂದ 100 ರಷ್ಟು ಹೆಚ್ಚುತ್ತದೆ ಯೆಂದು ಕಂಡುಬಂದಿದೆ. ಕಳೆದ ಹತ್ತು ವರ್ಷಗಳಲ್ಲಿ ರಾಸಾಯನಿಕ ಗೊಬ್ಬರಗಳ ಮತ್ತು ಪೂರೈಕೆ ಕ್ರಮೇಣ ಹೆಚ್ಚುತ್ತಿದೆ. ಇದರಿಂದ ಈ ಗೊಬ್ಬರಗಳ ಪೂರೈಕೆ ಪ್ರತಿ ವರ್ಷ ಶೇಕಡಾ 50 ರಷ್ಟು ಹೆಚ್ಚಿದೆ. ಒಂದು ಹೆಕ್ಟೇರಿಗೆ ಸುಮಾರು 10 ಕೆ.ಜಿ. ಬಳಕೆ ಮಾಡಲಾಗುತ್ತಿದೆ. ಈ ಬಳಕೆಯನ್ನು ಉಳಿದ ದೇಶಗಳೊಡನೆ ಹೋಲಿಸಿ ನೋಡಿದರೆ ಇದು ಅತಿ ಕಮ್ಮಿಯೆಂದೇ ಹೇಳಬಹುದು. ಕಾರಣ, ರಾಸಾಯನಿಕ ಗೊಬ್ಬರಗಳ ಬಳಕೆ ಇನ್ನೂ ಹೆಚ್ಚಾಗುವುದು ಅವಶ್ಯ.

ಮತ್ತು ಅದಕ್ಕೆ ಸಾಕಷ್ಟು ಅವಕಾಶವಿದೆಯೆಂದು ಸ್ಪಷ್ಟವಾಗುತ್ತದೆ. ಆದರೆ ಇಂದು ಹೇಳ್ಚುತ್ತಿರುವ ಬೇಡಿಕೆ ಅನ್ವಯ ರಾಸಾಯನಿಕ ಗೊಬ್ಬರಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಈ ಕೊರತೆಯನ್ನು ನಮ್ಮ ರಾಜ್ಯದಲ್ಲಿ ಹೆಚ್ಚು ರಾಸಾಯನಿಕ ಗೊಬ್ಬರಗಳ ಉತ್ಪಾದನೆಯಿಂದ ಮಾತ್ರ ಸಾಧಿಸಲು ಸಾಧ್ಯ ಮತ್ತು ಇದಕ್ಕೆ ಸಾಕಷ್ಟು ಅನುಕೂಲತೆಗಳು ಇವೆ.

ವಿದ್ಯುತ್‌ಶಕ್ತಿ ಮತ್ತು ಯಂತ್ರಗಳ ಬಳಕೆ :

ಸಾಮರ್ಥ್ಯದ ಬೇಸಾಯಕ್ಕೆ ವಿದ್ಯುತ್‌ಶಕ್ತಿ ಪಂಪು ಮತ್ತು ಯಂತ್ರಗಳ ಬಳಕೆ ಅವಶ್ಯ. ಇದರಿಂದ ಉತ್ಪಾದನೆ ಹೆಚ್ಚಾಗುತ್ತದಲ್ಲದೆ ತ್ವರಿತಗತಿಯಿಂದ ಸಾಗುವಳಿಯಾಗಿ, ವೆಚ್ಚ ಕಡಿಮೆಯಾಗಿ ಲಾಭದ ಅಂಶ ಹೆಚ್ಚುತ್ತದೆ. ಕರ್ನಾಟಕ ರಾಜ್ಯದಲ್ಲಿ ಯಂತ್ರ ಮತ್ತು ವಿದ್ಯುತ್ ಶಕ್ತಿಯ ಬಳಕೆಯಲ್ಲಿ ವಿಶೇಷ ಪ್ರಗತಿಸಾಧಿಸಲಾಗಿದೆ. ಪ್ರತಿವರ್ಷ ವಿದ್ಯುತ್ ಪಂಪು ಸೆಟ್ಟುಗಳ ಪೂರೈಕೆ ಶೇಕಡಾ 50 ರಷ್ಟು ಮತ್ತು ಟ್ರಾಕ್ಟರುಗಳ ಪೂರೈಕೆ ಶೇಕಡಾ 200ರಷ್ಟು ಹೆಚ್ಚಾಗಿದೆ.

ಮನುಷ್ಯ ಶಕ್ತಿಯ ಬಳಕೆ :

ಉತ್ಪಾದನೆಯಲ್ಲಿ ಅವಶ್ಯವಿರುವ ಭೂಮಿ, ಮನುಷ್ಯ ಶಕ್ತಿ, ಬಂಡವಾಳ, ವ್ಯವಸ್ಥೆ, ಈ ನಾಲ್ಕು ಘಟಕಗಳಲ್ಲಿ ಮನುಷ್ಯನ ಬುದ್ಧಿಶಕ್ತಿಯನ್ನು ಉಪಯೋಗಿಸುವುದೇ ಮುಖ್ಯ. ಈವರೆಗೆ ಕೇವಲ ನೀರು, ಗೊಬ್ಬರ ಮುಂತಾದವುಗಳನ್ನು ಪೂರೈಸುವ ಬಗ್ಗೆ ಲಕ್ಷ್ಯ ಪೂರೈಸಲಾಗಿದೆ. ವಿಶ್ವವಿದ್ಯಾನಿಲಯದ ವಿಸ್ತರಣ ಸಿಬ್ಬಂದಿ, ಗ್ರಾಮ ಸೇವಕರ ತರಬೇತಿ ಮತ್ತು ರೈತರ ತರಬೇತಿ ಕೇಂದ್ರಗಳ ಮುಖಾಂತರ, ರೈತರಿಗೆ ಹೊಸ ಜ್ಞಾನದ ಬಗ್ಗೆ. ಅಲ್ಪಾವಧಿಯ ಮತ್ತು ದೀರ್ಘಾವಧಿಯ ಶಿಕ್ಷಣ ಕೊಡುವ ವ್ಯವಸ್ಥೆ ಇದೆ. ಇದು ಪ್ರಗತಿಪರ ಹೆಜ್ಜೆಯೆಂದೇ ಹೇಳಬಹುದು. ಇದಲ್ಲದೆ ಹೊಸ ಜ್ಞಾನವನ್ನು ವೃತ್ತಪತ್ರಿಕೆಯ ಮತ್ತು ಆಕಾಶವಾಣಿಯ ಮೂಲಕ ಬೃಹತ್ ಪ್ರಮಾಣದಲ್ಲಿ ಪ್ರಸಾರ ಮಾಡುವ ಏರ್ಪಾಟು ಮಾಡಲಾಗಿದೆ. ಇದರಿಂದ ಹೊಸ ಜ್ಞಾನವು ರೈತರ ಮನೆ ಮನೆಗೆ ಮುಟ್ಟುವಂತಾಗಿದೆ. ಶಿಕ್ಷಣದ ಮೂಲಕ ರೈತರಿಗೆ ಬುದ್ಧಿಶಕ್ತಿಯ ಸ್ಫುರಣ ಮಾಡುವುದರಿಂದಲೇ 'ಹಸುರು ಕ್ರಾಂತಿ' ಯನ್ನು ಮುಂದುವರಿಸಲು ಸಾಧ್ಯ.

ಮುಂದಿನ ಹೆಜ್ಜೆ :

ಕರ್ನಾಟಕ ರಾಜ್ಯದಲ್ಲಿ ಇಂದಿನವರೆಗೆ ಸಾಧಿಸಿದ್ದು ಬೆಳೆಯುತ್ತಿರುವ ಜನಸಂಖ್ಯೆಗೆ ಅವಶ್ಯವಿರುವ ಆಹಾರದ ಉತ್ಪಾದನೆ. ಆದರೆ ಇನ್ನೂ ಹಣದ ಬೆಳೆಗಳಾದ ಹತ್ತಿ, ಎಣ್ಣೆ, ಕಾಳುಗಳು, ಕಬ್ಬು, ತಂಬಾಕು, ಮುಂತಾದವುಗಳ ಉತ್ಪಾದನೆಯನ್ನು ಹೆಚ್ಚಿಸುವದು ಅವಶ್ಯ.

ಇದಲ್ಲದೆ ಪ್ರಾಣಿಜನ್ಯ ವಸ್ತುಗಳಾದ ಹಾಲು, ಹೈನು, ತಪ್ತಿ, ಮೀನು, ಮಾಂಸಗಳ ಅತಿಯಾದ ಕೊರತೆಯಿದ್ದು, ಅವುಗಳ ಉತ್ಪಾದನೆಯು ಶೇಕಡಾ 100ರಷ್ಟು ಉತ್ಪಾದನೆ ಹೆಚ್ಚಿಸುವುದರಿಂದ ಬುದಿದೆ. ಕಾರಣ, ರಾಜ್ಯದಲ್ಲಿ ಈಗಾಗಲೇ ಕೈಕೊಂಡ ನೀರಾವರಿ ಸೌಕರ್ಯ ರಾಸಾಯನಿಕ ಗೊಬ್ಬರ, ಅಧಿಕ ವಿದ್ಯುತ್‌ಶಕ್ತಿಯು, ಅವಶ್ಯಕತೆಗೆ ತಕ್ಕಂತೆ ಯಂತ್ರ ಸಾಮಗ್ರಿಗಳ ಮತ್ತು ರೈತರ ಶಿಕ್ಷಣ ಮುಂತಾದವುಗಳನ್ನು ತ್ವರಿತಗತಿಯಿಂದ ಮುಂದುವರಿಸುವುದು ಅವಶ್ಯ. ಇದು ರಾಜ್ಯದ ನಿಸರ್ಗ ಸಂಪತ್ತನ್ನು ಸಾಮರ್ಥ್ಯದಿಂದ ಬಳಸುವುದರಿಂದ ಸಾಧ್ಯವಾಗುವುದು.

ಕರ್ನಾಟಕ ಮಾತೆಗೆ

ಕನ್ನಡದ ನುಡಿತಾಯೆ !
ಎನ್ನ ಮನವೆಮಂಗೀಯೆ ।
ನಿನ್ನ ನುಡಿಯೊಳಗುಲಿವ !
ಉನ್ನತಿಕೆಯೊಳ್ನಲಿವ ।
ಅನ್ಯ ಭಾಷೆಯು ಶಾಲೆ !
ನಿನ್ನ ನಾಡಿನ ಪಾಲೆ ।
ನಿನ್ನ ಮಕ್ಕಳ ಶಾಲೆ !
ಬನ್ನ ಪಡುತಿದೆ ಮೇಲೆ ! ॥೧॥

ಅತ್ತ ತಮಿಳಿನ ಕಾಟ ।
ಮಿತ್ತ ತೆಲುಗಿನ ಕೂಟ !
ಮತ್ತೆ ಮಲಯದಮರ್ದು !
ಸುತ್ತಲಿಂಗ್ಲೀಷುರ್ದು ।
ಮತ್ತೆ ಮರಾಠಿ ಮುರಿ ।
ದೊತ್ತುತಿದೆ; ನಿನ್ನಪರಿ ।
ತತ್ತರಿಸುತಿದೆಯಲ್ಲ ? ।
ಬಿತ್ತರಿಪ ತೆರನಿಲ್ಲ ॥೩॥

ಕತ್ತುರಿಯ ನರುಗಂಪ ।
ಇತ್ತ ನಿನ್ನಯಪೆಂಪ !
ಚಿತ್ತವನು ಸೆಳೆವಿಂಪ ।
ನೆತ್ತಲಿತ್ತೆಯಲುಂಪ ? ।
ಕಾವೇರಿಯಿಂದ ಗೋ ।
ದಾವರೀ ಬರವೊಂದೆ ।
ಭಾವಮಿರ್ಪಾ ನುಡಿಯ ।
ಈವುದೀ ಒಳ್ನುಡಿಯ ?॥೨॥

ಆಡಳಿತದೊಂದು ಕ ।
ಯ್ವಾಡದೊಳ್ನಾಲ್ಕುಮೆಯ್ ।
ಕೂಡದಾದುವು ನಿನ್ನ !
ನಾಡನುಡಿಯಂ ಎನ್ನ ।
ಜೋಡಾಗೆ ಬಿಡದೆವ್ಮ !
ಕಾಡು ಕಿಚ್ಚಿನ ವರ್ಮ ।
ಜೋಡು ಗೂಡಿಪ ಮತಿಯ ।
ನೀಡೆಮಗೆ ಸನ್ಮತಿಯ । ॥೪॥

—ಬಿ. ನಾರಾಯಣ ಜೋಗಿತ್ತಾಯ.

ಕರ್ನಾಟಕದ ಜಲಸಂಪತ್ತು ಮತ್ತು ನೀರಾವರಿ ಸೌಲಭ್ಯ

ಶ್ರೀ ಎಚ್. ಎಸ್. ಎಂ. ಚನ್ನಬಸಯ್ಯ

ಕೃಷಿ ಎಂಜಿನಿಯರ್, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.

ಕರ್ನಾಟಕ ರಾಜ್ಯದಲ್ಲಿ 1901ರಲಿ 12.5 ಲಕ್ಷ ಎಕರೆ ಭೂಮಿಗೆ ನೀರಿನಾಶ್ರಯವಿತ್ತು. ಅದು ಕ್ರಮೇಣ ಏರುತ್ತ ನಡೆದು 1951ರಲ್ಲಿ 17 ಲಕ್ಷ, 1956ರಲ್ಲಿ 18.5 ಲಕ್ಷಗಳಿಗೆ ಏರಿ ಇಂದು ಸುಮಾರು 35 ಲಕ್ಷ ಎಕರೆಗಳಷ್ಟು ಜಮೀನಿಗೆ ನೀರಿನ ಸೌಕರ್ಯ ಏರ್ಪಟ್ಟಿದೆ. ವಿವಿಧ ಯೋಜನೆಗಳ ಪೆಚ್ಚ ಸುಮಾರು ಎರಡುನೂರಾ ಮೂವತ್ತೊಂದು ಕೋಟಿ ರೂಪಾಯಿ ಗಳೆಂದು ಹೇಳಬಹುದು.

ರಾಜ್ಯದ ಜನಸಂಖ್ಯೆ 1971 ರಲ್ಲಿ 2 ಕೋಟಿ, 98 ಲಕ್ಷವಿದ್ದುದು 1976ರ ಹೊತ್ತಿಗೆ 3 ಕೋಟಿ, 35 ಲಕ್ಷಕ್ಕೆ ಏರಿ 1981ರ ಸುಮಾರಿಗೆ 3 ಕೋಟಿ, 68 ಲಕ್ಷಗಳಿಗೆ ಏರಬಹುದು. ಅಂತೆಯೇ ಲಭ್ಯ ಜಲಸಂಪತ್ತಿನ ಸಂಪೂರ್ಣ ಬಳಕೆ ಹಾಗೂ ಸದುಪಯೋಗವನ್ನು ಮುಂದಿನ 10 ವರ್ಷಗಳಲ್ಲಿ ಸಾಧಿಸಲೇಬೇಕಾಗಿದೆ. ಜನತೆಯ ಸುಖೀ ಜೀವನದ ಕನಸನ್ನು ನನಸಾಗಿ ಮಾಡಬಲ್ಲ ಕಾರ್ಯಗಳಲ್ಲಿ ಇದು ಮೊದಲ ಹೆಜ್ಜೆಯಾಗಬೇಕು.

ಕರ್ನಾಟಕ ರಾಜ್ಯದಲ್ಲಿ 3900 (ಟಿ.ಎಂ.ಸಿ.ಎಫ್.ಟಿ.) ಟನ್ನು ಮಟ್ರಿಕ್ ಘನ ಅಡಿ ಜಲಸಂಪತ್ತಿದೆ. ಅದರಲ್ಲಿ 1800 ಟಿ.ಎಂ.ಸಿ.ಎಫ್.ಟಿ. ನೀರಾವರಿಗೆ ಬಳಸಬಹುದಾಗಿದೆ. ಇಂದು ಇದರ ಬಳಕೆ 600ರ ಎಡಬಲ ಇರಬಹುದು. ಎಲ್ಲ ನೀರಾವರಿ ಯೋಜನೆಗಳು ಪೂರ್ತಿಯಾದಾಗ ಮಿಕ್ಕ ಪೊತ್ತದ ವಿನಿಯೋಗ ಸಾಧ್ಯವಾಗಬಲ್ಲದು.

ನೀರಾವರಿಯ ಸೌಲಭ್ಯವನ್ನು ಸದುಪಯೋಗ ಮಾಡಿಕೊಳ್ಳುವುದರ ಜೊತೆಗೆ ಚಾಳು, ಸವಳು, ನೀರಿನ ಕೊಳೆತ, ಹಪೆ ಕೆಡುವಿಕೆ ಮೊದಲಾದ ಸಮಸ್ಯೆಗಳು ತಲೆದೋರದಂತೆ ನೋಡಿ ಕೊಳ್ಳುವುದು ಮಹತ್ವದ್ದಾಗಿದೆ. ತಜ್ಞರಿಂದ ಹಾಗೂ ನೀರಾವರಿ ತಜ್ಞರು ನೀಡುವ ಎಚ್ಚರಿಕೆಯೆಂದು ಗಮನಕ್ಕೆ ಇದನ್ನು ಗಮನದಲ್ಲಿರಿಸಿಕೊಳ್ಳಬೇಕು. ನೀರಾವರಿ ಸೌಲಭ್ಯದ ಸದುಪಯೋಗದಿಂದ ಸಕಲ ಸಂಪದ ಅಭಿವೃದ್ಧಿ ಹೇಗೆ ಸಾಧ್ಯವೋ ಹಾಗೆಯೇ ಅದರ ಅನಾದರ ಬಳಕೆಯಿಂದ ಸರ್ವಜೀವನಾಶವೂ ಆಗಬಲ್ಲದು. ಇದನ್ನರಿತು ನೀರಿನ ಸದುಪಯೋಗದ ಯೋಜನೆ ರೂಪಿಸಿ ಆಚರಿಸಬೇಕಾಗಿದೆ.

ರಾಜ್ಯದಲ್ಲಿನ ವಿವಿಧ ಯೋಜನೆಗಳ ವಿವರಗಳು

1. ದೊಡ್ಡ ನೀರಾವರಿ ಯೋಜನೆಗಳು.

(i) ಘಟಪ್ರಭಾ : 1949ರಲ್ಲಿ ಪ್ರಾರಂಭವಾಗಿ 5.76 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮೊದಲಹಂತದಿಂದ ಬೆಳಗಾಂವಿ ಹಾಗೂ ವಿಜಾಪುರ ಜಿಲ್ಲೆಗಳ ರೈತರಿಗೆ 19426 ಹೆಕ್ಟೇರು ಜಮೀನಿಗೆ ನೀರಿನ ಆಶ್ರಯ ದೊರೆತಿದೆ. ಎರಡನೆಯ ಹಂತವು 1956ರಲ್ಲಿ ಪ್ರಾರಂಭವಾಗಿದೆ. ಅದರಿಂದ ಇವೇ ಜಿಲ್ಲೆಗಳ ಇನ್ನೂ 101175 ಹೆಕ್ಟೇರು ಭೂಮಿಗೆ ನೀರು ದೊರಕಲಿದೆ. ಈ ಯೋಜನೆಯ ವೆಚ್ಚ 4.2 ಕೋಟಿ ರೂಪಾಯಿಗಳು.

(ii) ತುಂಗಭದ್ರಾ : ಬಲ ಹಾಗೂ ಎಡ ದಂಡೆಗಳಿರಡೂ ಯೋಜನೆಗಳ ವೆಚ್ಚ 47 ಕೋಟಿ ರೂಪಾಯಿಗಳು. ಇವುಗಳಿಂದ ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳ 272089 ಹೆಕ್ಟೇರು ಭೂಮಿಗೆ ನೀರಿನಾಶ್ರಯವಾಗುವುದು. ಮೇಲ್ದಂಡೆಯ ಯೋಜನೆಯಿಂದ ಬಳ್ಳಾರಿ ಜಿಲ್ಲೆಯ 78605 ಹೆಕ್ಟೇರು ಭೂಮಿಗೆ ನೀರು ದೊರೆಯುವುದು. ಇದರ ವೆಚ್ಚ 9.23 ಕೋಟಿ ರೂಪಾಯಿಗಳು.

(iii) ಭದ್ರಾ ; ಈ ಯೋಜನೆಯ ವೆಚ್ಚ 35 ಕೋಟಿ ರೂಪಾಯಿಗಳು. ಶಿವಮೊಗ್ಗೆ, ಚಿತ್ರದುರ್ಗ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಇದರಿಂದ 99015 ಹೆಕ್ಟೇರು ಭೂಮಿಗೆ ನೀರಿನಾಶ್ರಯ ಸಿಕ್ಕಿದೆ.

(iv) ಕಬಿನಿ : ಮೊದಲ ಹಂತದಿಂದ ಮೈಸೂರು, ಮಂಡ್ಯಗಳ 50990 ಹೆಕ್ಟೇರು ಜಮೀನಿಗೆ ನೀರಿನ ಆಶ್ರಯ ದೊರೆಯುವುದು. ಇದರ ಪ್ರಯೋಜನ ಐದನೆಯ ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿ ದೊರೆಯುತ್ತದೆ. ಇದರ ವೆಚ್ಚ 24.8 ಕೋಟಿ ರೂಪಾಯಿಗಳು.

(v) ಮಲಪ್ರಭಾ ; ಈ ಯೋಜನೆಯಿಂದ ಧಾರವಾಡ, ವಿಜಾಪುರ, ಹಾಗೂ ಬೆಳಗಾಂವಿ ಜಿಲ್ಲೆಗಳ ಎರಡು ಲಕ್ಷ ಹೆಕ್ಟೇರು ಭೂಮಿಗೆ ಸೌಲಭ್ಯ ದೊರೆಯಲಿದೆ. ಇದರ ವೆಚ್ಚ 20 ಕೋಟಿ ರೂಪಾಯಿಗಳು, ರೈತರಿಗೆ ನೀರು ಕೊಡುವ ಕಾರ್ಯ ಈಗ ಪ್ರಾರಂಭವಾಗಿದೆ.

(vi) ಕೃಷ್ಣಾ ಮೇಲ್ದಂಡೆ : ಈ ಯೋಜನೆಯ ವೆಚ್ಚ 59 ಕೋಟಿ ರೂಪಾಯಿಗಳು. ವಿಜಾಪುರ, ಗುಲ್ಬರ್ಗಾ ಹಾಗೂ ರಾಯಚೂರು ಜಿಲ್ಲೆಗಳ 242820 ಹೆಕ್ಟೇರು ಜಮೀನಿಗೆ ನೀರಾವರಿ ಸೌಲಭ್ಯ ದೊರೆಯಲಿದೆ.

(vii) ಹಾರಂಗಿ : ಮೈಸೂರು, ಕೊಡಗು ಹಾಗೂ ಹಾಸನ ಜಿಲ್ಲೆಗಳಲ್ಲಿ ಈ ಯೋಜನೆಯಿಂದ 30352 ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯ ಐದನೆಯ ಪಂಚ ವಾರ್ಷಿಕ ಯೋಜನೆಯ ಅವಧಿಗೆ ನಿಲುಕಲಿದೆ. ಇದರ ವೆಚ್ಚ 11 ಕೋಟಿ ರೂಪಾಯಿಗಳಷ್ಟಾಗಬಹುದು.

(viii) ಹೇಮಾವತಿ : ಇದೂ ಕೂಡ ಐದನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಫಲ ನೀಡುತ್ತದೆ. ಇದರಿಂದ ಹಾಸನ, ಮಂಡ್ಯ ಜಿಲ್ಲೆಗಳ 40,468 ಹೆಕ್ಟೇರು ಭೂಮಿಗೆ ನೀರುಣ್ಣುವುದು. ಇದರ ವೆಚ್ಚ 16.3 ಕೋಟಿ ರೂಪಾಯಿಗಳು. ಅಲ್ಲದೆ 3 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೃಷ್ಣರಾಜ ಸಾಗರದ ಕೆಲಸವೂ ಜರುಗಲಿದೆ.

2. ಮಧ್ಯಮ ನೀರಾವರಿ ಯೋಜನೆಗಳು

ಆರೆಶಂಕರ, ಕಳಸಕೊಪ್ಪ, ರಾಮನಹಳ್ಳಿ, ಕೊಳಚಿ, ರಾಜೊಲಬಂಡಿ ತುಂಗಾ, ನುಗು, ಅಂಬ್ಲಿ, ಗೋಲಾ, ಹಗರಿಬೊಮ್ಮನಹಳ್ಳಿ, ಜಂಬಿಹಳ್ಳ, ಹೆಬ್ಬಹಳ್ಳ, ಲಕ್ಷ್ಮಣತೀರ್ಥ, ಮಂಗಳ, ಹಾತಕೋನ, ಕನಕನಹಳ್ಳ, ಅರಕಾವತಿ, ಚಿಕ್ಕಹೊಳೆ, ಧರ್ಮ, ನಾಗಠಾಣ, ಬಿಜ್ಜೂರು, ಕಂಭದಕಡ, ಹರಿನಾಲಾ, ಸುವರ್ಣವತಿ ಮುಂತಾದ 23 ನೀರಾವರಿ ಯೋಜನೆಗಳಿಗೆ 30.282 ಕೋಟಿ ರೂಪಾಯಿಗಳ ವೆಚ್ಚ ನಿಗದಿತಗಲುವುದು. ಇವುಗಳಿಂದ ರಾಯಚೂರು, ಶಿವಮೊಗ್ಗ, ಮೈಸೂರು, ಬಳ್ಳಾರಿ, ಚಿಕ್ಕಮಗಳೂರು, ಮಂಗಳೂರು, ತುಮಕೂರು ಮೊದಲಾದ ಜಿಲ್ಲೆಗಳಲ್ಲಿ 9450 ಹೆಕ್ಟೇರು ಜಮೀನಿಗೆ ನೀರಿನ ಸೌಲಭ್ಯ ದೊರೆಯುತ್ತದೆ.

3. ಚಿಕ್ಕ ನೀರಾವರಿ ಯೋಜನೆಗಳು

ಸುಮಾರು 300 ಕೋಟಿ ರೂಪಾಯಿಗಳ ವೆಚ್ಚದಿಂದ ಭಾವಿಗಳನ್ನು ನಿರ್ಮಿಸಿ ನಾಲ್ಕು ಲಕ್ಷ ಹೆಕ್ಟೇರು ಭೂಮಿಗೆ ನೀರಿನ ಸೌಲಭ್ಯ ದೊರಕಿಸಲಾಗಿದೆ. ಇದಲ್ಲದೆ ಹಲವಾರು ಬೋರ್‌ವೆಲ್ ಕೂಡ ತೋಡಿಸುವ ಕಾರ್ಯ ನಡೆದಿದೆ. ಹಲವಾರು ಚಿಕ್ಕ ಕೆರೆಗಳ ನಿರ್ಮಾಣವೂ ಭರದಿಂದ ನಡೆದಿದೆ.

"ಮಹಾರಾಷ್ಟ್ರ" ಬೇರೆ "ಕರ್ನಾಟಕ" ಬೇರೆಯಲ್ಲ. ಎರಡರಲ್ಲಿಯೂ ಒಂದೇ ರಕ್ತ ಪಾಡುತ್ತದೆ. ಎರಡೂ ದೇಶಗಳ ಭಾಷೆಯೂ ಮೊದಲು ಒಂದೇ ಅಂದರೆ ಕನ್ನಡವೇ ಆಗಿತ್ತು. ಭಾಷೆಯ ವಿಷಯದಲ್ಲಿ ಮಹಾರಾಷ್ಟ್ರವು ತನ್ನ ಮೊದಲಿನ ಭಾಷೆಯನ್ನು (ಕನ್ನಡ) ಬಿಟ್ಟು ಮರಾಠಿಯಾಗಿದೆ ಎಂದು ತಾರೀಖು ೨೬ನೇ ನವಂಬರ್ ೧೯೦೭ನೇ ಇಸ್ವಿಯಲ್ಲಿ ಗೂರ್ಲ ಹೊಸೂರಿನಲ್ಲಿ ಶ್ರೀ ಲೋಕಮಾನ್ಯ ತಿಲಕರು ಭಾಷಣ ಮಾಡಿದ್ದಾರೆ. ತಾರಾತಂತ್ರ ಎಂಬ ಗ್ರಂಥದಲ್ಲಿ ಮಹಾರಾಷ್ಟ್ರ ಪ್ರದೇಶದ ಹೆಸರು ಕರ್ನಾಟಕ ಎಂದೂ ಕರ್ನಾಟಕವೂ ಮಹಾರಾಷ್ಟ್ರವೂ ಒಂದೇ ದೇಶವೆಂದು ಹೇಳಿದೆ.

—ಮಹದೇವ ಬಣಕಾರ.

ಕರ್ನಾಟಕದ ಹಿರಿಮೆ – ಕೃಷಿಯ ಮೇಲ್ಮೆ

ಪ್ರಾ। ವೀ. ಚ. ಹಿತ್ತಲಮನಿ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.

ಕರ್ನಾಟಕದ ಮಹಿಮೆ ವರ್ಣಿಸಿದಷ್ಟು ಅಸದಳ. ಕರ್ನಾಟಕದ ಪುಣ್ಯಭೂಮಿ ರತ್ನಗರ್ಭೆ. ಕರ್ನಾಟಕದ ವಸುಂಧರೆ ಅನುಪಮ ಸುಂದರಿ : ಸರ್ವಸಂಪತ್ತಿನ ಅಧಿದೇವತೆ. ಕರ್ನಾಟಕದ ಸಂಸ್ಕೃತಿ, ಉಜ್ವಲ ಪರಂಪರೆ ಹೊಂದಿದೆ. ಸಾಹಿತ್ಯ, ಸತ್ವತುಂಬಿ ಬೆಳೆದು ಬಂದಿದೆ. ಶಿಲ್ಪ ಕಲೆ ವಿಶ್ವದಲ್ಲಿಯೇ ಅತ್ಯುಚ್ಚಮಟ್ಟದ್ದು. ಕರ್ನಾಟಕ, ಧರ್ಮದ ಪತಾಕೆ ಎತ್ತಿಹಿಡಿದ ನಾಡು. ಋಷಿಪುಂಗವರು, ಧರ್ಮದ್ರಷ್ಟಾರರು, ಜ್ಞಾನವಿಜ್ಞಾನಿಗಳು, ಶರಣವರೇಣ್ಯರು ದಾಸ ಶ್ರೇಷ್ಠರು, ದಾರ್ಶನಿಕರು ರಾಜಕಾರಣದುರಂಧರರು, ಸಮಾಜ ಸುಧಾರಕರು, ಹುಟ್ಟಿಬೆಳೆದ ಬೀಡು. ಸಾಮ್ರಾಜ್ಯಗಳು ಹಲವಾರು ಉದಯಿಸಿ ಪ್ರಜ್ವಲಗೊಂಡು ಮೆರೆದ ನಾಡು. ಜನತೆ ಉಜ್ವಲ ತೇಜೋವಂತರಾಗಿ, ಸುಖಸಂಪತ್ತಿನಿಂದ ನಲಿದಾಡಿದ ನಲುನಾಡು. ಇದಕ್ಕೆಲ್ಲ ಕಾರಣ ಕರ್ನಾಟಕದ ನೆಲ, ನೀರು, ಗಾಳಿ ಬೆಳಕು. ಕರ್ನಾಟಕದ ಭೌಗೋಲಿಕ ಸ್ಥಾನ, ಭೂಮೇಲ್ಮೈಲಕ್ಷಣ, ಹವಾಗುಣ, ಆದರ ಪ್ರಜ್ವಲತೆಗೆ, ಉಜ್ವಲತೆಗೆ, ಹಿರಿಮೆ, ಹೆಮ್ಮೆಗಳಿಗೆ ಮೂಲಕಾರಣಗಳು. ಸಸ್ಯಶ್ಯಾಮಲೆಯಾಗಿ ಸಮೃದ್ಧನಾಡೆಂದು ಪ್ರಖ್ಯಾತಿ ಪಡೆಯಲೂ ಇವೇ ಕಾರಣಗಳು.

ಕೃಷಿ ಕನ್ನಡಿಗರ ಕಾಯಕ

ವ್ಯವಸಾಯ ಕನ್ನಡಿಗರ ಪ್ರಾಧಾನ್ಯ ವಿಕಸೇವ ಜೀವನೋಪಾಯದ, ಆಟ್ಟಹಾಸ ವೈಭವಗಳ ಮೂಲ ಉದ್ಯೋಗವಾಗಿ ಎಂದಿನಿಂದಲೂ ಬೆಳೆದು ಬಂದಿದೆ. ಕರ್ನಾಟಕದಲ್ಲಿ ಕರ್ಮಯೋಗಿಗಳಾದ ನೇಗಿಲುಯೋಗಿಗಳೇ ಎಂದಿನಿಂದಲೂ ಅಧಿಕ. ನಾಡಿನ ಅಭಿವೃದ್ಧಿಗೆ ಹೊಲಗಳಲ್ಲಿ ದುಡಿಯುತ್ತಿದ್ದ ಅಜಾನುಬಾಹು, ಗಡುಸು ದೇಹಿ, ಕೆಚ್ಚೆದೆಯ ರೈತರು ಪ್ರಸಂಗ ಬಿದ್ದಾಗ ನಾಡಿನ ಭದ್ರತೆಗೆ ಕಲಿಗಳಾಗಿ ಕಲಿತನದಿಂದ ಕಾದಲೂ, ಹಿಂದು ಮುಂದು ನೋಡುತ್ತಿರಲಿಲ್ಲ. ಬಾರುಕೋಲು ಬೀಸಿದ ಕೈಗಳೇ ಖಡ್ಗ ಝಳಪಿಸುತ್ತಿದ್ದುವು. ಮಣ್ಣಿನ ಧೂಳಿನಲ್ಲಿ ಧೂಳು ಕಣಗಳಾದ ರೈತ ಸಿಂಹಾಸನವನ್ನು ಏರುವ ಕ್ಷಾತ್ರ ತೇಜ ಪಡೆದಿದ್ದರು. ಕರ್ನಾಟಕದ ಹೆಮ್ಮೆಯ ವಿಜಯನಗರ ಸಾಮ್ರಾಜ್ಯ ಕಟ್ಟಿಬೆಳೆದರು. ಕೃಷಿಕರು—ಮಣ್ಣಿನ ಹೆಮ್ಮೆಯ ಮಕ್ಕಳು. ಕರ್ನಾಟಕದ ಜೀವಜೀವಾಳ ಹಳ್ಳಿಗಳು. ಕನ್ನಡಿಗರಲ್ಲಿ ಗ್ರಾಮವಾಸಿಗಳೇ ಅಧಿಕ. ಕರ್ನಾಟಕದ ಸಂಸ್ಕೃತಿ ಗ್ರಾಮಗಳ ಸಂಸ್ಕೃತಿ. ಇಂದಿಗೂ ಕೂಡ ಕರ್ನಾಟಕದ ಮೂರೂವರೆ ಕೋಟಿ ಜನತೆಯಲ್ಲಿ ಎರಡೂವರೆ ಕೋಟಿ ಜನ, ಗ್ರಾಮಗಳಲ್ಲಿ ವಾಸವಾಗಿದ್ದಾರೆ—ಸುಮಾರು ಮುಕ್ಕಾಲು ಪಾಲು. ಇನ್ನುಳಿದ ಒಂದು ಕೋಟಿ ಪಟ್ಟಣವಾಸಿಗಳಿಗೆ ವ್ಯವಸಾಯಕ್ಕೆ ನೆರವು ನೀಡುವ ಹಲವಾರು ಉದ್ಯೋಗದಂಧೆಗಳೇ ಜೀವನಾಧಾರ.

ಕರ್ನಾಟಕದ ಅಂದ ನಿಸರ್ಗದ ಚಂದ

ಅಪಾರ ಸಾಗರದ ತೆರೆಗಳು ಬಂದು ಅಪ್ಪಳಿಸುವ ತೆಂಗಿನ ಬನಗಳಿಂದ ಶೋಭಿಸುವ ಕಿರುಅಗಲವಾದ ಕರಾವಳಿ ಪಟ್ಟಿ, ಅದಕ್ಕೆ ಹೊಂದಿದಂತೆ ಎತ್ತರಪರ್ವತದ ಹಾಗೂ ಆಳ ಕೊಳ್ಳಗಳನ್ನು ಆವರಿಸಿ ನಿಂತ ದಟ್ಟಅರಣ್ಯಗಳ ಸದಾ ಹಸುರಿನ ಗುಡ್ಡಬೆಟ್ಟ, ಮಂಗ್ಗುಲಲ್ಲಿಯೇ ಸಮೃದ್ಧ ಬೆಳೆ ಬೆಳೆಯುವ, ಕೆಲವೇ ಕೆಲವು ಗಿಡಮರ ತೋರಿಬರುವ ಗಡಿನಾಡ ಇಳುಕಲು ಪ್ರದೇಶ ಹಾಗೂ ಅದರ ಆಚೆಗೆ, ಕಣ್ಣು ನೋಡುವತನಕ, ಮಟ್ಟ ವಾಗಿರುವ, ಅಲ್ಲೊಂದು ಇಲ್ಲೊಂದು ಮಾತ್ರ ಗಿಡಮರ ಹೊಂದಿರುವ ವಿಸ್ತೃತ ವಿಶಾಲ ಮೈದಾನಗಳು, ಈ ರಾಜ್ಯಕ್ಕೆ ಮನೋಹರವಾದ ಮೇಲ್ಮೈನೋಟ ಒದಗಿಸಿವೆ. ಇದು ಸುಂದರ ನಾಡು. ಕಡಲ ಸೌಂದರ್ಯ ಅತ್ಯಂತ ರಮಣೀಯ. ಅದಕ್ಕೆ ಸಮಾನಾಂತರ ವಾಗಿ ಹಬ್ಬಿನಿಂತ ಸಹ್ಯಾದ್ರಿಬೆಟ್ಟಗಳ ಚೆಲುವು ವರ್ಣಿಸಲಸದಳ. ಅಲ್ಲಿ ಹುಟ್ಟಿ ಇಕ್ಕೆಲಗಳಲ್ಲಿ ಹರಿದು ಸಾಗರಗಳತ್ತ ಹರಿಯುವ ನದಿಗಳು ಅಡ್ಡಬಿದ್ದ ಹಾವುಗಳಂತೆ ತೋರುತ್ತವೆ. ಮಳೆಗಾಲದಲ್ಲಿ ನಿಸರ್ಗವೆಲ್ಲ ಹಸುರುಡುಗೆ ಉಟ್ಟು ಶೋಭಾಯಮಾನವಾಗಿರುತ್ತ . ಮಳಾಗಿಯದಿನಗಳಲ್ಲಿ ತಂಬಿದ ತೆನೆಗಳಿಂದ ಬಾಗಿ ನಿಂತ ಬೆಳೆಗಳು, ಭಂಗಾರವರ್ಣಕ್ಕೆ ತಿರುಗಿ, ನಿಸರ್ಗದ ಅಂದವನ್ನು ಶಿಖರಕ್ಕೇರಿಸುತ್ತವೆ. ಬೇಸಿಗೆಯಲ್ಲಿ ಬೆಳೆಯಿಲ್ಲದಾಗಲೂ ವಿವಿಧ ವರ್ಣಗಳ ಮಣ್ಣಿನಿಂದ ಕೂಡಿದ ಭೂದೃಶ್ಯ ಚಿತ್ತಾಕರ್ಷಕವಾಗಿರುತ್ತದೆ. ಸಸ್ಯ ವರಣ ಶೋಭೆಯಿಂದ ವಂಚಿತಳಾದ ಧರಿತ್ರೀ ಆಗ ನಿರಾಭರಣ ಸುಂದರಿಯಂತೆ ಕಂಗೊಳಿ ಸುವಳು. ಅಲ್ಲಲ್ಲಿ ಮಧ್ಯಮಧ್ಯ ಕೆಲವೆಡೆ ಸದಾಕಾಲ ನೀರಿರುವ ಕೆರೆಕಟ್ಟೆ, ಹೊಳೆತೊರೆ ಗಳು ನಡುಮಧ್ಯಾಹ್ನದಲ್ಲಿ ಬೆಳ್ಳಿಯಂತೆ ಚಮಕಿಸಿ ಬೆಳಗುತ್ತಿರುತ್ತವೆ. ಇವುಗಳ ಇಕ್ಕೆಲ ಹಾಗೂ ಕೆಳಬದಿಗಳಲ್ಲಿ ನಡುಬೇಸಿಗೆಯಲ್ಲಿಯೂ ಪಚ್ಚಪಟ್ಟಿಗಳು ಮರುಭೂಮಿಯಲ್ಲಿನ 'ಓಯಾಸಿಸ್' ಗಳಂತೆ ಚಿತ್ತಾಕರ್ಷಕಗಳಾಗಿ ಶೋಭಿಸುತ್ತವೆ.

ಪ್ರಕೃತಿಯಂ ಕೊಡುಗೆ ಕರ್ನಾಟಕ ಕೃಷಿಯ ಜೀವಾಳ

ಸಮುದ್ರಸಾಮೀಪ್ಯ, ಭೂಮೇಲ್ಮೈಲಕ್ಷಣ, ಹವಾಮಾನ ಪರಿಸ್ಥಿತಿಗಳ ಪರಿಣಾಮ ವಾಗಿ ಮೈಸೂರು ರಾಜ್ಯದಲ್ಲಿ ಸ್ಥೂಲವಾಗಿ ಕೆಳಗಿನಂತೆ ಪ್ರಾಕೃತಿಕ ವಿಭಾಗಗಳು ಏರ್ಪಟ್ಟಿವೆ :

1. ಕರಾವಳಿ ಪ್ರದೇಶ (ಕಡಲತೀರದ ಮೈದಾನಪಟ್ಟಿ)
2. ಘಟ್ಟದ ಪ್ರದೇಶ (ಪರ್ವತಶ್ರೇಣಿ ಪ್ರದೇಶ, ಮಲೆನಾಡು)
3. ಗಡಿನಾಡು (ಮಧ್ಯಾಂತರ ಪ್ರದೇಶ, ಸಂಧಿ ಪ್ರದೇಶ)
4. ಮೈದಾನ ಪ್ರದೇಶ (ಬೈಲುನಾಡು, ಎರೆನಾಡು, ಪ್ರಸ್ಥಭೂಮಿ)

1. ಕರಾವಳಿ ಪ್ರದೇಶ

ಇದನ್ನು ಕಡಲತೀರ ಪ್ರದೇಶವೆಂದೂ ಕರೆಯುತ್ತಾರೆ. ಒಂದು ಕಡೆ ಕಡಲು ; ಇನ್ನೊಂದು ಕಡೆ ಸಹ್ಯಾದ್ರಿ, ಮಲಯಾದ್ರಿ ಪರ್ವತಶ್ರೇಣಿ ; ಮಧ್ಯದಲ್ಲಿನ 20—30

ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶಕ್ಕಿಂತ ದಕ್ಷಿಣ ಕನ್ನಡದ ಕರಾವಳಿ ಪ್ರದೇಶದಲ್ಲಿ ಸಾಂದ್ರಬೇಸಾಯ ತೋರಿಬರುತ್ತದೆ. ಅಲ್ಲಿನ ಜನನಿಬಿಡತೆಯೂ ಇದಕ್ಕೆ ಒಂದು ಕಾರಣ.

2. ಘಟ್ಟದ ಪ್ರದೇಶ

ಘಟ್ಟದ ಪ್ರದೇಶವನ್ನು ಸಹ್ಯಾದ್ರಿ ಹಾಗೂ ಮಲಯಾದ್ರಿಗಳ ಪರ್ವತಪ್ರದೇಶವೆಂದೂ, ಮಲೆನಾಡೆಂದೂ ಕರೆಯುತ್ತಾರೆ. ಇದರ ಬಹುಭಾಗ ದಟ್ಟ ಅರಣ್ಯದಿಂದ ಕೂಡಿದೆ. ಸಹ್ಯಾದ್ರಿ ಹಾಗೂ ಮಲಯಾದ್ರಿ ಪರ್ವತಶ್ರೇಣಿಗಳಿಗೆ ಪಶ್ಚಿಮ ಘಟ್ಟಗಳೆಂದೂ ಹೆಸರು. ಈ ಭಾಗದಲ್ಲಿ ಅಧಿಕ ಮಳೆ ಬೀಳುವುದು–300 ರಿಂದ 750 ಸೆ. ಮಿ. (100 ರಿಂದ 250 ಅಂಗಂಲ). ನೈರುತ್ಯ ಮಾನಸೂನ್‌ಗಳಿಂದ ಜೂನ್ ಮಧ್ಯದಿಂದ ಅಕ್ಟೋಬರ್ ತನಕದ ಅವಧಿಯಲ್ಲಿ ಮಳೆ ಬೀಳುತ್ತದೆ. ಜುಲೈ ತಿಂಗಳಲ್ಲಿ ಅತ್ಯಧಿಕ ಮಳೆ. ಇಲ್ಲಿ ರಾಜ್ಯದ ಪೂರ್ವಕ್ಕೂ ಪಶ್ಚಿಮಕ್ಕೂ ಹರಿಯುವ ನದಿಗಳು ಉಗಮ ಹೊಂದಿವೆ. ಸಹ್ಯಾದ್ರಿ ಹಾಗೂ ಮಲಯಾದ್ರಿ ಪರ್ವತಗಳ ಸಾಲು ಉತ್ತರದಿಂದ ದಕ್ಷಿಣಕ್ಕೆ ಸಾಗಿದಂತೆಲ್ಲ ಎತ್ತರವಾಗುತ್ತ ನಡೆದಿವೆ. ಅದಕ್ಕನುಗುಣವಾಗಿ ಕಾನಿನಲ್ಲಿಯೂ ಕೂಡ ನಿಬಿಡತೆ ತೋರಿಬರುತ್ತದೆ. ಈ ಪ್ರದೇಶದ ದಕ್ಷಿಣ ಭಾಗದಲ್ಲಿ ಕಾಫಿ, ಏಲಕ್ಕಿ, ರಬ್ಬರಿನ ತೋಟಗಳಿವೆ. ಅಲ್ಲಲ್ಲಿ ಕಾನುಗಳ ಮಧ್ಯೆ 'ಭರಣ'ಗಳಲ್ಲಿ ಅಡಿಕೆ ತೋಟಗಳಿರುತ್ತವೆ. ಮಧ್ಯದಲ್ಲಿನ ಗದ್ದೆಗಳಲ್ಲಿ ಭತ್ತವನ್ನು ಬೆಳೆಯುತ್ತಾರೆ. ಅಡಿಕೆ ತೋಟಗಳಲ್ಲಿ ತೆಂಗು, ವೆಣಸು, ಬಾಳೆಗಳು ಉಪಬೆಳೆಗಳು. ಕೊಡಗು ಜಿಲ್ಲೆಯಲ್ಲಿ ಕೆಲವೆಡೆ ಕಿತ್ತಳೆಹಣ್ಣಿನ ಬೆಳೆ ಬೆಳೆಯುತ್ತಾರೆ. ಮೇಲ್ಗಡೆಯಲ್ಲಿನ ಏರು ಭೂಮಿಗಳಲ್ಲಿ ರಾಗಿ ಬೆಳೆಯುತ್ತಾರೆ. ಇಲ್ಲಿಯ ಬೆಳೆಗಳಿಗೆ ಕಾಡುಮೃಗಗಳ ಕಾಟ ಹೆಚ್ಚು.

ಈ ಪ್ರದೇಶದಲ್ಲಿನ ಕಾನು ಹಲವಡೆ ಸದಾಹಸುರಾಗಿರುವ ದಟ್ಟ ಮರಗಳಿಂದ ಕೂಡಿರುತ್ತವೆ. ತೇಗು, ಬೀಟಿ, ಹೆದ್ದೇಗ, ಶ್ರೀಗಂಧಗಳೇ ಮೊದಲಾದ ಬಲು ಬೆಲೆಯುಳ್ಳ ಮರಗಳು ಈ ಕಾಡಿನಲ್ಲಿ ಬೆಳೆಯುತ್ತವೆ. ಬಿದಿರುಬೆತ್ತಗಳೂ ಹೇರಳವಾಗಿ ತೋರಿಬರುತ್ತವೆ. ಈ ಕಾಡುಗಳು ಆನೆ, ಹುಲಿ, ಕಾಡುಕೋಣಗಳೇ ಮೊದಲಾದ ವನ್ಯ ಪ್ರಾಣಿಗಳಿಗೆ ಹೆಸರಾಗಿವೆ. ಇಲ್ಲಿಯ ಮಣ್ಣು ಅತ್ಯಂತ ಫಲವತ್ತಾಗಿರುವುದಲ್ಲದೆ ಹೆಚ್ಚು ಸೇಂದ್ರಿಯ ಪದಾರ್ಥದಿಂದ ಕೂಡಿ ಫಲವತ್ತಾಗಿರುತ್ತದೆ. ಮಳೆಗಾಲದಲ್ಲಿ ಹೆಚ್ಚು ಮಳೆ ಬೀಳುತ್ತಿದ್ದರೂ ಬೇಸಿಗೆಯಲ್ಲಿ ನೀರೇ ಇರುವುದಿಲ್ಲ. ನೀರಾವರಿಗೆ ವ್ಯವಸ್ಥೆಯಿಲ್ಲ. ಮಳೆಯ ಆಶ್ರಯದಲ್ಲಿಯೇ ಘಟ್ಟದ ಪ್ರದೇಶದಲ್ಲಿ ಬೆಳೆ ಬೆಳೆಯಬೇಕಾಗುವುದು. ಮಳೆಗಾಲದಲ್ಲಿ ಹಲವಾರು ದಿನ ಬಿಸಿಲಿನ ದರ್ಶನವೇ ಆಗುವುದಿಲ್ಲ. ಆಗ ಹವ ಅನಾರೋಗ್ಯಕರವಾಗಿರುತ್ತದೆ. ಬೇಸಿಗೆಯಲ್ಲಿ ಉಷ್ಣಾಂಶ ಹೆಚ್ಚು. ಆಗ ಕಾನಿನಲ್ಲಿನ ಕುರುಚಲು ಕಂಟಿಗಳೆಲ್ಲ ಒಣಗಿ ಹೋಗುತ್ತವೆ. ಮಳೆಗಾಲದಲ್ಲಿ ಇಲ್ಲಿನ ಅರಣ್ಯಗಳಲ್ಲಿ ಎತ್ತರವಾದ ಹುಲ್ಲು ಬೆಳೆಯುತ್ತದೆ. ಅಧಿಕ ಮಳೆ ಹಾಗೂ ಅನಾರೋಗ್ಯಕರ ಹವಾಮಾನದಿಂದಾಗಿ ದನಕರು, ಕುರಿ ಆಡುಗಳನ್ನು ಸಾಕುತ್ತಿಲ್ಲ. ಬೇಸಿಗೆಯಲ್ಲಿ ಭತ್ತದ ಗದ್ದೆಗಳು ಒಣಗಿ ಬೀಡು ಬಿಟ್ಟಿರುತ್ತವೆ. ಇಲ್ಲಿಯ

ಕಿಲೋಮೀಟರ್ (15 ರಿಂದ 20 ಮೈಲು) ಕಿರುಅಗಲದ ಪಟ್ಟಿಯಿದು. ಪೂರ್ವದಿಂದ ಪಶ್ಚಿಮದೆಡೆಗೆ ಇಳುಕಲಾಗಿದೆ. ಇದು ಮೈದಾನ ಪಟ್ಟಿಯಾಗಿದ್ದರೂ ಅಲ್ಲಲ್ಲಿ ಸಹ್ಯಾದ್ರಿ ಬೆಟ್ಟಗಳ ಚಾಚು ಇಲ್ಲಿಪೆ ಎತ್ತರವಾಗಿರದ ಸಣ್ಣ ಸಣ್ಣ ಬಿಡಿಬೆಟ್ಟಗಳು ತೋರಿಬರುತ್ತವೆ. ಇಲ್ಲಿಯೆ ಮಣ್ಣಿಗೆ ಮೆಕ್ಕಲು ಮಣ್ಣೆಂದು ಕರೆಯುತ್ತಾರೆ. ನೈಸರ್ಗಿಕವಾಗಿ ಇಲ್ಲಿನ ಭೂಮಿಗಳು ಅಷ್ಟೊಂದು ಫಲವತ್ತಾಗಿರುವುದಿಲ್ಲ. ಸಾರಜನಕದ ಮಟ್ಟ ಸರ್ವಸಾಧಾರಣವಾಗಿದ್ದರೂ ಈ ಮಣ್ಣುಗಳಲ್ಲಿ ರಂಜಕ ಹಾಗೂ ಅಣುಪೋಷಕಾಂಶಗಳ ಕೊರತೆ ಹೆಚ್ಚು. ಯಶಸ್ವೀ ಬೆಳೆ ಬೆಳೆಯಲು ಪ್ರತಿಬೆಳೆಗೆ ಅಧಿಕ ಗೊಬ್ಬರ ಕೊಡಬೇಕಾಗುವುದು. ಮಣ್ಣಿನಲ್ಲಿ ಹುಳಿ ಅಂಶ ಜಾಸ್ತಿ. ಅದನ್ನು ಸರಿಪಡಿಸಲು ಸುಣ್ಣ ಹಾಕಬೇಕಾಗುತ್ತದೆ. ಭತ್ತ, ತೆಂಗು ಈ ಪ್ರದೇಶದ ಮುಖ್ಯ ಬೆಳೆಗಳು. ಅಡಿಕೆ, ಗೋಡಂಬಿ ಹಾಗೂ ಮಾವು ಕೂಡ ಇಲ್ಲಿ ವಿಪುಲವಾಗಿ ಬೆಳೆಯುತ್ತವೆ. ವರ್ಷದ ತುಂಬೆಲ್ಲ ಬೆಚ್ಚನೆಯ ಹವೇಯಿರುವುದರಿಂದ ಭತ್ತವನ್ನು ವರ್ಷದ ಮೂರು ಕಾಲದಲ್ಲಿ ಅಂದರೆ ಮಳೆಗಾಲದಲ್ಲಿ, ಮೇ—ಆಕ್ಟೋಬರ್, ಚಳಿಗಾಲದಲ್ಲಿ ಅಕ್ಟೋಬರ್—ಜನವರಿ ಹಾಗೂ ಬೇಸಿಗೆಯಲ್ಲಿ ಜನವರಿ—ಏಪ್ರಿಲ್ ಅವಧಿಗಳಲ್ಲಿ ಬೆಳೆಯಬಹುದು. ಹೀಗೆ ಬೆಳೆಯಲು ನೀರಿನ ಆಶ್ರಯವಿರ ಬೇಕಾಗುತ್ತದೆ. ನೀರಿನಾಶ್ರಯವಿರುವೆಡೆಗಳಲ್ಲಿ ಮಳೆಯಾಶ್ರದಲ್ಲಿಯೇ ಬೆಳೆಯ ಬೇಕಾಗುತ್ತದೆ. ಈ ಪ್ರದೇಶವೇ ಹೆಚ್ಚಿರುತ್ತವೆ. ಈ ಪ್ರದೇಶದಲ್ಲಿ ಮಳೆಯ ಜೋರು ಕಡಿಮೆಯಾದ ನಂತರ ಅಗಸ್ಟ್—ಸೆಪ್ಟೆಂಬರ ತಿಂಗಳಲ್ಲಿ ನಾಟಿಮಾಡಿ ಒಂದೇ ಸಲ ಭತ್ತ ಬೆಳೆಯುವುದು ರೂಢಿ. ಈ ಬೆಳೆಯ ಕೊಯ್ಲಿನ ನಂತರ ಹಸಿ ಇರುವ ಗದ್ದೆಗಳಲ್ಲಿ ಅವರೆ, ಉದ್ದು, ಹೆಸರು, ಕಡಲೆ ಮೊದಲಾದ ಬೇಳೆಕಾಳಿನ ಬೆಳೆಗಳನ್ನು ಬೆಳೆಯುತ್ತಾರೆ. ಈ ಪ್ರದೇಶದಲ್ಲಿ ಭೂ ಅಂತರ್ಜಲಮಟ್ಟ ಭೂಪಾತಳಿಯ ಸನಿಯದರಲ್ಲಿಯೇ ಇರುವುದರಿಂದ ಚಿಕ್ಕ ಚಿಕ್ಕ ಹೊಂಡ ಗಳನ್ನು ತೋಡಿ ನೀರೆತ್ತಿ ಚಳಿಗಾಲ ಹಾಗೂ ಬೇಸಿಗೆ ಕಾಲಗಳಲ್ಲಿಯೂ ಬೆಳೆಗಳನ್ನು ತೆಗೆಯ ಬಹುದಾಗಿದೆ. ಅನೇಕ ಕಡೆಗಳಲ್ಲಿ ತರಕಾರಿ (ಕಾಯಿಪಲ್ಲೆ) ಹಾಗೂ ನೆಲಗಡಲೆ ಇತ್ಯಾದಿ ಬೆಳೆಗಳನ್ನು ಈ ತೆರನಾಗಿ ಬೇಸಿಗೆಯಲ್ಲಿ ಬೆಳೆಯುವುದು ಸಾಮಾನ್ಯ ದೃಶ್ಯವಾಗಿದೆ. ಈ ಪ್ರದೇಶದಲ್ಲಿ ಹಲವಾರು ನದಿಗಳು ಹರಿದು ಅರಬೀ ಸಮುದ್ರ ಸೇರುತ್ತವೆ. ಸಮುದ್ರಕ್ಕೆ ಈ ನದಿಗಳು ಕೊಡುವಾಗ್ಗೆ ಅತಿಶಯ ಅಗಲ ಮುಖಗಳನ್ನು ನಿರ್ಮಿಸಿವೆ. ಕಾಳಿ, ಅಘನಾಶಿನಿ, ಶರಾವತಿ, ನೇತ್ರಾವತಿ, ಫಾಲ್ಗುಣಿ, ಗಂಗೋಳಿ, ಸೀತಾ, ಸ್ವರ್ಣ ಪ್ರಮುಖವಾದ ನದಿಗಳು. ಇಲ್ಲಿಯ ಹವಾಗುಣದಲ್ಲಿ ವೈತ್ಯಾಸ ಕಡಿಮೆ, ಹವೆಯಲ್ಲಿ ಅಧಿಕ ಆರ್ದ್ರತೆ ಹಾಗೂ ಉಷ್ಣತೆ ತೋರಿಬರುತ್ತದೆ. ಮತ್ತು ಬೇಧ ಕಡಿಮೆ. ವಾರ್ಷಿಕ ಮಳೆ 300—450 ಸೇ. ಮೀ. (100—150 ಅಂಗುಲ). ಮುಖ್ಯವಾಗಿ ನೈಋತ್ಯ ಮಾನ್‌ಸೂನ್‌ಗಳಿಂದಲೇ ಜೂನ್‌ದಿಂದ ಅಕ್ಟೋಬರ್ ಅವಧಿಯಲ್ಲಿ ಮಳೆ ಬೀಳುತ್ತದೆ. ಮಳೆಯಲ್ಲಿ ರಭಸ ಹೆಚ್ಚು. ಕೆಲವೆಡೆ ಸಮುದ್ರ ಒತ್ತುಗಳಿಗೆ ಬಂಧಾರಾ ನಿರ್ಮಿಸಿ 'ಕಾರ್' ಭತ್ತ ಬೆಳೆಯುವರು. ಈ ಭೂಮಿಗಳಿಗೆ 'ಗಝನಿ' ಭೂಮಿಗಳೆಂದು ಹೆಸರು. ಅಲ್ಲಲ್ಲಿ ಕುರುಚಲು ಗಿಡ ಹಾಗೂ ಚಿಕ್ಕಗಿಡಮರಗಳಿಂದ ಕೂಡಿದ ಕಾಡುಗಳೂ ಈ ಪ್ರದೇಶದಲ್ಲಿ ಇರುವುದುಂಟು.

ವ್ಯವಸಾಯಕ್ಕೆ ಇನ್ನೊಂದು ಅತಂಕವೆಂದರೆ ಜನಸಾಂದ್ರತೆ ಕಡಿಮೆಯಾಗಿರುವುದು. ಅಡಿಕೆ ತೋಟಗಳಲ್ಲಿ ಘಟ್ಟದ ಕೆಳಗಿನವರೇ ಬಂದು ಕೆಲಸಮಾಡುವುದು ರೂಢಿ.

2. ಗಡಿನಾಡು.—ಇದು ಘಟ್ಟದ ಪ್ರದೇಶ ಹಾಗೂ ಬೈಲುನಾಡಿಗೂ (ಮೈದಾನ ಪ್ರದೇಶ) ನಡುವಿರುವ 25 ರಿಂದ 35 ಮೈಲು ಅಗಲವಾಗಿರುವ ಪಟ್ಟಿ. ಇದಕ್ಕೆ ಮಧ್ಯಂತರ ಪಟ್ಟಿಯೆಂದೂ ಹೆಸರು. ಇದು ಪಶ್ಚಿಮದಿಂದ ಪೂರ್ವಕ್ಕೆ ಇಳುಜಾರಾಗಿರುತ್ತದೆ. ಇಲ್ಲಿಯ ಮಣ್ಣು ಮಿಡಿಕಟ್ಟು ಗೋಡು; ಸಾಧಾರಣ ಆಳವಾಗಿರುತ್ತದೆ. ಫಲವತ್ತತೆಯೂ ಸಾಧಾರಣ ಹೆಚ್ಚಿರುತ್ತದೆ. ಮಳೆಯು ಇಲ್ಲಿ 45–90 ಸೆ. ಮೀಟರ್ (30 ರಿಂದ 60 ಅಂಗುಲ) ತನಕ; ಮಳೆಗಾಲ ತುಂಬೆಲ್ಲ ಹಂಚಿ ಬೀಳುತ್ತದೆ. ಮಳೆಯಿಂದಲೇ ಭತ್ತ, ಕಬ್ಬು, ರಾಗಿ, ನೆಲಗಡಲೆ, ಮೆಣಸಿನಕಾಯಿ, ಬೇಳೆಕಾಳು, ಜೋಳ, ಹರಳು ಇತ್ಯಾದಿ ಬೆಳೆಗಳು ಬೆಳೆಯುತ್ತವೆ. ಈ ಪ್ರದೇಶದ ದಕ್ಷಿಣಭಾಗದಲ್ಲಿ ಬಿತ್ತನೆ ಮಾರ್ಚಿ ತಿಂಗಳಿಗೇನೇ ಪ್ರಾರಂಭವಾಗುತ್ತದೆ. ಭತ್ತ ಕೆಳಗಿನ ಜಮೀನುಗಳಲ್ಲಿನ ಮುಖ್ಯಬೆಳೆ. ಮಲೆನಾಡಿಗೆ ಹೊಂದಿದ ಗಡಿನಾಡಿನ ಭಾಗದಲ್ಲಿ ಭತ್ತ ಜೋಳಗಳೆರಡನ್ನೂ ಸೇರಿಸಿ ಬಿತ್ತುವುರು. ಮಳೆ ಹೆಚ್ಚಾದ ವರ್ಷ ಜೋಳ ಕಿತ್ತು ಬಿಸಾಡುವುರು. ಮಳೆ ಕಡಿಮೆಯಾದ ವರ್ಷ ಭತ್ತ ತೆಗೆದುಬಿಡುವರು. ಈ ತೆರನಾದ ಹೊಂದಾಣಿಕೆಯಿಂದ ಒಂದಿಲ್ಲೊಂದು ಬೆಳೆ ಖಚಿತವಾಗಿ ಬಂದೇ ಬರುವುದು. ಈ ಭಾಗದ ಅನೇಕ ಕಡೆಗಳಲ್ಲಿ ಎರಡು ಬೆಳೆ ತೆಗೆಯುವುರು, ಅವು ಮಿಶ್ರ ಬೆಳೆಯಾಗಿರಬಹುದು. ಅನುಸರಣೆಯ ಬೆಳೆಯಾಗಿರಬಹುದು ಇಲ್ಲವೆ ಪರ್ಯಾಯ ಬೆಳೆಯಾಗಿರಬಹುದು. ಇದು ಒಂದಿಲ್ಲೊಂದು ಬೆಳೆಯನ್ನು ತಪ್ಪದೆ ಬೆಳೆದು ಕೊಡುವ ರಕ್ಷಣಾಭೂಮಿ ರೈತನಿಗೆ. ಈ ಭಾಗದಲ್ಲಿ ಕೆರೆಗಳು ಹೆಚ್ಚು. ಇವು ಮಳೆಗಾಲದ ಮಳೆಗಳಲ್ಲಿ ವ್ಯತ್ಯಯವಾದಾಗ ಪೂರಕ ನೀರಾವರಿಗೆ ಆಶ್ರಯಗಳಾಗಿವೆ. ಈ ಭಾಗದಲ್ಲಿ ಹಲವಾರು ನದಿಗಳು ಹರಿಯುತ್ತಿದ್ದರೂ ನೀರಾವರಿಗೆ ಹೆಚ್ಚು ಅವುಗಳ ಉಪಯೋಗ ಮಾಡಿಕೊಂಡಿಲ್ಲ. ವರ್ಷದ ಹವಾಮಾನದಲ್ಲಿ ಬಹಳಷ್ಟು ವ್ಯತ್ಯಾಸ ತೋರಿಬರುವುದಿಲ್ಲ. ಹವ ಹಿತಕರವಾಗಿದೆ. ಈ ಭಾಗದಲ್ಲಿ ಅಲ್ಲಲ್ಲಿ ಕೀಳುದರ್ಜೆಯ ಗಿಡಮರಗಳಿಂದ ಕೂಡಿದ ಅರಣ್ಯಗಳಿವೆ, ಅಲ್ಲಿ ಎತ್ತರ ಹುಲ್ಲು ಬೆಳೆಯುತ್ತದೆ. ಅಲ್ಲಲ್ಲಿ ಸಹ್ಯಾದ್ರಿ ಹಾಗೂ ಮಲ ಯಾದ್ರಿ ಪರ್ವತಶ್ರೇಣಿ ಅಂಚುಗಳು ಒಳಸೇರಿವೆ; ಬಿಡಿ ಬೆಟ್ಟಗಳೂ ತೋರಿಬರುತ್ತವೆ.

3. ಮೈದಾನ ಪ್ರದೇಶ

ಮೈದಾನ ಪ್ರದೇಶವನ್ನು ಬೈಲುನಾಡು, ಎರೆನಾಡುಗಳೆಂದೂ ಉತ್ತರದಲ್ಲಿ ಸಂಬೋಧಿಸುವರು. ಇದಕ್ಕೆ ಕಾರಣವೆಂದರೆ ಗಿಡಮರಗಳು ಇಲ್ಲದೆ ಕಣ್ಣುಹರಿಸುವವರೆಗೆ ವಿಶಾಲ ಬೈಲು ಕಾಣುತ್ತಿರುವುದು ಹಾಗೂ ಎರೆಭೂಮಿ ಹೆಚ್ಚಾಗಿರುವುದು ಆಗಿದೆ. ಇದು ರಾಜ್ಯದ ಒಣಪ್ರದೇಶ. ಇದು ಮೈದಾನ ಪ್ರದೇಶವಾಗಿದ್ದರೂ ಅಲ್ಲಲ್ಲಿ ಬಿಡಿ ಗುಡ್ಡಗಳು ತೋರಿಬರುತ್ತವೆ. ಮಳೆ 20—25 ಸೆ. ಮೀಟರ್ (13 ರಿಂದ 24 ಅಂಗುಲ); ನೈಋತ್ಯ ಹಾಗೂ ಈಶಾನ್ಯ ಮಾನ್‌ಸೂನ್‌ಗಳೆರಡರಿಂದಲೂ ಮಳೆ ಬರುತ್ತಿದ್ದರೂ ಈಶಾನ್ಯ

ಮಾನ್‌ಸೂನ್‌ಗಳಿಂದಲೇ ಹೆಚ್ಚು. ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಂಗಳಲ್ಲಿ ಅಧಿಕಮಳೆ; ಆದುದರಿಂದ ಇಲ್ಲಿ ಮಣ್ಣು ಕೊಚ್ಚಣೆ ಭೀತಿ ಹುಟ್ಟಿಸುವ ಸಮಸ್ಯೆಗಳಲ್ಲಿ ಒಂದಾಗಿದೆ. ಇಲ್ಲಿ ಮಳೆಯು ಕಡಿಮೆಯಾಗಿರುವಂತೆ ಅದರ ಬೀಳುವಿಕೆಯಲ್ಲಿ ಅನಿಶ್ಚಿತತೆಯೂ ಹೆಚ್ಚು, ಹಲವಾರು ವರ್ಷ ಅತ್ಯಂತ ಕಡಮೆ ಮಳೆಬಿದ್ದು ಕೆಲವರ್ಷ ಸಕಾಲದಲ್ಲಿ ಮಳೆಬೀಳದೆ ಆಗಾಗ ಕ್ಷಾಮು ಈ ಪ್ರದೇಶದಲ್ಲಿ ಕಾಣಿಸಿಕೊಳ್ಳುವುದು. ಬೀಳುವ ಕಡಿಮೆ ಮಳೆಯಲ್ಲಿ ರಭಸ ಹೆಚ್ಚು. ಆದುದರಿಂದ ಇಲ್ಲಿ ಮಣ್ಣುಕೊಚ್ಚಣೆ ಭೀತಿ ಹುಟ್ಟಿಸುವ ಸಮಸ್ಯೆಗಳಲ್ಲಿ ಒಂದಾಗಿದೆ. ರಾಜ್ಯದ ಉತ್ತರ ಪ್ರದೇಶದಲ್ಲಿ ಕಪ್ಪುಬಣ್ಣದ ಎರೆಭೂಮಿಯು ಹೆಚ್ಚು. ಅಲ್ಲಲ್ಲಿ ಮರಳುಕೂಡಿದ ಕೆಂಪು ಭೂಮಿಯೂ ಇರುವುದುಂಟು. ಕೆಂಪುಭೂಮಿಯಲ್ಲಿ ಮಳೆಗಾಲದಲ್ಲಿ ಸರಿಯಾಗಿ ಮಳೆಯಾದರೆ ಸಜ್ಜೆ, ಜೋಳ, ಕಡಲೆಕಾಯಿ. ಮೊದಲಾದ ಬೆಳೆಗಳನ್ನು ಬೆಳೆಯುತ್ತಾರೆ. ದಕ್ಷಿಣ ಕೆಂಪು ಭೂಮಿಯಲ್ಲಿ ರಾಗಿ, ಕಡಲೆಕಾಯಿ, ಹರಳು ಹುರುಳಿ ಮೊದಲಾದ ಬೆಳೆ ಬೆಳೆಯುತ್ತಾರೆ. ಈ ವಿಭಾಗದಲ್ಲಿ ಮಳೆಗಾಲದ ಅಂತ್ಯದಲ್ಲಿ ಮಳೆ ಬೀಳುವುದರಿಂದಲೂ ನೀರನ್ನೂ ಹಿಡಿದಿಟ್ಟುಕೊಳ್ಳುವ ಕಪ್ಪು (ಎರೆ) ಮಣ್ಣಿರುವುದರಿಂದಲೂ ಹಿಂಗಾರಿಯಲ್ಲಿ ಗೋಧಿ, ಬಿಳಿಜೋಳ, ಕಡಲೆ, ಕುಸುಂಬೆ ಬೆಳೆಗಳನ್ನು ತೆಗೆದು ಕೊಳ್ಳುತ್ತಾರೆ. ಮುಂಗಾರಿಯಲ್ಲಿ ಬಿತ್ತಿ, ಹಿಂಗಾರಿಯಲ್ಲಿ ಸುಗ್ಗಿಮಾಡುವ ಪದ್ಧತಿಯು ಈ ಪ್ರದೇಶದ ಮುಖ್ಯ ಹಣದ ಬೆಳೆಯು, ಈ ವಿಭಾಗದ ದಕ್ಷಿಣಭಾಗದಲ್ಲಿ ಹಲವಾರು ಕೆರೆಗಳಿರುವುದರಿಂದ ಅವುಗಳ ನೀರಿನಾಶ್ರಯದಿಂದ ಭತ್ತ, ರಾಗಿ, ಮುಸುಕಿನ ಜೋಳ, ನೆಲ ಗಡಲೆಗಳನ್ನು ಬೇಸಿಗೆಯಲ್ಲಿಯೂ ಬೆಳೆಯುತ್ತಾರೆ, ಇತ್ತೀಚೆಗಿನ ಕೆಲದಿನಗಳಿಂದ ಘಟಪ್ರಭಾ, ತುಂಗಭದ್ರಾ, ಭದ್ರಾ ಜಲಾಶಯಗಳಿಂದ ಲಕ್ಷಾಂತರ ಎಕರೆ ಈ ಭಾಗದ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆತು ಸಮೃದ್ಧಿಗೆ ಸೋಪಾನವೇರ್ಪಟ್ಟಿದೆ. ಕೃಷ್ಣಾ, ಮಲಪ್ರಭಾಗಳ ಕಾರ್ಯ ಪೂರೈಸಿದರೆ ಈ ಭಾಗದ ಬಹುಪ್ರದೇಶ ಅತ್ಯಂತ ಸಮೃದ್ಧಿಯ ನಾಡಾಗಿ ಬಹುಭಾಗ ಕ್ಷಾಮದ ದವಡೆಯಿಂದ ಪಾರಾದಂತಾಗುವುದು, ನೀರಾವರಿ ಹತ್ತಿ, ಭತ್ತ, ಮುಸುಕಿನಜೋಳ, ನೆಲಗಡಲೆ ಪ್ರಾಮುಖ್ಯ ನೀರಾವರಿ ಬೆಳೆಗಳು. ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಗಡಿನಾಡಿನಲ್ಲಿ ಹಾಯ್ದು ಈ ಭಾಗಕ್ಕೆ ಹರಿದು ಬರುವಷ್ಟು ಹೊತ್ತಿಗೆ ನದಿಗಳೆಲ್ಲ ಬಲಶಾಲಿಗಳಾಗುತ್ತವೆ. ಭೀಮಾ, ಕೃಷ್ಣಾ ಘಟಪ್ರಭಾ, ಮಲಪ್ರಭಾ, ತುಂಗಭದ್ರಾ ನದಿಗಳು ಈ ಭಾಗದಲ್ಲಿ ಹರಿದಿವೆ. ಕೆಲವೆಡೆಗಳಲ್ಲಿ ಬೇಸಿಗೆಯಲ್ಲಿ ಅತ್ಯಧಿಕ ಬಿಸಿಲು—ಉಷ್ಣಾಂಶ, 45°C ತನಕವು ಹೋಗುವುದು. ಈ ತೊಂದರೆಯನ್ನುಳಿದರೆ ಸಾಮಾನ್ಯವಾಗಿ ಈ ವಿಭಾಗದ ಹವಗುಣ ಹಿತವಾದುದೆಂದೇ ಹೇಳಬಹುದು.

ಕರ್ನಾಟಕದ ಕೃಷಿಯ ಕೆಲ ಆಕರ್ಷಕ ಸಂಗತಿಗಳು

(i) ವ್ಯವಸಾಯ ಹಾಗೂ ತೋಟಗಾರಿಕೆ ಸಂಪತ್ತು

ಕರ್ನಾಟಕದಲ್ಲಿ ವಿವಿಧ ಮಣ್ಣುಗಳು ನೆಲೆನಿಂತಿವೆ, ಈ ನೆಲದ ಮಣ್ಣಿನ ಗುಣವೇ ನಾಡಿನ ಹಾಗೂ ನಾಡಿಗರ ಹೆಚ್ಚಳಕ್ಕೆ ಕಾರಣ, ಕರಾವಳಿಯ ಮೆಕ್ಕಲು, ಘಟ್ಟದ ಪ್ರದೇಶದ

ಕಾಗದಾಳಿ (ಜಂಬಟ್ಟಿಗೆ), ಗಡಿನಾಡಿನ ಮಡಿಕಟ್ಟು, ಬೈಲು (ಮೈದಾನು) ನಾಡಿನ ಎರೆ ಹಾಗೂ ಮಂಸಾರಿ (ಕಪ್ಪು, ಕೆಂಪು), ಕೊಳ್ಳ ಹಾಗೂ ತೊರೆ ತೀರಗಳ ರೇವೆ (ಒಂಡು) ಕನ್ನಡನಾಡಿನ ಮಣ್ಣಿನ ವೈವಿಧ್ಯತೆಯನ್ನು ಎತ್ತಿತೋರಿಸುತ್ತಿವೆ. ಒಂದೊಂದು ತೆರನಾದ ಮಣ್ಣು ಒಂದೊಂದು ತೆರೆನಾದ ಬೆಳೆ ಬೆಳೆಯಲು ಉತ್ಕೃಷ್ಟ. ಜಾಗತಿಕ ಉತ್ಪತ್ತಿ (ಇಳುವರಿ) ಪಡೆಯುವಷ್ಟು ಆಯಾಯ ಬೆಳಗೆ ಹೊಂದಿಕೆಯಾದ ಮಣ್ಣಗಳು ಈ ನಾಡಿನಲ್ಲಿವೆ

ಕರ್ನಾಟಕದಲ್ಲಿ ಬೆಳೆಯದ ಬೆಳೆಗಳಿಲ್ಲವೆಂದು ಹೇಳಿದರೆ ಬಹುಮಟ್ಟಿಗೆ ಆ ಮಾತಿನಲ್ಲಿ ಯಥಾರ್ಥತೆಯಿದೆ. ತೋಟಗಾರಿಕೆಯ ಬೆಳೆಗಳಾದ ತೆಂಗು, ಅಡಿಕೆ, ಏಲಕ್ಕಿ, ಕಾಫೀ, ಕಿತ್ತಳೆ, ನಿಂಬೆ, ಮೊಸಂಬಿ, ಹಲಸು, ಮಾವು, ಚಿಕ್ಕು, ಅನಾನಸ, ಗೋಡಂಬಿ, ಮೆಣಸು, ವೀಳ್ಯದೆಲೆ, ಡಾಳಿಂಬ, ಬಾಳೆ, ದ್ರಾಕ್ಷಿ, ಪೇರಲ, ಅಂಜೂರಿ, ಸೀತಾಫಲಗಳು, ಹೊಲಗದ್ದೆಗಳ ಬೆಳೆಗಳಾದ ಜೋಳ, ರಾಗಿ, ಬತ್ತ, ಮುಸುಕಿನ ಜೋಳ, ಸಜ್ಜೆ, ಗೋದಿ, ಸಾವೆ, ನವಣೆ, ತೊಗರಿ, ಅಲಸಂದಿ ಹೆಸರು, ಉದ್ದು, ಅವರೆ, ಹುರುಳಿ, ಮಡಕೆ, ಕಡಲೆ, ಸೇಂಗಾ, ಕುಸುಬೆ, ಎಳ್ಳು, ಗುರೆಳ್ಳು, ಔಡಲ, ಆಗಸೆ, ಹತ್ತಿ, ಪುಂಡಿ, ತಂಬಾಕು, ಮೆಣಸಿನಕಾಯಿ, ಸಾಸ್ವಿ, ಕೊತ್ತಂಬರಿ, ಜೀರಿಗೆ, ಉಳ್ಳಿಗಡ್ಡಿ, ಬೆಳ್ಳುಳ್ಳಿ, ಕಬ್ಬು, ತೆರತೆರನಾದ ಕಾಯಿಪಲ್ಲೆ, ಗಡ್ಡೆಗೆಣಸು, ಆಲೂಗಡ್ಡೆ, ಹಣ್ಣು ಹಾಗೂ ಹೂ ಬೆಳೆಗಳು ಕರ್ನಾಟಕದಲ್ಲಿ ಬೆಳೆಯುವ, ಬೆಳೆಗಳ ಬಹುದೊಡ್ಡ ಪಟ್ಟಿಯಲ್ಲಿ ಸೇರಿವೆ. ಜೋಳ, ರಾಗಿ, ಬತ್ತ, ಗೋದಿ, ಕಡಲೆ, ಸೇಂಗಾ, ಮೆಣಸಿನಕಾಯಿ, ಹತ್ತಿ, ಕಾಫೀ, ಏಲಕ್ಕಿ, ತೆಂಗು, ಅಡಿಕೆ, ಮಾವು, ಕಿತ್ತಳೆ, ಪೇರಲ ಕರ್ನಾಟಕದ ಹೆಮ್ಮೆಯ ಹಣದ ಬೆಳೆಗಳು.

ಕರ್ನಾಟಕದ ಜಲಸಂಪತ್ತೂ ಶ್ರೇಷ್ಠ ಕೃಷಿಗೆ ನೆರವಾಗಿದೆ. ನೂರರಲ್ಲಿ ಎಂಭತ್ತೈದು ಪಾಲು ಕೃಷಿ, ಮಳೆಯನ್ನೇ ಆಧಾರಿಸಿದೆ. ಹಲವಾರು ಅಣೆಕಟ್ಟು, ಕೆರೆ, ಭಾವಿಗಳಿದ್ದರೂ ಅವುಗಳಿಂದ ಶೇಕಡ ಹದಿನಾಲ್ಕರಷ್ಟು ಮಾತ್ರ ಕ್ಷೇತ್ರಕ್ಕೆ ಸಧ್ಯ ನೀರಿನಾಶ್ರಯವಿದೆ. ಮಳೆ ಕರಾವಳಿಯಿಂದ ಒಳನಾಡಿನ ಕಡೆಗೆ ನಡೆದಂತೆ ಕಡಮೆಯಾಗುತ್ತ ಹೋಗುತ್ತದೆ. ಮಳೆಯ ಪ್ರಮಾಣ 300 ಅಂಗುಲದಿಂದ 15 ಅಂಗುಲಗಳ ತನಕ. 15 ಅಂಗುಲದಷ್ಟು ಕಡಮೆ ಮಳೆ ಹಂಚಿ ಬಿದ್ದಲ್ಲಿ ಉತ್ಕೃಷ್ಟ ಬೆಳೆ ಬರುವ ಮಣ್ಣು, ಹವಾಗುಣ ರಾಜ್ಯದಲ್ಲಿದೆ. ರಾಜ್ಯದ ಮೈದಾನು ಪ್ರದೇಶದಲ್ಲಿನ ಬಹು ಭಾಗದಲ್ಲಿರುವ ಎರೆ ನೆಲವೇ ಇದಕ್ಕೆ ಸಾಕ್ಷಿ. ಈ ಕರಿ ಭೂಮಿಯಿಂದಲೇ ಈ ರಾಜ್ಯಕ್ಕೆ 'ಕರ್ನಾಟಕ' ವೆಂದು ಹೆಸರು ಬಂದಿರಬೇಕೆಂದು ಒಂದು ವಾದ. ಮುತ್ತಿನಂತಹ ಜೋಳ, ಸೆಜ್ಜೆ, ತುಂಬಿಕೊಂಡು ಬೆಳೆಯುವ ಗೋಧಿ, ಕಡಲೆ, ಕುಸುಬೆ, ರೇಶ್ಮೆಯಂತಹ ಹತ್ತಿ ಬೆಳೆಗೆ ಇದು ಮಿಸಲು ಮಣ್ಣು. ಕರ್ನಾಟಕ, ಹತ್ತಿ ಬೆಳೆಗೆ ಹೆಸರಾಗಿದೆ. ನೀರಿನಾಶ್ರಯವಿರುವಲ್ಲಿ ಉದ್ದ ಎಳೆಯ, ಅತ್ಯಧಿಕ ಇಳುವರಿ ನೀಡುವ ಹತ್ತಿ ಇಲ್ಲಿ ಬೆಳೆಯಂಬಲ್ಲದು (ವರಲಕ್ಷ್ಮಿ ರಾಜ್ಯದ ಸಂಪಲ್ಲಕ್ಷ್ಮಿ). ಹತ್ತಿ ಕರ್ನಾಟಕದಲ್ಲಿ ಬಹು ಪುರಾತನ ಕಾಲದಿಂದ ಬೆಳೆಯುತ್ತಿತ್ತು. ಹತ್ತಿಯ ಕತೆ ಅಂತೆಯೇ ನಾಡಿನಷ್ಟೇ ಪ್ರಾಚೀನವಾಗಿದೆ. ಈ ಪ್ರದೇಶದಲ್ಲಿ ಈ ಕಡಮೆ ಪ್ರಮಾಣದಲ್ಲಿ ಬೀಳುವ ಮಳೆ ಕೆಲವರ್ಷ

ಸರಿಯಾಗಿ ಬೀಳದೆ ಹೋಗುವುದುಂಟು. ಆಗ ಬರಗಾಲ ಕೆಲವೆಡೆಗಳಲ್ಲಿ ತಾಂಡವವಾಡುತ್ತದೆ. ಇದನ್ನು ತಪ್ಪಿಸಲು ತುಂಗಭದ್ರಾ, ಮಲಪ್ರಭಾ ಘಟಪ್ರಭಾ, ನೀರಾವರಿ ಯೋಜನೆಗಳು ನಿರ್ಮಾಣವಾಗಿ ಬಹುಮಟ್ಟಿಗೆ ಸಹಾಯಕವಾಗಿವೆ. ಕೃಷ್ಣಾ ಯೋಜನೆಯು ಪೂರ್ತಿಯಾದಾಗ ಈ ಭಾಗಕ್ಕೆ ಬರದ ಭೀತಿಯೇ ಉಳಿಯಲಾರದು. ಕರ್ನಾಟಕ ರಾಜ್ಯ ಆಗ ಭಾರತದ ಆಹಾರದ ಕಣಜವಾಗುವುದು. 25 ರಿಂದ 40 ಅಂಗುಲ ಮಳೆ ತಪ್ಪದೇ ಬೀಳುವ ಗಡಿನಾಡು ರಾಜ್ಯದ ಅತ್ಯಂತ ಸಮೃದ್ಧ ಬೆಳೆ ಪ್ರದೇಶ. ಅಲ್ಲಿ ವರ್ಷದಲ್ಲಿ ಎರಡು ಬೆಳೆ ಯಶಸ್ವಿಯಾಗಿ ಬೆಳೆಯುತ್ತವೆ. ಜೋಳ ಉತ್ತರ ಕರ್ನಾಟಕದ ಪ್ರಾಮುಖ್ಯ ಆಹಾರ ಬೆಳೆಯಾದರೆ, ರಾಗಿ ದಕ್ಷಿಣ ಕರ್ನಾಟಕದ (ಹಳೆಯ ಮೈಸೂರು ಸಂಸ್ಥಾನ ಪ್ರದೇಶ) ಮುಖ್ಯ ಆಹಾರ ಬೆಳೆಯಾಗಿದೆ.

ಕಾಫೀ, ಏಲಕ್ಕಿ, ತೆಂಗು, ಅಡಿಕೆ, ಕಿತ್ತಳೆ, ಗೋಡಂಬಿ ರಾಜ್ಯದ ಹೊರಗಿನ ಬೇಡಿಕೆಯನ್ನು ಪೂರೈಸುವ ಸಾಮರ್ಥ್ಯ ಪಡೆದಿವೆ. ಕೆಲವು ಪರದೇಶಗಳಿಗೆ ರಫ್ತಾಗಿ ವಿದೇಶಿ ವಿನಿಮಯ ಹಣ ಸಂಪಾದಿಸುವ ಪ್ರಾಮುಖ್ಯ ಅಂಶಗಳಾಗಿವೆ.

(ii) ಅರಣ್ಯ ಸಂಪತ್ತು

ಅರಣ್ಯ ಬೇಸಾಯದ ಸಾಕುತಾಯಿ. ಕರ್ನಾಟಕದ ಅರಣ್ಯ ಸಂಪತ್ತು ಕೃಷಿಸಂಪತ್ತಿನಷ್ಟೇ ಪ್ರಧಾನ ಅಂಶವಾಗಿದೆ. ರಾಜ್ಯದ ಒಟ್ಟು ಕ್ಷೇತ್ರದ ಸರಾಸರಿ ಒಂದು ಐದನೆಯ ಅಂಶ ಪ್ರದೇಶದಲ್ಲಿ ಕಾಡಿದೆ (ನಿರ್ದಿಷ್ಟವಾಗಿ 18·4 — 13,598 ಚದರ ಮೈಲಿ ಅಂದರೆ 35,218,82 ಹೆಕ್ಟೇರು). ಇದರ ಬಹುಭಾಗವೆಲ್ಲ ಪಶ್ಚಿಮ ಘಟ್ಟ ಪ್ರದೇಶದಲ್ಲಿದೆ. ತೇಗ, ಶ್ರೀಗಂಧ, ಬೀಟಿ, ನೀಲಗಿರಿ ಮೊದಲಾದ ಹಲವಾರು ಅರಣ್ಯ ವೃಕ್ಷಗಳಲ್ಲದೆ ಕರ್ನಾಟಕ ಅರಣ್ಯ ಪ್ರದೇಶ ಮೃದುಂವೃಕ್ಷ, ಗೋಡಂಬಿ, ರಬ್ಬರ, ಕೊಕೊ, ಲವಂಗ, ದಾಲ್ಚಿನ್ನಿ, ತಾಳೆ, ಕಾಫಿ ಬೆಳೆಗೂ ಪ್ರಖ್ಯಾತವಾಗಿದೆ. ನಾಡಿನ ನದಿಗಳೆಲ್ಲ ಈ ಪ್ರದೇಶದಲ್ಲಿಯೇ ಹುಟ್ಟಿವೆ. ಹಲವಾರು ಬೃಹತ್ ನೀರಾವರಿ ಹಾಗೂ ವಿದ್ಯುತ್‌ಶಕ್ತಿ ಉತ್ಪಾದನೆ ಕೇಂದ್ರಗಳೂ ಅರಣ್ಯ ಪ್ರದೇಶದಲ್ಲಿವೆ. ಕರ್ನಾಟಕದ ಅರಣ್ಯದಲ್ಲಿನ ತೇಗ, ಶ್ರೀಗಂಧ, ಹಾಗೂ ಬೀಟೆ ಅತ್ಯಂತ ಶ್ರೇಷ್ಠದರ್ಜೆಯವೆಂದು ಹೆಸರಾಗಿವೆ. ಇತ್ತೀಚೆಗೆ ಒಂದು ಘನಅಡಿ ಬೀಟಿಗೆ 2050 ರೂ. ಬೆಲೆಯಾಯಿತೆಂಬ ದೃಷ್ಟಾಂತ ನೀಡಿದರೆ ಈ ಮಾತಿನ ಸತ್ಯತೆಯ ಅರಿವಾಗದಿರದು. ಮಳೆಯ ನಿಯಂತ್ರಣ, ಹವಾಮಾನ ನಿಯಂತ್ರಣದಲ್ಲಿ ಪ್ರಮುಖ ಪಾತ್ರವಹಿಸಿ, ಸೌಂದರ್ಯದ ತಾಣವಾಗಿ, ಹಲವಾರು ಕೈಗಾರಿಕೆಗಳಿಗೆ ಆಸ್ಪದಮಾಡಿಕೊಟ್ಟು, ರತ್ನಗರ್ಭೆಯಾದ ಅರಣ್ಯ, ಕರ್ನಾಟಕದ ಬಹುದೊಡ್ಡ ಆಸ್ತಿಯಾಗಿದೆ.

(iii) ಪಶುಸಂಪತ್ತು

ಕರ್ನಾಟಕ ಬೆಳೆ ಬೆಳೆಯಲು ಹಾಗೂ ಅರಣ್ಯ ಸಂಪತ್ತಿಗೆ ಹೆಸರಾಗಿರುವಂತೆ ದನಕರು ಆಕಳು ಎಮ್ಮೆ, ಎತ್ತು, ಕುರಿಗಳಿಗೂ ಪ್ರಸಿದ್ಧಿಪಡೆದಿದೆ. ಅಮೃತಮಹಲ್, ಹಳ್ಳಿಕಾರ್, ಖಿಲಾರಿ ಕೃಷ್ಣಾಕೊಳ್ಳ, ದೇವನಿಗಳು ರಾಜ್ಯದ ಪ್ರಖ್ಯಾತ ಆಕಳ ತಳಿಗಳು. ಅಮೃತಮಹಲ್ ಹೈನಕ್ಕೂ

ಹೊಲಕೆಲಸಗಳಿಗೂ, ದಾರಿನಡೆಯಲಿಕ್ಕೂ ಹೆಸರಾಗಿ ಚರಿತ್ರೆಯಲ್ಲಿ ಒಂದು ದಾಖಲೆಯನ್ನೇ ಸ್ಥಾಪಿಸಿವೆ. ಟಿಪ್ಪುಸುಲ್ತಾನ, ಈ ತಳಿಯ ಎತ್ತುಗಳನ್ನು ಯುದ್ಧೋಪಕರಣ ಸಾಗಿಸಲು ಉಪಯೋಗಿಸುತ್ತಿದ್ದನು. ಇವು ಅತ್ಯಂತ ಸುಂದರ ದನಗಳೆಂದು ಖ್ಯಾತಿಹೊಂದಿವೆ. ಇತ್ತೀಚೆಗೆ ಹೈನಕ್ಕಾಗಿ ಜರ್ಸಿ, ಹೊಲ್‌ಸ್ಟಿನ್—ಫ್ರಿಜಿಯನ್, ರೆಡ್‌ಡೇನ್ ಮಿಶ್ರತಳಿ ದನಗಳೂ ರಾಜ್ಯದಲ್ಲಿ ಜನಪ್ರಿಯಂತೆ ಪಡೆಯುತ್ತನಡೆದಿವೆ. ಧಾರವಾಡ ಇಲ್ಲವೆ ಹೊಳೆಸಾಲು ಎಂಬ ತಳಿಯ ಎಮ್ಮೆಗಳು ರಾಜ್ಯದವು. ಹಾಲಿಗಾಗಿ ಇವು ಪ್ರಸಿದ್ದಿಪಡೆದಿವೆ. ಬನ್ನೂರು, ಹಾಸನ ಹಾಗೂ ಬಳ್ಳಾರಿ ರಾಜ್ಯದ ಮುಖ್ಯ ಕುರಿತಳಿಗಳು. ಮೊದಲನೆಯದು ಉತ್ಕೃಷ್ಟಮಾಂಸದ ತಳಿಯಿಂದೂ ಹೆಸರಾಗಿದೆ.

(iv) ರೇಶ್ಮೆ ವ್ಯವಸಾಯ

ರೇಶ್ಮೆ ವ್ಯವಸಾಯ ಕರ್ನಾಟಕ ರಾಜ್ಯದ ಶ್ರೇಷ್ಠ ಆಕರ್ಷಣೆಯಾಗಿದೆ. ಪ್ರತಿ ಎಕರೆಗೆ ಅತ್ಯಧಿಕ ಆದಾಯ ನೀಡುವ ಕಸಬುಂಗಳಲ್ಲಿ ಇದೊಂದು. ಹಿಂದಿನ ಮೈಸೂರು ಸಂಸ್ಥಾನ ಭಾಗದಲ್ಲಿ ಇದು ಅತ್ಯಂತ ಜನಾಕರ್ಷಕ ದಂಧೆಯಾಗಿದೆ. ಮೈಸೂರು ರೇಶ್ಮೆ ಜಗದ್ವಿಖ್ಯಾತಿ ಪಡೆದಿದೆ. ಇಂದು ರೇಶ್ಮೆಸಾಕಣೆ ಕರ್ನಾಟಕದ ಇತರೆಡೆಗಳಲ್ಲಿಯೂ ಪ್ರಸಾರಣೆಗೊಳ್ಳುತ್ತ ನಡೆದಿದೆ.

(v) ಮೀನು ಸಂಪತ್ತು

ಕರ್ನಾಟಕ ರಾಜ್ಯಕ್ಕೆ 200 ಮೈಲಿಗಳಷ್ಟು ಸುದೀರ್ಘವಾದ ಕಡಲದಂಡೆಯಿರುವುದು ಒಂದು ಭಾಗ್ಯ. ಸೌಂದರ್ಯ ಹಾಗೂ ಜಲಪರ್ಯಟನೆಗಳಿಗೆ ಆಸ್ಪದಮಾಡಿಕೊಟ್ಟಿರುವ ಕಡಲು ಅಧಿಕ ಆಹಾರ ನೀಡುವ ಅನ್ನಪೂರ್ಣೆಯೂ ಆಗಿದೆ. ಕರಾವಳಿಯ 10,000 ಚದರ ಮೈಲು ಸಮುದ್ರದಲ್ಲಿ ಮೀನು ಹಿಡಿಯಬಹುದಾಗಿದೆ. ಇಲ್ಲಿ ಮ್ಯಾಕರೇಲ್ ಮೀನು ಅಧಿಕ ಸಂಖ್ಯೆಯಲ್ಲಿ ಸಿಗುತ್ತಿರುವುದರಿಂದ ಇದು ಮ್ಯಾಕರೇಲ್ ಕರಾವಳಿಯೆಂದೇ ಪ್ರಸಿದ್ಧಿ ಪಡೆದಿವೆ. ಸಾರ್ಡಿನ ಮೀನುಗಳು ಕರ್ನಾಟಕ ರಾಜ್ಯದ ಪ್ರಸಿದ್ಧಿ ಪಡೆದ ಮೀನುಗಳು. ಕೃಷಿಯ ಇತರ ಅಂಶಗಳಂತೆ ಕಡಲ ಮೀನುಂಗಾರಿಕೆಯಲ್ಲಿ ಉತ್ಪಾದನೆಯಂ ತೊಂದರೆಯಿಲ್ಲ. ಸುಗ್ಗಿ ಮಾಡುವುದೇ ಮುಂದಿರುವ ಕಾರ್ಯ. ಈ ಕಾರ್ಯ ಕರ್ನಾಟಕ ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಗಮನಾರ್ಹ ರೀತಿಯಲ್ಲಿ ಪ್ರಗತಿ ಹೊಂದುತ್ತ ನಡೆದಿದೆ. ಮೀನು ಹಿಡಿಯುವ ಕಾರ್ಯವನ್ನು ಸುಧಾರಿಸಿ ವಿಸ್ತೃತಗೊಳಿಸಲಾಗಿದೆ. ಡೋಣಿಗಳಿಗೆ ಯಾಂತ್ರಿಕ ಶಕ್ತಿ ಬಳಸಲಾಗುತ್ತದೆ. ಶೇಖರಣೆ, ಸಂಸ್ಕರಣೆ. ಹಂಚಿಕೆ ಹಾಗೂ ಮಾರಾಟ ವ್ಯವಸ್ಥೆಗಳೂ ಬಲಗೊಂಡಿವೆ. ಸುಧಾರಿತ ಮೀನು ಹಿಡಿಯುವ ಹಡಗು ಕಟ್ಟಲು, ಹಡಗು ರಚನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಬೆಸ್ತರಿಗೆ ಹೊಸ ಸಲಕರಣೆ ಹಾಗೂ ಹೊಸ ಪದ್ಧತಿಗಳ ಬಗ್ಗೆ ತರಬೇತಿ ಕೊಡುವ ವ್ಯವಸ್ಥೆ ಮಾಡಲಾಗಿದೆ. ಕರ್ನಾಟಕದಲ್ಲಿ ಹಲವಾರು ಒಳನಾಡಿನ ಜಲಾಶಯಗಳಿವೆ. ಅಲ್ಲಿ ಅತಿಬೇಗ ಬೆಳೆಗೆ ಹೊಂದುವ ಕಟ್ಲಾ, ರೋಹು, ಮೃಗಾಲ್ ಹಾಗೂ ಕನ್ನಡಿ ಮೀನು ಬೆಳೆಯಿಸುವ ಕಾರ್ಯ ನಡೆಯಿದೆ.

ಕರ್ನಾಟಕದ ಮಳೆ ಮತ್ತು ಮಣ್ಣು

ಬಿ. ವಿ. ವೆಂಕಟರಾವ್
ಸಂಪಾದಕ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.

ಕರ್ನಾಟಕದ ಸಂಪದ್ಭರಿತ ಕೃಷಿಗೆ ಇಲ್ಲಿನ ಮಣ್ಣು ಹಾಗೂ ಮಳೆಗಳೇ ಮುಖ್ಯ ಕಾರಣ.

ಮಳೆ :—ಕರ್ನಾಟಕದ ರಾಜ್ಯ ಹಿಂಗಾರು ಮತ್ತು ಮುಂಗಾರು, ಎರಡೂ ಮಳೆಗಳನ್ನು ಪಡೆಯುವ ಭಾಗ್ಯ ಪಡೆದಿದೆ.

ಪಶ್ಚಿಮ ತೀರಪ್ರದೇಶದಲ್ಲಿ, ವರ್ಷಕ್ಕೆ 150 ರಿಂದ 200 ಅಂಗುಲ ಮಳೆ ಬೀಳುತ್ತದೆ. ಪಶ್ಚಿಮ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಮಳೆ ಪ್ರಮಾಣ 60 ರಿಂದ 150 ಅಂಗುಲ; ಆಗುಂಬೆಯಂಥ ಕೆಲವು ಜಾಗಗಳಲ್ಲಿ ಸುರಿಯುವ ಮಳೆ 350 ಅಂಗುಲಕ್ಕೂ ಹೆಚ್ಚು. ಪರ್ವತ ಶ್ರೇಣಿಗಳ ಪೂರ್ವ ಇಳಿಜಾರಿನಲ್ಲಿ ಉತ್ತರದಿಂದ ದಕ್ಷಿಣಕ್ಕೆ ಉದ್ದಕ್ಕೂ ಇರುವ ಕಿರಿದಾದ ಆರೆಮಲೆನಾಡು ಪ್ರದೇಶದಲ್ಲಿನ ಮಳೆ ಪ್ರಮಾಣ 35 ರಿಂದ 60 ಅಂಗುಲ. ರಾಜ್ಯದ ಉತ್ತರ ಭಾಗದ ವಿಜಾಪುರ, ಕಲ್ಬುರ್ಗಿ, ರಾಯಚೂರು, ಬಳ್ಳಾರಿ ಜಿಲ್ಲೆಗಳು, ಚಿತ್ರದುರ್ಗ ಜಿಲ್ಲೆಯ ಈಶಾನ್ಯ ಭಾಗ, ಧಾರವಾಡ, ಬೆಳಗಾವಿ, ಜಿಲ್ಲೆಗಳ ಪೂರ್ವಾರ್ಧಗಳಲ್ಲಿ ಮಳೆ 20-25 ಅಂಗುಲಗಳಿಗೂ ಕಡಿಮೆ. ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಪೂರ್ವಭಾಗ, ತುಮಕೂರು ಜಿಲ್ಲೆಯ ಪಶ್ಚಿಮ ಭಾಗ, ಚಿತ್ರದುರ್ಗ ಜಿಲ್ಲೆಯ ದಕ್ಷಿಣ ಭಾಗ, ಮಂಡ್ಯ ಜಿಲ್ಲೆಯ ಬಹುಭಾಗ, ಕೋಲಾರ ಜಿಲ್ಲೆಯ ಪೂರ್ವಭಾಗಗಳಲ್ಲಿ ಮಳೆ 20-25 ಅಂಗುಲ ಮಳೆ ಬೀಳುತ್ತದೆ. ಅನೇಕ ಕಡೆ 15-20 ಅಂಗುಲ ಸಹ ಸಾಮಾನ್ಯ. ತುಮಕೂರು ಜಿಲ್ಲೆಯ ಈಶಾನ್ಯ ಭಾಗ, ಕೋಲಾರ ಜಿಲ್ಲೆಯ ಪಶ್ಚಿಮ ಭಾಗ. ಬೆಂಗಳೂರು ಜಿಲ್ಲೆ ಮೈಸೂರು ಜಿಲ್ಲೆಗಳಲ್ಲಿ 25-35 ಅಂಗುಲ ಮಳೆ ಬೀಳುತ್ತದೆ.

ರಾಜ್ಯದ ವಿಸ್ತೀರ್ಣದ ಶೇಕಡಾ 12ರಷ್ಟಿರುವ ಆರೆ ಮಲೆನಾಡಿನ ಪ್ರದೇಶದಲ್ಲಿ ಮಾತ್ರ ಮಳೆಯನ್ನೇ ಅವಲಂಬಿಸಿ ಯಶಸ್ವಿ ಬೇಸಾಯ ಸಾಧ್ಯ. ತೀರ ಪ್ರದೇಶ, ಕರಾವಳಿ ಮತ್ತು ಮಲೆನಾಡಿನಲ್ಲಿ ಅತಿವೃಷ್ಟಿ, ಉಳಿದ 70 ಭಾಗದಲ್ಲಿ ಅನಾವೃಷ್ಟಿ ಇದು ಸಾಮಾನ್ಯ ಅನುಭವ. ತತ್ಫಲವಾಗಿ ಈ ಪ್ರದೇಶಗಳಲ್ಲಿ 4—5 ವರ್ಷಗಳಿಗೊಮ್ಮೆ ಕ್ಷಾಮ ತಪ್ಪಿದ್ದಲ್ಲ. ರಾಜ್ಯದಲ್ಲಿ ಬೀಳುವ ಮಳೆಯ ಶೇಕಡಾ 70ಕ್ಕೂ ಹೆಚ್ಚು ಭಾಗ ಸುಮಾರು ಶೇಕಡಾ 17 ರಷ್ಟು ವಿಸ್ತೀರ್ಣದ ತೀರ ಪ್ರದೇಶ, ಪಶ್ಚಿಮ ಘಟ್ಟ ಮತ್ತು ಮಲೆನಾಡು ಭಾಗಗಳಲ್ಲಿ ಬೀಳುತ್ತದೆ.

ಹೀಗೆ ಬಿದ್ದು, ಹರಿದು ಹೋಗುವ ಮಳೆ ನೀರಿನ ಪ್ರಮಾಣ 1600 ಸಾವಿರ ಮಿಲಿಯನ್ ಘನ ಅಡಿ ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಕೆಲವು ಭಾಗ ಪೂರ್ವಾಭಿಮುಖವಾಗಿ ಹರಿಯುವ ಕಾವೇರಿ ಹಾಗೂ ಅದರ ಉಪನದಿಗಳು ಮತ್ತು ಕೃಷ್ಣಾ ಹಾಗೂ ಅದರ ಉಪನದಿಗಳ ಮೂಲಕ ಹರಿದಂಬರುತ್ತದೆ. ಉಳಿದೆಲ್ಲಾ ನೀರು ಅರಬ್ಬಿ ಸಮುದ್ರಕ್ಕೆ ಕೊಚ್ಚಿಹೋಗುತ್ತದೆ. ಇದರಿಂದ ತೀರ ಪ್ರದೇಶಗಳಲ್ಲಿ ಪ್ರವಾಹದ ಹಾವಳಿ ಸರ್ವೇ ಸಾಮಾನ್ಯ.

ರಾಜ್ಯದಲ್ಲಿನ ಹಲವಾರು ನೀರಾವರಿ ಯೋಜನೆಗಳಿಂದ ಇಂದು 14 ಲಕ್ಷ ಹೆಕ್ಟರು ಜಮೀನಿಗೆ ನೀರಾವರಿ ಸೌಲಭ್ಯ ದೊರೆತಿದೆ. ಇದು ಒಟ್ಟು ಸಾಗುವಳಿ ಕ್ಷೇತ್ರದ ಒಂದು ಎಂಟನೆಯ ಭಾಗ. ಮಿಕ್ಕ ಭಾಗಕ್ಕೆಲ್ಲ ಮಳೆಯೇ ಗತಿ.

ಮಣ್ಣು :—ರಾಜ್ಯದ ಮಣ್ಣುಗಳನ್ನು ಮುಖ್ಯವಾಗಿ ಕಪ್ಪುಮಣ್ಣು, ಕೆಂಪು ಮಣ್ಣು ಮತ್ತು ಜೆಂಬಿಟ್ಟಿಗೆ ಮಣ್ಣು ಎಂದು ವರ್ಗೀಕರಿಸಬಹುದು. ಕಪ್ಪು ಅಥವಾ ಎರೇ ಮಣ್ಣು ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಗುಲ್ಬರ್ಗ, ಬೀದರ, ಬೆಳಗಾಂ, ಬಿಜಾಪುರ, ಧಾರವಾಡ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಇರುವುದು ಕಂಡುಬರುತ್ತದೆ. ಈ ಮಣ್ಣುಗಳಲ್ಲಿ ಸುಣ್ಣದ ಅಂಶ ಹೆಚ್ಚು. ರಸಸಾರಸ್ಥಿತಿ, ಕ್ಷಾರಗತಿ, ಜೇಡಿ ಅಂಶ ಹೆಚ್ಚು, ಹಾಗೆಯೇ ಮಣ್ಣಿನ ಆಳವೂ ಕೂಡ. ಅಲ್ಲದೆ ನೀರು ಉಳಿಸಿಕೊಳ್ಳುವ ಸಾಮರ್ಥ್ಯವೂ ಸಹ ಹೆಚ್ಚು. ಬಿದ್ದ ಸ್ವಲ್ಪ ಮಳೆ ಅಂದರೆ 10-20 ಅಂಗುಲಗಳ ಆಧಾರದ ಮೇಲೆಯೇ ಉತ್ತಮ ಬೆಳೆ ತೆಗೆಯಬಹುದು. ಎರೆಯನ್ನು 'ನಂಬು-ದೊರೆಯನ್ನು ನಂಬು' ಎನ್ನುವ ಗಾದೆಗೆ ಅನುಗುಣವಾಗಿ ಕಪ್ಪುಬಣ್ಣವಿರುವ ಮಣ್ಣು ಉತ್ಕೃಷ್ಟವಾದ ಫಲವತ್ತಾದ ಮಣ್ಣು. ಜೋಳ, ಹತ್ತಿ, ಶೇಂಗಾ ಮತ್ತಿತರ ಅನೇಕ ಬೆಳೆಗಳು ಈ ಭಾಗದ ಬೇಸಾಯದ ವೈಶಿಷ್ಟ್ಯ.

ಕೆಂಪು ಮಣ್ಣುಗಳ ಗುಂಪಿನಲ್ಲಿ, ಕೆಂಪುಗೋಡು, ಕೆಂಪು ಮರಳುಮಣ್ಣು, ತೀರ ಪ್ರದೇಶದಲ್ಲಿರುವ ಮರಳು, ಮಿಕ್ಕಲುಮಣ್ಣುಗಳನ್ನು ಸೇರಿಸಬಹುದು. ರಾಜ್ಯದ ಮಣ್ಣುಗಳಲ್ಲಿ ಇವೇ ಪ್ರಧಾನವಾದ ಗುಂಪು. ಬೆಂಗಳೂರು, ಕೋಲಾರ, ತುಮಕೂರು, ಮಂಡ್ಯ, ಮೈಸೂರು, ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಧಾರವಾಡ, ಬೆಳಗಾಂ, ಕಲ್ಬುರ್ಗಿ, ಬೀದರ ಜಿಲ್ಲೆಗಳಲ್ಲಿ ವ್ಯಾಪಕವಾಗಿದೆ. ಹಾಗೆಯೇ ಧಾರವಾಡ, ರಾಯಚೂರು, ಬಳ್ಳಾರಿ ಜಿಲ್ಲೆಗಳಲ್ಲಿ ಕೆಂಪು ಮತ್ತು ಕಪ್ಪು ಮಣ್ಣುಗಳು ಅಕ್ಕಪಕ್ಕದಲ್ಲಿ ವಿಶಾಲ ಭಾಗಗಳಲ್ಲಿ ಅಸ್ತಿತ್ವದಲ್ಲಿರುವುದು ಸಾಮಾನ್ಯ. ಕೆಂಪು ಭೂಮಿಗಳಲ್ಲಿ ಜೇಡಿ ಅಂಶ ಕಡಿಮೆ; ಮರಳು ಹೆಚ್ಚು ಮತ್ತು ಇವುಗಳಲ್ಲಿ ಸುಣ್ಣ ಇರುವುದು ಅಪರೂಪ. ಈ ಮಣ್ಣುಗಳು ಸಮೃದ್ಧಾತು ಇಲ್ಲವೇ ಹಂಳಿಮುಖವಾಗಿವೆ. ನೀರು ಉಳಿಸಿಕೊಳ್ಳುವ ಶಕ್ತಿ ತೀರ ಕನಿಷ್ಟ, ಈ ಕಾರಣದಿಂದ ಬೆಳೆಕಾಲದಲ್ಲಿ ಕ್ಷಿಪ್ರ ಅಂತರದಲ್ಲಿ ಮಳೆ ಬೀಳದಿದ್ದರೆ, ಪೈರು ನೀರಿನ ಕೊರತೆಯಿಂದ ಹಾನಿ ಹೊಂದುತ್ತದೆ. ಈ ಮಣ್ಣುಗಳಲ್ಲಿ ಹೆಚ್ಚಿನ ಮಟ್ಟದ ಲಾಗೋಡು ಹಾಕಿ, ಗೊಬ್ಬರ ಮತ್ತು

ನೀರಿನ ಆಸರೆ ಒದಗಿಸದಿದ್ದರೆ ಬೇಸಾಯ ಹಸನಾಗುವುದಿಲ್ಲ. ಸಾಮಾನ್ಯವಾಗಿ ಕೆಂಪುಮಣ್ಣು ಪ್ರದೇಶದಲ್ಲಿ ಹವಾಗುಣ ಹಿತಕರವಾಗಿರುವುದರಿಂದ ನೀರಾವರಿಯಿಂದ ಯಾವ ಬೆಳೆಯನ್ನು ಬೇಕಾದರೂ ತೆಗೆಯುವುದು ಸಾಧ್ಯ. ಜೆಂಬಿಟ್ಟಿಗೆ ಮಣ್ಣುಗಳು ಹೆಚ್ಚು ಮಳೆ ಬೀಳುವ ಕರಾವಳಿ ಮತ್ತು ಪಶ್ಚಿಮ ಘಟ್ಟ ಮತ್ತು ತೀರಪ್ರದೇಶಗಳಲ್ಲಿ ಇರುವುದು ಕಂಡುಬರುತ್ತದೆ. ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜೆಂಬಿಟ್ಟಿಗೆ ಮಣ್ಣು ಹೆಚ್ಚಾಗಿದೆ. ಇಲ್ಲಿ ಮಳೆ 100 ರಿಂದ 300 ಅಂಗುಲಗಳಷ್ಟಿರುವುದರಿಂದ ಮುಖ್ಯವಾಗಿ ಮಳೆಯೇ ಆಧಾರ. ಇವು ತುಂಬಾ ತೆರದ ರಚನೆಯುಳ್ಳದ್ದಾಗಿದ್ದು, ಬಿದ್ದ ಮಳೆನೀರು ಶೀಘ್ರವಾಗಿ ಬಸಿದು ಹೋಗುತ್ತದೆ. ಬೇಸಿಗೆಯಲ್ಲಿ ಈ ಪ್ರದೇಶಗಳಲ್ಲಿ ಕುಡಿಯುವ ನೀರಿಗೂ ಸಹ ಅಭಾವ ಉಂಟಾಗುತ್ತದೆ. ತೀರ ಪ್ರದೇಶದಲ್ಲಿ ತೆಂಗು, ಅಡಿಕೆ ಮತ್ತು ಮಳೆಗಾಲದ ಭತ್ತ ಸಾಮಾನ್ಯ ಬೆಳೆಗಳು. ಮಲೆನಾಡಿನಲ್ಲಿ ಕಾಫಿ, ಏಲಕ್ಕಿ, ಅಡಿಕೆ ತೋಟಗಳು ವ್ಯಾಪಕವಾಗಿ ಕೃಷಿಯಲ್ಲಿವೆ. ಹೆಚ್ಚು ವಿಸ್ತೀರ್ಣದಲ್ಲಿ ಮಳೆಯ ಆಸರೆಯಲ್ಲಿ ಭತ್ತ ಬೆಳೆಯುತ್ತಾರೆ. ಸಮೃದ್ಧವಾದ, ಸ್ವಾಭಾವಿಕವಾದ ಕಾಡು ಈ ಪ್ರದೇಶದ ಅತಿ ಮುಖ್ಯ ಸಂಪತ್ತು.

ನಮ್ಮ ರಾಜ್ಯದ ಕೃಷಿಯಲ್ಲಿ ನೀರಿನ ಕೊರತೆ ಒಂದು ಪ್ರಧಾನ ಸಮಸ್ಯೆ. ಹೆಚ್ಚು ನೀರು ಒದಗಿಸಿಕೊಳ್ಳುವ ದಿಕ್ಕಿನಲ್ಲಿ ಭಗೀರಥ ಪ್ರಯತ್ನ ಅತ್ಯಾವಶ್ಯಕ. ಮಳೆ ವಿಷಯದಲ್ಲಿ, ಪ್ರಕೃತಿ ನಮಗೆ ತುಂಬಾ ಅನುಕೂಲವಾಗಿದೆ. ಮಳೆಯಿಂದ ಬೀಳುವ ಅಪಾರ ನೀರಿನ ಸಂಪತ್ತು ನಮ್ಮದಾಗಿದೆ. ಆದು ಮಲೆನಾಡು, ಕರಾವಳಿ ಪ್ರದೇಶಗಳಲ್ಲಿ ಧಾರಾಕಾರವಾಗಿ ಮಳೆ ಸುರಿದು ಅರಬ್ಬಿ ಸಮುದ್ರಕ್ಕೆ ಕೊಚ್ಚಿ ಹೋಗುತ್ತಿದೆ. ಈ ನೀರಿನ ಮೊತ್ತ ಸುಮಾರು 1600 ಸಾವಿರ ಮಿಲಿಯನ್ ಘನ ಅಡಿಗಳಷ್ಟಿರುತ್ತದೆ. ನದಿ ನೀರುಗಳಂತೆ, ಈ ನೀರಿಗೆ ನೆರೆ ರಾಜ್ಯಗಳೊಡನೆ ವಿವಾದಕ್ಕೆ ಎಡೆಯಿಲ್ಲ. ಈ ಪರ್ವತದ ಶ್ರೇಣಿಗಳಲ್ಲಿ, ಆಯಕಟ್ಟು ಸ್ಥಳಗಳಲ್ಲಿ, ಪಶ್ಚಿಮಕ್ಕೆ ಕೊಚ್ಚಿ ಹರಿದು ಹೋಗುವ ನೀರನ್ನು ತಡೆದು ಶೇಖರಿಸಿ ಪೂರ್ವಕ್ಕೆ ಸೈಫನ್ ವಿಧಾನದಿಂದ ಇಲ್ಲವೆ ಸುರಂಗಗಳ ನಿರ್ಮಾಣದಿಂದ ತಿರುಗಿಸಿದ್ದೇ ಆದರೆ, ಹಾಸನ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಮಳೆಯ ಅಭಾವದಿಂದ ಸೊರಗುತ್ತಿರುವ 40-50 ಲಕ್ಷ ಎಕರೆ ಪ್ರದೇಶದ ಬೇಸಾಯಕ್ಕೆ ನೆಮ್ಮದಿಯನ್ನು ತರುವುದು ಸಾಧ್ಯವಾದೀತು. ಈ ಸಲಹೆ ಹೊರನೋಟಕ್ಕೆ ಹುಚ್ಚು ಎಂದು ಕಾಣಿಸುವುದು ಸಹಜವಾದರೂ ಪ್ರಪಂಚದ ಇತರ ಭಾಗಗಳಲ್ಲಿ. ಅದರಲ್ಲೂ ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ, ಕೊಲರೇಡೋ ನದಿ ನೀರನ್ನು 500 ಮೈಲಿ ದೂರ, ಒಂದೆರಡು ಕಡೆ 100 ಅಡಿ ಎತ್ತರಕ್ಕೆ ಪಂಪುಮಾಡಿ, ಇಂಪೀರಿಯಲ್ ಕಣಿವೆಗೆ ಒದಗಿಸಿದ್ದಾರೆ. ಇದರಿಂದಾಗಿ ಹಿಂದೆ ಮರುಭೂಮಿಯಾಗಿದ್ದ ಈ ಕಣಿವೆ ಪ್ರಸ್ತುತ ನಂದನವನವಾಗಿದೆ. ನಾವು ಈ ಯೋಜನೆಯ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸುವುದು ಅಗತ್ಯ. ಈ ತಕ್ಷಣ ಅಲ್ಲದಿದ್ದರೂ, ಇನ್ನೂ 10-20 ವರ್ಷಗಳನಂತರ ಈ ಕನಸು ನನಸಾಗಿ, ರಾಜ್ಯದಲ್ಲಿ ಸುಭಿಕ್ಷತೆಗೆ ನಾಂದಿಯಾದೀತು.

ಕರ್ನಾಟಕದ ಆಡಳಿತಭಾಷೆ

(ಕೆಲವು ಅಭಿಪ್ರಾಯಗಳು)

'.. ೫ನೇ ಶತಮಾನದಿಂದ ೧೬ನೇ ಶತಮಾನದವರೆಗೆ ಕನ್ನಡ ನಾಡಿನಲ್ಲಿ ಶಾತವಾಹನರು, ರಾಷ್ಟ್ರಕೂಟರು, ಗಂಗರು, ಹೊಯ್ಸಳರು ಮುಂತಾದ ಬೇರೆಬೇರೆ ಅರಸು ಮನೆತನಗಳವರು ರಾಜ್ಯವಾಳುತ್ತ ಬಂದಿದ್ದರೂ, ಆಡಳಿತಭಾಷೆ ಕನ್ನಡವೇ ಆಗಿತ್ತು ಎಂಬುದು ಸ್ಪಷ್ಟವಾಗಿದೆ. ಇದು ಸಾಹಿತ್ಯದ ಭಾಷೆಗಿಂತ ಭಿನ್ನವಾದುದು.'

ಡಾ॥ ಬಾ. ರಾ. ಗೋಪಾಲ್

'....ವಿಜಯನಗರ ಸಾಮ್ರಾಜ್ಯ ವಿಸ್ತಾರಗೊಂಡು ತೆಲುಗು ತಮಿಳು ಭಾಷಾ ಪ್ರದೇಶಗಳನ್ನು ಒಳಗೊಂಡದ್ದರಿಂದ ಆಯಾ ಪ್ರದೇಶಗಳ ಪ್ರಜಾ ಭಾಷೆಯನ್ನೇ ಅಲ್ಲಲ್ಲಿ ಬಳಸುವ ಸತ್ಸಂಪ್ರದಾಯವನ್ನೇ ಅವರು ಅನುಸರಿಸಿದರು. ಆದರೆ ಕನ್ನಡ ಪ್ರದೇಶದಲ್ಲಿ ಕನ್ನಡವೇ ಸಂಪೂರ್ಣವಾಗಿ ಆಡಳಿತಭಾಷೆಯಾಗಿತ್ತು..... ಕಡೆಕಡೆಯು ವಿಜಯನಗರದ ಅರಸರು ತೆಲುಗು ಮನೆತನದವರಾದರೂ 'ಕನ್ನಡ ರಾಜ್ಯರಮಾರಮಣ' ರೆಂಬ ಪರಂಪರಾಗತ ಬಿರುದಿನ ಮರ್ಯಾದೆಯನ್ನು ಕಾಯ್ದುಕೊಂಡು ಬಂದರು.' ದೊರೆಗಳ ಸಹಿಮಾತ್ರ ಯಾವಾಗಲೂ ಕನ್ನಡದಲ್ಲೇ ಇರುತ್ತಿತ್ತು.'

ಡಾ॥ ಸೂರ್ಯನಾಥ ಕಾಮತ್

'ಹೈದರಾಲಿ ಕನ್ನಡದ ಅಭಿಮಾನಿಯಾದುದರಿಂದ ಕನ್ನಡ ಭಾಷೆಯನ್ನು ಉಳಿಸಿಕೊಂಡು ಒಡೆಯರು ಹಾಕಿಕೊಟ್ಟ ಚೌಕಟ್ಟಿನೊಳಗೆ ರಾಜ್ಯಭಾರ ನಿರ್ವಹಿಸಿದನು; ಟಿಪ್ಪು ಕನ್ನಡ ಭಾಷೆಯ ಬಗ್ಗೆ ತನ್ನ ತಂದೆಯ ನೀತಿಯನ್ನೇ ಅನುಸರಿಸಿದನು. ಸರಕಾರದ ಆಡಳಿತ ವಿಭಾಗದಲ್ಲಿ ಕನ್ನಡಿಗರೇ ಅಧಿಕಾರಿಗಳಾಗಿ ಇರುತ್ತಿದ್ದರು. ಈ ಕಾರಣಗಳಿಂದ ಅವರ ಕಾಲದಲ್ಲಿ ಕನ್ನಡ ಆಡಳಿತ ಭಾಷೆಯಾಗಿ, ಅಧಿಕೃತ ಭಾಷೆಯಾಗಿ, ರಾಜ್ಯದ ಪ್ರಥಮ ಭಾಷೆಯಾಗಿ ಮೆರೆಯಿತು.'

—ಡಾ॥ ಬಿ. ಮುದ್ದಾಚಾರ್

'ಕರ್ನಾಟಕದ ರತ್ನ ಸಿಂಹಾಸನಾಧೀಶ್ವರರೆಂದು ಪ್ರಸಿದ್ಧರಾದ ಮೈಸೂರು ಸಂಸ್ಥಾನದ ಒಡೆಯರು ವಿಜಯನಗರ ಸಾಮ್ರಾಜ್ಯ ಸಂಪ್ರದಾಯವನ್ನೇ ..... ನಡೆಸಿಕೊಂಡು ಬಂದರು. ದೇಶದಲ್ಲೆಲ್ಲಾ ಆಂಗ್ಲ ಪ್ರಭುತ್ವ ಬಂದಮೇಲೆ, ಗ್ರಾಮಾಡಳಿತದಲ್ಲಿ ಕೂಡ ಇಂಗ್ಲಿಷು ಇಳಿದಿರುವುದು.'

—ಡಾ॥ ಎಚ್. ಎ. ಶ್ರೀನಿವಾಸ ಮೂರ್ತಿ.

ಆಡಳಿತ ಭಾಷೆಯ ಸಮಸ್ಯೆಗಳು

' ಯಾವ ಮಾರ್ಗಗಳಿಂದ ಇಂಗ್ಲಿಷು ನಮ್ಮ ಜನಜೀವನದ ಮೇಲೆ ಪ್ರಭುತ್ವ ಮಾಡತೊಡಗಿತೊ ಆ ಮಾರ್ಗಗಳಲ್ಲಿಯೇ ಅದರ ನಿರ್ಗಮನವಾಗಬೇಕು. ಎಂದರೆ— (೧) ನಮ್ಮ ನಿತ್ಯ ವ್ಯವಹಾರಗಳಲ್ಲಿ ಕನ್ನಡಕ್ಕೆ ಅಗ್ರಸ್ಥಾನ. (೨) ವಿದ್ಯಾಭ್ಯಾಸದ ಮೊದಲ ಹಂತದಿಂದ—ಸ್ನಾನಕೋತ್ತರ ಹಂತದವರೆಗೆ ವಿದ್ಯಾಭ್ಯಾಸ ಕನ್ನಡದ ಮೂಲಕವಾಗಿಯೇ ! (೩) ಸರ್ಕಾರದ ಆಡಳಿತಭಾಷೆ ಮಂತ್ರಿಮಂಡಲ ವ್ಯವಹಾರಮಟ್ಟದವರೆಗೆ ಕನ್ನಡ.

ಆವಶ್ಯಕತೆ, ಔಚಿತ್ಯಗಳನ್ನು ಮರೆಯದೆ ಎಲ್ಲಿಂದಲೂ ಪದಸಂಗ್ರಹ ಮಾಡಲು ಹಿಂಜರಿಯಬಾರದು. ನಮ್ಮ ಪ್ರತ್ಯಯದ ಮುದ್ರೆಯೊತ್ತಿದ ಶಬ್ದಗಳೆಲ್ಲ ನಮ್ಮವೇ ! ಆವಶ್ಯಕತೆ ಔಚಿತ್ಯಗಳಿಗೆ ತಕ್ಕಂತೆ ಶಬ್ದಗಳನ್ನಾಯ್ದು ಜೋಡಿಸಿಕೊಳ್ಳುವ ಸ್ವಾತಂತ್ರ್ಯದಲ್ಲಿ ಕುಮಾರವ್ಯಾಸ ನಮಗೆ ಗುರುವಾಗಿದ್ದಾನೆ. ಬೇರೆ ಭಾಷೆಗಳು ಬೇಕು.— ನಮ್ಮ ಮೇಲೆ ಕೈ ನಡೆಸುವುದಕ್ಕಲ್ಲ ; ನಮ್ಮ ಬಲವನ್ನು ಹೆಚ್ಚಿಸುವುದಕ್ಕೆ.

—ವಿ. ಸೀತಾರಾಮಯ್ಯ.

ಸಂಸತ್ತಿನ ನಿರ್ಣಯ

ಸಂಸತ್ತಿನ ಕೆಳಮನೆ ಮೇಲ್ಮನೆಗಳಲ್ಲಿ " ಕರ್ನಾಟಕ " ದ ಚರ್ಚೆ ಇದೇ ಜುಲೈ ೨೭–೭–೭೩ ಹಾಗು ೮–೮–೭೩ ರಂದು ನಡೆದು ಕರ್ನಾಟಕ ನಾಮಕರಣ ೧-೧-೭೩ ರಂದು ಕೊನೆಯದಾಗಿ ಸ್ವೀಕೃತವಾಯಿತು. ಆ ಪ್ರಸ್ತಾಪವನ್ನು ಮಾನ್ಯ ಕೇ. ಸಿ. ಪಂತರು ಸಾಕ್ಷಾತ್ ಕನ್ನಡತ್ವದ ಅವತಾರವೇನೋ ಎಂಬಂತೆ ಮಂಡಿಸಿದರು, ಪ್ರತಿಪಾದಿಸಿದರು. ಇಡೀ ದೇಶವೇ ಹೌದೆನ್ನುವ ರೀತಿಯಲ್ಲಿ ಅದನ್ನು ತೇರ್ಗಡೆಗೊಳಿಸಿದರು. ಅವರ ಆ ಧುರೀಣತ್ವಕ್ಕೆ ಕನ್ನಡಿಗರು ಶ್ರೀ ದೇವರಾಜ ಅರಸರಿಗೆಷ್ಟೊ ಅಷ್ಟೇ ಋಣಿಯಾಗಿರಬೇಕಾಗಿದೆ. ನಮ್ಮ ನಾಡಿನ ಜನತೆ ತೋರಿದ ೧೬ ವರ್ಷದ ತಾಳ್ಮೆ, ಹೊಂದಾಣಿಕೆಯ ಧೋರಣೆಯನ್ನು ಅವರು ವಿಂಕ್ಷವರಿಗೆ ಮಾದರಿಯೆಂಬಂತೆ ಹೊಗಳಿ, ' ಕರ್ನಾಟಕ ' ರಾಷ್ಟ್ರೀಯ ಭಾವೈಕ್ಯತೆಗೆ ಹಿರಿ-ಸಾಧನವೂ. ಮಾದರಿ ರಾಜ್ಯದ ಪ್ರತೀಕವೂ ಆಗಿ ಚಿರಾಯುವಾಗಲಿ ಎಂದು ಹರಿಸಿದ್ದಾರೆ. ಅವರಿಗೂ, ಅವರಿಗೆ ಸಾಮರ್ಥ್ಯ ಪೂರ್ಣ ಬೆಂಬಲವಿತ್ತ ಕರ್ನಾಟಕ ಹದಿನೇಳೂ ಸಂಸತ್ ಸದಸ್ಯರಿಗೂ ನಮ್ಮ ಅನಂತಾನಂತ ಧನ್ಯವಾದಗಳು.

ವಿಜಯನಗರದ ವೀರಶ್ರೀಯನ್ನು ಮೆರೆಸುವಾ

ಹುಚ್ಚೇಶ್ವರ ಮೇದಿ.

1936ರಲ್ಲಿ ವಿಜಯನಗರದ ಷಟ್ ಸಾಂವತ್ಸರಿಕೋತ್ಸವ ದಿ॥ ಜಗದ್ಗುರು ಡಾ॥ ಶಂಕರಾಚಾರ್ಯರ ಅಧ್ಯಕ್ಷತೆಯಲ್ಲಿ ಸಮಗ್ರ ಕರ್ನಾಟಕದ ಜನಮನವನ್ನಾಕರ್ಷಿಸಿ ಬಹು ವಿಜೃಂಭಣೆಯಿಂದ ನೆರವೇರಿತು. ಆಧುನಿಕ ಕನ್ನಡ ಸಾಹಿತ್ಯ ಕಣ್ಣರೆನಿಸಿದ ದಿ॥ ಬೆಳ್ಳೂರ ಮೈಲಾರ ಶ್ರೀಕಂಠಯ್ಯನವರು ಆ ಸಭೆಯಲ್ಲಿ—"ಹಿರಿಯರಿರ, ಕೆಳಿಯರಿರ, ಅಕ್ಕ ತಂಗಿಯರ ಅಣ್ಣ ತಮ್ಮಂದಿರ, ಒಸಗೆ ನುಡಿ ತಂದಿಹೆನು ನಾನೊಂದು ತಾವಿಂದು ಕೇಳುವಿರ ಕಿವಿಗೊಟ್ಟು, ಬಾಳುವಿರ ಎದೆನೆಟ್ಟು" ಎಂದುದು ಇಂದಿಗೂ ದಾಂಗುಡಿಸುತ್ತಿದೆ. ಡಾ॥ ಶಂಕರಾಚಾರ್ಯರಂತೂ ವಿಜಯನಗರದ ವೀರಶ್ರೀಯು ಪುನರುತ್ಥಾನವಾಗಬೇಕು ಎಂದು ನೃಪತುಂಗದೇವನ—"ಸುಭಟರ್ಕಳ್ ಆ ನಾಡವರ್ಗಳ್"—ಎಂಬ ಪಂಕ್ತಿಯನ್ನು ನೆನೆದು ಆವೇಶಯುಕ್ತವಾಗಿ ಮಾತನಾಡಿದ ನೆನಪು.

ದಕ್ಷಿಣ ಭಾರತದವರೆಲ್ಲ ಕೇಂದ್ರ ಸರಕಾರದ ಮೇಲೆ ಒತ್ತಾಯ ತಂದು, ವಿಜಯನಗರದ ಸುತ್ತಮುತ್ತಲಿನ ಪ್ರದೇಶದಲ್ಲಿ ತಮಗನುಕೂಲಿಸುವಂಥ, ಒಂದು ತಾಣವನ್ನು ಗೊತ್ತುಪಡಿಸಿ, ದಕ್ಷಿಣಪಥದ ಭೂ, ಜಲ, ವಾಯುಪಡೆಯ ಠಾಣ್ಯವನ್ನು (Army Headquarters for South India) ಆದಕ್ಕೆ ಪೂರಕವೋ ಎಂಬಂತೆ ಕರ್ನಾಟಕಸ್ಥರು ವಿಜಾಪುರದ ಸೈನಿಕಶಾಲೆ ಮತ್ತು ಕಿತ್ತೂರಿನ ವೀರರಾಣಿ ಚೆನ್ನಮ್ಮನ ಕನ್ಯಾಶಾಲೆಯ ಮಾದರಿಯಲ್ಲಿ ವಿಜಯನಗರದಲ್ಲೇ ಉಚ್ಚಮಟ್ಟದ ಭೂ, ಜಲ, ವಾಯುಪಡೆಯಲ್ಲಿ ಸೇರಬಯಸುವವರಿಗೆ ತರಬೇತಿ ಕೊಡುವ ಒಂದು ಶಿಕ್ಷಣ ಸಂಸ್ಥೆಯನ್ನು ತೆರೆಯಬೇಕು.

ಬಾದಾಮಿಯ ವೀರ ಪುಲಿಕೇಶಿ ಹಿಂದೊಮ್ಮೆ ಭಾರತದ ಚಕ್ರಾಧಿಪತಿಯಾಗಿದ್ದನೆಂದು ನೆನೆದಾಗ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕವೂ ತನ್ನ ವೀರಶ್ರೀಯನ್ನು ಮೆರೆಯಿಸಿ ತನ್ನ ಕರ್ತವ್ಯಕರ್ಮ ಮಾಡಿದೆ ಎಂದು ಎದೆತಟ್ಟಿ ಹೇಳುವಾಗ, ನಮ್ಮ ರಾಜ್ಯಕ್ಕೆ "ಕರ್ನಾಟಕ" ಎಂದು ನಾಮಕರಣವಾಗುವ ಈ ಶುಭ ಪ್ರಸಂಗದಲ್ಲಿ ಸುದೈವದಿಂದ ಕ್ಷಾತ್ರ ಧರ್ಮವನ್ನು ತಿಳಿದ ಶ್ರೀ ದೇವರಾಜ ಅರಸರಂ ಮುಖ್ಯಮಂತ್ರಿಗಳಾಗಿರುವಾಗ, ಸಮಗ್ರ ಕರ್ನಾಟಕದ ಜನತೆ ಈ ದೃಢಸಂಕಲ್ಪ ಮಾಡಿ, ಮುಂದುವರೆಯಲು ಸಾಧ್ಯವಿದೆ, ಎಂದು ನನಗೆ ಆತ್ಮವಿಶ್ವಾಸವಿದೆ. ಹಿಂದೂಸ್ಥಾನ ಸರಕಾರಕ್ಕೆ ವಿಜಯನಗರದ ಹತ್ತಿರ ಇಂಥ ಒಂದು ಠಾಣ್ಯವನ್ನು ತೆಗೆಯಲು ಮನಸ್ಸು ಮಾಡುವಂತೆ ನಾವು ಕೆಲವೊಂದು ಪ್ರಾರಂಭಿಕ ಅವಶ್ಯಕತೆಗಳನ್ನು ಪೂರೈಸಬೇಕಾಗುವದು. ಅದಕ್ಕೆ ಕನ್ನಡ ಜನತೆ ಕೆಲವೊಂದು ಬಗೆಯ

ತ್ಯಾಗಕ್ಕೂ ಸಿದ್ಧರಾಗಬೇಕಾದೀತು. ಕರ್ನಾಟಕ ರಾಜ್ಯಸರ್ಕಾರವು ತಮಿಳುನಾಡು, ಆಂಧ್ರ, ಕೇರಳ, ಗೋವೆ, ಮಹಾರಾಷ್ಟ್ರ, ರಾಜ್ಯ ಸರಕಾರದ ಮನವೊಲಿಸಿ ವಿಜಯನಗರ ಸಾಮ್ರಾಜ್ಯದ ಐತಿಹಾಸಿಕ ಅವಶೇಷಗಳಿಂದ ಸ್ಫೂರ್ತಿ ಪಡೆಯಲು, ಶಾಣ್ಯವನ್ನಿಲ್ಲಿ ಸ್ಥಾಪಿಸಲು ಮನವೊಸಬೇಕಾಗಬಹುದು. ವಿಜಯನಗರದ ಹತ್ತಿರವೇ ಉಕ್ಕಿನ ಕಾರಖಾನೆ ಸ್ಥಾಪಿತ ವಾಗುವದು ಒಂದು ಯೋಗಾಯೋಗವೆ! ತುಂಗಭದ್ರಾ ಅಣೆಕಟ್ಟಿನ ವಿಪುಲ ನೀರಿನ ಸಂಚಯದ ಉಪಯೋಗ ಮಾಡಿಕೊಳ್ಳಲಂ ಸಾಕಷ್ಟು ಅವಕಾಶವಿದೆ. ಕೇಂದ್ರದ ಸಂರಕ್ಷಣ ಮಂತ್ರಿ ಮಾನ್ಯ ಶ್ರೀ ಜಗಜೀವನರಾಮು, ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿ ಯವರ ಮನ ಒಲಿಸಿ, ಈ ವಿಷಯದಲ್ಲಿ ಅಪ್ಪಣೆ ಪಡೆಯುವದು ಕಠಿಣವೇನಾಗಲಿಕ್ಕಿಲ್ಲ, ಸುದೈವದಿಂದ ಕನ್ನಡಿಗರೇ ಆದ ಶ್ರೀ ಬೇಪೂರರು ಮಹಾದಂಡ ನಾಯಕರಾಗಿರುವದ ರಿಂದಲೂ, ಪ್ರಥಮ ಮಹಾದಂಡ ನಾಯಕರಾಗಿದ್ದ, ಜನರಲ್ ಕೆ. ಎಂ. ಕರಿಯಪ್ಪನವರು ಈ ಕಾರ್ಯವನ್ನು ಕೃತಿಗಿಳಿಸಲು ಯೋಜನೆ ಮಾಡಿಕೊಡಲು ನೆರವಾಗುವದರಲ್ಲಿ ಸಂದೇಹವಿಲ್ಲ. ಇಂದು ಕನ್ನಡನಾಡಿನಲ್ಲಿ ತಮಿಳಿಂ, ತೆಲುಗು, ಮರಾಠಿ, ಗುಜರಾತಿ, ಮಲೆಯಾಳಿ ಭಾಷಾ ಬಂಧುಗಳು ನಮ್ಮ ಜೊತೆಗೆ ಸುಮಧುರ ಬಾಂಧವ್ಯದಿಂದ ಬಾಳುತ್ತಿರುವದರಿಂದ ಆಯಾ ರಾಜ್ಯಗಳು ವಿಜಯನಗರದ ಗತ ವೈಭವವನ್ನು ನೆನೆದಂ, ಅಲ್ಲಿಯ ಸರಕಾರಗಳೂ ಒಪ್ಪುವ ದರಲ್ಲಿ ಕಷ್ಟವಿಲ್ಲವೆಂದು ತೋರಿಂತ್ತದೆ.

ಇನ್ನು ಭೂ, ಜಲ, ಪಾಯು ತರಬೇತಿ ಸಂಸ್ಥೆಯ ವಿಚಾರವಾಗಿ ಒಂದು ಮಾತು. ಈ ಸಂಸ್ಥೆಯನ್ನು ಕಟ್ಟುವಲ್ಲಿ ಮೈಸೂರು, ಕರ್ನಾಟಕ ವಾಣಿಜ್ಯ ಸಂಸ್ಥೆಗಳು, ಕರ್ನಾಟಕ, ಮೈಸೂರು, ಬೆಂಗಳೂರು ವಿಶ್ವವಿದ್ಯಾನಿಲಯಗಳು, ಕರ್ನಾಟಕ ರಾಜ್ಯಸರಕಾರ ಈ ಸಂಸ್ಥೆ ಯನ್ನು ವಿಜಯನಗರದಲ್ಲಿಯೇ ಸಂಸ್ಥಾಪಿಸಲು ಮೊದಲು ಆಸ್ಥೆ, ಆಸಕ್ತಿ ವಹಿಸಬೇಕಾಗು ವದು. ಇಂಥ ಶಿಕ್ಷಣದ ಪರಿಮಿತಿ, ಅಭ್ಯಾಸಕ್ರಮ, ಆಯಾ ತರಬೇತಿ ಹೊಂದುವವರ ಚಟುವಟಿಕೆಗಳು ಏನಿರಬೇಕೆಂಬುದನ್ನು ಸಿದ್ಧಪಡಿಸಂವದಂ, ಅದಕ್ಕೆ ಬೇಕಾಗುವ ಹಣಕಾಸಿನ ವೆಚ್ಚವನ್ನು ಭರಿಸಲು ಯಾವ ಉಪಾಯ ಯೋಜನೆಯನ್ನು ಕೈಕೊಳ್ಳಬೇಕು ಎಂಬುದನ್ನು ವಿಚಾರಿಸಿ ಒಂದು ಕ್ರಮಬದ್ಧ ಯೋಜನೆಯನ್ನು ಮಾಡಬೇಕು. ಅದಕ್ಕಾಗಿ ಸಮಗ್ರ ಕರ್ನಾಟಕ ದಲ್ಲಿರುವ ಜನಗಳಿಂದ ದತ್ತಿ, ದಾನ, ಧರ್ಮಗಳಿಂದ ಹಣವನ್ನು ಶೇಖರಿಸಬಹುದು. ಈ ಸಂಸ್ಥೆಯನ್ನು ಕಟ್ಟಲು ಒಂದು ತಜ್ಞರ ಸಲಹಾಮಂಡಳಿಯನ್ನು ರಚಿಸಿಕೊಂಡು ಮುಂದು ವರಿಯಬೇಕು. ಈ ವಿಷಯದಲ್ಲಿ ಅನುಕೂಲ ಮತ್ತು ಪ್ರತಿಕೂಲಗಳೇನಿವೆ? ಎಂಬುದನ್ನು ಸಂಶೋಧಿಸಲು ನಮ್ಮ ಆಡಳಿತಾಧಿಕಾರಿಗಳಿಗೆ ಬಿಟ್ಟುಬಿಡೋಣ. ಆದರೆ ಇಪ್ಪೆರಡು ಮಾತು ನಡೆಯಿಸಿಕೊಡುವಂತೆ ಕನ್ನಡ ಜನತೆ ಈಗ ಒಕ್ಕೊರಲಿನಿಂದ ಹೇಳಬೇಕು. ವಿಜಯನಗರದ ವೀರಶ್ರೀಯನ್ನು ಪುನಃ ಪೆರೆಯಿಸುವ ಸುಸಂದರ್ಭ ಬಂದಿರುವಾಗ ನಾವು ಕಣ್ಣು ಮುಚ್ಚಿ ಕೊಂಡು ಕುಳಿತುಕೊಳ್ಳಲಾಗುತ್ತದೆಯೆ? "ಮನಸ್ಸಿದ್ದಲ್ಲಿ ಮಾರ್ಗವಿದೆ" ಅಲ್ಲವೆ ಮತ್ತೆ!

ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣಗಳ ಉಲ್ಲೇಖಗಳು

1918 ರಲ್ಲಿ ಧಾರವಾಡದಲ್ಲಿ ನಡೆದ 4ನೇ ಸಾಹಿತ್ಯ ಸಮ್ಮೇಳನದಲ್ಲಿ ಆರ್. ನರಸಿಂಹಾಚಾರ್ಯರ ಅಧ್ಯಕ್ಷ ಭಾಷಣದಿಂದ :—

ಕನ್ನಡನುಡಿಯ ಈಗಿನ ಸ್ಥಿತಿ

" ಈಗಲಾದರೋ ಕನ್ನಡನುಡಿ, ನಾವು ಪೂರ್ವದಲ್ಲಿ ಭಾಷೋನ್ನತಿಗಾಗಿ ಉತ್ಕಟೇಚ್ಛೆಯಿಂದ ಕೃಷಿಮಾಡಿದ ಕನ್ನಡಿಗರ ಸಂತತಿಯವರೋ ಅಲ್ಲವೋ ಎಂದು ಸಂದೇಹಪಡಬಹುದಾದಷ್ಟು ಹೀನಸ್ಥಿತಿಗೆ ಬಂದಿದೆ. ಈ ಹೀನಸ್ಥಿತಿಯನ್ನು ನೋಡಿ ಯಾವ ನಿಜವಾದ ಕನ್ನಡಿಗನ ಹೃದಯವು ತಾನೇ ಶೋಕರಸಪೂರಿತವಾಗದು? ಯಾವ ದೇಶಬಾಂಧವನಾದ ಕನ್ನಡಿಗನ ಮುಖವು ತಾನೇ ಕಂದದು? ಯಾವ ಭಾಷಾಭಿಮಾನಿಯಾದ ಕನ್ನಡಿಗನ ಕಣ್ಣು ತಾನೇ ನೀರಿನಿಂದ ತುಂಬದು? ಈ ಹೀನಸ್ಥಿತಿಯನ್ನು ನಿವಾರಣಮಾಡಲಿಕ್ಕೆ ಬದ್ಧಕಂಕಣರಾಗಿ ಸರ್ವಪ್ರಯತ್ನವನ್ನೂ ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ಈ ಹೀನಸ್ಥಿತಿಗೆ ಹಲವು ಕಾರಣಗಳುಂಟು. ಅವುಗಳಲ್ಲಿ ಕೆಲವನ್ನು ತಿಳಿಸುತ್ತೇನೆ. ಕನ್ನಡಿಗರಿಗೆ ತಮ್ಮ ಭಾಷೆಯಲ್ಲಿರಬೇಕಾದ ಆದರಾತಿಶಯಕ್ಕೆ ಪ್ರತಿಯಾಗಿ ಅಸಡ್ಡೆ ನೆಲಗೊಂಡಿರುವುದು ಪ್ರಬಲಕಾರಣವೆಂದು ಹೇಳಬಹುದು. ಅನೇಕರು ಕನ್ನಡಭಾಷೆಯಲ್ಲಿ ಮಾತನಾಡುವುದೂ ಪತ್ರಗಳನ್ನು ಬರೆವುದೂ ಅಪಮಾನಕರವೆಂದು ಭಾವಿಸಿದ್ದಾರೆ. ಇದಕ್ಕಿಂತಲೂ ಶೋಚನೀಯವಾದ ವಿಷಯವುಂಟೇ ? ಈಗಿನ ಶಿಕ್ಷಣ ಪದ್ಧತಿಯೂ ಈ ಅಸಡ್ಡೆಗೆ ಸಹಕಾರಿಯಾಗಿದೆ. ಪಾಠಶಾಲೆಗಳಲ್ಲಿ ಎಲ್ಲಾ ವಿಷಯಗಳನ್ನೂ ಇಂಗ್ಲಿಷ್ ಭಾಷೆಯಲ್ಲಿಯೇ ಕಲಿಸುತ್ತಾರೆ. ಬ್ರಿಟಿಷ್ ಕರ್ನಾಟಕದ ಪ್ರಾಂತಗಳಲ್ಲಿ ಪ್ರಾಥಮಿಕ ಶಿಕ್ಷಣವು ಕನ್ನಡದಲ್ಲಿ ದೊರೆವುದಿಲ್ಲ. ನಮ್ಮಲ್ಲಿಯೂ ಇಂಗ್ಲಿಷ್ ಬಲ್ಲವರೇ ಬುದ್ಧಿವಂತರು, ದೇಶ ಭಾಷಾ ಪಂಡಿತರು ಅಪ್ರಯೋಜಕರು ಎಂಬ ನಿಷ್ಕಾರಣವಾದ ಭಾವನೆ ಹುಟ್ಟಿದೆ. ಸರಕಾರದ ಕಾಗದಪತ್ರಗಳೆಲ್ಲಾ ಇಂಗ್ಲಿಷ್ ಭಾಷೆಯಲ್ಲಿಯೇ ಇವೆ. ಮುಂಬಯಿ, ಮದರಾಸು, ಕೊಡಗು ಎಂಬ ಬ್ರಿಟಿಷ್ ಕರ್ನಾಟಕದ ದೇಶವಿಭಾಗವು ಭಾಷೆಯ ಅನವಸ್ಥೆಗೂ ಭಿನ್ನ ರೂಪತೆಗೂ ಕಾರಣವಾಗಿದೆ. ಮೇಲೆ ಹೇಳಿದ ಕಾರಣಗಳಲ್ಲಿ ಕೆಲವು ಪ್ರಕೃತಸ್ಥಿತಿಯಲ್ಲಿ ಅಪರಿಹಾರ್ಯವೆಂದು ತೋರಿದರೂ ನಮ್ಮಲ್ಲಿ ನೆಲಗೊಂಡಿರುವ ಅಸಡ್ಡೆಯೆಂಬ ಪಿಶಾಚವನ್ನು ದೇಶಾಭಿಮಾನ ಭಾಷಾಭಿಮಾನಗಳೆಂಬ ಮಂತ್ರಗಳ ಬಲದಿಂದ ಉಚ್ಚಾಟನೆ ಮಾಡಿದರೆ ಭಾಷೋನ್ನತಿಯು ಕೆಲಸವೂ ಕೂಡಿದಮಟ್ಟಿಗೆ ಫಲಕಾರಿಯಾಗಬಹುದು."

1919ರಲ್ಲಿ ಹಾಸನದಲ್ಲಿ ನಡೆದ 5ನೇ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಕರ್ಪೂರ ಶ್ರೀನಿವಾಸರಾಯರ ಅಧ್ಯಕ್ಷ ಭಾಷಣ :—

" ಯಾವ ಕಾರ್ಯಸಿದ್ಧಿಗೂ ತತ್ಸಂಬಂಧವಾದ ಜ್ಞಾನ, ಇಚ್ಛಾ, ಕೃತಿ ಎಂಬ ಮೂರು ಘಟ್ಟಗಳುಂಟು. ಅವುಗಳಲ್ಲಿ ಮೊದಲನೆಯದು ಯಾವುದೆಂದರೆ, ಕಾರ್ಯ ವಿಷಯವಾಗಿ ಜ್ಞಾನ ಸಂಪಾದನೆ. ಮುಂದೆ, ಕಾರ್ಯದಲ್ಲಿ ಇಚ್ಛೆ ಹುಟ್ಟುವುದೇ ಎರಡನೇ ಸೋಪಾನ. ಕಾರ್ಯವು ಒಳ್ಳೆಯದೆಂದು ತಿಳಿದು ಬಂದರೆ ಅದರಲ್ಲಿ ಉಪಾಧೇಯಬುದ್ಧಿಯೂ, ಕೆಟ್ಟದೆಂದು ಕಂಡುಬಂದರೆ ಅದರಲ್ಲಿ ಹೇಯ ಬುದ್ಧಿಯೂ ಜನಿಸುತ್ತದೆ. ಮೂರನೆಯ ಮೆಟ್ಟಲು ಕೃತಿ. ಇಚ್ಛೆಯು ಉತ್ಕಟವಾದಂತೆ ತತ್ಸಂಬಂಧವಾದ ಕೃತಿಯೂ ಬಲವಾಗುತ್ತದೆ. ಉತ್ಕಟೇಚ್ಛೆಗೆ ಪೂರ್ಣ ಜ್ಞಾನವೇ ಮೂಲ. ಆದುದರಿಂದ ನಮ್ಮ ಕರ್ಣಾಟಕ ವಾಙ್ಮಯ ವಿಷಯವಾಗಿ ನಾವು ಮೊದಲು ಸರಿಯಾದ ಜ್ಞಾನವನ್ನು ಸಂಪಾದಿಸುವುದೇ ನಮ್ಮ ಪ್ರಥಮ ಕರ್ತವ್ಯವು."

1920ರಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ನಡೆದ 6ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ರೊದ್ದ ಶ್ರೀನಿವಾಸರಾಯರ ಅಧ್ಯಕ್ಷ ಭಾಷಣ :—

" ಗ್ರಾಮದೇವತೆಯ ಜಾತ್ರೆಯ ಕಾಲಕ್ಕೆ ಪಶುವಧೆಮಾಡಿ ಅವರ ದೇಹಾವಶೇಷವನ್ನು ಊರ ನಾಲ್ಕು ದಿಕ್ಕುಗಳಿಗೆ ದಿಗ್ಬಲಿಯಾಗಿ ಸಮರ್ಪಿಸುವ ರೂಢಿಯುಂಟೆಂಬುದನ್ನು ತಾವು ಬಲ್ಲಿರಿ. ಇದಕ್ಕೆ ನಮ್ಮ ವ್ಯಾವಹಾರಿಕ ಭಾಷೆಯಲ್ಲಿ " ಚರಗಾ ಚಲ್ಲುವುದು " ಎನ್ನುತ್ತಾರೆ. ನಮ್ಮ ಕರ್ಣಾಟಕದ ಅವಸ್ಥೆಯಾದರೂ ಬಲಿಬಿದ್ದ ಆ ಪಶುವಿನಂತಾಗಿ ನಾಲ್ಕಾರು ಕಡೆಗೆ ನಾಲ್ಕಾರು ಚರಗಗಳನ್ನು ಚೆಲ್ಲಿಕೊಟ್ಟಂತಾಗಿದೆ."

1921ರಲ್ಲಿ ಚಿಕ್ಕಮಂಗಳೂರಿನಲ್ಲಿ ನಡೆದ 7ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೆ.ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷ ಭಾಷಣ :—

" ಕನ್ನಡ ನುಡಿಗೆ ಈಗ ಒದಗಿರುವ ಅವಸ್ಥೆಯನ್ನು ನೋಡಿದರೆ ಕಣ್ಣೀರು ಬರುವುದು. ಆದರೆ ಕಣ್ಣೀರು ಸುರಿಸುವುದರಿಂದ ಕಾರ್ಯಸಿದ್ಧಿಯಾಗದು. ಕನ್ನಡಕ್ಕೆ ತನ್ನ ಸ್ವಗೃಹದಲ್ಲಿಯೇ ಯಜಮಾನ್ಯವು ತಪ್ಪಿರುವುದು ; ನನ್ನ ಮನೆಗೆ ನಾನು ಯಜಮಾನನಲ್ಲದಂತಾಗಿರುವುದು. ಈ ದುರವಸ್ಥೆಗೆ ಮುಖ್ಯ ಕಾರಣವು ಆಂಗ್ಲ ಭಾಷೆಯ ಪ್ರಾಬಲ್ಯವೇ ಎಂಬುದನ್ನು ನಾನು ತಮ್ಮಲ್ಲಿ ಹೊಸದಾಗಿ ಅರಿಕೆ ಮಾಡಬೇಕಾದುದಿಲ್ಲ. ಆಂಗ್ಲ ಭಾಷೆಯು ಇಂಡಿಯಾ ದೇಶದ ಭಾಷೆಗಳ ಮೇಲೆಲ್ಲಾ ಒಂದು ವಿಧವಾದ ಮಂಕುಬೂದಿಯನ್ನು ಎರಚಿರುವುದೆಂದು ಹೇಳಿದರೆ ಅದು ಅತ್ಯುಕ್ತಿಯಾಗದು. ನಮ್ಮ ಭಾಷೆಯಲ್ಲಿರುವುದೇನು; ಇಂಗ್ಲೀಷಿನ ಮುಂದೆ ನಮ್ಮ ಕನ್ನಡವೂ ಒಂದು ಭಾಷೆಯೇ ; ಇಂಗ್ಲೀಷು ಜೀವಕಳೆಯಿಂದ ಕೂಡಿಯುತ್ತಿರುವ ಭಾಷೆ. ನಮ್ಮದು ಸತ್ವವಡಗುತ ಸಾಯುತಲಿರುವ ಭಾಷೆ ಎಂದು ಎಣಿಸುವ ಮಂಕು ನಮ್ಮನ್ನು ಬಲವಾಗಿ ಹಿಡಿದಿರುವುದು. ಮೊಟ್ಟಮೊದಲು ಆ ಮಂಕನ್ನು ಚದರಿಸಬೇಕು."

1922ರಲ್ಲಿ ದಾವಣಗೆರೆಯಲ್ಲಿ ನಡೆದ 8ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಎಂ. ವೆಂಕಟಕೃಷ್ಣಯ್ಯನವರು ಮಾಡಿದ ಅಧ್ಯಕ್ಷ ಭಾಷಣ :—

" ಭಾಷೆಗೆ ಕುಲವಿಲ್ಲ, ಗೋತ್ರವಿಲ್ಲ, ಮಂತವಿಲ್ಲ, ಅದು ಎಲ್ಲರಿಗೂ ಸೇರಿದುದು, ಎಲ್ಲರಿಗೂ ಬೇಕಾದುದು. ಪೂರ್ವಕಾಲದಲ್ಲಿ ಎಲ್ಲ ಮತ ಜಾತಿಗಳವರೂ ಅದರ ಸೇವೆ ಮಾಡಿ ಅದನ್ನು ಬೆಳೆಯಿಸಿದರು. ಈಗಲೂ ನಾವು ನಮ್ಮ ಭೇದಗಳನ್ನು ಬಿಟ್ಟು ಒಮ್ಮನಸ್ಸಿನಿಂದ ಭಾಷಾಸೇವೆಗೆ ನಿಂತರೆ, ಬೇಗನೆ ನಮ್ಮ ಸಾಹಿತ್ಯವು ಪ್ರಪಂಚದಲ್ಲಿ ಮಾನ್ಯ ಸ್ಥಾನವನ್ನು ಪಡೆದು ನಮ್ಮ ದೇಶವು ಸುಖ ಸಂಪತ್ತುಗಳಿಗೆ ಆವಾಸಸ್ಥಾನವಾಗುವುದರಲ್ಲಿ ಸಂದೇಹವಿಲ್ಲ. "

1925 ರಲ್ಲಿ ಬೆಳಗಾಮ್‌ನಲ್ಲಿ 11ನೆಯ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬೆನಗಲ್ ರಾಮರಾಯರ ಅಧ್ಯಕ್ಷ ಭಾಷಣ :—

"ನನ್ನ ಕನ್ನಡ ದೇಶಭಾಂಧವರಾದ ತಮ್ಮಲ್ಲಿ ಇದೇ ನನ್ನ ಪ್ರಾರ್ಥನೆಯು—ಉತ್ತಿಷ್ಠತ; ಜಾಗ್ರತ; ; ಪ್ರಾಪ್ಯವರಾನ್ನಿಬೋಧತ"

(ಕಠೋಪನಿಷತ್)

ಏಳಿರಿ ; ಎಚ್ಚರಗೊಳ್ಳಿರಿ ; ; ಉದ್ದೇಶವು ಸಫಲವಾಗುವವರೆಗೂ ಬಿಡದೆ ಪ್ರಯತ್ನಿಸಿರಿ;;; "

(ದಿ. ಬೆನಗಲ್ ರಾಮರಾಯರ ಪ್ರಾರ್ಥನೆಗೆ ಇನ್ನೂ ತಕ್ಕ ಪ್ರತಿಫಲ ದೊರತಿಲ್ಲ.—ಸಂ)

1927 ರಲ್ಲಿ ಮಂಗಳೂರಿನಲ್ಲಿ ನಡೆದ 13ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತಾತಾಚಾರ್ಯರ ಅಧ್ಯಕ್ಷ ಭಾಷಣ :—

"ಮತಭೇದಂಗಳ ಮರೆಯಿಂಭೋ ಮರೆಯಿಂಭೋ ಮರೆಯಿಂಭೋ ;
ಸಮಯಂ ವಿರೋಧವ ತೊರೆಯಿಂಭೋ ತೊರೆಯಿಂಭೋ ತೊರೆಯಿಂಭೋ ;
ಕನ್ನಡ ಭಾಷೆಯ ಏಕೀಕರಣಕ್ಕೆ ನೆರೆಯಿಂಭೋ ನೆರೆಯಿಂಭೋ ನೆರೆಯಿಂಭೋ ;
ನಿಮ್ಮ ಶಕ್ತ್ಯುತ್ಸಾಹವ ಮೆರೆಯಿಂಭೋ ಮೆರೆಯಿಂಭೋ ಮೆರೆಯಿಂಭೋ ; "

1928 ರಲ್ಲಿ ಕಲಬುರ್ಗಿಯಲ್ಲಿ ನಡೆದ 14ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿ. ಎಂ. ಶ್ರೀಕಂಠಯ್ಯನವರ ಅಧ್ಯಕ್ಷ ಭಾಷಣ :—

"ಮಹನೀಯರೆ, ನಮ್ಮ ಕನ್ನಡನಾಡು ಚಿಕ್ಕದಿರಬಹುದು ; ನಮ್ಮ ಕನ್ನಡಿಗರು ಸ್ವಲ್ಪ ಜನವಿರಬಹುದು ; ಚರಗವನ್ನು ಚೆಲ್ಲಿದಂತೆ ಚೆದರಿಹೋಗಿರಬಹುದು. ಆದರೆ ಕರ್ನಾಟಕದ ಪೂರ್ವ ಚರಿತ್ರೆಯನ್ನೂ, ಪ್ರಕೃತ ಸಾಹಸಗಳನ್ನೂ ನೆನಸಿಕೊಂಡರೆ, ನಮ್ಮ

ಪುರೋಭಿವೃದ್ಧಿಯಲ್ಲಿ ಯಾವ ಸಂದೇಹಕ್ಕೂ ಕಾರಣವಿರುವುದಿಲ್ಲ. ಈ ಪುಣ್ಯಕ್ಷೇತ್ರದಲ್ಲಿ ಬೇರೂರಿ, ಆಕಾಶ ಹಬ್ಬಿರುವ ಎಲ್ಲ ಪ್ರದೇಶಗಳಿಂದಲೂ ಗಾಳಿಯನ್ನೂ, ಬೆಳಕನ್ನೂ, ಆಹಾರವನ್ನೂ, ತೇಜಸ್ಸನ್ನೂ ಹೀರಿಕೊಳ್ಳುವ ಉದಾರ ಹೃದಯವೊಂದನ್ನು ನಾವು ಭದ್ರವಾಗಿ ಕಾಪಾಡಿಕೊಂಡರೆ.....ಸ್ವಪ್ರಕೃತಿ, ಸ್ವಪ್ರತಿಭೆಯನ್ನು ವಿಚಾರಮಾಡಿ ಅರಿತು, ನಮ್ಮ ಆವರಣ ನಮ್ಮ ಅನುಕೂಲವನ್ನು ಮನದಟ್ಟುಮಾಡಿಕೊಂಡು, ನ್ಯೂನತೆಗಳನ್ನು ದೌರ್ಬಲ್ಯಗಳನ್ನು ಪರಿಶೋಧಿಸಿ ತ್ಯಜಿಸಿ, ಸತ್ಯ ಸಂಧರಾಗಿ, ರುಜುಮಾರ್ಗದಲ್ಲಿ ಕರ್ಮವೀರರಾಗಿ ಮುಂದಕ್ಕೆ ಹೆಜ್ಜೆಯನ್ನಿಡುವ ಪಕ್ಷದಲ್ಲಿ—ನಮ್ಮ ಜನವೂ, ಜನದೊಡನೆ ಸಾಹಿತ್ಯವೂ, ಸಾಹಿತ್ಯದೊಡನೆ ಜನವೂ, ಅಮೂಲ್ಯವಾಗುವುದು, ಅಪೋಘವಾಗುವುದು. ಸತ್ಯಪ್ರತಿಷ್ಠಿತವಾಗುವುದು; ಧರ್ಮಪ್ರತಿಷ್ಠಿತವಾಗುವುದು, ಆಗ್ಗೆ ಅದರ ಯಶಸ್ಸಿಗೆ ಮಿತಿಯೆಲ್ಲಿ ? ''

1929 ರಲ್ಲಿ ಬೆಳಗಾವಿಯಲ್ಲಿ ನಡೆದ 15 ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರ ಭಾಷಣ :—

"ಈ ಸಂದರ್ಭದಲ್ಲಿ ಕನ್ನಡಿಗರು ಯಾರು, ಕನ್ನಡ ನಾಡು ಯಾವುದು ಎಂದೂ ಕನ್ನಡದ ಮತ್ತು ನೆರೆಯ ಭಾಷೆಗಳ ಸಂಬಂಧವನ್ನು ಕುರಿತೂ ಎರಡು ಮಾತನ್ನು ಹೇಳಬೇಕಂ, ಕನ್ನಡಿಗರು ಯಾರು ? ಕನ್ನಡ ನಾಡಿನಲ್ಲಿ ನೆಲಸಿರುವ ಎಲ್ಲ ಜನರೂ. ನನ್ನ ಮನೆಯ ಮಾತು ತಮಿಳು: ಆದರೂ ನಾನು ಅಚ್ಚಕನ್ನಡಿಗನೇ. ಕನ್ನಡಿಗರಲ್ಲಿ ತಮಿಳು ನಾಡು ಕರ್ನಾಟಕರೂ ಕೊಂಕಣಿ ಕರ್ನಾಟಕರೂ ತೆಲಗುನಾಡು ಕರ್ನಾಟಕರೂ ಮಹಾರಾಷ್ಟ್ರ ಕರ್ನಾಟಕರೂ ಇದ್ದೇವೆ. ನಾವೆಲ್ಲ ಕರ್ನಾಟಕರೇ ಹೊರತು ಬೇರೆಯಲ್ಲ. ನಮ್ಮ ಜನರಂ ಇಂಥ ಭೇದಗಳನ್ನು ಎಂದೂ ಎಣಿಸಿಲ್ಲ. ನಮ್ಮಲ್ಲಿ ಇಂಥ ಭೇದಭಾವವಿಲ್ಲವೆನ್ನುವುದಕ್ಕೆ ನಾನು ಇಂದು ಇಲ್ಲಿ ನಿಂತಿರುವುದೇ ಸಾಕ್ಷಿ. ಇದುವರೆಗೆ ಇಲ್ಲಿ ಅಧ್ಯಕ್ಷರಾದ ಮಹನೀಯರುಗಳ ಹೆಸರುಗಳೇ ಸಾಕ್ಷಿ; ತನ್ನಲ್ಲಿ ಬಂದು ನಿಂತವರನ್ನೆಲ್ಲ ಕರ್ನಾಟಕವು ಎಂದೂ ಇದೇ ಸಮಬುದ್ಧಿಯಿಂದ ಕಂಡಿದೆ. ಸಮತಾ ಬುದ್ಧಿಯು ಅದರ ಚರಿತ್ರೆಯಲ್ಲಿ ಪ್ರಕಾಶವಾಗಿ ಕಾಣುತ್ತದೆ. ವೇದಾಂತ ಮತಸಂಸ್ಥಾಪಕರಾದ ಶ್ರೀ ಶಂಕರಾಚಾರ್ಯರು ಪಶ್ಚಿಮ ಸಮುದ್ರದ ತೀರದಲ್ಲಿ ಜನಿಸಿದರೂ ಕನ್ನಡ ನಾಡಲ್ಲಿ ತಮ್ಮ ಮುಂಖ್ಯ ಮಠವನ್ನು ಸ್ಥಾಪಿಸಿದರು, ಚೋಳ ದೇಶದಲ್ಲಿ ಜನಿಸಿದರೂ ವೇದಾಂತ ಮತದೀಪರಾದ ಶ್ರೀ ರಾಮಾನುಜಾಚಾರ್ಯರು ತಮ್ಮ ದೇಶದ ರಾಜರ ಕೊಟಲೆಯಿಂದ ನೊಂದು ಕರ್ನಾಟಕಕ್ಕೆ ಬಂದ [ಶಾಂತಿಯನ್ನು ಅನುಭವಿಸಿದರು. ಕರ್ನಾಟಕದಲ್ಲೇ ಜನಿಸಿದ ಗುರುವರೇಣ್ಯರಾದ ಶ್ರೀ ಮಧ್ವಾಚಾರ್ಯರಿಗೂ, ಭುವನ ಮಾನ್ಯರಾದ ಶ್ರೀ ಬಸವೇಶ್ವರರಿಗೂ ಯಾವ ರೀತಿಯ ಮನ್ನಣೆ ದೊರೆತಿದೆಯೋ ಅದೇ ರೀತಿಯ ಮನ್ನಣೆ ಅಪರೀವರ್ಯರಿಗೂ ನಮ್ಮ ನಾಡಿನಲ್ಲಿ ದೊರೆತಿದೆ. ಕರ್ನಾಟಕದಲ್ಲಿ ಜೈನ ಮತದ ಮುಂಖ್ಯ ಪೀಠಗಳಿವೆ. ಇಲ್ಲಿಲ್ಲದ ಮತವಿಲ್ಲ. ಇಲ್ಲಿಲ್ಲದ ಬುಡಕಟ್ಟಿಲ್ಲ. ಕರ್ನಾಟಕವು ಸಮತಾಬುದ್ಧಿಯಲ್ಲಿ ಸಂಕ್ಷೇಪ ಭಾರತ ವರ್ಷವಾಗಿದೆ.

1930 ರಲ್ಲಿ ಮೈಸೂರಿನಲ್ಲಿ ನಡೆದ 16 ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆಲೂರು ವೆಂಕಟರಾಯರು ಮಾಡಿದ ಅಧ್ಯಕ್ಷ ಭಾಷಣ:—

" ಈ ಪ್ರಕಾರದ ಯಜ್ಞ, ದಾನ ತಪಗಳಿಂದ ವಾಙ್ಮಯದ ಮುಖಾಂತರವಾಗಿ ನಾವು ಕರ್ನಾಟಕದ ಪಂಚಕೋಶಗಳನ್ನು ವಿಕಾಸಗೊಳಿಸಬೇಕು. ಆ ಪಂಚಕೋಶಗಳು ಯಾವುವೆಂದರೆ ಕರ್ನಾಟಕದ ಶರೀರ, ಪ್ರಾಣ, ಮನಸ್ಸು, ವಿಜ್ಞಾನ ಮತ್ತು ಆನಂದ. ಇದರಿಂದ ನಮ್ಮ ವಾಙ್ಮಯದಲ್ಲಿ ಯಾವತ್ತು ತೆರೆದ ಗ್ರಂಥಗಳು ಹುಟ್ಟುವುವು. ಕರ್ನಾಟಕ ಭೂಗೋಳದ ಜನಸಂಖ್ಯೆ, ಭೂಗುಣ, ಖನಿಜ ಸಂಪತ್ತು, ಇವೇ ಮುಂತಾದುವುಗಳಿಂದ ಕರ್ನಾಟಕದ-ಭೌತಿಕ ಶರೀರದ ವಿಕಾಸವಾಗಂವುದು. ಆದರೆ, ಇಂಥ ವಾಙ್ಮಯದಲ್ಲಿ ಪ್ರಾಣಶಕ್ತಿಯ ಸಂಚಾರವು ಸಾಕಾದಷ್ಟು ಇರದಿದ್ದರೆ, ಈಗಿನ ನಮ್ಮ ನಿರ್ಜೀವ ಪಠ್ಯಪುಸ್ತಕಗಳಂತೆ ಅವು ಸಾಸತ್ವವಾಗುವುವು. ಯಾವತ್ತು ವಾಙ್ಮಯಕ್ಕೆ ಪ್ರಾಣವೇ ಮುಖ್ಯ. ಆದಕಾರಣ ನಮ್ಮ ಯಾವತ್ತು ತೆರೆದ ವಾಙ್ಮಯದಲ್ಲಿ ಪ್ರಾಣ ಸಂಚಾಲನವಾಗುವಂತೆ ನಾವು ಎಚ್ಚರಪಡಬೇಕು. ಆದರೆ ಮನುಷ್ಯನು ಪ್ರಾಣವನ್ನಷ್ಟೆ ಹಿಡಿದುಕೊಂಡು ಜೀವಿಸಿದರೆ, ಅದು ಹೇಗೆ ಉಚ್ಚ ಜೀವನವಾಗುವುದಿಲ್ಲವೋ ಹಾಗೆ, ವಾಙ್ಮಯದಲ್ಲಿ ಮನಸ್ಸಿನ ವಿಕಾಸಕ್ಕೆ ಎಡೆಯಿರದಿದ್ದರೆ ಅದು ಉಚ್ಚವಾಙ್ಮಯವೆನಿಸುವುದಿಲ್ಲ. ಆದುದರಿಂದ, ವಾಙ್ಮಯದ ಉನ್ನತಿಯನ್ನು ಬಯಸುವವರು ಸಮಾಜದ ಮನಸ್ಸನ್ನು ಸಂಪೂರ್ಣವಾಗಿ ವಿಕಾಸಗೊಳಿಸುವುದಕ್ಕೆ ತಕ್ಕ ಗ್ರಂಥಗಳನ್ನು ಬರೆಯಬೇಕು."

1931 ರಲ್ಲಿ ಕಾರವಾರದಲ್ಲಿ ನಡೆದ 17 ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮುಳಿಯ ತಿಮ್ಮಪ್ಪಯ್ಯನವರು ಮಾಡಿದ ಭಾಷಣ:—

"ಮಹನೀಯರೆ, ನಮ್ಮ ಸಂಸ್ಕೃತಿ ಉದಾತ್ತವಾಗಿ ಹಬ್ಬಬೇಕಾದರೆ ಸಾಹಿತ್ಯವು ಸಾರ್ವಜನಿಕವಾಗಬೇಕು; ಸಾರ್ವಜನಿಕವಾಗಬೇಕಾದರೆ ಭಿನ್ನಭಿನ್ನ ಪ್ರಾಂತಗಳಾಗಿ ತುಂಡಾದ "ಕರ್ನಾಟಕ"ವು ಒಂದಾಗಬೇಕು; ಆ ಉದ್ದೇಶವು ಸಿದ್ಧಿಸದಿದ್ದರೆ ಈ ಎಲ್ಲಾ ಬಣ್ಣವನ್ನೂ ಮಸಿ ನುಂಗಿದಂತಾಗುವುದಲ್ಲವೆ?"

1932 ರಲ್ಲಿ ಮಡಿಕೇರಿಯಲ್ಲಿ ನಡೆದ 18ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಡಿ. ವಿ. ಗುಂಡಪ್ಪನವರು ಮಾಡಿದ ಭಾಷಣ:—

"ದಿಗಂತವು ಪ್ರಕಾಶಮಾನವಾಗಿದೆ. ಪಕ್ಷಿಗಳು ಸಂತೋಷದ ಕಲರವದೊಡನೆ ಆಕಾಶದ ಕಡೆಗೆ ಹಾರುತ್ತಿವೆ. ನನ್ನೆದೆಯಲ್ಲಿ ಆಶೆಯುಕ್ಕುತ್ತಿದೆ. ನಮ್ಮ ಭಾಷೆಯು ನಮ್ಮ ಪ್ರೀತಿ ಕೃತಜ್ಞತೆಗಳಿಗೆ ಅರ್ಹವಾದದ್ದು. ಅದು ಚೆನ್ನಾಗಿ ಬಾಳಿದರೆ ನಮ್ಮ ಜನದ ಬಾಳು ಮೇಲಾಗುತ್ತದೆ. ಅದನ್ನು ಸಮೃದ್ಧಿಪಡಿಸುವುದಕ್ಕಿಂತ ನಮಗೆ ದೊಡ್ಡ ಧರ್ಮವಾವುದು? ಅದರ ಕೋಶಾಗಾರದಲ್ಲಿ ಎಲ್ಲ ಸಂಪತ್ತುಗಳೂ ತುಂಬಿರಬೇಕು. ಅವುಗಳನ್ನು ನಮ್ಮ ಸಂತತ

ಪ್ರಯತ್ನದಿಂದ ನಿರ್ಮಿಸಿ ಹೆಚ್ಚಿಸಬೇಕು. ನಮ್ಮಲ್ಲಿಲ್ಲದುದನ್ನು, ನಮ್ಮಿಂದಾಗದುದನ್ನು, ದಶದಿಕ್ಕುಗಳಿಂದಲೂ ಶೇಖರಿಸಿ ತರಬೇಕು. ಭೂಮಂಡಲದ ಎಲ್ಲ ಸಾಹಿತ್ಯ ಎಲ್ಲ ಸಾರ ವಸ್ತುಗಳೂ ನಮ್ಮ ಭಾಷೆಯ ಭಂಡಾರಕ್ಕೆ ಬಂದು, ನಮ್ಮ ಸ್ವಶಕ್ತಿ ಕಲ್ಪಿತಗಳಾದ ನಾನಾ ಪರಿಕರಗಳೊಡಗೂಡಿ, ನಮ್ಮ ಜನದ ಜೀವನಕ್ಕನುವಾಗಬೇಕು. ಕನ್ನಡದ ಒಂದೊಂದು ನುಡಿಯೂ ಕಿಡಿಯಾಗಬೇಕು, ಸಿಡಿಲಾಗಬೇಕು, ನಕ್ಷತ್ರವಾಗಬೇಕು, ಅಮೃತಬಿಂದುವಾಗ ಬೇಕು. ಇದೀಗ ನಮ್ಮ ಆಶೆ. ಈ ಆಶೆಗಾಗಿ, ದುಡಿಯುವುದರಲ್ಲಿ ಎಲ್ಲ ದೇಶಭಾಷಾ ಬಾಂಧವರೂ ಅವರ ಅದೃಷ್ಟ ಶಕ್ತಿಗಳೂ ಸಹಕರಿಸಲಿ.''

1934 ರಲ್ಲಿ ರಾಯಚೂರಿನಲ್ಲಿ ನಡೆದ 20ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಂಜೆ ಮಂಗೇಶರಾಯರ ಅಧ್ಯಕ್ಷ ಭಾಷಣ :—

''ಕನ್ನಡವು ಸುಮಾರು ಒಂದೂಕಾಲು ಕೋಟಿ ಜನರು ಆಡುವ ಮುದ್ದು ಮಾತಿನ ಚೆಲುವಭಾಷೆ. ಇಷ್ಟು ಪ್ರಾಚೀನವಾದ, ಪಕ್ವವಾದ, ಪ್ರೌಢಭಾಷೆ ಹಿಂದೂಸ್ಥಾನದಲ್ಲಿ ಮತ್ತೊಂದು ಇದ್ದೀತೇ ಎಂಬುದೊಂದು ಶಂಕೆ ನನ್ನನ್ನು ಇನ್ನೂ ಬಿಟ್ಟಿಲ್ಲ. ಇಂಥ ಒಳ್ನುಡಿಯ ಹಿರಿಯ ಭಾಷೆ ಕನ್ನಡಿಗನಿಗೆ ದೊರಕಿದುದು ಆತನ ಪುಣ್ಯವೆನ್ನುವುದರಲ್ಲಿ ಸಂದೇಹವೇನು ? ಕ್ರಿಸ್ತಶಕದ ಪ್ರಾರಂಭದ ಮುಂಚೆಯೇ ಕರ್ನಾಡಿಗನ ಕವಿಗಳಲ್ಲಿಯೂ ನಾಡುಗಳಲ್ಲಿಯೂ ಅದರಂ ಅದುರುಗಳಾಗಿ ಅಲ್ಲಲ್ಲಿ ಚೆಲ್ಲಿ ಚೆದರಿದಂತಿದ್ದ 6ನೆಯ ಶತಮಾನದಿಂದ ಉಭಯ ಭಾಷಾಕವಿಗಳಾದ ಜೈನರು ತಮ್ಮ ರತ್ನತ್ರಯಗಳನ್ನು ಮಾರ್ಪಡಿಸಿದ್ದ, ವಚನಗಳ ಚಲಾವಣೆಗಾಗಿ ಶಿವಶರಣರು ಚಿಕ್ಕದೊಡ್ಡ ನಾಣ್ಯಗಳಾಗಿ ಹೊಡೆಯಿಸಿದ್ದ,—15ನೆಯ ಶತಮಾನದಿಂದ ಷಟ್ಪದಿಕಾರರಂ ಕಥಾವಿಸ್ತರಣಕ್ಕೆ, ದಾಸಕೂಟದವರು ಜನರಂಜನೆಗೆ, ಯಕ್ಷಗಾನದವರು ಅರ್ಥ ಸೌಲಭ್ಯಕ್ಕೆ ಬೇಕುಬೇಕಾದಂತೆ ಬೆರಕೆಮಾಡಿ ಬಣ್ಣ ಕೊಟ್ಟಿದ್ದ—ಈಗಲೂ ಕಾಲಿಟ್ಟ ಕಡೆ ಕರ್ಣಾಟಕದಲ್ಲಿ ಕಾಣಸಿಕ್ಕುವ ಇತಿಹಾಸ ನಿಕ್ಷೇಪರೂಪದ ಶಿಲಾಶಾಸನಗಳಲ್ಲಿ ಎರಕ ಹೊಯ್ದುಂತಿದ್ದ, ಹೊಂಗನ್ನಡದ ಭಂಡಾರಕ್ಕೆ ಭಾಗಿಯಾದ ಕನ್ನಡಿಗನು ಎಷ್ಟು ಧನಾಢ್ಯನು ; ಎಷ್ಟು ಧನ್ಯನು ; ಈ ಧನವಿರುವಷ್ಟು ಕಾಲ ಕನ್ನಡಿಗನಿಗೆ ನುಡಿಗೆ ಕಡಮೆ ಇತ್ತೇ ? ಭಾವಕ್ಕೆ ಬಡತನವಿತ್ತೇ ? ರಚನೆಗೆ ಕೊರತೆ ಇತ್ತೇ ?''

ಎನ್. ಎಸ್. ಸುಬ್ಬರಾಯರು—1935

ನಾವು ಕರ್ನಾಟಕವೆಂದು ಕರೆಯುವ ಭಾಗದಲ್ಲಿ ಹೆಚ್ಚು ಜನರು ಕನ್ನಡ ಮಾತನಾಡುವವರೇ ಆಗಿದ್ದಾರೆ. ಅವರೆಲ್ಲ ಒಂದು ಬಗೆಯ ಸಾಹಿತಿಕ ಸಾಂಪ್ರದಾಯಕ್ಕೆ ಒಳಪಟ್ಟಿದ್ದಾರೆ. ಕನ್ನಡಿಗರಾದ ನಮ್ಮೆಲ್ಲರಿಗೂ ಅದು ಮುಖ್ಯವಾಗಿದೆ. ಇತರ ಸಾಂಪ್ರದಾಯಕ ವಿಚಾರಗಳಲ್ಲಿ ನಾವು ಉಳಿದ ಭಾರತೀಯರೊಂದಿಗೆ ಒಂದಾಗಿದ್ದೇವೆ. ಹಿಂದೂ ಸ್ಥಾನದಲ್ಲಿ ಉಳಿದ ಭಾಗಕ್ಕೂ ಕರ್ನಾಟಕಕ್ಕೂ ಮಧ್ಯೆ ಗೋಡೆಯನ್ನು ನಿಲ್ಲಿಸಿದರೆ ಕನ್ನಡ ನಾಡಿನ ಬೇರೆಬೇರೆ ಭಾಗಗಳಲ್ಲಿ ನೆಲೆಸಿರುವ ಕನ್ನಡಿಗರೊಂದಿಗೆ ಹೆಚ್ಚು ಬಾಂಧವ್ಯವನ್ನುಂಟು ಮಾಡಲು ನಮ್ಮ ಭಾಷೆ ಮತ್ತು ಸಾಹಿತ್ಯವನ್ನು ಹೇಗೆ ಬೆಳೆಸಬೇಕು ? ಮತ್ತೆ ನಾವು ನಮ್ಮ ಮಧ್ಯದಲ್ಲಿರುವ ಅಲ್ಪಸಂಖ್ಯಾಕ ಅನ್ಯಭಾಷೀಯರ ಆತ್ಮವಿಕಾಸ ಭಾವಪ್ರಕಾಶನಗಳಿಗೆ ಅಡ್ಡಹೋಗದೆ ಕನ್ನಡಿಗರ ಐಕ್ಯವನ್ನು ಹೇಗೆ ಸಾಧಿಸಬೇಕು ? ಈ ವಿಚಾರಗಳನ್ನು ಕುರಿತು ನಾವು ಯೋಚನೆ ಮಾಡಬೇಕು. ನಾವೆಲ್ಲರೂ ಆಡುವುದು ಕನ್ನಡ, ಬರೆಯುವುದು ಕನ್ನಡ. ಅದಕ್ಕೊಂದು ಸನ್ಮಾನ್ಯ ಭಾಷೆ ಎಂದೆನಿಸಿಕೊಳ್ಳುವ ಹಕ್ಕಿದೆ.

ಬೆಳ್ಳಾವೆ ವೆಂಕಟನಾರಾಯಣಪ್ಪನವರು—1937

೧. ಕನ್ನಡನಾಡಿನ ಬೇರೆಬೇರೆ ಭಾಗಗಳಲ್ಲಿರುವ ಭಾಷಾತಜ್ಞರಲ್ಲಿ ಐಕ್ಯಮತ್ಯವನ್ನೂ ಪರಸ್ಪರ ಸೌಹಾರ್ದವನ್ನೂ ಹೆಚ್ಚಿಸುವುದಕ್ಕಾಗಿ ಉತ್ತಮೋತ್ತಮೋಪಾಯಗಳನ್ನು ನಿರ್ಧರಿಸುವುದು.

೨. ಕನ್ನಡನಾಡಿನ ಬೇರೆಬೇರೆ ಭಾಗಗಳಲ್ಲಿ ಪ್ರಚಾರದಲ್ಲಿರುವ ಗ್ರಾಂಥಿಕ ಭಾಷೆಯನ್ನು ಒಂದೇರೂಪಕ್ಕೆ ತರಲು ತಕ್ಕ ಮಾರ್ಗವನ್ನು ನಿಶ್ಚಯಿಸುವುದು.

೩. ಕನ್ನಡವನ್ನು ಓದುವ ವಿದ್ಯಾರ್ಥಿಗಳಿಗೆ ಎಲ್ಲಾ ವಿದ್ಯಾಶಾಲೆಗಳಲ್ಲೂ ಪಾಠದ ಪುಸ್ತಕಗಳು ಒಂದೇ ಆಗಿರುವುದಕ್ಕೆ ಬೇಕಾದ ಪ್ರಯತ್ನಗಳನ್ನು ಮಾಡುವುದು.

೪. ಕನ್ನಡವನ್ನಾಡುವ ಜನಸಾಮಾನ್ಯರಲ್ಲಿ ಲೋಕವ್ಯವಹಾರ ಜ್ಞಾನವು ಸುಲಭವಾಗಿ ಹರಡುವಂತೆ ತಕ್ಕ ಪುಸ್ತಕಗಳನ್ನು ಬರೆಯಿಸಿ ಪ್ರಚಾರಮಾಡುವುದಕ್ಕೆ ಸಾಧಕವಾದ ಉತ್ತಮೋಪಾಯಗಳನ್ನು ನಿರ್ಣಯಿಸುವುದು.

೫. ಕನ್ನಡದಲ್ಲಿ ಬರೆಯುವ ಭೌತಿಕಾದಿ ನಾನಾ ಶಾಸ್ತ್ರಗಳಲ್ಲಿ ಪ್ರಯೋಗಿಸಬೇಕಾದ ಪಾರಿಭಾಷಿಕ ಶಬ್ದಗಳನ್ನು ನಿರ್ಣಯಿಸುವುದಕ್ಕೆ ತಕ್ಕ ಉತ್ತಮೋಪಾಯಗಳನ್ನು ಪರಿಶೀಲಿಸುವುದು.

ದಿವಾಕರ ರಂಗರಾಯರು—1938

" ನನ್ನ ಮಟ್ಟಿಗೆ ನಾನು ಪ್ರಾದೇಶಿಕ ಅಥವಾ ಪ್ರಾಂತದ ಭಾಷೆಗೆ ಎಲ್ಲಕ್ಕೂ ಮಹತ್ವದ ಸ್ಥಾನವನ್ನು ಕೊಡುವೆನು. ಆಯಾ ಪ್ರಾಂತದಲ್ಲಿ ಆಯಾ ಭಾಷೆಗೆ ಮುಖ್ಯಸ್ಥಾನ ಇರಬೇಕು. ಶಾಲೆಕಾಲೇಜುಗಳ ಭಾಷೆ, ಕಾಗದ ಪತ್ರಗಳ ಭಾಷೆ, ಸಾರ್ವಜನಿಕ ವ್ಯಾಖ್ಯಾನ ಉಪನ್ಯಾಸಗಳ

ಭಾಷೆ ಇವು ಪ್ರಾಂತಿಕವೇ ಇರತಕ್ಕದ್ದು ವಾಸ್ತವಿಕ. ಆಯಾ ಪ್ರಾಂತ್ಯದಲ್ಲಿಯ ಸಾರ್ವಜನಿಕ ಹಣ ಇತರ ಯಾವುದೇ ಭಾಷೆಯ ಅಭಿವೃದ್ಧಿಗಾಗಿ ವೆಚ್ಚವಾಗುವುದು ಯೋಗ್ಯವಲ್ಲ. ಇದಕ್ಕೆ ಅಪವಾದವೆಂದರೆ. ಇತರ ಅಲ್ಪಸಂಖ್ಯಾತ ಭಾಷೆಯವರು ಯಾವುದೊಂದು ವಿಶಿಷ್ಟ ಭಾಗದಲ್ಲಿ ಸಾಕಷ್ಟು ಪ್ರಮಾಣದಲ್ಲಿ (ಕನಿಷ್ಟ ನೂರಕ್ಕೆ 25) ಇದ್ದಪಕ್ಷದಲ್ಲಿ ಅವರಿಗೆ ಅವರ ಮನೆಮಾತಿನಲ್ಲಿ ನಾಲ್ಕುವರ್ಷ ಪ್ರಾಥಮಿಕ ಶಿಕ್ಷಣ ಕೊಡಲ್ಪಡಬೇಕು.''

ಮುದವೀಡು ಕೃಷ್ಣರಾಯರು—1939

" ಕರ್ನಾಟಕದಲ್ಲಿ ಯಾವ ಭಾಷೆಯಾದರೇನು ? ಭಾಷೆಗೆ ಸುಮ್ಮನೆ ಹೆಚ್ಚಳ ಕೊಟ್ಟು ಹುಯ್ಲು ಎಬ್ಬಿಸಬೇಡಿರಿ " ಎಂಬ ಉಪದೇಶವನ್ನು ಕನ್ನಡಿಗರಿಗೆ ಕನ್ನಡಿಗರೂ ಕನ್ನಡಿರಗಲ್ಲದವರೂ ಹಿಂದೆ ಮಾಡಿದ್ದಾರೆ ಇನ್ನೂ ಮಾಡುತ್ತಾರೆ. ಕಾಂಗ್ರೇಸಿನ ಕಾರ್ಯಕ್ಷೇತ್ರದಲ್ಲಿ ಕರ್ನಾಟಕವು ಬೇರೆ ಪ್ರಾಂತವಾಗಿ ಅದರ ಸಾರ್ವಜನಿಕ ಜೀವನದ ಭಾಷೆ ಕನ್ನಡವೆಂದು ಅದರ ಮೂಲ ಘಟನೆಯಲ್ಲಿ ಸ್ಪಷ್ಟವಾಗಿ ಸಾರಲಾಗಿದ್ದರೂ ಕಾಂಗ್ರೇಸ್ ಕಮಿಟಿಗಳಲ್ಲಿ, ಕಾಂಗ್ರೇಸಿನ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಮರಾಠಿ, ತೆಲುಗು ಭಾಷೆಗಳು ಕನ್ನಡವನ್ನು ಹಿಂದಕ್ಕಿಟ್ಟು ತಾವು ಮುಂದಾದುದುಂಟು. ಇದು ಯಾವ ನ್ಯಾಯ ?.... ನುಡಿಯಿಲ್ಲದ ನಾಡು ನಾಡಲ್ಲ ಕಾಡು. ನುಡಿಯಿಂದಲೇ ನಾಡು. ಸ್ವಾತಂತ್ರ್ಯೋನ್ಮುಖವಾದ ಅಖಂಡ ಭಾರತದ ಯಾವುದೇ ಪ್ರಾಂತದ ಭಾರತ ವರ್ಷೀಯ ಮಾನ್ಯತೆ ಪಡೆದ ಮುಖಂಡರು ತಮ್ಮ ಪ್ರಾಂತದ ಪ್ರಮುಖ ಭಾಷೆಯನ್ನು ಎಂದೂ ಬಿಟ್ಟಿಲ್ಲ, ತಿರಸ್ಕರಿಸಿಲ್ಲ, ಅನಾದರಿಸಿಲ್ಲ. " ಗುಜರಾತು ಮತ್ತು ಗುಜರಾತಿ ಇವುಗಳ ಮುಖಾಂತರವಾಗಿಯೇ ನಾನು ಭಾರತದ ಸೇವೆಯನ್ನು ಮಾಡುವುದಂ'' ಎಂದು ಮಹಾತ್ಮಾಜಿಯವರೇ ಹಿಂದೆ ಹೇಳಿದ್ದಾರೆ".

ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳು — 1940

''ಸಾಹಿತ್ಯಸೇವೆಯಲ್ಲಿ ಜಾತಿ ಮಂತ ಪಂಥಗಳ ತೊಡಕಿಗೆ ಕಿಂಚಿತ್ತಾದರೂ ಅವಕಾಶ ವಿಲ್ಲವೆಂಬುದಕ್ಕೆ ಈ ಸಭೆಯೇ ಸಾಕ್ಷಿಯಾಗಿರುತ್ತದೆ. ಕನ್ನಡ ತಾಯಿಯಮಕ್ಕಳಾದ ನಾವುಗಳೆಲ್ಲ ಏಕ್ಯರೆಯಿಂದ ಒಂದೇ ಕುಟುಂಬದವರಂತೆ ಇಲ್ಲಿ ಕೂಡಿರುತ್ತೇವೆ. ನಮ್ಮ ಕರ್ನಾಟಕದಲ್ಲಿ ಜಾತಿಜಾತಿಗಳೊಳಗೆ ಮೇಲಿಂದಮೇಲೆ ದುಃಖಾಂತ ನಾಟಕಗಳು ಆಗುತ್ತಲೇ ಇರುತ್ತವೆ. ಇಂತಹ ಜಗಳಗಳಾಗುವುದನ್ನು ನೋಡಿದರೆ ಸ್ವಾಭಿಮಾನಿ ಕನ್ನಡಿಗರಿಗೆ ವ್ಯಸನವಾಗುವುದು ಸಹಜ. ನನಗಂತೂ ಭರ್ಜಿಯಿಂದ ತಿವಿದಷ್ಟು ವೇದನೆಯಾಗುತ್ತದೆ,

ಎ. ಆರ್. ಕೃಷ್ಣಶಾಸ್ತ್ರಿಗಳು—1941

ಕನ್ನಡವು ನಮ್ಮದೆಂಬ ಮಮತೆಯು, ಅಭಿಮಾನವು. ಈಚಿನದು ; ಕನ್ನಡಿಗರಿಗೆ ಕನ್ನಡದಿಂದಲೇ ಭಕ್ತಿ, ಕನ್ನಡದಿಂದಲೇ ಮುಕ್ತಿ—ಎಂಬ ತತ್ವವನ್ನು ನಾವು ಪೂರ್ತಿಯಾಗಿ ಗ್ರಹಿಸಿದ್ದು ಈಚೆಗೆ. ಈಗಲೂ ಈ ವಿಚಾರದಲ್ಲಿ ಸ್ವಲ್ಪ ವೀರೋಪಾಸನೆ ಇಲ್ಲದಲ್ಲಿ ಆದು ಬದುಕದು ;

ಏಕದೇವೋಪಾಸಾನೆಯಂತೆ ಏಕಭಾಷೋಪಾಸನೆ ಮಾಡಿದರೆ ತಾನೇ ವರ ಸಿಕ್ಕೀತು ; ಕನ್ನಡ ಭಕ್ತನು, 'ತೈಲಧಾರೆಯಂತೆ ಕನ್ನಡದಲ್ಲಿ ಮನವಕೊಡು ಇಂಗ್ಲಿಷ್, ಸಂಸ್ಕೃತಾ !' ಎಂದು ಪ್ರಾರ್ಥಿಸಬೇಕು ; ವೀರದೀಕ್ಷೆ ವಹಿಸಬೇಕು.

ದ. ರಾ. ಬೇಂದ್ರೆ—1942

ನಮಗೆ ಮೂರು ಏಕೀಕರಣ ಬೇಕು. ಕನ್ನಡದ ಏಕೀಕರಣ, ಕನ್ನಡಿಗರ ಏಕೀಕರಣ, ಕರ್ನಾಟಕದ ಏಕೀಕರಣ. ನಮ್ಮ ಮಾತೇ ಮನಸ್ಸಿನಲ್ಲಿ ನೆಲೆಯೂರಿದೆ. 'ವಾಚ್ ಮೇ ಮನಸಿ ಪ್ರತಿಷ್ಠಿತಾ, ಮನೋ ಮೇ ವಾಚಿ ಪ್ರತಿಷ್ಠಿತಂ'—ಎನ್ನುವಂತಾಗಬೇಕಾದರೆ ಹೊಸ ಕನ್ನಡವು ಹೊಸ ಹಾದಿಯನ್ನು ಹಾಕಬೇಕು. ತುಳು, ಕೊಡಗು, ಕೊಂಕಣಿ, ತೊದ, ಕೋಲ್ ಬಡಗ, ಇರುಳ, ಸೋಲಿಗರ, ನುಡಿಯ ಪಸರವು ಕನ್ನಡ ಶಬ್ದಕೋಶದಲ್ಲಿ ಹೊಂದಿಕೆಯಾಗಿ ಸೇರಬೇಕು. ಆದರೆ ಎಲ್ಲ ಮಾತಿನ ಸಂತೆಯಲ್ಲಿ ಕರ್ನಾಟಕದ ಮಟ್ಟಿಗೆ ಕನ್ನಡವೆ ಸಾರ್ವಭೌಮ ವೆಂದು ನಾವು ಆಚರಣೆಗೆ ತರದಿದ್ದರೆ, ಕಟ್ಟೆಯಿಲ್ಲದ ಕೆರೆಯಂತೆ, ದಂಡೆಯೊಡೆದ ನದಿಯಂತೆ, ಕನ್ನಡವು ಹುಚ್ಚು ಹೊಳೆಯಾದೀತು. ''ಕನ್ನಡದ ಮನೆಯಲ್ಲಿ ಕನ್ನಡಿತಿ ಯಜಮಾನಿ, ಮಿಕ್ಕ ಹೆಂಗಸರೆಲ್ಲ ಒಕ್ಕಲಷ್ಟೇ'' ಎಂಬುದರ ನಿಜವನ್ನು ಅರಿತರೆ ಎಲ್ಲರಿಗೂ ಸುಖವಾದೀತು.

ಶಿ. ಶಿ. ಬಸವನಾಳರು—1944

ಕನ್ನಡದ ಪ್ರಚಾರ ಹಿಂದಿನಂತೆ ಮುಂದೆಯೂ ಸಾಗುವುದು ಹಿತಕರವಾಗಿರುವುದಾದರೂ ಇನ್ನು ಮುಂದಿನ ಪ್ರಚಾರ ಕಾರ್ಯಕ್ರಮದಲ್ಲಿ ಸದ್ಯಕ್ಕೆ ಅತಿ ಮಹತ್ವವೆನಿಸಿದ ಹಲವು ಸಮಸ್ಯೆ ಗಳ ಸೇರ್ಪಡೆಯಾಗಬೇಕಾಗಿದೆ. ಈ ಪ್ರಚಾರಕಾರ್ಯ ಕೆಲವು ದಿಸೆಗಳಲ್ಲಿ ಸತತವಾಗಿ ನಡೆಯು ವುದು ಅತ್ಯಗತ್ಯವಿದೆ. ಮೂಡ ಪಡುವಣ ಗಡಿನಾಡುಗಳಲ್ಲಿ ಕನ್ನಡವನ್ನು ಉಳಿಸಿ ಕಾಪಾಡುವ ಹೊಣೆ ಕನ್ನಡಿಗರಾದ ನಮ್ಮೆಲ್ಲರ ಮೇಲೆಯೂ ಇದೆ. ಆಯಾ ವಿಭಾಗಗಳಲ್ಲಿಯು ಕನ್ನಡ ಜನಸಾಮಾನ್ಯರಲ್ಲೆಲ್ಲ ಜಾಗೃತಿಯನ್ನುಂಟುಮಾಡಿ ಅದು ಸದಾ ಪ್ರಜ್ವಲಿಸುವಂತೆ ನೋಡಿಕೊಳ್ಳುವ ಭಾರವೂ ನಮ್ಮದಾಗಿದೆ.

ಕರ್ನಾಟಕದ ಹೊರಗಡೆಗೆ ಕನ್ನಡಕ್ಕೆ ತಕ್ಕ ವನ್ನಣೆ ದೊರೆಯುವಂತೆ ಪ್ರಚಾರಕಾರ್ಯ ವನ್ನು ಸದ್ಯದಲ್ಲಿಯೇ ಕೈಕೊಳ್ಳುವುದು ಅತ್ಯಗತ್ಯವೆನಿಸುತ್ತದೆ. ಮಾತನಾಡುವವರ ಸಂಖ್ಯೆಯ ದೃಷ್ಟಿಯಿಂದ ಭರತಖಂಡದ ಹತ್ತು ಭಾಷೆಗಳಲ್ಲಿ ಕನ್ನಡ ಒಂದಾಗಿದ್ದರೂ ಕೇಂದ್ರ ಸರ್ಕಾರದ ಪರವಾಗಿ ಅಖಿಲ ಭಾರತ ಆಕಾಶವಾಣಿಯು ಸುದ್ದಿಬೀರುವ ಶಾಖೆಯಲ್ಲಿ ಭರತಖಂಡದ ಇಪ್ಪತ್ತೊನ್ನಾಲ್ಕು ಭಾಷೆಗಳಿಗೆ ಅವಕಾಶವಿರುವಾಗ ಕನ್ನಡಕ್ಕೆ ಆ ಸ್ಥಾನಮಾನಗಳು ದೊರೆಯದೆ ಹೋಗುವುದು ಕನ್ನಡಿಗರಿಗೆಲ್ಲ ಲಾಂಛನಾಸ್ಪದವಲ್ಲವೆ ?

ಟಿ. ಪಿ. ಕೈಲಾಸಂ—1945

ನಾವು ಕರ್ನಾಟಕರು ಎಲ್ಲ ದ್ರಾವಿಡ ಸಂಪ್ರದಾಯಕ್ಕೂ ಒಕ್ಕಲು. ಎಲ್ಲ ದ್ರಾವಿಡ ಭಾಷೆಗೂ ಆಶ್ರಯದಾತರು. ತೆಲುಗು, ತಮಿಳು, ಕೇರಳ ಪ್ರಾಂತಗಳಲ್ಲಿ ಕಾಣದ ಭಾಷಾತೀತವಾದ ಕರ್ನಾಟಕತ್ವ ನಮ್ಮಲ್ಲಿ ಹಿಂದಿನಿಂದಲೂ ಬೆಳೆದುಬಂದಿದೆ. ಅದು ಕರ್ನಾಟಕದ ವೈಶಿಷ್ಟ್ಯ. ಈಗಿನ ಪ್ರಾಂತೀಕರಣದ ರಭಸದಲ್ಲಿ ಈ ವೈಶಿಷ್ಟ್ಯವನ್ನು ಅಲ್ಲಗಳೆಯಬಾರದು. ಒಳಗೂ ಹೊರಗೂ ಎಲ್ಲರೊಡನೆ ಸಮರಸವಾಗಿ ನಡೆದು ನಾವು ಕರ್ನಾಟಕರು ಉಳಿದ ದಾಕ್ಷಿಣಾತ್ಯರಿಗೆ ಮೇಲುಪಂಕ್ತಿಯಾಗೋಣ.

ಈ ಸಮ್ಮೇಳನದಿಂದ ಕರ್ನಾಟಕದ ಏಕೀಕರಣಕ್ಕೆ ಸಹಾಯವಾಗಿದೆ. ಏಕೀಕರಣಕ್ಕಿಂತ ಮುಖ್ಯವಾದದ್ದು ನಮ್ಮ ಜನತೆಯ ವಿಕೀಭಾವ. ಆ ಏಕೀಭಾವವೇ ಕರ್ನಾಟಕದ ನಿಜವಾದ ಅಸ್ತಿಭಾರ. ಆ ಮನೋಭಾವವಿಲ್ಲದೆ ರಾಜಕೀಯ ಏಕೀಕರಣ ಫಲಕಾರಿಯಲ್ಲ.

ಸಿ. ಕೆ. ವೆಂಕಟರಾಮಯ್ಯ—1947

ಪ್ರಪಂಚದ ಮತ್ತಾವ ದೇಶವನ್ನೇ ನೋಡಿದರೂ, ಜೀವನದ ಸಮಸ್ತ ವ್ಯವಹಾರಗಳೂ ದೇಶಭಾಷೆಯಲ್ಲಿ ನಡೆಯುತ್ತಿರುವುದೂ, ದೇಶಭಾಷೆಯ ಮೇಲಿನ ಅಭಿಮಾನವು ಉಕ್ಕಿ ಹರಿಯುತ್ತಿರುವುದೂ ಕಂಡು ಬರುತ್ತವೆ. ಜೀವಾವಧಿ ವ್ಯಾಸಂಗ ಮಾಡಿದರೂ ಪರ ಭಾಷೆಯಾದ ಇಂಗ್ಲಿಷ್ ಭಾಷೆಯಂ ಸ್ವಾಧೀನವಾಗುವುದು ಕಷ್ಟ. ಇಂಗ್ಲಿಷ್ ಭಾಷೆ ಬಂದ ಮಾತ್ರಕ್ಕೇ ಕನ್ನಡ ಭಾಷೆಯನ್ನು ಕನ್ನಡಿಗರೇ ಕಡೆಗಾಣುವುದು ಅಕ್ಷಮ್ಯ ಅಪರಾಧವೇ ಸರಿ. ಕನ್ನಡನಾಡಿನಲ್ಲಿ ದೇಶಭಾಷೆಯೂ ಕನ್ನಡವೇ ಆಗಿರುವುದು ನಮ್ಮ ಪುಣ್ಯ. ಆದಕಾರಣ, ಜೀವನದ ಸಮಸ್ತ ಕಾರ್ಯರಂಗಗಳಲ್ಲಿಯೂ ಕನ್ನಡಕ್ಕೆ ಅಗ್ರಪೂಜೆ ಸಲ್ಲುವಂತಾಗಬೇಕು. ಕನ್ನಡವೆಂದರೆ ಕನ್ನಡಿಗರ ಹೃದಯ ಭಕ್ತಿಯಿಂದ ಅರಳಬೇಕು. ಆಂಧ್ರ ಪ್ರಾಂತದಲ್ಲಿ ತೆಲುಗಿಗೂ ತಮಿಳು ಪ್ರಾಂತದಲ್ಲಿ ತಮಿಳಿಗೂ ಪ್ರಾಧಾನ್ಯವಿರುವಂತೆ ಕನ್ನಡನಾಡಿನಲ್ಲಿ ಕನ್ನಡಕ್ಕೆ ಪ್ರಾಧಾನ್ಯವಿರಲೇಬೇಕು. ಅದನ್ನು ಸಾಧಿಸುವವರೆಗೆ ಕನ್ನಡಿಗರು ಅವಿಶ್ರಾಂತವಾಗಿ ಶ್ರಮಿಸಬೇಕು.

ತಿ. ತಾ. ಶರ್ಮ—1947

ಕನ್ನಡ ನಾಡಿನ ಪ್ರಭುತ್ವಗಳೆಲ್ಲ ಕನ್ನಡ ಪ್ರಭುತ್ವಗಳಾಗಬೇಕು. ಸರಕಾರಗಳ ಸಕಲ ಕಾರ್ಯಕಲಾಪಗಳೂ ಕನ್ನಡ ಭಾಷೆಯ ಮೂಲಕವಾಗಿಯೇ ನಡೆಯಬೇಕು. ಮೈಸೂರು ಸರಕಾರವು ಅಠಾರಾ ಕಚೇರಿಯಲ್ಲಿ ತನ್ನ ವ್ಯವಹಾರವನ್ನೆಲ್ಲ ಕನ್ನಡ ಭಾಷೆಯ ಮೂಲಕವೇ ನಡೆಸುವುದರಲ್ಲಿ ಕಷ್ಟವೇನು ಇಲ್ಲ. ಒಂಬತ್ತು ಜಿಲ್ಲೆಗಳಲ್ಲೂ ಸಹ ಎಲ್ಲ ಆಡಳಿತ ವ್ಯವಹಾರವು ಕನ್ನಡದ ಮೂಲಕವೇ ನಡೆಯವಂತಾಗಬೇಕು. ಅಲ್ಲಿ ಈಗಿರುವ ವ್ಯವಸ್ಥೆಯಂತೆ ಇಂಗ್ಲಿಷ್ ಮತ್ತು ಕನ್ನಡ ಪತ್ರ ವ್ಯವಹಾರ ಶಾಖೆಗಳಿವೆ. ಈ ದ್ವಿಭಾಷಾ ವ್ಯಾಪಾರವೇತಕ್ಕೆ ? ಜಮಾಬಂದಿಗಳಲ್ಲಿ, ಹುಜೂರು ಜಮಾಬಂದಿಗಳಲ್ಲಿ ಹಳ್ಳಿಗಾಡಿನ ಸಾವಿರಾರು ಜನರು ಬಂದು

ಅಮಲ್ದಾರರು, ಜಿಲ್ಲಾಧಿಕಾರಿಗಳೂ ಮೊದಲಾದವರ ಮುಂದೆ ತಮ್ಮ ಮೊರೆಯನ್ನಿಡುವುದು ಕನ್ನಡದಲ್ಲಿ. ಅಧಿಕಾರಿಗಳು ಸಮಾಧಾನವೋ ಭರವಸೆಯೋ ಪರಿಹಾರವೋ ಕೊಡುವುದು ಕನ್ನಡದಲ್ಲಿ. ಅಂದರೇನಾಯ್ತು ? ಕನ್ನಡ ರೈತನ ಕಷ್ಟ ಪರಿಹಾರವಾಗುವುದು ಕನ್ನಡದ ಮೂಲಕವೇ. ಹೀಗಾಗುವುದೇ ಸಹಜ, ನ್ಯಾಯ. ಈ ಸಾಮಾನ್ಯ ತತ್ವವನ್ನು—ಅಲ್ಲ ಸತ್ಯವನ್ನು—ಗ್ರಹಿಸಿದ ಮೇಲೂ ಸಹ ತಾಲ್ಲೂಕು ಮತ್ತು ಜಿಲ್ಲಾ ಆಡಳಿತ ಕಚೇರಿಗಳಲ್ಲೂ ಠಾರಾ ಕಚೇರಿಯ ನಾನಾ ಶಾಖೆಗಳಲ್ಲೂ ವ್ಯವಹಾರ ವ್ಯಾಪಾರವೆಲ್ಲ ವಿದೇಶಿ ಆಂಗ್ಲಭಾಷೆಯಲ್ಲಿ ಬೋರೇಗೌಡನಿಗೆ ಅರ್ಥವಾಗದ ಕೃತಕ ಭಾಷೆಯಲ್ಲೇಕೆ ನಡೆಯಬೇಕು ?

ಉತ್ತಂಗಿ ಚನ್ನಪ್ಪ—1949

ಹತ್ತಾರು ಕಡೆಗೆ ಹರಿದು ಹಂಚಲಾಗಿದ್ದ ನಮ್ಮ ನಾಡಿನ ಶಕ್ತಿ ಹ್ರಾಸ ಹೊಂದುತ್ತ ಬಂದಿದೆ ; ಕನ್ನಡದ ವಿಶಿಷ್ಟ ಸಂಸ್ಕೃತಿ ಕುಂದಿದೆ, ಕಂದಿದೆ. ಕರ್ನಾಟಕ ಏಕೀಕರಣದ ಪ್ರಶ್ನೆ ಮೂಲತಃ ಸಾಂಸ್ಕೃತಿಕವಾದದ್ದು. ನಾವಿಂದು ಬೇಡುತ್ತಿರುವ ರಾಜಕೀಯ ಏಕೀಕರಣವು ಸಾಂಸ್ಕೃತಿಕ ಏಕೀಕರಣಕ್ಕೆ ಒಂದು ಸಾಧನ ಮಾತ್ರ. ಮೊದಲನೆಯದು ಸಾಧಿಸಿದ್ದರೆ ಎರಡನೆಯದರ ಸಿದ್ಧಿಯಾಗದು. ಆದಕಾರಣ ರಾಜಕೀಯ ಏಕೀಕರಣವು ನಮಗಿಂದು ಅತ್ಯಗತ್ಯ. ಭಾಷಾವಾರು ಪ್ರಾಂತೀಕರಣ ತತ್ವವು ಕೇವಲ ಸಾಂಸ್ಕೃತಿಕ ಸ್ವರೂಪದ್ದಾಗಿರುವುದರಿಂದ ಅದು ರಾಷ್ಟ್ರದ ಸಂವರ್ಧನೆಗೆ ಪೋಷಕವಾಗುವುದೇ ಹೊರತು ವಿಘಾತುಕವಾಗುವುದಿಲ್ಲ.

ಯಾರು ಏನೇ ಹೇಳಲಿ, ಕರ್ನಾಟಕದ ಏಕೀಕರಣವು ಕನ್ನಡಿಗರ ಜನ್ಮಸಿದ್ಧ ಹಕ್ಕು. ಏಕತಂತ್ರ ಆಖಂಡ ಕರ್ನಾಟಕವು ನಿರ್ಮಾಣವಾಗಲೇಬೇಕು: ನಿರ್ಮಾಣವಾಗುವುದು. ಆದರೆಲ್ಲಿ ಎಷ್ಟು ಮಾತ್ರವೂ ಸಂದೇಹವಿಲ್ಲ.

ಎಂ. ಆರ್. ಶ್ರೀನಿವಾಸಮೂರ್ತಿ—1950

ಆಡಳಿತದ ಯಂತ್ರದಲ್ಲಿ ಜವಾಬ್ದಾರಿ ವಹಿಸಿ ಕಾರ್ಯನಿರ್ವಾಹ ಮಾಡುತ್ತಿರುವ ಎಲ್ಲರಲ್ಲಿ ನನ್ನದೊಂದು ಅರಿಕೆ : ಜನಸಾಮಾನ್ಯರೊಡನೆ ನಿತ್ಯವೂ ವ್ಯವಹರಿಸಬೇಕಾದ ನಿಮಗೆ ಸಾಹಿತ್ಯದಿಂದ ಒದಗುವ ಸಂಸ್ಕಾರವಿಲ್ಲದೆ ಮನಸ್ಸು ಜಡ್ಡು ಹಿಡಿದು ಹೋದರೆ ದೇಶಕ್ಕೆ ನಷ್ಟವಲ್ಲವೆ ? ನಮ್ಮ ಸಾರಸ್ವತ ಸಂಪತ್ತು ಏನು ? ನಮ್ಮ ಸಂಸ್ಕೃತಿಯ ಸಂಪತ್ತು ಏನು ? ಜನತಾಭಿಪ್ರಾಯ ಸಾಹಿತ್ಯದಲ್ಲಿ ಹೇಗೆ ರೂಪಗೊಳ್ಳುತ್ತಿದೆ ? ಎಂಬುದನ್ನೆಲ್ಲ ನೀವೂ ಚನ್ನಾಗಿ ತಿಳಿದುಕೊಂಡು ಜನರಲ್ಲಿಯೂ ಪ್ರಚಾರಮಾಡುತ್ತ ಬರುವುದು ನಿಮ್ಮ ಕರ್ತವ್ಯವಲ್ಲವೆ ? ಅದು ಜನತೆಯ ಸೇವೆಯಲ್ಲವೆ ? ದಿಗ್ವಿಜಯಕ್ಕಾಗಿ ಸೈನ್ಯಸಮೇತನಾಗಿ ಹೊರಟ ಅಲೆಕ್ಸಾಂಡರ್ ಮಹಾಶಯನು ಇಲಿಯಡ್ ಮಹಾಕಾವ್ಯದ ಪ್ರತಿಯೊಂದನ್ನು ತಲೆದಿಂಬಿನ ಕೆಳಗೆ ಇಟ್ಟುಕೊಂಡೇ ಇರುತ್ತಿದ್ದನಂತೆ ! ಯುದ್ಧಭೂಮಿಯಲ್ಲಿದ್ದರೂ ಅವಕಾಶಮಾಡಿಕೊಂಡು ಆ

ಮಹಾಕಾವ್ಯವನ್ನು ಆಗಾಗ ಓದುತ್ತಿದ್ದನಂತೆ. ಅವನು ಸಾಧಿಸಿದ್ದಕಿಂತ ಹೆಚ್ಚಾಗಿ ನೀವೇನು ಸಾಧಿಸಬಲ್ಲಿರಿ? ಆದ್ದರಿಂದ ಕನ್ನಡ ಸಾಹಿತ್ಯದಲ್ಲಿ ವಿಶ್ವಾಸವಿಡಿ; ನಿಮ್ಮ ನಿತ್ಯಕಾರ್ಯ ಕ್ರಮಗಳ, ಚಟುವಟಿಕೆಗಳ ಮಧ್ಯದಲ್ಲಿ ಸಾಹಿತ್ಯ ವ್ಯಾಸಂಗಕ್ಕೂ ಸ್ವಲ ಕಾಲವನ್ನು ಮೀಸಲಾಗಿಡಿ.

ಎಂ. ಗೋವಿಂದ ಪೈ—1951

ಅನೇಕಾನೇಕ ಜೀನುನೊಣಗಳು ಹುಟ್ಟನ್ನು ಕಟ್ಟಿ ಅದರಲ್ಲಿ ಜೇನು ತೀವಂತೆ ಬರಹ ಗಾರರಂ ತಂತಮ್ಮ ಗುರಿಯಿಂದ ಕಣ್ಣೊಳಲದೆ, ಧಾವಿಸದೆ, ವಿಶ್ರಮಿಸದೆ, without haste without rest, ಜಾಗ್ರತೆಯಾಗಿ, ನಿಧಾನವಾಗಿ, ಸರ್ವಾತ್ಮನಾಗೇಯುತ್ತ ಕೆಲಸದ ಹಾದಿಯಲ್ಲಿ ಸಾಗುತ್ತಲಿದ್ದರೆ, ನಮ್ಮ ಕನ್ನಡ ಸಾಹಿತ್ಯವೂ ಜಗತ್ತಿನ ಉತ್ತಮೋತ್ತಮವಾದ ಸಾಹಿತ್ಯದ ಚೂಣಿಯಲ್ಲಿ ನಿಲ್ಲಬಲ್ಲುದು, ಬಾಳಬಲ್ಲುದು. ಆ ಬಗ್ಗೆ ಎಲ್ಲಕ್ಕೂ ಮೇಲಾಗಿ ಬರಹದಲ್ಲಿ ಹುರುಳಿರಬೇಕು, ತಿರುಳಿರಬೇಕು, ಸಾಕಷ್ಟು ಮರುಳೂ ಇರಬೇಕು.

ಎಸ್. ಸಿ. ನಂದಿಮಠರು—1952

ಏಕೀಕರಣವಾದಾಗಲೇ ಕರ್ನಾಟಕದ ಎಷ್ಟೋ ಜಟಿಲ ಪ್ರಶ್ನೆಗಳನ್ನು ಬಿಡಿಸಲು ಸಾಧ್ಯವಾಗುವುದೆಂದೂ ಅಲ್ಲಿಯವರೆಗೆ ಕರ್ನಾಟಕದ ಸರ್ವೋತೋಮುಖ ಅಭಿವೃದ್ಧಿಯು ಸಾಧ್ಯವಿಲ್ಲವೆಂದೂ ಕನ್ನಡಿಗರೆಲ್ಲರಿಗೂ ಮನವರಿಕೆಯಾಗಿದೆ.

ಕರ್ನಾಟಕ ಏಕೀಕರಣದಿಂದ ಕನ್ನಡಿಗರಲ್ಲಿ ಸಾಂಸ್ಕೃತಿಕ ಸಂಪರ್ಕವೂ ಹೆಚ್ಚುತ್ತ ಹೋಗುವುದು. ಕರ್ನಾಟಕದ ವ್ಯಾಪಾರ ಉದ್ಯೋಗಗಳ ಅಭಿವೃದ್ಧಿಗಂತೂ ಏಕೀಕರಣ ತೀರ ಅವಶ್ಯವೆಂದು ಬೇರೆ ಹೇಳಬೇಕಾಗಿಲ್ಲ. ಈ ಪ್ರಕಾರ ಆಡಳಿತೆಯ ದೃಷ್ಟಿಯಿಂದ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಮತ್ತು ವ್ಯಾಪಾರೋದ್ಯೋಗಗಳ ದೃಷ್ಟಿಯಿಂದ ಕರ್ನಾಟಕ ಏಕೀಕರಣವು ಬಹು ಮಹತ್ವವಾದುದು.

1953 ರಲ್ಲಿ ಕುಮಟದಲ್ಲಿ ನಡೆದ ಮೂವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ವಿ. ಸೀತಾರಾಮಯ್ಯನವರು ಮಾಡಿದ ಅಧ್ಯಕ್ಷ ಭಾಷಣ :—

" ಮೊನ್ನೆ ಮೊನ್ನೆಯವರೆಗೂ ಮೈಸೂರಿನಲ್ಲಿ ಕನ್ನಡಕ್ಕೆ, ಪ್ರಧಾನ ಗೌರವ ಹೋಗಲಿ ಸಾಮಾನ್ಯ ಪ್ರಭಾವ ಕೂಡ ಇರಲಿಲ್ಲ. ಇಂದೂ ಎಷ್ಟಿದೆಯೋ ಕಾಣೆ. ಮಾತಿನಲ್ಲಿ ಕೆಲವರಂ ಸಹಾನುಭೂತಿ ತೋರಿಸಿ ಪ್ರೋತ್ಸಾಹವನ್ನೂ ಅಲ್ಪ ಸ್ವಲ್ಪ ನೆರವನ್ನೂ ಕೊಟ್ಟುದುಂಟು. ಸರ್. ಎಂ. ವಿಶ್ವೇಶ್ವರಯ್ಯನವರ ಮತ್ತು ಎಚ್. ವಿ. ನಂಜುಂಡಯ್ಯನವರ ದೂರದರ್ಶನದಿಂದ ಪರಿಷತ್ತಿನಂತಹ ಸಂಸ್ಥೆ ಹುಟ್ಟಿತು. ಮೈಸೂರು ಮಹಾರಾಜರು ಕನ್ನಡಿಗರ ಆದರ್ಶಕ್ಕೂ ಏಳಿಗೆಗೂ ಪ್ರೋತ್ಸಾಹ ಕೊಟ್ಟರು. ಕನ್ನಡದ ಅಭಿವೃದ್ಧಿಯಾಗಬೇಕೆಂಬ ಅಭಿಮಾನದಿಂದ ವಿಶ್ವವಿದ್ಯಾನಿಲಯದಲ್ಲಿ ಕೂಡ ಪ್ರಚಾರ ಕಾರ್ಯ ನಡೆಯಬೇಕೆಂದು ನಿರ್ದೇಶಮಾಡಿದರು. ಆಗಾಗ ಎಲ್ಲೋ ಕೆಲವು ದೊಡ್ಡ ಅಧಿಕಾರಿಗಳೂ ನೆರವು ಪ್ರೋತ್ಸಾಹಗಳನ್ನು ಕೊಟ್ಟುದುಂಟು. ಆದರೆ ಮೈಸೂರಿನ ಜನ ಇಂಗ್ಲೀಷಿಗೂ ಅಖಿಲ ಭಾರತ ಪ್ರಯೋಜನವೆಂಬ ಮತ್ತು ಅಂತರ ರಾಷ್ಟ್ರೀಯವೆಂಬ ಮಾತುಗಳಿಗೂ ಹೆಚ್ಚು ಒಲಿದು—ಇದು ತಪ್ಪಲ್ಲ, ಆದರೆ—ಪ್ರಾಂತಭಾಷೆಯನ್ನು ಉಪೇಕ್ಷೆಮಾಡಿದರು. ಸ್ವಾಭಿಮಾನವಿಲ್ಲದ ಜನಕ್ಕೆ ಇನ್ನಾವ ಮಾನ ದೊರಕೀತು ? ಅವರು ಇನ್ನೊಬ್ಬರಿಗೆ ದುಡಿವ ಜನವಾದಾರು. ಗಳಿಸಿದ ನಮ್ಮದನ್ನು ಇನ್ನೊಬ್ಬರಿಗೆ ಕೊಟ್ಟರೆ ಇನ್ನೊಬ್ಬರಿಂದ ನಾವು ಬೆಲೆಯನ್ನು ಕೊಳ್ಳಬಹುದು. ಇಲ್ಲವಾದರೆ ಅವರ ಕೈಂಕರ್ಯವೇ ನಮಗೆ ಸಿದ್ಧಿ. ಇಂದಿಗೂ ತಿಳಿದವರೆಂಬ ಇಲ್ಲಿನ ಹಲವರ ಮಾತಿನಲ್ಲಿ ಬಹು ಮಟ್ಟಿಗೆ ಆ ಮನಸ್ಸೇ ಉಳಿದು ಕನ್ನಡಕ್ಕೆ ಇನ್ನೂ ಕೇಳ್ಮೆಯೇ ಇದೆ."

1955 ರಲ್ಲಿ ರಾಯಚೂರಿನಲ್ಲಿ ನಡೆದ ಮೂವತ್ತೈಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಆದ್ಯ ರಂಗಾಚಾರ್ಯರವರು ಮಾಡಿದ ಅಧ್ಯಕ್ಷ ಭಾಷಣ :—

" ಸಾಹಿತ್ಯವೇ ನನ್ನ ಜೀವನದ ಉಸಿರಾಗಿದೆ ; ಉಚ್ಚ ಅಧಿಕಾರ ಸ್ಥಾನದಲ್ಲಿ ಸುಖದಿಂದ ಇರುವುದಕ್ಕಿಂತ ಉಪವಾಸದಿಂದಿದ್ದರೂ ಸಾಹಿತಿಯಾಗಿರುವುದು ನನಗೆ ಮೆಚ್ಚಿಗೆಯಾಗಿದೆ. ಸಾಹಿತ್ಯದಲ್ಲಿ ದ್ವಂದ್ವಾತೀತ ಸುಖವಿದೆ ; ಅದಕ್ಕಾಗಿಯೇ ಸುಖದುಃಖದ ದ್ವಂದ್ವ ರಾಜಕಾರಣದಲ್ಲಿ ಸಾಹಿತಿ ಸೇರುವುದು ಅಗೌರವ ಎಂದು ನಾನು ತಿಳಿಯುತ್ತೇನೆ. ದೇಶವು ಪರಕೀಯರ ದಾಸ್ಯದಲ್ಲಿದ್ದಾಗ ರಾಜಕೀಯಕ್ಕೆ ಅನಿವಾರ್ಯವಾಗಿ ಪ್ರಾಧಾನ್ಯವಿದ್ದಿತು. ಇಂದು ದೇಶ ಸ್ವತಂತ್ರವಾಗಿದೆ. ದೇಶದ ಸ್ವಾಸ್ಥ್ಯ—ಗೌರವಗಳು ಬೆಳೆಯಬೇಕಾಗಿದೆ. ಇದು ಸಂಸ್ಕೃತಿಯ ಮಾತು, ಎಂದರೆ ಸಾಹಿತ್ಯದ ಮಾತು. ನಮ್ಮ ದೇಶದ ಸಾಹಿತ್ಯವು ಯಾವ ಮಟ್ಟದಲ್ಲಿರುವುದೋ ಆ ಮಟ್ಟಕ್ಕೆ ಅದರ ಸಂಸ್ಕೃತಿ ನಿಲ್ಲುವುದು. ನಮ್ಮ ಸಾಹಿತಿಗಳು ಒಂದೆಡೆ ನಮ್ಮ ಸಂಸ್ಕೃತಿಯ ಪ್ರತೀಕರಾಗಿರಬೇಕು, ಇನ್ನೊಂದೆಡೆ ಸಂಸ್ಕೃತಿಯ ಬದಲಾವಣೆಯ ಜನಕರಾಗಿರಬೇಕು. ಎಂದರೇನೆ ಅವರು ನಮ್ಮ ಸಾಹಿತಿಗಳು."

1957 ರಲ್ಲಿ ಧಾರವಾಡದಲ್ಲಿ ನಡೆದ ಮೂವತ್ತೊಂಬತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಕೆ.ವಿ. ಪುಟ್ಟಪ್ಪನವರು ಮಾಡಿದ ಅಧ್ಯಕ್ಷ ಭಾಷಣ :—

" ಸಾಹಿತ್ಯ ಅನೇಕ ವಿಧವಾಗಿರುವಂತೆ ಅದರ ಪ್ರಯೋಜನಗಳೂ ಅನೇಕ ವಿಧವಾಗಿವೆ, ಸಮಾಜವನ್ನಾಗಲಿ, ದೇಶವನ್ನಾಗಲಿ, ವ್ಯಕ್ತಿಯನ್ನಾಗಲಿ, ಉತ್ತಮತೆಯ ಕಡೆಗೊಯ್ಯುವ ಊರ್ಧ್ವಮುಖಿಯಾದ ಉದ್ಧಾರಶಕ್ತಿ ಎಲ್ಲೆಲ್ಲಿ ಇರುತ್ತದೆಯೋ ಅದೆಲ್ಲವೂ ನಮಗೆ ಗ್ರಾಹ್ಯ, ಸ್ವೀಕಾರಯೋಗ್ಯ. ಅದಕ್ಕೆ ವಿರುದ್ಧವಾಗಿ ಅಧೋಮುಖಿಯಾದುದು ಎಷ್ಟು ಸ್ವಾರಸ್ಯವಾಗಿರಲಿ ತ್ಯಾಜ್ಯ ಮತ್ತು ಖಂಡನೀಯ. ಅದರ ದಮನಕ್ಕೆ ದಾಕ್ಷಿಣ್ಯ ಅಡ್ಡಬರಬಾರದು; ಏಕೆಂದರೆ ಅದರಿಂದ ಮಾನವೀಯತೆಗೆ ಹಾನಿ ಮತ್ತು ಆತ್ಮಶ್ರೀಗೆ ಗ್ಲಾನಿ."

1958ರಲ್ಲಿ ಬಳ್ಳಾರಿಯಲ್ಲಿ ನಡೆದ ನಲವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ವಿನಾಯಕ ಕೃಷ್ಣ ಗೋಕಾಕರು ಮಾಡಿದ ಅಧ್ಯಕ್ಷ ಭಾಷಣ :—

" ಕನ್ನಡಕ್ಕೆ, ಭಾರತೀಯತೆ, ವಿಶ್ವಮಾನವತೆ—ಇವು ಪದರಿನ ಮೇಲಿನ ಪದರಂ ಇಲ್ಲವೆ ಸ್ತರದ ಮೇಲಿನ ಸ್ತರವಲ್ಲ. ದೇಹದಲ್ಲಿಯೇ ಪ್ರಾಣಮಯವಿದೆ : ಪ್ರಾಣಮಯದಲ್ಲಿಯೇ ಮನೋಮಯವಿದೆ : ಮನೋಮಯದಲ್ಲಿಯೇ ವಿಜ್ಞಾನಮಯವಿದೆ. ಹೀಗೆ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಮೇಲೆ ಹೇಳಿದ ಮೂರು ಮೌಲ್ಯಗಳೂ ಒಂದರೊಳಗೊಂದು ಬೆರೆತುಕೊಂಡಿವೆ. ಭಾರತೀಯ ಸಮಸ್ಯೆ ಮುಂದೆ ಬಂದಾಗ ಉಳಿದೆರಡು ಮೌಲ್ಯಗಳೂ ಬದಿಗೆ ಸರಿಯುತ್ತವೆ. ವ್ಯಕ್ತಿಯ ಭಾರತೀಯ ಪ್ರಜ್ಞೆ, ಸಮಸ್ಯೆಯನ್ನು ಎದುರಿಸುತ್ತದೆ. ವಿಶ್ವದ ಪ್ರಶ್ನೆ ಎದುರಾದಾಗ ವ್ಯಕ್ತಿಯ ವಿಶ್ವಮಾನವತೆ ಮಾತ್ರ ಜಾಗೃತವಾಗುತ್ತದೆ. "

1960ರಲ್ಲಿ ಮಣಿಪಾಲದಲ್ಲಿ ನಡೆದ ನಲವತ್ತೆರಡನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅ. ನ. ಕೃಷ್ಣರಾಯರು ಮಾಡಿದ ಅಧ್ಯಕ್ಷ ಭಾಷಣ :—

" ವಿಶ್ವ ಸಿಡಿದೊಡೆಯದಂತೆ ಅದನ್ನು ಕಾಪಾಡಬಲ್ಲದು ಮಾನವೀಯತೆಯೊಂದೇ—ಕವಿ ಆ ಮಾನವೀಯತೆಯ ಪ್ರವಾದಿ."

1961 ರಲ್ಲಿ ಗದಗದಲ್ಲಿ ನಡೆದ ನಲವತ್ತಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಕೆ. ಜಿ. ಕುಂದಣಗಾರರು ಮಾಡಿದ ಅಧ್ಯಕ್ಷ ಭಾಷಣ :—

" ಇಂದು ಹುಟ್ಟಿ ನಾಳೆ ಸಾಯುವ ಸಮಾಜ ವಿಘಾತಕಾರಿಯಾದ ಕೃತಿರಚನೆ ಅವಶ್ಯವಾಗಿ ನಿಲ್ಲಬೇಕು. ಜನ ಕೊಳ್ಳುತ್ತಿದೆಯೆಂದು ಬೇಕುಬೇಕಾದುದನ್ನು ಬರೆಯತೊಡಗಿದರೆ ಅದು ಹೊಣೆಗಾರಿಕೆಯಿಲ್ಲದ್ದಮಾತಾದೀತು. ಶಾಶ್ವತವಾದ ಕೃತಿ ಬರೆಯಬೇಕಾದರೆ ಜೀವನದಲ್ಲಿ ತಪಸ್ಸು ಮಾಡಬೇಕಾಗುವುದು ; ಅದನ್ನು ಸರಿಯಾಗಿ ಸಮಗ್ರವಾಗಿ ನಿರೀಕ್ಷಿಸಬೇಕಾಗುವುದು."

1963 ರಲ್ಲಿ ಸಿದ್ಧಗಂಗಾ ಕ್ಷೇತ್ರ—ತುಮಕೂರಿನಲ್ಲಿ ನಡೆದ ನಲವತ್ತನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ರಂ. ಶ್ರೀ ಮುಗಳಿಯವರು ಮಾಡಿದ ಅಧ್ಯಕ್ಷ ಭಾಷಣ :—

" ಕನ್ನಡ ಸಾಹಿತ್ಯದ ರಸಸ್ಪರ್ಶದಿಂದ ಕನ್ನಡಿಗರ ಭಾವೈಕ್ಯವಾಗಬೇಕು. ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗಳು ಅಚ್ಚುಕಟ್ಟಾದ ಬಗೆಯಲ್ಲಿ ಮುನ್ನಡೆಯಬೇಕು, ಮೇಲ್ಮೈಯನ್ನು ಪಡೆಯಬೇಕು ಎಂಬ ಉತ್ಕಟ ಭಾವನೆ ನನ್ನ ಎಲ್ಲ ಮಾತುಗಳನ್ನೂ ಪೋಣಿಸಿದ ವಿಕಸೂತ್ರವಾಗಿದೆ."

1965ರಲ್ಲಿ ಕಾರವಾರದಲ್ಲಿ ನಡೆದ ನಲವತ್ತೈದನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಕಡೆಂಗೋಡ್ಲು ಶಂಕರಭಟ್ಟರು ಮಾಡಿದ ಅಧ್ಯಕ್ಷ ಭಾಷಣ :—

"ಮಾತಿಗೆ ವಿದ್ಯುತ್ಕರಣದ ವ್ಯಾಪನಶಕ್ತಿಯಿದೆ. ಒಬ್ಬನಿಂದ ಇನ್ನೊಬ್ಬನಿಗೆ. ಒಂದು ಭಾಷೆಯಿಂದ ಇನ್ನೊಂದಕ್ಕೆ. ಒಂದು ಸೀಮೆಯಿಂದ ಇನ್ನೊಂದು ಖಂಡಕ್ಕೆ ಹರಿದು ಹಬ್ಬುವ ಸ್ವಭಾವವುಳ್ಳ ಅದನ್ನು ಹಿಡಿಯುವ ಸಮಾನ ಬುದ್ಧಿ ಭಾವನೆಗಳ ಸಂಗ್ರಹಪಾತ್ರಗಳು ಎಲ್ಲೆಲ್ಲಿಯೂ ಇರಬಹುದು. ಅವು ವಿಪುಲವಾಗಿದ್ದರೆ, ಆ ಮಾತಿನ ಕವಿಯನ್ನು ವಿಶ್ವವು ಗುರುತಿಸುವುದು.''

1967ರಲ್ಲಿ ಶ್ರವಣಬೆಳಗೊಳದಲ್ಲಿ ನಲವತ್ತಾರನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಆ. ನೇ. ಉಪಾಧ್ಯೆಯವರು ಮಾಡಿದ ಭಾಷಣ :—

"ಒಂದು ವಿಷಯದ ಮೇಲೆ ಗ್ರಂಥವನ್ನು ರಚಿಸಬೇಕಾದರೆ ಆ ವಿಷಯಕ್ಕೆ ಸಂಬಂಧಿಸಿದ ಸಮಗ್ರ ಸಾಹಿತ್ಯವನ್ನು ವಿವಿಧ ಭಾಷೆಗಳಲ್ಲಿ ಇಂದಿನವರೆಗೆ ಪ್ರಕಟವಾದ ಗ್ರಂಥಗಳೆಲ್ಲವನು ಅವಲೋಕಿಸಬೇಕಾಗುತ್ತದೆ. ಆಮೇಲೆ ನಾವು ಕೈಗೊಳ್ಳುವ ಗ್ರಂಥರಚನೆಯಿಂದ ಕನ್ನಡಕ್ಕೆ ಏನಾದರೂ ನೀಡಿದಂತಾಗುತ್ತದೆ."

1970ರಲ್ಲಿ ಬೆಂಗಳೂರಿನಲ್ಲಿ ನಡೆದ ನಲವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ದೇ. ಜವರೇಗೌಡರವರು ಮಾಡಿದ ಅಧ್ಯಕ್ಷ ಭಾಷಣ :—

"ಕಾಲ ಕೂಡಿಬಂದಾಗ ಜಡದಲ್ಲಿ ಚೇತನ ಸಂಚಾರವಾಗುತ್ತದೆ. ತೃಣ ಪರ್ವತವಾಗುತ್ತದೆ, ಮಣ್ಣು ಬಂಗಾರವಾಗುತ್ತದೆ; ಅನುಕೂಲ ವಾತಾವರಣ ತಾನಾಗಿಯೇ ಸೃಷ್ಟಿಯಾಗುತ್ತದೆ, ನಿಮಿತ್ತ ಶಕ್ತಿಗಳನ್ನು ಸೃಷ್ಟಿಸಿಕೊಳ್ಳುತ್ತದೆ; ಆಗ ಎಂಥ ವಿರೋಧಿ ಶಕ್ತಿಗಳೂ ಸ್ತಬ್ಧವಾಗುತ್ತವೆ, ಅಡ್ಡ ಬಂದ ಪರ್ವತವೇ ಚೂರ್ಣೀಕೃತವಾಗುತ್ತದೆ; ಪ್ರತಿಗಾಮಿ ಶಕ್ತಿಗಳು ನೆರೆಯೊಡನೆ ತೇಲಿದರೆ ಬಚಾವು, ಅದಕ್ಕಭಿಮುಖವಾದರೆ ಸಾವು. ಕನ್ನಡದ ಬೆಳವಣಿಗೆಗೆ ಸಂಬಂಧಿಸಿದ ಪೂರ್ವ ಸಿದ್ಧತೆಗಳೆಲ್ಲ ಮುಗಿದು, ಸಾಧನೆ ಸಿದ್ಧಿಯಾಗಿ ಪರಿಣಮಿಸುವ ಸುವರ್ಣ ಸಮಯದಲ್ಲಿದ್ದೇವೆ."

ವಿಶೇಷ ಕವನಗಳು

ಹಂಪೆಯಲ್ಲ

ಬಾ ಇಲ್ಲಿ, ಬಾ ಇಲ್ಲಿ ; ಕನ್ನಡಿಗ, ಬಾ ಇಲ್ಲಿ ;
ವೈಮೆಯನುಂ ಕಂಡರಿಯದಿಹ ನೀನುಂ, ನೋಡದರ
ಪುಳುಹಿಡಿದ ಹೆಣವನಾದರುಂ, ನೋಡು ಬಾ ಇಲ್ಲಿ !
ವಂಸಣದಲ್ಲಿ ಜಾನಿಪೊಡೆ, ಸಾಧಕನೆ, ಬಾ ಇಲ್ಲಿ :
ಹಂಪೆಯಿಂದಂ ಕಲಿಯಂಗದ ಪಸಿಯ ಹಿರಿಮಸಣ ;
ಕನ್ನಡಾಂಬೆಯ ಮುಡಿಯುಂ ಸಿಡಿದು ಒಡೆದುದು ಇಲ್ಲೆ
ನಿನಗೆ ಕಂಬನಿ ಇದೆಯೆಂ ? ಕಬ್ಬಿಗನೆ, ಸುರಿಸು ಬಾ.
ಕಾಶಿಗೇತಕೆ ಹೋಗುತಿಹೆ, ಯಾತ್ರಿಕನೆ ನೀನುಂ ?
ಹಂಪೆ ತೆಂಕಣ ಕಾಶಿ : ಬೀರದಿಂ ಪುಡಿಪುಡಿಯಂ
ಮರಣದಿ ಪವಿತ್ರತರವಾದ ಕಾಶಿಯಿಂದಂ ಕೇಳ್.
ಯೋಗಿ ವಿದ್ಯಾರಣ್ಯ ನಡಿಯ ಪುಡಿ ಇಹುದಿಲ್ಲಿ ;
ಮೃತ್ಯು ಪಾವನಗೈದ ಶುಭತರಕ್ಷೇತ್ರವಿದು ;
ಪಾಳಾದ ಕನ್ನಡಾರಾವಂವಿದುಂ ; ಕನ್ನಡಿಗ
ಯಾತ್ರಿಕನೆ, ಬಾ ಇಲ್ಲಿ ; ಬೇಡುವೆನು, ಬಾ ಇಲ್ಲಿ ;
ಹಂಪೆಯಂ ವಿರೂಪಾಕ್ಷ ಭಕ್ತರನೆದುರಂ ನೋಡಿ
ಕಂಬನಿಯಂ ಸೂಸುತಿಹನಿಲ್ಲಿ ; ಬಾ ಇಲ್ಲಿ ;
ವಿಕಾಂಗಿಯಾಗಿಹನುಂ ; ಅಯ್ಯೊ ಬೇಸತ್ತಿಹನು
ಭಗವಂತ, ಓಡಿ ಬಂದಪ್ಪುವನುಂ ಭಕ್ತನನುಂ ;
ಬಾ, ಇಲ್ಲಿ ಬಾ ; ಬಾ, ಇಲ್ಲಿ ಬಾ ;

—ಕುವೆಂಪು

ಕರ್ನಾಟಕ ರಾಜ್ಯೋದಯ ಶ್ರೀಗೀತೆ

ಓಂ ದ್ಯೌಃ ಶಾಂತಿರಂತರಿಕ್ಷಂ ಶಾಂತಿಃ ।
ಪೃಥಿವೀಶಾಂತಿರಾಪಃ ಶಾಂತಿರೋಷಧಯಃ ಶಾಂತಿಃ ।
ವನಸ್ಪತಯಃ ಶಾಂತಿರ್ವಿಶ್ವೇದೇವಾಃ ಶಾಂತಿರ್ಬ್ರಹ್ಮ ಶಾಂತಿಃ ।
ಸರ್ವಂ ಶಾಂತಿಃ ಶಾಂತಿರೇವ ಶಾಂತಿಃ ॥

ಬಾರಮ್ಮ ದೇವಿ,
ಓ ತಾಯಿ ಭಾರತಿಯೆ, ನಿನ್ನ ಮಂಗಳನು ಹರಸು.
ವರಂಷ ಒಂಬತ್ತರಾಚೆಯಂಲಿ ಬಂಧನವುಂಕ್ತಳಾದಂದು
ನೀ ಕಂಡ ಕನಸು,
ಎರಡು ಕೋಟಿಯ ಹೃದಯದಲಿ ಶತಮಾನದಿಂ ಕುದಿದ ಒಮ್ಮನಸು,
ದಂರ್ಮುಖಿಯೆ ಸಂಮುಂಖಿ ತಾನಾದ ದೀವಳಿಯ ಸುದಿನದಿಂದು
ತಾನಾಗಿಹುದು ನನಸು ;
ಪುಲಕಿಸುತ್ತಿದೆ ಪಡುಗಡಲ್ ;
ರೋಮಾಂಚನದಿ ನಿಮಿರುತಿದೆ ಸಹ್ಯಾದ್ರಿ ;
ಗಂಧ ಚವರಿಯ ಬೀಸುತಿದೆ ಮಲಯ ವನಸೀಮೆ ;
ಪಕ್ಷಿ ಕೋಟಿಯ ಕಂಠ ಘೇಘೋಷಮುಕ್ಕುತಿದೆ
ದಿಕ್ಕು ಕಿವಿಗೆಡುವಂತೆ, ದೇವರ್ಕಳೊಲಿವಂತೆ
ಕಾರ್ತಿಕದ ಬಾನ್ನೀಲಿ ತಾಂ ಶಾಂತಿಯಾಲಿಂಗನದಿ
ಕನ್ನಡವ ನೆಲಮಂಗಳನಪ್ಪಿ ಚುಂಬಿಸುವಂತೆ ;
ನಮಿಸುತಿದೆ ತುಹಿನಗಿರಿ ಚಾಮುಂಡಿಯಂ ;
ಗಂಗೆ ಓಲೈಸಿಹಳು ಕಾಣೆ ತಾಯಿ ತುಂಗೆಯಂ ;
ನಿನ್ನ ಮಂಗಳಭ್ಯುದಯ ನಿನಗೆಭ್ಯುದಯಮಲ್ತೆ
ಬಾರಮ್ಮ ದೇವಿ,
ಓ ತಾಯೆ ಭಾರತಿಯೆ, ನಿನ್ನ ಮಂಗಳನು ಹರಸಿ
ಹಾಡು ಓಂ ಶಾಂತಿಯಂ,
ನಿನ್ನ ಋಷಿಜನ ಬರಲಿ,
ನಿನ್ನ ಕವಿಜನ ಬರಲಿ,
ನಿನ್ನ ಗುರುಜನ ಬರಲಿ,
ನಿನ್ನಖಿಲ ಶ್ರೀವಿಭೂತಿಗಳೆಲ್ಲರೈತರಲಿ ;
ಕನ್ನಡಾಂಬೆಯ ಹರಸಿ ಹಾರೈಸಲಿ ;

ಬರಿಯಂ ಚದರ ಮೈಲಿಗಳಲ್ತು ಕರ್ಣಾಟಕದ ದೇಶ ವಿಸ್ತೀರ್ಣಂ,
ನೆನೆ, ನೆನೆ, ಮನೋವಯದ ಸಂಸ್ಕೃತಿಯ ಕೋಶ ವಿಸ್ತೀರ್ಣಮಂ.
ಮರೆಯದಿರು ಚದರಸಂವತ್ಸರದ ಶತಮಾನಗಳ ಕಾಲವಿಸ್ತೀರ್ಣಮಂ,
ಪ್ರಾಣಮಯ ಭಾವಪ್ರದೇಶ ವಿಸ್ತೀರ್ಣಮಂ,
ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ,
ಓ ಏಳು, ನೃಪತುಂಗದೇವ,
ಕೃಪೆಯಿಟ್ಟು ಕವಿರಾಜಮಾರ್ಗದರಮನೆಯ ಸಿಂಹಾಸನವನಿಳಿದು ಬಾ
ಕರ್ಣಾಟಕದ ನಿನ್ನ ಈ ಹೆಸರ ತಾಯ್ನೆಲಕೆ.
ನೀ ನಂದು ಹಾಡಿದಾ ಕನ್ನಡದ ನಾಡು
ಒಂದುಗೂಡಿದೆ ಇಂದು ಇದೋ ಬಂದು ನೋಡು.
ಸಂವತ್ಸರ ಸಹಸ್ರ ಸೋಪಾನಪಂಕ್ತಿಗಳನಿಳಿದು ಬಿಜಯಗೈ
ಪುಣ್ಯ ದೀಪಾವಳಿಯ ದಿನದ ಈ ರಾಜ್ಯೋದಯ ಮಹೋತ್ಸವಕ್ಕೆ.
ಇಳಿದು ಬರುವಾ ದಾರಿಯೊಳೆ ನಿಂತಿಹರು ಸಾಲುಸಾಲಾಗಿ
ಕನ್ನಡದ ಕುಲದೀಪಧಾರಿಗಳಂ, ಅವರನೂ ಕರೆದು ತಾ.
ಅಲ್ಲಿ ದೊರೆ, ಇಲ್ಲಿ ಕವಿ, ಇಲ್ಲಿ ಸೇನಾನಿ ;
ಇಲ್ಲಿ ಗಾಯಕ, ಅಲ್ಲಿ ಶಿಲ್ಪಿ ;
ಇಲ್ಲಿ ಗುರುಂ, ಅಲ್ಲಿ ರಸಋಷಿ ವಂತ್ತೆ ಅನುಭಾವಿ ;
ದಾರ್ಶನಿಕ, ದ್ರಷ್ಟಾರ, ಸರ್ವಶಾಸ್ತ್ರಜ್ಞಾನಿ ;
ಒಬ್ಬರೆಯೇ ? ಇಬ್ಬರೆಯೇ ? ಕೋಟಿ ಕೋಟಿ !
ಕಡುಂಗ, ಕುಡುಗೋಲು, ಲೆಕ್ಕಣಿ, ಪೇಂಟಿ !
ಹೆಸರಾಂತವರಿಗಿಂತಲೂ ಹೆಸರ ದೌರ್ಬಲ್ಯವನು ದಾಟಿ
ನಿಂತಾ ಮಹಾತ್ಮರೆಯೆ ಕೋಟಿ ಕೋಟಿ ;
ಎಲ್ಲರನು ಕರೆದು ತಾ ಇಂದಿನುತ್ಸವಕ್ಕೆ.
ನಿಮಗೆಲ್ಲ ಸೊಗವಮಕ್ಕೆ, ನಿವಂಗೆಲ್ಲ ಜಯಂಮಕ್ಕೆ,
ನಿಮ್ಮ ಆಶೀರ್ವಾದ ನವಂಗೆ ಶುಭಮಕ್ಕೆ ।

ಓಂ ದ್ಯೌಃ ಶಾಂತಿರಂತರಿಕ್ಷಂ ಶಾಂತಿಃ।
ಪೃಥಿವೀ ಶಾಂತಿರಾಪಃ ಶಾಂತಿರೋಷಧಯಂಃ ಶಾಂತಿಃ।
ವನಸ್ಪತಯಂಃ ಶಾಂತಿರ್ವಿಶ್ವೇದೇವಾಃ ಶಾಂತಿರ್ಬ್ರಹ್ಮ ಶಾಂತಿಃ।
ಸರ್ವಂ ಶಾಂತಿಃ ಶಾಂತಿರೇವ ಶಾಂತಿಃ ॥

—ಕುವೆಂಪು

ಏಕೈಕ ಕರ್ನಾಟಕ

ಕನಸು ನನಸಾಯಿತಿದೊ ಏಕೈಕ ಕರ್ನಾಟಕ!
ಕಣ್‌ನಟ್ಟು ಬಯಸಿ ಕಾಣ್ ದಿಕ್‌ತಟಧ್ವಜಪಟ!

ಕಾವೇರಿ ಸಿರಿಯಂಡಿಯ, ಗೋದಾವರಿಯ ಮುಡಿಯಂ.
ಮೂಡುಮಲೆಯೆಡದ ಗಡಿಯಂ,
ಪಡುಗಡಲ ಬಲದ ತಡಿಯಂ,

ವರ್ಣಶಿಲ್ಪದ ಕಲೆಯಂ ಚೆಲ್ವಿನ ಶಿಲೆಯಂ ಗುಡಿಯ,
ಕನ್ನಡದಿಂಪು ನುಡಿಯಂ ;

ಕನಸು ನನಸಾಯಿಂತಿದೊ ಏಕೈಕ ಕರ್ನಾಟಕ !
ಕಣ್‌ನಟ್ಟು ಬಯಸಿ ಕಾಣ್ ದಿಕ್‌ತಟಧ್ವಜಪಟ !
ಶಿಶುರೂಪಿ, ಪಶುರೂಪಿ, ಜನರೂಪಿ, ಮನರೂಪಿ,
ನವ್ಯಶಾದ್ವಲ ರೂಪಿ,
ಕಲಕಲ ಪಕ್ಷಿರೂಪಿ ;

ನವಸರೋವರದಂತೆ, ನವಶಾಲಿವನದಂತೆ,
ನವಯೌವನದ ಮೊದಲ ನವವಧೂವರರಂತೆ ;
ನವಕವಿಯ ನವರಸ ನವೀನ ಕೃತಿಯಂತೆ;
ದಿವ್ಯ ವೀಣಾಗಾನ ಗತಿಯಂತೆ ;

ಮೂಡುತಿದೆ ನೋಡು ಅದೋ ಏಕೈಕ ಕರ್ನಾಟಕ !
ಕಣ್‌ನಟ್ಟು ಬಯಸಿ ಕಾಣ್ ದಿಕ್‌ತಟಧ್ವಜಪಟ !
ಕನ್ನಡದ ಮಕ್ಕಳಿರ, ಬನ್ನಿರೈ ಓ ಬನ್ನಿ ;
ತನ್ನತನದನಿತನೂ ನಿವೇದಿಸಲು ತನ್ನಿ ;
ತಿರಿಕಿವುಡು ಸೀಳ್ವಂತೆ ನೀಳಿಂಚರದೊಳೆನ್ನಿ ;
"ಭಾರತಾಂಬೆಯ ಕನ್ಯೆ ಕನ್ನಡಾಂಬೆಯೆ ಧನ್ಯೆ !
ಜಯಂತಂ ಜಯ !
ಜಯತು ಜಯ !
ಜಯತು ಜಯ ! ಜಯ ! ಜಯ ! "

—ಕುವೆಂಪು

ಎದ್ದೇಳು ಕನ್ನಡಿಗ

ಎದ್ದೇಳಂ ಕನ್ನಡಿಗ—ಎದ್ದೇಳು ss,
ಶ್ರದ್ಧಾ ಭಕ್ತಿಯಿಂ—ತಾಯ್ನಾಡ ಸೇವೆಗೆ ॥ಪ॥

ಅಖಿಂಡ ಕರ್ನಾಟಕ ರಾಜ್ಯ ನಮಂದೆಂದು
ಧೈರ್ಯದಿಂ ತಲೆಯೆತ್ತಿ ವಂನ್ನಗ್ಗಿ ಇಂದು ॥ಅ.ಪ॥

ಚರಣ

ನಮ್ಮನುಡಿ ನಮ್ಮನಡೆ ವೈಶಿಷ್ಟ್ಯ ಕಾಪಾಡು
ನಮ್ಮಕಲೆ ನಮ್ಮಶಿಲೆ ಸೌಂದರ್ಯದಾ ಹಾಡು ॥ ೧ ॥

ನಮ್ಮಕವಿವರ್ಯರಾ ಕಾವ್ಯಸ್ಫೂರ್ತಿಯು ಪಡೆಯೊ
ಸತ್ಯದಾ ನಿತ್ಯದಾ ಸನ್ಮಾರ್ಗದಲಿ ನಡೆಯೊ ॥ ೨ ॥

ನಾವೆಲ್ಲರೊಂದೆಂಬ ಭಾವನೆಯು ತಾಳು
ಖ್ಯಾತಿವಂತನಾಗಿ ಭಾರತದಿ ಬಾಳು ॥ ೩ ॥

—ಗುಡಿಬಂಡೆ ಬಿ. ಎಸ್. ರಾಮಾಚಾರ್ಯ

ಗೌರವಾನ್ವಿತ ನೆಂಸ್ಮರಣೆಗಳು

೧. ಶ್ರದ್ಧಾಂಜಲಿ

ಕರ್ನಾಟಕವು ಮಂತ್ರೆ ತನ್ನ ಗೌರವದ ತಲೆಯೆತ್ತಿದ ಇಂದಿನ ಈ ಪರ್ವಕಾಲದಲ್ಲಿ, ತುಂಗ ಭದ್ರಾ ಪರಿಸರದಲ್ಲಿ ನೆರೆದ ನಾವೆಲ್ಲರೂ, ಮತ್ತು ಕರ್ನಾಟಕದ ಮೂಲೆಮೂಲೆಯಲ್ಲಿಯಂ ಕುರಿತೋದಿದ, ಕುರಿತೋದದ ಜನತೆಯೆಲ್ಲರೂ, ಈ ದಿನವನ್ನು ಬರಮಾಡಿಕೊಳ್ಳಲು ಕಾದಿದ್ದೆವು. ಒಂದು ಶತಮಾನಕ್ಕಿಂತಲೂ ಮಿಕ್ಕಿ ಹೆಣಗಿದಂಥ, ದೂರದಾದರ್ಶಕ್ಕಾಗಿ ನಿರಪೇಕ್ಷರಾಗಿ ಹವಣಿಸಿದಂಥ, ಆ ಭಾಗ್ಯವನ್ನು ನಮಗೆ ಬಿಟ್ಟು ತಾವು ಮಾತ್ರ ಮಾಡಿದುದೇ ಮಂತ್ರಸಿದ್ಧಿಯೆಂದು ನಂಬಿ ದುಡಿದವರ, ಮಾಡಿಮಂಡಿದವರ, ಜ್ಞಾತರ, ಅಜ್ಞಾತರ, ಸಹಸ್ರಾರು ಸವಿನೆನಹುಗಳನ್ನು ನಾವೆಲ್ಲರಂ ಇಂದು ನಾಲಗೆಯ ಮೇಲೆ ತರಬೇಕಾಗಿದೆ ಸಹಸ್ರಾರಂ ಶೋಕಾನಂದಾಶ್ರುಗಳೊಂದಿಗೆ. ಅಂಥವರೆಲ್ಲರನ್ನೂ ಒಬ್ಬೊಬ್ಬರನ್ನಾಗಿ ನೆನೆದು ಅಂಜಲಿಯನ್ನರ್ಪಿಸುವದಂ ನಮ್ಮ ದುರ್ಬಲತೆಯಿಂದಾಗಿ ಅಸಾಧ್ಯವೆಂದು ಒಪ್ಪಿಕೊಳ್ಳಬೇಕಾಗಿದೆ. ನಿರ್ವಾಹವಿಲ್ಲ. ನೆನಪಾದವರ ಹೆಸರಂಗಳನ್ನಾದರೂ ಹೆಸರಿಸಿ ಸಮಾಧಾನಮಾಡಿಕೊಳ್ಳಬೇಕಾಗಿದೆ. ಅಂಥ, ಗತಿಸಿದ ಕನ್ನಡದ ಕೈವಾರಿಗಳೂ ಕರ್ನಾಟಕದ ಹಿರಿಹಿರಿದ್ದರಿಗಳೂ ನಮ್ಮ ಹೆಮ್ಮೆಗೆ ಆಧಾರ ಸ್ತಂಭರೂ ಆದವರಲ್ಲಿ ಇವರಂ ಕೆಲವರಂ. ಇವರಿಗೆಲ್ಲ ನಮ್ಮ ಶ್ರದ್ಧಾಂಜಲಿಗಳಂ, ಕೃತಜ್ಞತೆಯಂ ಬಾಷ್ಪಾಂಜಲಿಗಳು. ಹೆಸರಿಸಿದವರೊಡನೆ ಹೆಸರಿಸದವರೆಲ್ಲರಿಗೂ ಇವು ಸಲ್ಲಬೇಕಂ :—

1 ಅಂದಾನಪ್ಪ ದೊಡ್ಡಮೇಟಿ.
2 ಅ. ನ. ಕೃಷ್ಣರಾಯ.
3 ಅನಂತರಾವ್ ಜಾಲಿಹಾಳ.
4 ಅಂಬಲಿ ಚನ್ನಬಸಪ್ಪ.
5 ಆಲೂರಂ ವೆಂಕಟರಾಯರಂ
6 ಆರ್. ಕಲ್ಯಾಣಮ್ಮ,
7 ಆರ್. ನಾಗನಗೌಡ.
8 ಆರ್ ನರಸಿಂಹ ಆಚಾರ್ಯ.
9 ಶಾಂತವೇರಿ ಗೋಪಾಲಗೌಡ.
10 ಎ. ಆರ್. ಕೃಷ್ಣಶಾಸ್ತ್ರಿ.
11 ಎಸ್. ನಾರಾಯಣ ಕಿಲ್ಲೆ
12 ಎಂ. ರಾಮಮೂರ್ತಿ.
13 ನಾರಾಯಣ ಸಂಗಮ
14 ಗದಿಗಯ್ಯ ಹೊನ್ನಾಪುರ ಮಠ
15 ಕಾರ್ನಾಡ ಸದಾಶಿವರಾವ್
16 ಎಮ್. ಆರ್. ಶ್ರೀನಿವಾಸಮೂರ್ತಿ
17 ಎಚ್. ಸಿ. ದಾಸಪ್ಪ.
18 ಎಸ್. ಪಿ. ಗಾವಂಕರ
19 ಎಸ್. ಆರ್. ಕಂಠಿ
20 ಕಡೆಕ್ಕಾರ್ ರಾಜಗೋಪಾಲಕೃಷ್ಣರಾವ್
21 ಕಡಪಾ ರಾಘವೇಂದ್ರರಾವ್.
22 ಕೃಷ್ಣಾಬಾಯಿ ಪಂಜೇಕರ.
23 ಕೊಪ್ಪಳ ಜಯರಾಮಾಚಾರ್.
24 ಕೆ. ಟಿ. ಭಾಷ್ಯಂ.

25 ನಾಲ್ಮಡಿ ಕೃಷ್ಣರಾಜ ಒಡೆಯರ
26 ಎಂ. ವಿಶ್ವೆಶ್ವರಯ್ಯ
27 ಇಜಾರಿ ವಸುಪಾಲಪ್ಪ
28 ಸೀತಾರಾಮಂಶಾಸ್ತ್ರಿ ವೀರಕೇಸರಿ
29 ಎಸ್ ವಿ. ಪಣಿಯಾಡಿ
30 ಬಿ. ಎಸ್. ಕುಲಕರ್ಣಿ
31 ಮತ್ತಿಹಳ್ಳಿ ರಾಘವೇಂದ್ರರಾವ್
32 ಶಿರೂರ ವೀರಭದ್ರಪ್ಪ
33 ಜಂಗಿನ ಮಂರಿಗೆಯ್ಯ
34 ಬಿ. ಎಸ್. ಮಾವಿನಕುರ್ವೆ
35 ತಾತಯ್ಯ ವೆಂಕಟಕೃಷ್ಣಯ್ಯ
36 ವಿ. ಎಸ್. ಪ್ರಭು
37 ಸುಬ್ರಾವ ಹಳದೀಪುರಕರ
38 ಕೃಷ್ಣರಾವ್ ಹಳದೀಪುರಕರ
39 ವೆಂಕಣ್ಣ ಗೊನೆಹಳ್ಳಿ
40 ಶ್ರೀನಿವಾಸ ಪೋದ್ದಾರ
41 ಆರ್. ಕೆ. ನಾಯ್ಕ
42 ಎಸ್. ಎಸ್. ಶಾಸ್ತ್ರಿ
43 ಜಿ. ಎಸ್ ಗಂಗೊಳ್ಳಿ
44 ಮಳವಳ್ಳಿ ಶಿವರಾವ
45 ಮಂಧ್ವರಾವ್ ಕಬ್ಬೂರ
46 ಮಂಜಯ್ಯ ಹೆಗ್ಗಡೆ
47 ಬಿ. ಎನ್ ಮುನವಳ್ಳಿ
48 ಬಿ. ಎಂ. ಶ್ರೀಕಂಠಯ್ಯ
49 ಬಿ. ವೆಂಕಟಾಚಾರ್ಯ
50 ನರಸಿಂಗರಾವ ದೇಸಾಯಿ
51 ಬೆನಗಲ್ ರಾಮರಾವ
52 ಭೀಮಸೇನರಾವ್ ಡಿ. ಕೆ.
53 ಭೀಮರಾವ್ ಪೋತದಾರ
54 ಭೀಮರಾವ್ ಹುರುಳಿ
55 ಭೀ. ಸು. ಪಾಟೀಲ
56 ವಾಸುದೇವಾಚಾರ್ಯ ಕೇರೂರ
57 ವೀರಪ್ಪ ಬಸರೀಗಿಡದ
58 ವೆಂ. ತೀ. ಕುಲಕರ್ಣಿ (ಗಳಗನಾಥ)
59 ಮುದವೀಡು ಕೃಷ್ಣರಾಯ
60 ಮುದವೀಡು ವೆಂಕಟರಾಯ
61 ಮೊಟೆನಸರ ಹೆಗಡೆ
62 ನಂದಳಿಕೆ ಲಕ್ಷ್ಮೀನಾರಾಯಣಪ್ಪ
63 ಎಸ್. ಎನ್. ಅಂಗಡಿ
64 ರಾಮರಾವ್ ಹುಕ್ಕೇರಿಕರ
65 ರಾ. ವೆಂ. ವಾಲಗಳ್ಳಿ
66 ಸಿದ್ದವ್ವನಹಳ್ಳಿ ಕೃಷ್ಣಶರ್ಮ
67 ಸಿದ್ದಪ್ಪ ಹೊಸಮನಿ
68 ಹರ್ಡೇಕರ ಮಂಜಪ್ಪ
69 ತಮ್ಮಣ್ಣಪ್ಪ ಚಿಕ್ಕೋಡಿ
70 ತಿಪ್ಪಣ್ಣಶಾಸ್ತ್ರಿ ಕಳ್ಳಿ
71 ಗಂಗಾಧರರಾವ ದೇಶಪಾಂಡೆ
72 ಗಂಗಾಧರ ಮಡಿವಾಳೇಶ್ವರ ತುರಮರಿ
73 ಗಂದ್ಲೆಪ್ಪ ಹಳ್ಳಿಕೇರಿ
74 ಚ. ವಾಸುದೇವಯ್ಯ
75 ಗೋವಿಂದ ಪೈ ಮಂಜೇಶ್ವರ
76 ಚನ್ನಪ್ಪ ಉತ್ತಂಗಿ
77 ಚನ್ನಮಲ್ಲಪ್ಪ ಗಲಗಲಿ (ಹಲಸಂಗಿ)
78 ಚಂದ್ರಶೇಖರ ಎಸ್. ಕರಬಿ

79 ಗ. ಸ. ಹಾಲಪ್ಪ
80 ಪಿ. ಎಸ್. ವೆಂಕಣ್ಣಯ್ಯ
81 ತೀ. ನಂ. ಶ್ರೀಕಂಠಯ್ಯ
82 ಡಿ. ಎಲ್ ನರಸಿಂಹಾಚಾರ್ಯ
83 ಕೆ. ಬಿ. ಜಿನರಾಜ ಹೆಗ್ಗಡೆ
84 ಜಹಗೀರದಾರ ರಂಗಾಚಾರ್ಯ
85 ಬಳವಂತರಾವ ದಾತಾರ
86 ಬಾಳಾಚಾರ್ಯ ಸಕ್ಕರಿ (ಶಾಂತಕವಿ)
87 ಟಿ. ಎಸ್. ವೆಂಕಣ್ಣಯ್ಯ
88 ತಿ. ತಾ. ಶರ್ಮ
89 ದತ್ತಾತ್ರೇಯ ವೆಂಕಟೇಶ ಬೆಳವಿ
90 ದತ್ತಾತ್ರೇಯ ಕೃಷ್ಣ ಭಾರದ್ವಾಜ
91 ನವರತ್ನ ರಾಮರಾವ
92 ನಾರಾಯಣರಾವ್ ಹುಯಿಲಗೋಳ
93 ಡೆಪ್ಯೂಟಿ ಚನ್ನಬಸಪ್ಪ
94 ಪಂಡಿತ ತಾರಾನಾಥ
95 ಪಂಜೆ ಮಂಗೇಶರಾವ
96 ಗದಿಗೆಪ್ಪ ಹುರಳಿ
97 ಆರಟಾಳ ರುದ್ರಗೌಡರು
98 ಕಾಸಲ ಶ್ರೀನಿವಾಸ ಸೆಟ್ಟಿ
99 ಕೆ. ಪಿ. ಪುಟ್ಟಣ್ಣ ಚೆಟ್ಟಿ
100 ಎಲ್. ಎಸ್, ಪಾಟೀಲ
101 ಟಿ. ಪಿ. ಕೈಲಾಸಂ
102 ಹೊಸಕೇರಿ ಅಣ್ಣಾಚಾರ್ಯ
103 ವೆಂಕಟ ರಂಗೋ ಕಟ್ಟಿ
104 ಯು. ರಾಮರಾವ
105 ಮರಿಸ್ವಾಮಿ ಹಿರೇಮಠ
106 ಎಚ್. ಸಿದ್ಧಯ್ಯ
107 ಕೆ. ಬಿ. ಮಲ್ಲಪ್ಪ
108 ಬಿ. ಎ. ದೇಸಾಯಿ
109 ಬಿ. ಎಲ್. ಪಾಟೀಲ
110 ಡಿ. ಎಲ್. ಪಾಟೀಲ
111 ಫ. ಗು. ಹಳಕಟ್ಟಿ
112 ಹನುಮಂತರಾವ ಕೌಜಲಗಿ
113 ಹನುಮಂತರಾವ ಮೊಹರೆ
114 ಹನುಮಂತರಾವ ಸವಣೂರು
115 ಶ್ಯಾಮರಾವ ಕೈಕಿಣಿ
116 ಶ್ರೀನಿವಾಸರಾವ ರೊದ್ದ
117 ಶ್ರೀನಿವಾಸರಾವ ಕರ್ಪೂರ
118 ಶ್ರೀನಿವಾಸರಾವ ಕೌಜಲಗಿ
119 ಶಿ. ಶಿ. ಬಸವನಾಳ
120 ಸಿದ್ಧಪ್ಪ ತೋಟಪ್ಪ ಕಂಬಳಿ
121 ಸಾಹುಕಾರ ಚನ್ನಯ್ಯ
122 ಸಿ. ಎಸ್ ಕೆಂಪಣ್ಣನವರ
123 ಮುಳಿಯ ತಿಮ್ಮಪ್ಪಯ್ಯ
124 ವೈಕುಂಠ ಬಾಳಿಗ
125 ಶ್ರೀನಿವಾಸ ಮಲ್ಯ
126 ಚಂದ್ರಶೇಖರ ಪಾಟೀಲ
127 ಕಾಂತೇಶ ಕಮಲಾಪುರ
128 ಪಿ. ಎಚ್. ಗುಂಜಾಳ
129 ಎಸ್ ಬಿ. ಹಿರೇಮಠ
130 ವಿ. ಬಿ. ಪುರಾಣಿಕ
131 ಧೋಂಡೇ ನರಸಿಂಹ ಮುಳಬಾಗಲ
132 ಟಿ. ರಾಘವಾಚಾರ್ಯ
133 ಗುಂಬ್ಬಿವೀರಣ್ಣ

೨. ಕೃತಜ್ಞತೆಗಳು

ವಿಧಾನ ಸಭೆಯಲ್ಲಿ ಮಂಡಿಸಲ್ಪಟ್ಟ ಈ ಚಾರಿತ್ರಿಕ ನಿರ್ಣಯಕ್ಕೆ ಬೆಂಬಲಕೊಡುತ್ತಾ, ಕರ್ನಾಟಕದ ರಾಜಕೀಯ, ಐತಿಹಾಸಿಕ ಮತ್ತು ಸಾಂಸ್ಕೃತಿಕ ವೈಭವವನ್ನು ಕಣ್ಣಿಂಬಾಗಿ ಚಿತ್ರಿಸುತ್ತಾ, ಕವಿಪುಂಗವರಿಂದ ಸ್ತುತಿಸಲ್ಪಟ್ಟ ಕರ್ನಾಟಕಮಾತೆಯ ಮಹಿಮೆಯನ್ನು ಬಣ್ಣಿಸುತ್ತಾ ಸರ್ವಶ್ರೀಯುತರುಗಳಾದ ಹಿರಿಯೂರಿನ ಕೆ. ಎಚ್. ರಂಗನಾಥ, ಅರಸೀಕೆರೆಯ ಎಚ್. ಎಸ್. ಸಿದ್ದಪ್ಪ, ತೀರ್ಥಹಳ್ಳಿಯ ಕೊಣಂದೂರು ಲಿಂಗಪ್ಪ, ನಂಜನಗೂಡಿನ ಕೆ. ಬಿ. ಶಿವಯ್ಯ, ಬಂಟ್ವಾಳದ ಬಿ. ವಿ. ಕಕ್ಕಿಲ್ಲಾಯ, ಸಕಲೇಶಪುರದ ಕೆ. ಎಂ. ರುದ್ರಪ್ಪ, ಭಾರತೀನಗರದ ಡಿ. ಪೂಸಲಿಂಗಂ, ಭಾಲ್ಕಿಯ ಸುಭಾಸ್ ಆಸ್ಕೂರೆ, ಬೆಂಗಳೂರಿನ (ಕೋಟೆ) ಟಿ. ಆರ್. ಶಾಮಣ್ಣ, ಹಿರೇಕೆರೂರಿನ ಬಿ. ಜಿ. ಬಣಕಾರ, ಸೊರಬದ ಎಸ್. ಬಂಗಾರಪ್ಪ, ಹೊಸನಗರದ ಶೀರನಾಳಿ ಚಂದ್ರಶೇಖರ, ಹಾಸನದ ಕೆ. ಎಚ್. ಹನುಮೇಗೌಡ, ಜಮಖಂಡಿಯ ಪಿ. ಎಂ. ಬಾಂಗಿ, ರಾಮನಗರದ ಜಿ. ಪುಟ್ಟಸ್ವಾಮಯ್ಯ, ಮಡಿಕೇರಿಯ ಎಂ. ಎಂ. ಬೆಳ್ಳಿಯಪ್ಪ, ಸಿಂದಗಿಯ ಎಸ್. ವೈ. ಪಾಟೀಲ, ಪಾಂಡವಪುರದ ಡಿ. ಹಲಗೇಗೌಡ, ಹುಮನಾಬಾದಿನ ವಿ. ಎಸ್. ಪಾಟೀಲ, ಕುಮಟಾದ ಎಸ್. ವಿ. ನಾಯಕ, ದೇವದುರ್ಗದ ಶರಣಪ್ಪ, ಚಾಮರಾಜನಗರದ ಎಸ್. ಪುಟ್ಟಸ್ವಾಮಿ, ಬೇತಮಂಗಲದ ಕೆ. ಎ. ದೊರೆಸ್ವಾಮಿ ನಾಯಿಡು ತಿಪಟೂರಿನ ಟಿ. ಎಂ. ಮಂಜುನಾಥ, ಪತ್ರೂರಿನ ಕೆ. ಪ್ರಭಾಕರ, ಮಾಗಡಿಯ ಎಚ್. ಜಿ. ಚೆನ್ನಪ್ಪ, ಗಾಂಧಿನಗರದ ಕೆ. ಶ್ರೀರಾಮುಲು, ವೇಮಗಲ್ಲಿನ ಸಿ. ಬೈರೇಗೌಡ, ಹೊಳೆನರಸೀಪುರದ ಎಚ್. ಡಿ. ದೇವೇಗೌಡ, ಗುಬ್ಬಿಯ ಗಟ್ಟಿಚಂದ್ರಶೇಖರ, ಬೆಂಗಳೂರಿನ (ಚಾಮರಾಜಪೇಟೆ) ವಾಟಾಳ ನಾಗರಾಜ, ಬೆಂಗಳೂರಿನ (ಚಿಕ್ಕಪೇಟೆ) ಕೆ. ಎಂ. ನಾಗಣ್ಣ, ಶೃಂಗೇರಿಯ ಕೆ. ಎನ್. ವೀರಪ್ಪಗೌಡ, ಭಟ್ಕಳದ ಎಸ್, ಎಂ. ಯಾಹ್ಯಾ, ಸಾಗರದ ಕಾಗೋಡು ತಿಮ್ಮಪ್ಪ, ಶಿರಹಟ್ಟಿಯ ವಿ. ವಿ. ವಾಯಿ, ಕುಂದೂರಿನ ಬೆಟ್ಟಸ್ವಾಮಿಗೌಡ, ಕೇ. ಜಿ. ಎಫ್‌ದ ಸಿ. ಎಂ. ಆರ್ಮುಗಂ, ಆಫಜಲ್‌ಪುರದ ಡಿ. ಬಿ. ಕಲ್‌ಮುಲ್‌ಕರ, ಬೆಂಗಳೂರಿನ (ಮಲ್ಲೇಶ್ವರಂ) ಎಮ್. ಎಸ್. ಕೃಷ್ಣನ್, ಬೆಂಗಳೂರಿನ (ಶಾಂತಿನಗರ) ಕೆ. ಆರ್. ಎಸ್. ನಾಯ್ಡು, ಹಾಗು ಚಿತಾಪುರದ ಶ್ರೀಮತಿ ವಿಜಯಾ ದೇಸಾಯಿ ಮತ್ತು ಮಂಗಳೂರಿನ ಶ್ರೀಮತಿ ಎಡ್ಡಿ. ಸಾಲ್ಡಾನ್ಹಾ ಮೊದಲಾದ ಕರ್ನಾಟಕದ ಎಲ್ಲ ಪಕ್ಷಗಳ, ಎಲ್ಲ ಭಾಗಗಳ ವಿಧಾನ ಸಭಾಸದಸ್ಯರು ಅತ್ಯಂತ ಸ್ಫೂರ್ತಿದಾಯಕವಾಗಿ ಅತಿ ಸಾಮರ್ಥ್ಯಪೂರ್ಣವಾಗಿ ಮಂಡಿಸಲ್ಪಟ್ಟ ನಿರ್ಣಯವನ್ನು ಅನುಮೋದಿಸಿ ಅದು ಸರ್ವಾನುಮತದಿಂದ ಅಂಗೀಕೃತವಾಗುವಂತೆ ಪುಷ್ಟಿಗೊಳಿಸಿ ಸರ್ವತ್ರ ತುಷ್ಟಿಯಾಗುವಂತೆ ಮಾಡಿದರು. ಅಧ್ಯಕ್ಷಿಣಿಯರಾದ ಶ್ರೀಮತಿ ಕೆ. ಎಸ್. ನಾಗರತ್ನಮ್ಮ ನವರು ಎಲ್ಲರ ಅಭೀಷ್ಟಗಳನ್ನೂ ಒಳಗೊಳ್ಳುವಂತೆ ಪ್ರಭಾವಶಾಲಿಯಾದ ರೀತಿಯಲ್ಲಿ ನಿರ್ಣಯವನ್ನು ಘೋಷಿಸಿ ಸಂತಸದ ಮಳೆ ಹರಿಸಿದರು.

ವಿಧಾನ ಪರಿಷತ್ತಿನಲ್ಲಿ ಈ ಚಾರಿತ್ರಿಕ ನಿರ್ಣಯಕ್ಕೆ ಬೆಂಬಲ ಕೊಡುತ್ತಾ ಸರ್ವಶ್ರೀ ಗಳಾದ, ಮೈಸೂರಿನ ಟಿ. ಎನ್. ನರಸಿಂಹಮೂರ್ತಿ, ಬೆಳಗಾವಿಯ ಬಸವರಾಜ ಕಟ್ಟೀಮನಿ, ಬೆಂಗಳೂರಿನ ವಿ. ಎಸ್. ಕೃಷ್ಣಯ್ಯರ್, ಧಾರವಾಡದ ವ್ಯಾ. ಎಸ್. ಪಾಟೀಲ, ಧಾರವಾಡದ ಎಂ. ಜಿ. ಹಂದ್ರಾಳ, ಮೈಸೂರಿನ ಎಂ. ಸಿ. ಬಸಪ್ಪ, ಕೊಳ್ಳೆಗಾಲದ ಜಿ. ವಿ. ಗೌಡ, ಗದಗಿನ ಎನ್. ಸಿ. ಕುಬಸದ, ಹಾಸನದ ಎಲ್. ಪಿ. ಕಾರ್ಲೆ, ಕೋಲಾರದ ಎಂ. ಸಿ. ಪೆರ್ಮಾಳ್, ಹುಬ್ಬಳ್ಳಿಯ ಎಸ್. ಆರ್. ಬೊಮ್ಮಾಯಿ, ಹಡಗಲಿಯ ಕೆ. ಚನ್ನಬಸವನಗೌಡ, ಮತ್ತು ಕೆ. ರಂಗಪ್ಪ, ಟಿ. ನರಸೀಪುರದ ಎನ್. ರಾಚಯ್ಯ, ಸಿದ್ದಾಪುರದ ರಾಮಕೃಷ್ಣ ಹೆಗಡೆ, ಕೋಲಾರದ ಎಂ. ವಿ. ವೆಂಕಟಪ್ಪ ಹಾಗೂ ಹುಬ್ಬಳ್ಳಿಯ ಶ್ರೀಮತಿ ಪ್ರವೀಣಾ ಕಮಲಾನಿ ಮೊದಲಾದವರು ತಮ್ಮ ಉಜ್ವಲವಾದ ಪ್ರತಿಭಾಶಾಲಿಯಾದ ಭಾಷಣಗಳಿಂದ ಎಲ್ಲರಿಗೂ ಅಚ್ಚು ಮೆಚ್ಚಾಗುವಂತೆ ಮೇಲ್ಮನೆಯ ಸದಸ್ಯರನ್ನೆಲ್ಲ ಆನಂದದಲ್ಲಿ ತೇಲಿಸುವಂತೆ, ಸರ್ವಾನುಮತಕ್ಕೆ ಪ್ರಬಲ ಪೋಷಣೆಯಾಗುವಂತೆ, ಮಂಡಿಸಿದ ನಿರ್ಣಯವನ್ನು ಸಮರ್ಥಿಸಿದರು. ಅಧ್ಯಕ್ಷರಾದ ಶ್ರೀ ಎಸ್. ಡಿ. ಗಾವಕರರು ಹರ್ಷೋತ್ಸಾಹದ ಮಹಾಪೂರಕ್ಕೆ ಮತ್ತಷ್ಟು ನೆರೆಬರುವಂತೆ ನಿರ್ಣಯವು ಸರ್ವಾನುಮತದಿಂದ ಸ್ವೀಕೃತವಾದುದನ್ನು ಘೋಷಿಸಿದರು.

ಇವರೆಲ್ಲರಿಗಿಂ, ಮೌನವಾಗಿದ್ದರೂ ನಿರ್ಣಯದ ಸ್ವೀಕಾರಕ್ಕೆ ಪುಟಕೊಟ್ಟು ಸರ್ವಾನುಮತ ಸ್ವೀಕಾರ ಸಾಧ್ಯವಾಗುವಂತೆ ಮಾಡಿದ ಎಲ್ಲ ಭಾಗಗಳ, ಎಲ್ಲ ಪಕ್ಷಗಳ, ವಿಧಾನ ಸಭಾ ಹಾಗೂ ವಿಧಾನ ಪರಿಷತ್ತಿನ ಸದಸ್ಯರಿಗೂ ನಾಡೆಂತನಾಡೇ ಋಣಿಯಾಗಿರಬೇಕಾಗಿದೆ.

'ಕರ್ನಾಟಕ' ನಾಮಕರಣ ಪ್ರಸ್ತಾಪವನ್ನು ಸಂಸತ್ತಿನ ಕೆಳಮನೆ ಮೇಲ್ಮನೆಗಳಲ್ಲಿ ಕೇಂದ್ರ ಸ್ಟೇಟ್ ಸಚಿವರಾದ ಶ್ರೀ ಕೆ. ಸಿ. ಪಂತರು ತಾವೇ ಕರ್ನಾಟಕದ ಏಕೈಕ ಪ್ರತಿನಿಧಿಗಳೇನೋ ಎಂಬಂತೆ, ಕನ್ನಡಿಗರ ಹೃದ್ಗತವನ್ನು ಯಥಾರ್ಥವಾಗಿ ಪೂರ್ತಿಯಾಗಿ ಅರಗಿಸಿಕೊಂಡವರಂತೆ, ೨೭-೭-೧೯೭೩ ಹಾಗೂ ೮-೮-೧೯೭೩ರಂದು ಅತಿಸಮರ್ಥವಾದ ರೀತಿಯಲ್ಲಿ ಮಂಡಿಸಿ ಆದೂ ಎಲ್ಲೂ ಸರ್ವಾನುಮತದಿಂದ ಅಂಗೀಕೃತವಾಗುವಂತೆ ಮಾಡಿ ಕರ್ನಾಟಕದ ಪುಣ್ಯ ಕಟ್ಟಿಕೊಂಡಿದ್ದಾರೆ. ಅವರಿಗೂ ಅವರ ಮಂಡನೆಗೆ ಪ್ರಬಲ ಸಮರ್ಥನೆಯನ್ನಿತ್ತ ಕೇಂದ್ರ ಸಚಿವರುಗಳಾದ, ಕರ್ನಾಟಕದವರೇ ಆದ ಶ್ರೀಮತಿ ಸರೋಜಿನಿ ಮಹಿಷಿ, ಶ್ರೀ ಎಫ್. ಎಚ್. ಮೊಹಸಿನ್ ಹಾಗು, ಶ್ರೀ ಪಂಪನಗೌಡರು, ಶ್ರೀ ಸಿದ್ದರಾಮೇಶ್ವರ, ಶ್ರೀ ವಿ. ನುಗ್ಗೆಹಳ್ಳಿ ಶಿವಪ್ಪ, ಶ್ರೀ ಎಸ್. ಬಿ. ಪಾಟೀಲ್, ಶ್ರೀ ವೀರೇಂದ್ರ ಪಾಟೀಲ್, ಶ್ರೀ ಕೊಲ್ಲೂರ ಮಲ್ಲಪ್ಪ ಮೊದಲಾದ, ಕರ್ನಾಟಕದ ಮತ್ತಿತರ, ಸಂಸತ್ ಸದಸ್ಯರಿಗೆಲ್ಲರಿಗೂ ಸಹ 3 ಕೋಟಿ ಕರ್ನಾಟಕ ಸ್ಥರೆಲ್ಲ ಋಣಿಯಾಗಿದ್ದು ಅವರಿಗೆ ಅಭಿವಂದನೆಗಳನ್ನು ಸಲ್ಲಿಸಬೇಕಾಗಿದೆ.

ಇವರೆಲ್ಲರೂ ಸಹ ಸಂಸ್ಮರಣೀಯರು.

ಕರ್ನಾಟಕ ನಾಮಕರಣ ಮಹೋತ್ಸವ

೧. ಹಂಪೆಯಲ್ಲಿ ಉತ್ಸವ ಸಿದ್ಧತೆ

ಶ್ರೀ ಮ. ಗ. ಶೆಟ್ಟಿ

ಅನೇಕ ಆಡಳಿತಗಳಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡನಾಡು ಇಂದಿಗೆ ಹದಿನೇಳು ವರುಷಗಳ್ಕಿಂದೆ ಒಂದಾದ ಸಂದರ್ಭದಲ್ಲಿ ತಾ॥ 1-11-1956ರಂದು ಹಂಪೆಯಲ್ಲಿ "ಪತ್ರಂ ಪುಷ್ಪಂ ಫಲಂ ತೋಯಂ" ಸ್ವರೂಪದ ಅಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಉತ್ಸವವನ್ನೂ, ಬೆಂಗಳೂರಿನಲ್ಲಿ ರಾಜೋಚಿತವಾದ ವೈಭವದ ಉತ್ಸವವನ್ನೂ ಆಚರಿಸಿತ್ತು. ಹಂಪೆಯಲ್ಲಿ ಕರ್ನಾಟಕ ಕುಲ ಪುರೋಹಿತ ದಿವಂಗತ ಆಲೂರ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಉತ್ಸವ ವನ್ನು ಆಚರಿಸಲು ಕಾರಣರಾದ ಶ್ರೀ ಕೆ. ಎಫ್. ಪಾಟೀಲ ಮತ್ತು ಶ್ರೀ ಕೃಷ್ಣಕುಮಾರ ಕಲ್ಲೂರ ಪ್ರಭೃತಿಗಳು ಹಂಪೆಯಲ್ಲಿ ಆಧ್ಯಾತ್ಮಿಕ, ಸಾಂಸ್ಕೃತಿಕ ನೋಂಪಿಯನ್ನೂ, ಅರಣ್ಯ ಮತ್ತು ಒಕ್ಕಲುತನ ಮಂತ್ರಿ ಶ್ರೀ ಕೆ. ಎಚ್. ಪಾಟೀಲರ ಸಲಹೆಯಂತೆ ಗದುಗಿನಲ್ಲಿ ರಾಜೋಚಿತವಾದ ವೈಭವದ ಉತ್ಸವವನ್ನೂ ಆಚರಿಸಬೇಕೆಂದು ಯೋಚಿಸಿದ್ದರು. ಆದರೆ ಪ್ರತ್ಯಕ್ಷ ಕಾರ್ಯ ಶ್ರೀ ಕೃಷ್ಣಕುಮಾರ ಕಲ್ಲೂರ ಅವರು ಮುಂಬೈಯಿಂದ 18-10-1973 ರಂದು ಆಗಮಿಸಿದ ನಂತರ ಪ್ರಾರಂಭಿಸಿ ಸಮಿತಿ ಕೇವಲ 10 ದಿನಗಳಲ್ಲಿ ಈ ಎಡೆಡೂ ಉತ್ಸವಗಳನ್ನು ಸಾಂಗಗೊಳಿಸುವ ಹೊಣೆಯನ್ನು ಹೊತ್ತುಕೊಂಡಿತು. ಗದುಗಿನ ರಾಜೋಚಿತ ವೀರೋಚಿತ ಕಾರ್ಯಕ್ರಮಗಳನ್ನು ನಿರ್ವಹಿಸುವುವಕ್ಕಾಗಿ ಗದುಗಿನ ಕಾಟನ್ ಸೇಲ್ಸ್ ಕೋಆಪರೇಟಿವ್ ಸೊಸೈಟಿಯಲ್ಲಿ ಕಾರ್ಯಾಲಯವು ತೆರೆಯಲ್ಪಟ್ಟು ಶ್ರೀ ವಾಯ್.ವಿ. ಜೋಗಣ್ಣವರ ಮತ್ತು ಶ್ರೀ ಕೆ. ಎಂ. ಕಣವಿ ಅವರು ಉಪಾಧ್ಯಕ್ಷರುಗಳಾಗಿಯೂ, ಶ್ರೀ ಜಿ. ಡಿ. ಚವ್ಹಾಣ, ಶ್ರೀ ಜೆ. ಡಿ. ಜಮಾದಾರ ಶ್ರೀ ಡಿ. ಆರ್. ಪಾಟೀಲ ಅವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಕಾರ್ಯಾಧ್ಯಕ್ಷ ಶ್ರೀ ಕೆ. ಎಫ್. ಪಾಟೀಲರಿದ್ದ ಸುದರ್ಶನ ಗೆಸ್ಟಹೌಸ ಚಟುವಟಿಕೆಯಿಂದ ಕೂಡಿ ಚೈತನ್ಯಭರಿತವಾಯಿತು. ಕಾರ್ಯಕಾರಿ ಸಮಿತಿ, ಸಂಪಾದಕ ಸಮಿತಿಗಳು ರಚನೆಯಾದವು.

ಶ್ರೀ ಎಂ. ವಿ. ಮಿಣಜಿಗಿಯವರು ಹಂಪೆಗೆ ತೆರಳಿ ಹುಕ್ಕಬುಕ್ಕರ ಚಿತ್ರಣವನ್ನು ಸಿದ್ಧಪಡಿಸಿದರು. ಕಾರ್ಯಾಧ್ಯಕ್ಷರಾದ ಶ್ರೀ. ಕೆ. ಎಫ್. ಪಾಟೀಲರು ಅಸ್ವಾಸ್ಥ್ಯದಿಂದ ಬಳಲುತ್ತಿದ್ದರೂ ಶ್ರೀ ಕೃಷ್ಣಕುಮಾರರ ಜೊತೆಗೆ ಹಂಪೆಗೆ ಹೋಗಿ ಅಲ್ಲಿಯ ಅಧಿಕಾರಿವರ್ಗವನ್ನು ಇನ್ನಿತರ ಪ್ರಮುಖರನ್ನು ಕಂಡು ಕಾರ್ಯಕ್ರಮದ ರೂಪರೇಷೆಯನ್ನು ವಿವರಿಸಿ ಪಂಚವಟಿ ಮತ್ತು ಕರ್ನಾಟಕ ಕೀರ್ತಿಸ್ತಂಭ ಸ್ಥಾಪನೆಗೆ ಸ್ಥಳ ಪರಿಶೀಲಿಸಿ ಬಂದರು. ತೋಟಗಾರಿಕೆ ಇಲಾಖೆಯ ನಿರ್ದೇಶನದಲ್ಲಿ ಸ್ಥಾನಿಕ ಜನರು ಪಂಚವಟಿ ಸ್ಥಾಪನೆಗೆ ಅವಶ್ಯವುಳ್ಳ ಕ್ರಮಗಳನ್ನು ಕೈಕೊಂಡು ಭೂಮಿಯನ್ನು ಅಣಿಮಾಡಿದರು. ಬಳ್ಳಾರಿಯಲ್ಲಿ ಅಂದು ಡೆಪ್ಯೂಟಿ

ಕಮಿಷನರರು ರಾಜ್ಯೋತ್ಸವ ಆಚರಿಸಲು ಕಾರ್ಯಕ್ರಮ ಹಾಕಿಕೊಳ್ಳಲು ಪ್ರಮುಖರ ಸಭೆ ಕರೆದಿದ್ದರು. ಅವರನ್ನೆಲ್ಲ ಕಂಡು ಕಾರ್ಯಾಧ್ಯಕ್ಷರು ನಾಮಕರಣೋತ್ಸವದ ವಿವರ ತಿಳಿಸಿ ಸಹಕಾರ ಕೋರಿದರು ; ಆಮಂತ್ರಣವಿತ್ತು ಬಂದರು.



ಕರ್ನಾಟಕ ನಾಮಕರಣ ಮಹೋತ್ಸವದ ಕಾರ್ಯಾಧ್ಯಕ್ಷರಾದ ಶ್ರೀ ಕೆ. ಎಫ್. ಪಾಟೀಲರು ಹಂಪೆಯಲ್ಲಿ ಸ್ಮಾರಕ ಪಂಚಮಟಿಯಲ್ಲಿ ನೆಡುವ ಮರಗಳ ವಿವರ ಅಭ್ಯಾಗತರಿಗೆ ನೀಡುತ್ತಿದ್ದಾರೆ.

ಇದೇ ಸಂದರ್ಭದಲ್ಲಿ ಅಯಾಚಿತವಾಗಿ ಆರ್ಕಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾದ ದಕ್ಷಿಣ ವರ್ತುಲದ ಸುಪರಿಂಟೆಂಡೆಂಟ ಶ್ರೀ ಕೆ. ವಿ. ಸೌಂದರರಾಜನ್ ಆವರನ್ನು ಸಮಿತಿಯ ಕಾರ್ಯಾಧ್ಯಕ್ಷರು ಕಂಡು ಹಂಪೆಯಲ್ಲಿ ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲು ವ್ಯವಸ್ಥೆ ಮಾಡಿದರು. ಬೆಂಗಳೂರ ಕೇಂದ್ರ ಅಧಿಕಾರಿ ಶ್ರೀ ಆಳ್ವಾರರು, ಮದ್ರಾಸ್ ಕಾರ್ಯಾಲಯದ ಶ್ರೀ ಅಯ್ಯಂಗಾರರು, ಮತ್ತು ಕಾಮಲಾಪುರ ಮ್ಯೂಜಿಯಂ ಕ್ಯುರೇಟರ ಮತ್ತು ಗುಂಟೂರ ಡಿಸ್ಟ್ರಿಕ್ಟ ಅಮರಾವತಿ ಮ್ಯೂಜಿಯಂ ಶಿಲಿಗಳಾದ ಶ್ರೀ ಟಿ. ಎನ್. ಪದ್ಮನಾಭನ್ ಅವರು ಪ್ರದರ್ಶನವನ್ನು ಏರ್ಪಡಿಸಿ ನೆರವಾದರು.

ಉತ್ಸವ ಪ್ರಾರಂಭವಾಗಲು ನಾಲ್ಕು ದಿನ ಮುಂಚಿತವಾಗಿ ಕಾರ್ಯಕಾರೀ ಸಮಿತಿಯ ಸದಸ್ಯರಲ್ಲೋರ್ವನಾದ ನಾನು ಪ್ರದರ್ಶನ ವಿಭಾಗದೊಡನೆ ಹಂಪೆಗೆ ತೆರಳಿ ಸ್ಥಾನಿಕರ

ಸಹಕಾರವನ್ನು ಪಡೆದು ಕಾರ್ಯಕ್ಕೆ ಚಾಲನೆಯನ್ನಿತ್ತೆನು. ಹಂಪೆಯ ನಾಗರಿಕರಿಗೆ ತಮ್ಮ ಆರಾಧ್ಯದೇವತೆಗಳಾದ ಪಂಪಾವತಿ ಮತ್ತು ಭುವನೇಶ್ವರಿಯ ಸಾನ್ನಿಧ್ಯದಲ್ಲಿ, ದೈವಭಕ್ತಿ, ಸಂಪನ್ನರೂ, ದೇಶವಿದೇಶಗಳಲ್ಲಿ ಭಾರತೀಯ ಸಂಸ್ಕೃತಿಯ ರಾಯಭಾರಿಗಳೂ ಆದ, ಆಳಿದ ಮಹಾಸ್ವಾಮಿ ಜಯಚಾಮರಾಜೇಂದ್ರ ಒಡೆಯರ್ ಅವರು ಕರ್ನಾಟಕದ ಮನೆಮನಗಳನ್ನು ಬೆಳಗುವ ಅಪೂರ್ವ ಜ್ಯೋತಿಯನ್ನು ಹಚ್ಚುವ ಸಂದರ್ಭ ಒದಗಿ ಬಂದುದಕ್ಕಾಗಿ ಕೃತಾರ್ಥತೆ ಎನಿಸುತ್ತಿತ್ತು. ಹಂಪೆ ಗ್ರಾಮಪಂಚಾಯತ ಅಧ್ಯಕ್ಷ ಶ್ರೀ ಎಂ. ಶಾಂತಾರಾಂ ಸಿಂಗ ಅವರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಎಸ್. ಗೌಡ, ಉಪಾಧ್ಯಕ್ಷ ಹಂಪೆಗ್ರಾಮ ಪಂಚಾಯತ, ಭುವನೇಶ್ವರಿ ಸಹಕಾರಿ ಸಂಘ, ಹಂಪೆಯ ಪ್ರೆಸಿಡೆಂಟ ಶ್ರೀ ಎಚ್. ಮಲ್ಲೇಶಪ್ಪ ಮತ್ತು ಕಾರ್ಯದರ್ಶಿ ಶ್ರೀ ಎಂ. ಶೇಷಗಿರಿರಾವ್, ಶ್ರೀ ವಿರೂಪಾಕ್ಷ ದೇವಸ್ಥಾನದ ಗೌರವ ವಿಜಂಟ ಶ್ರೀ ಪಿ. ಅಶ್ವತ್ಥನಾರಾಯಣ, ಮತ್ತು ಎಕ್ಸಿಕ್ಯೂಟಿವ್ ಆಫೀಸರ ಶ್ರೀ ಬಿ. ಉಮೇಶರಾವ್, ಹಾಗೂ ಗ್ರಾಮಪಂಚಾಯತದ ಹಿಂದಿನ ಸದಸ್ಯರಾದ ಶ್ರೀ ಆರ್. ಹೀರಾಲಾಲಸಿಂಗ ಅವರ ನ್ನೊಳಗೊಂಡ ಸ್ಥಾನಿಕ ಕಮಿಟಿಯು ರಚನೆಯಾಗಿ ಕಾರ್ಯಪ್ರವೃತ್ತವಾಯಿತು. ವಿಜಯನಗರ ಸ್ಥಾಪನಾಚಾರ್ಯ ಶ್ರೀ ವಿದ್ಯಾರಣ್ಯರ ಪೆರವಣಿಗೆಯ ಸಂಕೇತವಾಗಿ ಶ್ರೀ ವಿದ್ಯಾರಣ್ಯ ಮತದ ಇಂದಿನ ಗುರುಗಳಾದ ಶ್ರೀ ಶಂಕರಭಾರತೀಸ್ವಾಮಿಯವರ ಆಡ್ಡಪಲ್ಲಕ್ಕಿ ಪೆರವಣಿಗೆಯನ್ನು ಹೊರಡಿಸಬೇಕೆಂದೂ, ಆ ಸಮಯದಲ್ಲಿ ಮುಜರಾಯಿ ಶಾಖೆಯ ಟ್ರೆಜರಿಯಲ್ಲಿದ್ದ ದೇವರಾಯರು ಆಂದಿನ ಗುರುಗಳಿಗೆ ಕೊಟ್ಟ, ರತ್ನಖಚಿತ ಚಿನ್ನದ ಕಿರೀಟವನ್ನು ಶ್ರೀ ಶಂಕರಭಾರತೀ ಸ್ವಾಮಿಗಳಿಗೆ ಧಾರಣ ಮಾಡಿಸಬೇಕೆಂದೂ. ಜಯಚಾಮರಾಜರಿಗೆ ಶಾಲನ್ನು ಅರ್ಪಿಸಬೇಕೆಂದೂ ನಿರ್ಧರಿಸಿದರು. ಶ್ರೀ ಜಯಚಾಮರಾಜರಿಗೆ ಮಾನಪತ್ರವನ್ನು ಕೊಡಬೇಕೆಂದು ಆಲಿಸಿದ್ದರೂ, ಆಳಿದ ಮಹಾರಾಜರು ಬರುವುದಿಲ್ಲವೆಂದು ಯಾರೋ ಕುಹಕಿಗಳು ಹಬ್ಬಿಸಿದ ವಾರ್ತೆಯಿಂದ ಅವರ ಮನಸ್ಸು ಖಿನ್ನವಾಯಿತು. ಮಳೆಯು ಮೇಲಿಂದ ಮೇಲೆ ಸುರಿದು, ನಗರ ಸ್ವಚ್ಛತೆಯ ಕಾರ್ಯಕ್ಕೆ ವ್ಯತ್ಯಯವನ್ನು ತರುತ್ತಿತ್ತು. ಆದರೂ ಅವರು ಧೃತಿಗೆಡದೆ ಮಳೆ ಸುರಿಯುವುದು ಕರ್ನಾಟಕದ ಶುಭೋದಯಕ್ಕೆ ನಾಂದಿಯೆಂದು ಬಗೆದು ಕಾರ್ಯದಲ್ಲಿ ಮಗ್ನರಾಗಿದ್ದರು. ಯಶಸ್ವಿಯಾಗಿ ನೆರವೇರಿಸಿದರು.

ಉತ್ಸವ ಸಮಿತಿಯ ಪರವಾಗಿ ಶ್ರೀ ವಿರೂಪಾಕ್ಷ ಮತ್ತು ಶ್ರೀಭುವನೇಶ್ವರಿದೇವಿಯರಲ್ಲಿ ದೇವತಾಕಾರ್ಯಗಳಲ್ಲಿ ಸಹಕರಿಸಲು ನಾರಾಯಣದೇವರಕೇರಿ ಶ್ರೀ ಶಂಕರ ಜಯಂತೀ ಸಭಾ ಕಾರ್ಯದರ್ಶಿ ಶ್ರೀ ಬಿ. ನಾರಾಯಣಭಟ್ಟರನ್ನು ಕೇಳಿಕೊಂಡೆವು. ಅವರು ವೈದಿಕರನ್ನೊಡಗೂಡಿ ಬರಲು ಒಪ್ಪಿದುದಲ್ಲದೆ ಹೊಸಪೇಟೆ ಲಾಯನ್ಸ್ ಕ್ಲಬ್ ಅಧ್ಯಕ್ಷ ಶ್ರೀ ಎಸ್. ಪಾಪಣ್ಣ ಶೆಟ್ಟಿ ಅವರ ನೆರವಿನಿಂದ ವಿದ್ಯಾರಣ್ಯರಿಗೆ ಭುವನೇಶ್ವರೀದೇವಿ ದರ್ಶನ ಕೊಟ್ಟ ಚಿತ್ರದ ಒಂದು ಸಾವಿರ ಪ್ರತಿಗಳನ್ನು ಉಚಿತವಾಗಿ ಹಂಚಿದರು. ಶ್ರೀ ಕಾಕುಬಾಳು ಸೋಮಯ್ಯಶೆಟ್ಟರು ತಮ್ಮ ದಿವಂಗತ ಸೋದರಿ ಲಕ್ಷ್ಮಿದೇವಮ್ಮನವರ ಸ್ಮರಣಾರ್ಥವಾಗಿ ಒಂದು ಚೀಲ ಅಕ್ಕಿ ವಂತ್ತು ಅವಶ್ಯವುಳ್ಳ ಬೇಳೆಯನ್ನು ಶ್ರೀ ವಿದ್ಯಾರಣ್ಯ ಮಠಕ್ಕೆ ಸಲ್ಲಿಸಿದರು. ಹೇಮಕೂಟವ ಶ್ರೀ ಶಿವರಾಮ ಅವಧೂತಾಶ್ರಮದ ಸ್ವಾಮಿಗಳಾದ ಶ್ರೀ ಕಟ್ಟೀಸ್ವಾಮಿ ಮತ್ತು ನೂತನಾಧ್ಯಕ್ಷ

ಕರ್ನಾಟಕ ನಾಮಕರಣ ಮಹೋತ್ಸವದಲ್ಲಿ ಭಾಗವಹಿಸಲು ಆಗಮಿಸಿದ ಶ್ರೀ ಜಯಚಾಮರಾಜ ಒಡೆಯರನ್ನು ಸಮಿತಿಯ ಕಾರ್ಯಾಧ್ಯಕ್ಷ ಶ್ರೀ ಕೆ. ಎಫ್. ಪಾಟೀಲರು ಹೊಸಪೇಟೆ ರೇಲ್ವೆನಿಲ್ದಾಣದಲ್ಲಿ ಸ್ವಾಗತಿಸುತ್ತಿದ್ದಾರೆ.

ರಾದ ಶ್ರೀ ಶಿವಾನಂದ ಭಾರತೀಸ್ವಾಮಿಗಳು, ಮಹನೀಯರಿಗೆ ಇಳಿದುಕೊಳ್ಳಲು ವ್ಯವಸ್ಥೆ ಮಾಡಿದುದಲ್ಲದೆ ಅನೇಕರಿಗೆ ದಾಸೋಹದ ಏರ್ಪಾಟು ಮಾಡಿದ್ದರು.

ಹೊಸಪೇಟೆಯ ಪ್ರಮುಖರು ಮುನ್ಸಿಪಾಲಿಟಿ ಕಚೇರಿಯಲ್ಲಿ ಮುನ್ಸಿಪಲ್ ಕಮಿಷನರರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ನಾನು ಹಂಪೆಯಲ್ಲಿ ರೂಪಿಸಿದ ಕಾರ್ಯಕ್ರಮವನ್ನು ಓದಿ ಹೇಳಿದುದಲ್ಲದೆ ಆಳಿದ ಮಹಾರಾಜರಿಗೆ ಹೊಸಪೇಟೆಯಲ್ಲಿ ಭವ್ಯ ಸ್ವಾಗತ ನೀಡಬೇಕೆಂದು ಕೇಳಿಕೊಂಡೆನು.

ಹೀಗೆ ಹಂಪೆಯಲ್ಲಿ ನಡೆದ ನಾಮಕರಣೋತ್ಸವವು ಹಂಪೆಯ ನಾಗರಿಕರ ಪ್ರಯತ್ನದಿಂದ, ಹೊಸಪೇಟೆಯ ನಾಗರಿಕರ ಸಹಕಾರದಿಂದ ಯಶಸ್ವಿಯಾಗಿ ಜರುಗಿತು. ಸಹಸ್ರಾರು ಜನತೆ ಹೊಸಪೇಟೆ ರೇಲ್ವೆ ನಿಲ್ದಾಣದಲ್ಲಿ ಸೇರಿ, ಶ್ರೀ ಜಯಚಾಮರಾಜ ಒಡೆಯರಿಗೆ ಅಭೂತಪೂರ್ವ ಸ್ವಾಗತ ನೀಡಿತು.

೨. ಹಂಪೆಯಲ್ಲಿ ಉತ್ಸವ

ಪ್ರಾ॥ ವೀ. ಚ. ಹಿತ್ತಲಮನಿ

ಸಾವಿರ ಒಂಭತ್ತುನೂರು ಎಪ್ಪತ್ತುಮೂರನೆಯ ಅಕ್ಟೋಬರ ಮೂವತ್ತೊಂದರ ಮುಚ್ಚಂಜೆಯಿಂದ, ಮರುದಿನ ನವಂಬರ ಒಂದರ ಸಂಜೆಯತನಕ ಹಂಪೆಯಲ್ಲಿ ಹರುಷದ ಹೊಳೆ ಹರಿದ ದಿನ.

ಗೋಧೂಳಿ ಮುಹೂರ್ತ ಸಮೀಪಿಸುತ್ತಿದ್ದಂತೆ, ಕರ್ನಾಟಕ ನಾಮಕರಣ ಉತ್ಸವದಲ್ಲಿ ಪಾಲುಗೊಳ್ಳಲು ಅಮಿತೋತ್ಸಾಹ, ಸಂಭ್ರಮಗಳಿಂದ ಬಂದ ನಾಡುನುಡಿಯ ಭಕ್ತರಿಂದ ಶ್ರೀ ಪಂಪಾಪತಿಯ ದೇಗುಲ ತುಂಬುತ್ತ ನಡೆಯಿತು. ಕಾಲು ಶತಮಾನದಿಂದ ಕರ್ನಾಟಕ ರಾಜ್ಯ ಹಾಗೂ ನಾಮಕರಣಕ್ಕಾಗಿ ತಪಸ್ಸನ್ನಾಚರಿಸುತ್ತಿದ್ದ ಕನ್ನಡದೇವಿಯ ಕಕ್ಕುಲತೆಯ ಕಂದರು ಈ ವರಪ್ರದಾನ ಗಳಿಗೆಯಲ್ಲಿ ತಮ್ಮ ಹರಕೆಯನ್ನೊಪ್ಪಿಸಲು ಕನ್ನಡ ಕುಲದೇವತೆ ಭುವನೇಶ್ವರಿಯ ಸನ್ನಿಧಾನದಲ್ಲಿ ತಂಡೋಪತಂಡವಾಗಿ ಸೇರುತ್ತಿದ್ದರು. ಹೊರನಾಡಿನಲ್ಲಿ ಕಾರಣಾಂತರದಿಂದ ನೆಲೆಸಿದವರೂ ಇವರಲ್ಲಿದ್ದರು-ದೂರದ ಮುಂಬೈಯಿಂದ, ಗಡಿಯ ಸೊಲ್ಲಾಪುರದಿಂದ ಬಹುಸಂಖ್ಯೆಯಲ್ಲಿ ಬಂದಿದ್ದರು.

ಹಂಪೆಯ ಅಧಿದೇವ ಪಂಪಾಪತಿ, ಅಧಿದೇವತೆ ಪಂಪಾಂಬಿಕೆ, ಕನ್ನಡ ಕುಲದೇವತೆ ಭುವನೇಶ್ವರಿ, ಕರ್ನಾಟಕ ಸಾಮ್ರಾಜ್ಯ ಸ್ಥಾಪನಾಚಾರ್ಯ ವಿಜಯ ವಿದ್ಯಾರಣ್ಯರ ದರ್ಶನದಿಂದ ಪುನೀತರಾಗುವಷ್ಟರಲ್ಲಿ ರಾಣೇಬೆನ್ನೂರು ತಾಲೂಕಿನ ಅಸುಂಡಿಗ್ರಾಮದ ಪಾಟೀಲ ಮನೆತನದ ಮುಕುಟಪ್ರಾಯರೆನಿಸಿದ ಶ್ರೀ ಮುದಿಗೌಡರು ಹಾಗೂ ವಿಜಾಪುರ ಜಿಲ್ಲೆಯ



ಹಂಪೆಯ ಕುಹೇಬೂಟದಲ್ಲಿನ ಶ್ರೀ ಶಿವರಾಮ ಅವಧೂತ ಆಶ್ರಮದಲ್ಲಿ ಕರ್ನಾಟಕ ನಾಮಕರಣ ಮಹೋತ್ಸವ ಸಮಿತಿಯ ಸದಸ್ಯರು–ಕಾರ್ಯಾಧ್ಯಕ್ಷರಾದ ಶ್ರೀ ಕೆ. ಎಫ್. ಪಾಟೀಲರು ಆಶ್ರಮದ ಸದ್ಯದ ಪೀಠಾಧಿಕಾರಿ ಶ್ರೀ ಶಿವಾನಂದ ಭಾರತೀಸ್ವಾಮಿ (ಇಂಚಲಮಠ) ಹಾಗೂ ಅವರ ಗುರುಗಳಾದ ಶ್ರೀ ಕಟ್ಟೀಸ್ವಾಮಿಗಳ ಮಧ್ಯದಲ್ಲಿದ್ದಾರೆ.

ಬಾದಾಮಿ ತಾಲೂಕ ಅಭಿವೃದ್ಧಿ ಮಂಡಲದ ಅಧ್ಯಕ್ಷರೂ, ಜನಪ್ರಿಯ ಮುಂದಾಳುಗಳೂ ಆದ ಶ್ರೀ ಬಸವರಾಜ ಹೊರಕೇರಿ, ಅವರ ಸಂಗಡಿಗರಾದ ಶ್ರೀ ಬಸವಂತಪ್ಪ ನೀಲಪ್ಪ ಪುರ್ತಗೇರಿ, ಶ್ರೀ ಎಂ. ಕೆ. ಬಡಿಗೇರ ಪ್ರತಿಯೊಬ್ಬರೂ ಸಾವಿರ ಸಂಖ್ಯೆಯಲ್ಲಿ ತಂದ ರೊಟ್ಟಿಬುತ್ತಿಗಳ ಸಂತರ್ಪಣೆ ಜನರಿಗಾಗಿ ಕಾಯ್ದುನಿಂತಿತ್ತು. ಕನ್ನಡಕುಲಕೋಟಿ ಒಂದೇ, ಕನ್ನಡಿಗರೆಲ್ಲ ಒಂದೇ ಎಂಬುದನ್ನು ಎತ್ತಿತೋರಿಸುವಂತೆ ಸಾವಿರ ಜನತೆಯ ಸಹಭೋಜನವು, ದೇಗುಲದ ದ್ವಿತೀಯ ಪ್ರಾಂಗಣದ ಕಲ್ಲುಹಾಸಿಗೆಯಂ ಮೇಲೆ ನಡೆಯಿತು. ಸ್ವತಃ, ಹಿರಿಯರಾದ ಶ್ರೀ. ಕೆ, ಎಫ್. ಪಾಟೀಲರು, ಪ್ರಾ॥ ವಿ. ಸಿ. ಹಿತ್ತಲಮನಿಯವರು ಹಾಗೂ ಶ್ರೀ ಬಿ. ಎಂ. ಹೊರಕೇರಿಯವರಂ ರೊಟ್ಟಿಗಳನ್ನು ತೆಕ್ಕೆಯಲ್ಲಿ ಹಿಡಿದುಕೊಂಡು ಒಲುಮೆ, ಜುಲುಮೆಗಳಿಂದ ಉಣಬಡಿಸಿದ್ದು, ರೊಟ್ಟಿ ತಿನ್ನಲು ರೂಢಿಯಿಲ್ಲದವರಿಗೂ ಅವರಿಗರಿಯದಂತೆ ಕೆಲವು ರೊಟ್ಟಿ ತಿನ್ನುವಂತೆ ಪ್ರೋತ್ಸಾಹಿಸಿತು. ಊಟ ಮಾಡಿ ಸಂತೃಪ್ತಿಯ ತೇಗುಹಾಕಿದ ಜನವಂದ ಕನ್ನಡನಾಡು ಮುಂಬರುವ ದಿನಗಳಲ್ಲಿ ಹೊಂದುವ ಅನ್ನಸಂತೃಪ್ತಿಯ ಮುನೂ ಚನೆ ಇದೆಂದು ಉದ್ಗಾರ ತೆಗೆದುದರಲ್ಲಿ ಅತಿಶಯೋಕ್ತಿ ಇರಲಿಲ್ಲ.

ಮಧ್ಯರಾತ್ರಿ ಭರದಿಂದ ಸಾಗಿಬರುತ್ತಿತ್ತು. ಇನ್ನು ಕೆಲವೇ ಕೆಲವು ಘಳಿಗೆಗಳು; ಹರಿಹರೇಶ್ವರ ಮಂದಿರದ ನವರಂಗ, ಪಟಾಂಗಗಳು ತುಂಬಿಹೋದವು ಜನಸಂದಣಿಯಿಂದ.

'ಸರ್ವದೇಶವು ಪುಣ್ಯದೇಶವು
ಸರ್ವಕಾಲವು ಪರ್ವಕಾಲವು
ಸರ್ವದೇವರು ದಾನಪಾತ್ರರು
ಮೂರು ಲೋಕದೊಳು'

ಖ್ಯಾತ ಗಮಕಿ ಗುಡಿಬಂಡೆಯ ಶ್ರೀ ಬಿ. ಎಸ್. ರಾಮಾಚಾರ್ಯರು ಹಾಡಿದರು. ಭಕ್ತಿರಸವೇ ಸಂಗೀತದ ಪಾಕವಾಗಿತ್ತು. ನೆರೆದ ಜನತೆಯ ಪ್ರತಿನಿಧಿಗಳು ಜಿಲ್ಲೆಗೊಬ್ಬೊಬ್ಬರಾಗಿ, ಹೊರನಾಡ ಪ್ರತಿನಿಧಿಗಳು ಮನದುಂಬಿ ಉತ್ಸಾಹದಿಂದ ತಮಗಾದ ಆನಂದ ವ್ಯಕ್ತಪಡಿಸಿದರು (ಸರ್ವಶ್ರೀ ಪಾಟೀಲ ಕಲ್ಲನಗೌಡರು, ಕಲ್ಲೂರ ಕೃಷ್ಣಕುಮಾರರು, ಅಳವಂಡಿ ಶಿವಮೂರ್ತಿಸ್ವಾಮಿಗಳು, ಹಿತ್ತಲಮನಿ ವೀ.ಚ. ಅವರು, ಮ. ನ. ಮೂರ್ತಿಗಳು, ವಿ. ಜಿ. ಕುಲ್ಕರ್ಣಿಯವರು, ವಂ. ಗ. ಶೆಟ್ಟರು, ನ. ವೆಂ. ಕುಲ್ಕರ್ಣಿಯವರು, ಮಣ್ಣೂರರು, ಬಸವರಾಜರು, ಹನುಮೇಗೌಡರು, ಶ್ರೀಶೈಲರು ಇತ್ಯಾದಿ).

ಮಧ್ಯರಾತ್ರಿಗೂ ಸಂಭ್ರಮದ ಗಳಿಗೆ ಕಾಣಲು ಉತ್ಸುಕತೆ; ಇನ್ನೇನು ಕೆಲವೇ ಕೆಲವು ನಿಮಿಷಗಳು. ನೆರೆದ ನೆರವಿಯಲ್ಲಿ ವಿದ್ಯುತ್ ಸಂಚಾರವಾಗುತ್ತಿತ್ತು. ಪ್ರತಿಯೊಬ್ಬರೂ ತಮ್ಮನ್ನೇ ತಾವು ಮರೆತು, ಹೊಸ ಜೀವ, ಹೊಸ ಚೈತನ್ಯ ಪಡೆದವರಂತೆ ತೋರುತ್ತಿದ್ದರು. ಕನ್ನಡ ಕುಲಪುರೋಹಿತ ಶ್ರೀ ಆಲೂರವೆಂಕಟರಾಯರಾದಿಯಾಗಿ ಕನ್ನಡನಾಡುನುಡಿಗಳಿಗಾಗಿ ಜೀವವನ್ನೇ ಮುಡುಪಿರಿಸಿ ದುಡಿದು ಮಡಿದವರ ಸ್ಮರಣೆಮಾಡಿ, ಸಾಂಕೇತಿಕ ಶ್ರದ್ಧಾಂಜಲಿ ಅರ್ಪಿಸುತ್ತಿದ್ದಂತೆಯೇ ಮತ್ತೆ ಗಮಕಿ ಹಾಡಿದರು—

'ಉದಯವಾಯಿತು ಚಲುವಕನ್ನಡನಾಡು।
ಬದುಕು ಬಲುಹಿನ ನಿಧಿಯುಂ ಸದಭಿಮಾನವ ಗೂಡು॥
ಪಾವನೆಯರಾ ..... ವೀರನಾರಾಯಣನ ಬೀಡು!'

ಜನ ಕುಣಿಯಿತು; ಕೇಕೆ ಹಾಕಿತು.

ಶ್ರೀ ಕೃಷ್ಣಕುಮಾರರು ಪ್ರತಿಜ್ಞೆ ಓದಿದರು.

ತನು, ಮನ, ಧನಗಳು ತಾಯಿಗೆ ಅರ್ಪಣ।
ಜಯಕರ್ನಾಟಕ ಮಂತ್ರಕಣಾ॥

ಹಿರಿಧ್ವನಿಯಲ್ಲಿ ಕನ್ನಡಕುಲಕೋಟಿಯ ಪ್ರತಿನಿಧಿಯಾಗಿ ಸೇರಿದ ಜನವೆಲ್ಲ ಪ್ರತಿಜ್ಞೆ ಸ್ವೀಕರಿಸಿತು.

ತನು, ಮನ, ಧನಗಳು ತಾಯಿಗೆ ಅರ್ಪಣ।
ಜಯಕರ್ನಾಟಕ ಮಂತ್ರಕಣಾ॥

ಮಧ್ಯರಾತ್ರಿ ಬಳಿಸಾರಿಯೇ ಬಿಟ್ಟಿತು.
ಭುವನೇಶ್ವರಿಯ ಮಂದಿರದಲ್ಲಿ ಭಕ್ತವೃಂದ ಕಿಕ್ಕಿರಿದು ತುಂಬಿತು.

ಕರ್ನಾಟಕ್ಕೆ ಸ್ವಾಗತ ।
ಕರ್ನಾಟಕ ನಮೋ ನಮೋ ॥
ಕರ್ನಾಟಕಕ್ಕೆ ಜಯವಿರಲಿ ।
ಕರ್ನಾಟಕ ಮಾತೆಗೆ ಜಯವಾಗಲಿ ।
ಭುವನೇಶ್ವರಿಗೆ ಜಯವಾಗಲಿ ॥
ಭವ್ಯಕರ್ನಾಟಕ ಕನ್ನಡಿಗರ ಸಾಧನೆ ।
ಭದ್ರಕರ್ನಾಟಕ ಕೊಡಿಗೆ ಭುವನೇಶ್ವರಿಯ ಕರುಣೆ ॥

ಬಗೆಬಗೆಯಾಗಿ ಜನ ಉಗ್ಗಡಿಸಿತು. ಅರ್ಚಕರು ಮಂಗಳಾರತಿಯೆತ್ತಿ ಭಕ್ತರಿಗೆಲ್ಲ ನೀಡಿದರು.

ನಾವು ಬಳ್ಳಾರಿ ಯುವಕರು!
ಜ್ಯೋತಿ ಒಯ್ಯಬಂದವರು!!
ಕರ್ನಾಟಕ ಜ್ಯೋತಿಯ ರಕ್ಷಕರು!!!

ಬಳ್ಳಾರಿ ವೀರ ಯುವಕರ ಜಯಘೋಷ ನೆರೆದ ನೆರವಿಯ ಕಿವಿಗಡಚಿಕ್ಕಿಸಿತು. ದಿಗ್ವಿಜಯಕ್ಕಾಗಿ ಹೊರಟಂತಿದ್ದ ಉತ್ಸಾಹ, ಸನ್ನಾಹ ಅವರದು! ಸ್ಪರ್ಧಾಳುವಿನ ವೇಷ—ಕೆಂಪು ಚಡ್ಡಿ, ಬಿಳಿಯಂಬನೀನು; ಅದರ ಮೇಲೆ 'ಕರ್ನಾಟಕ ೧-೧೧-೧೯೭೩' ಎಂಬ ಲಿಖಿತ. ಕೈಗಳಲ್ಲಿ ಜ್ಯೋತಿ ಹೊತ್ತಿಸಿಕೊಳ್ಳಲು ಎಣ್ಣೆ ಸಂತೃಪ್ತ ಕಾಯಕೋಲು (ಹಿಲಾಲು). ನಿಂತಲ್ಲಿ ನಿಲ್ಲರು; ಮುಂಗಾಲಮೇಲೆ ಕುಣಿತ. ಬಾಯಲ್ಲಿ ಕರ್ನಾಟಕ ಜ್ಯೋತಿಯ ಉಗ್ಗಡಿಕೆ. ಶಾಸ್ತ್ರೋಕ್ತವಾಗಿ ಕರ್ನಾಟಕ ಜ್ಯೋತಿ ಹೊತ್ತಿಸುವುದು ಬೆಳಗಿನ ಸೂರ್ಯೋದಯ ಸಮಯಕ್ಕೆ ಸರಿಯಾಗಿ. ಅವರ ಉತ್ಸಾಹದ ಒಡ್ಡು ಆಗಲೇ ಒಡೆದಿತ್ತು. ರಾತ್ರಿಯೆಲ್ಲ ಓಡೋಡಿ ಸೂರ್ಯೋದಯ ಸಮಯಕ್ಕೆ ಕರ್ನಾಟಕ ಜ್ಯೋತಿಯನ್ನು ಬಳ್ಳಾರಿಯ ಗಡಿಗೆ ತಲುಪಿಸಬೇಕು. ಸಾವಿರಾರು ಜನ ಸ್ವಾಗತಕ್ಕೆ ಕಾದಿರುತ್ತಾರೆ. ಅದು ಅವರ ಬಯಕೆ, ಯಾವ ಸ್ವಾಂತನ, ಸಮಾಧಾನದ ನುಡಿಯನ್ನೂ ಅವರು ಕೇಳುವಂತಿರಲಿಲ್ಲ. ಅವರೇ ಉಗ್ಗಡಿಸುವ ಜಯಘೋಷಗಳು ಅವರ ಕಿವಿಗಳನ್ನು ಕಿವುಡು ಮಾಡಿದ್ದವು. ಅವರ ದೃಷ್ಟಿಗಳು ಊರ್ಧ್ವಮುಖಿವಾಗಿದ್ದವು. ಅವರಿಗೆ ಕಾಣುತ್ತಿದ್ದುದು ಜ್ಯೋತಿಯೊಂದೇ! ನಾಮಕರಣ ಮಹೋತ್ಸವ ಸಮಿತಿಯ ಅಧ್ವರ್ಯು ಶ್ರೀ ಕಲ್ಲನಗೌಡರು—ಅರ್ಚಕರು ಆಗಲೇ ಹಣೆಗೆ ದೊಡ್ಡ ಕುಂಕುಮ ಇರಿಸಿದ್ದರು;

ಭುವನೇಶ್ವರಿ ಅವರ ದೇಹದಲ್ಲಿ ಪ್ರವೇಶಿಸಿದ್ದಳು. ರಣಭೈರವನಂತೆ ಮುನ್ನುಗ್ಗಿ ಮಂಗಳಾರತಿ ಮಾಡಿದ ಜ್ಯೋತಿಯನ್ನು ಎತ್ತಿಕೊಂಡು—''ನಾಳೆ ಹೊತ್ತಲಿರುವ ಕರ್ನಾಟಕ ಜ್ಯೋತಿಯು ಮುಂಜ್ಯೋತಿ ಇದು! ನಿಮ್ಮ ಅಭೀಷ್ಟನೆರವೇರಲಿ!!'' ಎಂದು ಅವರ ಕಾಯಕೋಲುಗಳಿಗೆ ಜ್ಯೋತಿ ಹೊತ್ತಿಸಿದರು. ಜ್ಯೋತಿವಾಹಕ ಬಂಟರಿಗೆ ತಿಲಕವಿಟ್ಟು ಜಯ ಘೋಷಮಾಡಿ ಬೆನ್ನು ಚಪ್ಪರಿಸಿ ಹರಸಿದರು.

ಕರ್ನಾಟಕ ಮಾತೆಗೆ ಜಯವಾಗಲಿ!
ಕರ್ನಾಟಕ ಜ್ಯೋತಿ ಪ್ರಜ್ವಲಿಸಲಿ!!

ಭುವನೇಶ್ವರಿಯ ಮಂದಿರ ಹಾರಿಹೋಗುವಂತೆ, ಪಂಪಾಪತಿಯ ದೇಗುಲ ಪ್ರತಿಧ್ವನಿಸುವಂತೆ, ನಾಲ್ಕು ದಶಕಗಳ ಕಾಲ ಮಲಗಿ ನಿದ್ರಿಸುತ್ತಿದ್ದ ಹಾಳು ಹಂಪೆ ಎದ್ದೇಳುವಂತೆ, ಅಖಿಲ ಕನ್ನಡನಾಡೇ ಪುಲಕಿತಗೊಳ್ಳುವಂತೆ ಜನತೆ ಜಯಘೋಷ ಮಾಡಿತು.

ಭುವನೇಶ್ವರಿ ತನ್ನ ಮಕ್ಕಳ ಕೆಚ್ಚನ್ನು ಮತ್ತೆ ಪುನಃ ನೋಡಿದಳು—ಕನ್ನಡ ಯುವಜನರ ಉತ್ಸಾಹವೆಂಥದು? ಯುವ ಶಕ್ತಿಯ ಇತಿಮಿತಿಗೆ ಸೀಮೆಯೇರೆಗಳಿವೆಯೇ?

ಕನ್ನಡದ ಕಲಿತನದ ಕೆಚ್ಚೆಂಥದು! ಜ್ಯೋತಿ ಒಯ್ಯುವ ಬಳ್ಳಾರಿ ಬಂಟರನ್ನು ಕಂಡಾಗ ಇವುಗಳ ಅರಿವಾಗುವಂತಿತ್ತು. ಜ್ಯೋತಿ ಎತ್ತಿ ಹಿಡಿದು ಓಡಬೇಕು, ಎಚ್ಚರದಪ್ಪಿ ಬೀಳುವ ತನಕ! ಹಿಂಬಾಲಿಸುತ್ತಿರುವ ವಾಹನದಲ್ಲಿ ಸಾಗಿಸುವ ಮತ್ತೊಬ್ಬ ಕಲಿ ಚೆಂಗನೆ ನೆಗೆದು ಆ ಜ್ಯೋತಿ ಕೈಗೆತ್ತಿಕೊಳ್ಳಬೇಕು!! ಎಂಥ ವೀರೋಚಿತ ವ್ಯವಸ್ಥೆ! ಕನ್ನಡ ಮಾತೆ, ತಾಯಿ ಭುವನೇಶ್ವರಿ, ನಿನ್ನ ಮಕ್ಕಳ ಕಲಿತನ ಕೆಚ್ಚು ಅಳಿದಿಲ್ಲ; ಕಡಿಮೆಯಾಗಿಲ್ಲ. ಇದಕ್ಕೆ ನಿದರ್ಶನ ಈ ಬಂಟರ ವೀರ ಕಾರ್ಯ!

ಯಾವ ಶಬ್ದಬ್ರಹ್ಮನಿಗೂ ಈ ನೋಟ, ಸನ್ನಿವೇಶ ಚಿತ್ರಿಸಲು ಎದೆಗಾರಿಕೆ ಸಾಲದು. ನೋಡಿಯೇ ಅನುಭವಿಸಬೇಕಾಗಿತ್ತು ಅದನ್ನು. ಕನ್ನಡಿಗರು ಸಿಂಹದ ಮರಿಗಳು! ಹುಲಿಯ ಹಾಲನ್ನು ಕುಡಿದಿದ್ದಾರೆ!! ಈ ಮಾತುಗಳು ದಿಟ.

ಯಾರೋ ಇಚ್ಛಿಸಿದರು; ಜನತೆಯೆಲ್ಲ ಅನುಮೋದಿಸಿತು. ಕರ್ನಾಟಕ ಧ್ವಜ, ಭಾರತದ ಧ್ವಜಗಳು ಈ ಚರಿತಾರ್ಹ ದಿನ ಫಟಫಟಿಸಿ ಹಾರಾಡಬೇಕು. ಭಾರತದ ಧ್ವಜ ದೊರೆಯುವಂತಿತ್ತು. ಕರ್ನಾಟಕ ಧ್ವಜವೆಲ್ಲಿದೆ? ಒಂದು ಬಟ್ಟೆಯ ಮೇಲೆ ಕರ್ನಾಟಕದ ನಕ್ಷೆ ಬರೆಯಬೇಕು—ಅದೇ ಕರ್ನಾಟಕದ ಧ್ವಜ. ಅದನ್ನು ಸಿದ್ಧಪಡಿಸಬೇಕು. ಸರಿ! ಸರಿರಾತ್ರಿಯಲ್ಲಿ ಬಟ್ಟೆ ಅಂಗಡಿಯವರ, ದರ್ಜಿಗಳ, ಕಲಾವಿದರ—ಮಲಗಿದವರ ಬಾಗಿಲು ತಟ್ಟಿ ಎಬ್ಬಿಸಿ ಆಯಿತು. ಕಂಬ ಅರಿಸಿ, ನಿಲ್ಲಿಸಿಯಾಯಿತು. ಶ್ರೀ ಹಿತ್ತಲಮನಿ ವೀರಭದ್ರಪ್ಪನವರು ಧ್ವಜಗಳ ಏರ್ಪಾಡು ಮಾಡಿಯೇ ಬಿಟ್ಟರು.

ಗುರುವಾರ (ದಿ. 1–11–1973) ಚರಿತ್ರಾರ್ಹ ದಿನ. ಬೆಳಗಾಗಲು ಇನ್ನೂ ಕೆಲವು ಜಾವಗಳು. ಪಾವನಳಾದ ತುಂಗಭದ್ರೆ ಮಂಜುಳಗಾನ ಮಾಡಿ ಸಾಗುತ್ತಿರುವ ಸುಶ್ರಾವ್ಯ ಸದ್ದು, ಪಶುಪಕ್ಷಿಗಳು ಕಿಲಕಿಲರವಗೈದು ಹಾರಿ ಹೋಗುವ ಸಂಕೀರ್ಣ ಸದ್ದುಕೇಳಿ ಬರುತ್ತಿದ್ದವು ಉಷಾರಾಗ ಋಷ್ಯಶೃಂಗ ಪರ್ವತ ಮುತ್ತಿಡಲು ಹವಣಗೊಂಡ ಘಳಿಗೆ. ಭಕ್ತವೃಂದ ಮತ್ತೆ

ಹಂಪೆಯಲ್ಲಿ ನವಂಬರ 1, 1973 ರಂದು ಕರ್ನಾಟಕ ನಾಮಕರಣ ಮಹೋತ್ಸವದ ದಿನ ನಸುಕಿನಲ್ಲಿ ಶ್ರೀ ಭುವನೇಶ್ವರಿಯ ಸನ್ನಿಧಾನದಲ್ಲಿ ವಿದ್ಯಾರಣ್ಯ ಪೀಠ ಪರಂಪರೆಯ ಶ್ರೀ ಶಂಕರಭಾರತೀಸ್ವಾಮಿಗಳು ಕರ್ನಾಟಕ ಜ್ಯೋತಿ ಹೊತ್ತಿಸಿ ಮಂಗಳಾರತಿ ಮಾಡುತ್ತಿದ್ದಾರೆ.

ಸೇರಿತು ಭುವನೇಶ್ವರಿಯ ಪಾದ ಸನ್ನಿಧಿಯಲ್ಲಿ. ವಿದ್ಯಾರಣ್ಯ ಪರಂಪರೆಯ 48ನೆಯ ಪೀಠಾಧಿಕಾರಿ ಶ್ರೀ ಶಂಕರಭಾರತೀ ಸ್ವಾಮಿಗಳು ಬಿಜಯಂಗೈದರು. ದೇವಿಗೆ ಆರ್ಚನೆ ಮಂಗಳಾರತಿಗಳು ನಡೆದವು. ಸುಮಂಗಲೆ ಶ್ರೀಮತಿ ಕೃಷ್ಣ ಕುಮಾರರು ತಾವೇ ರಚಿಸಿದ ದೇವಿಯ ಪುಣ್ಯ ಸ್ತೋತ್ರ ಸುಶ್ರಾವ್ಯ ಕಂಠದಿಂದ ಹಾಡಿದರು. ಜನತೆಯ ಉಗ್ಗಡಿಕೆಯ ಮಧ್ಯದಲ್ಲಿ ನಂದಾದೀಪ ಧಾರ್ಮಿಕವಾಗಿ ಹೊತ್ತಿಸಿದರು (ಸಾಂಕೇತಿಕವಾಗಿ ಮಧ್ಯರಾತ್ರಿಯೇ ಕರ್ನಾಟಕದ ಹಿರಿಯರು ಹಾಗೂ ಯುವಕರು ಅದನ್ನು ಹೊತ್ತಿಸಿದ್ದರು. ಸಂಕಲ್ಪವೇ ಹಾಗಿರಬೇಕು) ನಾಲ್ಕು ನೂರು ವರ್ಷಗಳ ಪೂರ್ವದಲ್ಲಿ ವಿಜಯ ವಿದ್ಯಾರಣ್ಯರು ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನೆಯ ಜ್ಯೋತಿ ಹೊತ್ತಿಸಿದ ಸ್ಥಳದಲ್ಲಿ ಅವರ ಪೀಠಾಧಿಕಾರಿ ಶ್ರೀ ಶಂಕರ ಭಾರತೀಯರು ಕರ್ನಾಟಕದ ಸಮೃದ್ಧ ಪ್ರಜಾರಾಜ್ಯದ ನಂದಾದೀಪ ಬೆಳಗಿಸಿದರು.

'ಹೊತ್ತಿತೋ ಹೊತ್ತಿತು
ಕನ್ನಡದ ದೀಪ
ಮುಗಿಯಿತೋ ಮುಗಿಯಿತು
ಶತಮಾನಗಳ ಶಾಪ'

ಸಂಭ್ರಮದಿಂದ ಹಾಡಿ ಕುಣಿದಾಡಿತು ಕನ್ನಡ ಭಕ್ತವೃಂದ.

ಕಾಶಿಯ ಗಂಗಾಜಲ, ಸೊನ್ನಲಿಗೆಯ ಸಿದ್ಧರಾಮ ತೀರ್ಥ, ಭೀಮಾ, ಕೃಷ್ಣಾ, ವರದಾ, ಶಾಲ್ಮಲಾ, ಗಂಗಾವಳಿ, ತಲಕಾವೇರಿ, ಶರಾವತಿ, ಅರ್ಕಾವತಿ ಮೊದಲಾದ ಕನ್ನಡ ನಾಡಿನ ಪುಣ್ಯ ನದಿ, ಜಲಾಶಯಗಳ ನೀರುಗಳನ್ನು ತುಂಗಭದ್ರೆಯ ನೀರಿನಲ್ಲಿ ಬೆರೆಯಿಸಿ ಪಂಚಕುಂಭಗಳಲ್ಲಿರಿಸಿ ಪೂಜೆ ಮಾಡಲಾಯಿತು. ಕೂಡ್ಲಿಗಿಯಿಂದ ಜ್ಯೋತಿ ಒಯ್ಯಲು ಬಂದ ತರುಣರ ತಂಡ ಕರ್ನಾಟಕ ಜ್ಯೋತಿಯಿಂದ ತಮ್ಮ ಕಾಯಕೋಲು ಹೊತ್ತಿಸಿಕೊಂಡರು. ಕರ್ನಾಟಕದ ಜ್ಯೋತಿ, ಪೂರ್ಣಕುಂಭ, ಕರ್ನಾಟಕ ನಕ್ಷೆಗಳ ಮೆರವಣಿಗೆ ವೈಭವ ಪೂರ್ಣವಾಗಿ ನಡೆಯಿತು. ಶೃಂಗರಿಸಿವ ಆನೆ, ವಿವಿಧ ವಾದ್ಯಮೇಳಗಳು ಪಾಲುಗೊಂಡಿದ್ದವು. ರತ್ನಖಚಿತ ಕಿರೀಟಧಾರಿಗಳಾಗಿದ್ದ ಶ್ರೀ ಶಂಕರ ಭಾರತೀ ಸ್ವಾಮಿಗಳು ಅಡ್ಡಪಲ್ಲಕ್ಕಿಯಲ್ಲಿ ಆಸನಾರೂಢರಾಗಿದ್ದರು. ಒಂದೇ ಒಂದಾದ ನೂರಡಿ ವಿಶಾಲವಾದ ಪಂಪೆಯ ಬೀದಿಯಲ್ಲಿ ನಡೆದ ಈ ಮೆರವಣಿಗೆ ವಿಜಯನಗರ ಸಾಮ್ರಾಜ್ಯದ ವಿಜಯ ದುಂದುಭಿಯ ಸಮಯಗಳಲ್ಲಿ ನಡೆಯುತ್ತಿದ್ದ ಸಂಭ್ರಮದ ಮೆರವಣಿಗೆಗಳ ನೆನಹು ಮೂಡಿಸುತ್ತಿತ್ತು. ಮುಂಬೈಯಿಂದ ಆಗಮಿಸಿದ ಸುಮಂಗಲೆಯರು, ಹಿರಿಯರಾದ ಶ್ರೀ ಕೆ. ಎಫ್. ಪಾಟೀಲರು ಕುಂಭಗಳನ್ನು ಹೊತ್ತಿದ್ದರು. ಶ್ರೀ ಕೃಷ್ಣಕುಮಾರರ ಕುವರಿ 'ಮಾಲಾ' ಜ್ಯೋತಿಯನ್ನು ಹೊತ್ತಿದ್ದಳು. ಹಂಪೆಯ ಶ್ರೀಮತಿ ಗಿರಿಜ ಮೊದಲಾದ ಸುಮಂಗಲೆಯರು ಬೆಳ್ಳಿಯಾರತಿ ಎತ್ತಿ ಮೆರವಣಿಗೆಯಲ್ಲಿದ್ದ ಜ್ಯೋತಿ ಪೂಜಿಸಿದರು. ಜ್ಯೋತಿ ಒಯ್ಯುತ್ತಿದ್ದ ಕೂಡ್ಲಿಗಿ ಯುವಕರನ್ನು ಬೀಳ್ಕೊಟ್ಟು, ಮೆರವಣಿಗೆ ಮರಳಿಬಂದು ಭುವನೇಶ್ವರಿಯ ಪಾದದಲ್ಲಿ ವಿಸರ್ಜನಗೊಂಡಿತು.

ಹಂಪೆಯ ಯುವಕವೃಂದ, ಗ್ರಾಮಪಂಚಾಯತಿ ಸದಸ್ಯರು, ಶಾನುಭೋಗರು, ಬಂದವರಿಗೆಲ್ಲ ಜ್ಯೋತಿಯನ್ನು ತಮ್ಮ ಗಡಿತನಕ ಒಯ್ದು ಬೀಳ್ಕೊಡುತಿದ್ದ ದೃಶ್ಯ ಅತ್ಯಂತ ನವಿರೇಳಿಸುವಂತಿದ್ದವು.

ನವ್ಹೆಂಬರ 1, 1973 ರಂದು ಹಂಪೆಯಲ್ಲಿ ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡಿದ ದಿನ ಹೊತ್ತಿಸಿದ ಕರ್ನಾಟಕ ಜ್ಯೋತಿ, ರಾಜ್ಯದ ಸರ್ವಜಲಾಶಯಗಳಿಂದ ತುಂಬಿದ ಪಂಚಕುಂಭ, ಕರ್ನಾಟಕ ನಕ್ಷೆಗಳ ಮೆರವಣಿಗೆ ಹಂಪೆಯ ಬೀದಿಯಲ್ಲಿ ಜಂಬೂಸವಾರಿ ಶ್ರೀ ಶಂಕರಭಾರತೀಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವಗಳೊಂದಿಗೆ ವಿಜೃಂಭಣೆಯಿಂದ ನಡೆಯಿತು.

ನಂತರ ಪಂಪಾಪತಿಯ ದೇವಸ್ಥಾನದ ದ್ವಿತೀಯ ಪ್ರಾಂಗಣದಲ್ಲಿ ರಾಷ್ಟ್ರಧ್ವಜ ಹಾಗೂ ರಾಜ್ಯಧ್ವಜಗಳ ಆರೋಹಣ ನಡೆಯಿತು. ಶ್ರೀ ಕೆ. ಎಫ್. ಪಾಟೀಲರು ರಾಷ್ಟ್ರಧ್ವಜ ಹಾರಿಸಿದರು. ಶ್ರೀ ಕೃಷ್ಣಕುಮಾರರು ರಾಜ್ಯದ ಧ್ವಜ ಏರಿಸಿದರು. ಜ್ಯೋತಿ ಒಯ್ಯಲು ಮಹಾಕವಿ ರನ್ನನ ಮುಧೂಪೊಳಲಿನಿಂದ ಬಂದ ಶಾಸಕ ಶ್ರೀ ಕೆ.ಪಿ. ನಾಡಗೌಡ, ಶಿವಶರಣ ಸಿದ್ಧರಾಮನ ಸೊನ್ನಲಿಗೆಯಿಂದ ಬಂದ ಶ್ರೀ ಸಿದ್ಧನಾಥ ಬಳ್ಳಾರಿ, ಅಳವಂಡಿಯಿಂದ ಬಂದ ಕನ್ನಡದ ಸಿಂಹ

ವಾಣಿ ಶ್ರೀ ಶಿವಮೂರ್ತಿಸ್ವಾಮಿಗಳು ಕನ್ನಡನಾಡಿನ ಘನತೆ ಗೌರವಗಳನ್ನು ಕುರಿತು ಮಾತನಾಡಿದರು.

' ಏರಿತೋ ಏರಿತು ಕನ್ನಡದ ಬಾವುಟ '

' ಜನಗಣಮನ ದಾಯಕ..... .....
.....ಜಯ ಜಯ ಜಯಹೇ ! '

ಎರಡೂ ಕೈಗಳನ್ನೆತ್ತಿ ಶ್ರೀ ರಾಮಾಶಾಸ್ತ್ರಿಗಳು ಹಾಡಿದ ರಾಜ್ಯ ಹಾಗೂ ರಾಷ್ಟ್ರಗೀತೆಗಳು ಎಲ್ಲರ ದೇಹದಲ್ಲಿ ನವಶಕ್ತಿಯ ಸಂಚಾರ ಮಾಡಿಸಿದವು.

ಇದು ಮಹೋತ್ಸವದ ಒಂದು ಘಟ್ಟ.

* * * *

ನಾಮಕರಣೋತ್ಸವ ಎಲ್ಲೆಮುಟ್ಟಿದುದು ಸಾಯಂಕಾಲದಲ್ಲಿ ಕರ್ನಾಟಕ ಸಿಂಹಾಸನಾಧೀಶ್ವರರಾದ ಮಹಾರಾಜ ಶ್ರೀ ಜಯಚಾಮರಾಜ ಒಡೆಯರರು ಆಗಮಿಸಿದಾಗ.

ಮಧ್ಯಾಹ್ನದಲ್ಲಿಯೇ ಪಂಪಾಪತಿಯ ವಿಶಾಲ ಪಟಾಂಗಣ ಒಂದು ಇರುವೆ ನುಸಿಯು ದಷ್ಟು ಜಾಗವಿಲ್ಲದಂತೆ ಜನರಿಂದ ಕಿಕ್ಕಿರಿದು ತುಂಬಿತ್ತು. ಸ್ವತಃ ಕೃಷಿಮಂತ್ರಿಗಳೇ ಸ್ವಯಂ ಸೇವಕರಂತೆ ಜನತೆಯ ಮಧ್ಯದಲ್ಲಿ ನುಗ್ಗಿ ಉತ್ಸಾಹದ ನೂಕು ನುಗ್ಗಲಲ್ಲಿ ತೊಡಗಿದ್ದವರನ್ನು ಸಾಂತ್ವನಗೊಳಿಸಬೇಕಾಯಿತು. ಆಗಮಿಸಿದ ಮಹಾರಾಜರನ್ನು ನಾಮಕರಣ ಮಹೋತ್ಸವ ಸಮಿತಿಯ ಸದಸ್ಯರು, ಹಂಪೆಯ ಸ್ವಾಗತ ಸಮಿತಿಯ ಸದಸ್ಯರು ಶ್ರೀ ವಿರೂಪಾಕ್ಷೇಶ್ವರ ಸ್ವಾಮಿಯ ಮಹಾದ್ವಾರದಲ್ಲಿ ವೈಭವದಿಂದ ಸ್ವಾಗತಿಸಿದರು. ವಿದ್ಯಾರಣ್ಯ ಪೀಠ ಪರಂಪರೆಯ ಶ್ರೀ ಶಂಕರಭಾರತಿ ಹಾಗೂ ಶ್ರೀ ಶಿವರಾಮ ಆವಧೂತ ಆಶ್ರಮದ ನೂತನಾಧ್ಯಕ್ಷರಾದ ಶ್ರೀ ಶಿವಾನಂದಭಾರತೀ ಸ್ವಾಮಿದ್ವಯರು ಶಾಲು ಹೊದಿಸಿ ಸ್ವಾಗತಿಸಿದರು. ಪಂಪಾಪತಿ ಹಾಗೂ ಭುವನೇಶ್ವರಿ ದರ್ಶನದ ನಂತರ ಶ್ರೀ ಒಡೆಯರ ಅವರು ರಾಜ್ಯಕ್ಕೆ ' ಕರ್ನಾಟಕ ' ನಾಮಕರಣ ಮಾಡಿ (ಕರ್ನಾಟಕ ರಾಜ್ಯವೆಂಬ ಲಿಖಿತವುಳ್ಳ ನಕ್ಷೆ ಪೂಜಿಸಿ) ಬೆಳಗಿನಲ್ಲಿ ಹೊತ್ತಿಸಿದ ಕರ್ನಾಟಕ ಜ್ಯೋತಿಗೆ ಹೊಸಬತ್ತಿ ಜೋಡಿಸಿ ನಂದಾದೀಪವಾಗುವಂತೆ ಮಾಡಿದಾಗ ಜನತೆ ಆಟ್ಟಹಾಸದಿಂದ ಜಯಘೋಷ ಮಾಡಿತು.

ಕರ್ನಾಟಕ ಸಿಂಹಾಸನಾಧೀಶ್ವರರಿಗೆ ಜಯವಾಗಲಿ !
ಕರ್ನಾಟಕಕ್ಕೆ ಜಯವಾಗಲಿ !!
ಕರ್ನಾಟಕ ಜ್ಯೋತಿ ನಂದಾದೀಪವಾಗಲಿ !!!

ಈ ಘೋಷಣೆಗಳನ್ನಾಲಿಸಿದ ಮಹಾರಾಜರಿಗೆ ಹೊಸ ಚೈತನ್ಯ ಒಂದಂತೆನಿಸಿತು. ದೇಹಾಲಸ್ಯದಿಂದ ಕ್ಷೀಣರಾಗಿದ್ದ ಮಹಾರಾಜರು ಜನತೆ ತಮ್ಮಲ್ಲಿರಿಸಿದ ಭಕ್ತಿ, ಶ್ರದ್ಧೆ,

ಗೌರವ, ಆದರಗಳಿಗೆ ಮಾರುಹೋದಂತೆ ತೋರಿ ಶೋಭಿಸಿದರು. ಭೌತಿಕ ಸಿಂಹಾಸನದಿಂದಿಳಿದ ತಮ್ಮನ್ನು ಕನ್ನಡಜನತೆ ತಮ್ಮ ಹೃದಯ ಸಿಂಹಾಸನದಲ್ಲಿ ಭದ್ರವಾಗಿ ಪ್ರತಿಷ್ಠಾಪನೆಗೊಳಿಸಿದ್ದಾರೆಂದು ಆ ಕ್ಷಣದಲ್ಲಿ ಅರಿತು, ತಾವೇ ಭಾಗ್ಯವಂತರೆಂದು ಉದ್ಗಾರ ತೆಗೆದರು. ಇಂಥ ಭಾಗ್ಯ ಅನುಭವಿಸಲು ಕಾರಣರಾದ ಸಮಿತಿಯ ಕಾರ್ಯಾಧ್ಯಕ್ಷರಾದ ಶ್ರೀ ಕೆ. ಎಫ್. ಪಾಟೀಲರನ್ನು ಬಾಯ್ತುಂಬ ಹೊಗಳಿದರು. ಸ್ನೇಹಿತರೆಂದು ಕರೆದುದು ಅವರೀರ್ವರಲ್ಲಿಯ ಅನ್ಯೋನ್ಯತೆಗಳ ನಿದರ್ಶನವಾಗಿತ್ತು. ಜಾನಪದ ಕವಿ ಸಂಗೀತಕಾರ ಶ್ರೀ ಹುಕ್ಕೇರಿ ಬಾಳಪ್ಪನವರು ಉತ್ಸಾಹದಿಂದ ಸ್ವಾಗತ ಗೀತೆ ಹಾಡಿದರು. ನಂತರ, ಮಹೋತ್ಸವ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಎಫ್. ಪಾಟೀಲರು ಸ್ವಾಗತಗೈಯುತ್ತ ತಮ್ಮ ಬಾಳಿನಲ್ಲಿ ಕಾಣಬೇಕಾಗಿದ್ದ ಭಾರತ ಸ್ವಾತಂತ್ರ್ಯ ಹಾಗೂ ಕರ್ನಾಟಕ ಏಕೀಕರಣ ಈ ಎರಡನ್ನೂ ಕಣ್ಣಾರೆ ಕಂಡ ಭಾಗ್ಯಶಾಲಿಗಳೆಂದ

ಕರ್ನಾಟಕ ನಾಮಕರಣ ಮಹೋತ್ಸವದ ದಿನ ಹಂಪೆಯ ಶ್ರೀ ವಿರೂಪಾಕ್ಷ ಸನ್ನಿಧಿಯಲ್ಲಿ ಕರ್ನಾಟಕ ಸಿಂಹಾಸನಾಧೀಶ್ವರರಾದ ಮೈಸೂರಿನ ಮಹಾರಾಜ ಶ್ರೀ ಜಯಚಾಮರಾಜ ಒಡೆಯರು ಕರ್ನಾಟಕ ನಾಮಕರಣ ಮಾಡಿದರು. ಪಾಶ್ರ್ವ ಸಚಿವ ಶ್ರೀ ಕೆ. ಎಫ್. ಪಾಟೀಲರು ಕರ್ನಾಟಕ ನಾಮದ ಔಚಿತ್ಯತೆಯನ್ನು ವಿವರಿಸುತ್ತಿದ್ದಾರೆ. ಶ್ರೀ ಕೆ. ಎಫ್. ಪಾಟೀಲರು ಮಹಾರಾಜರ ಬಲಬದಿಯಲ್ಲಿದ್ದಾರೆ.

ಸಂತೃಪ್ತಿಯ ಉಸಿರೆಳೆದರು. ಅಧ್ಯಕ್ಷತೆ ವಹಿಸಿದ್ದ ಕೃಷಿ ಸಚಿವ ಶ್ರೀ ಪಾಟೀಲ ಕೃಷ್ಣಗೌಡರು 'ಕರ್ನಾಟಕ' ಹೆಸರಿನ ಔಚಿತ್ಯವನ್ನು ಬಣ್ಣಿಸಿದರು. ಡಾ|| ಸೂರ್ಯನಾಥ ಕಾಮತ ಬರೆದ 'ವಿಜಯನಗರ ಸಾಮ್ರಾಜ್ಯ' ಹಾಗೂ ಶ್ರೀ ಕೃಷ್ಣಕುಮಾರ ಕಲ್ಲೂರರು ಬರೆದ 'ಕರ್ನಾಟಕ ಗೀತೆಗಳು' ಪ್ರಸ್ತಕಗಳ ಪ್ರಕಟಣೆಯೂ ಈ ಸಂದರ್ಭದಲ್ಲಿ ನಡೆಯಿತು. ವಿಜಯನಗರ ಸಾಮ್ರಾಜ್ಯದ ಬಗ್ಗೆ ಆಳ ಸಂಶೋಧನೆ ನಡೆಯಿಸಿರುವ ಪ್ರೊಂಚ್ ದಂಪತಿ ಫಿಲಿಯೋಜಾ ಈ ಉತ್ಸವದಲ್ಲಿ ಪಾಲುಗೊಂಡುದು ಕರ್ನಾಟಕದ ಬಗ್ಗೆ ಅವರು ಇಟ್ಟುಕೊಂಡ ಅಭಿಮಾನದ ಕುರಹಾಗಿತ್ತು. (ಶ್ರೀಮತಿ ಡಾ। ಜಿಯರ್‌ಸಿಲ್ವೇನ್ ಫಿಲಿಯೋಜಾ ಕನ್ನಡತಿ: ಮೊದಲಿನ ಕು॥ ವಸುಂಧರಾ ಕವಲಿ) ಇದೇ ಸಂದರ್ಭದಲ್ಲಿ ಮುಂಬೈ ಅಖಿಲ ಕರ್ನಾಟಕ ಸಾಂಸ್ಕೃತಿಕ ಸಂಘದವರು ಏರ್ಪಡಿಸಿದ ನಿಬಂಧ ಸ್ಪರ್ಧೆಯಲ್ಲಿ ವಿಜಯಿಗಳಾದವರಿಗೆ ಬಹುಮಾನ ವಿತರಣ ಮಾಡಲಾಯಿತು.



ಹಂಪೆಯಲ್ಲಿ ನವಂಬರ್ 1. 1973 ರಂದು ಕರ್ನಾಟಕ ನಾಮಕರಣ ಮಹೋತ್ಸವದಂದು ನಡೆದ ಜ್ಯೋತಿ ಹಾಗು ಕುಂಭಗಳ ಮೆರವಣಿಗೆಯಲ್ಲಿ ಶ್ರೀ ಜಯಚಾಮರಾಜ ಒಡೆಯರು. ಕೃಪಿ ಸಚಿವ ಶ್ರೀ ಕೆ. ಎಚ್. ಪಾಟೀಲರು ಪಾಲುಗೊಂಡಿದ್ದಾರೆ.

ಸಮಾರಂಭದ ನಂತರ ಕರ್ನಾಟಕ ಜ್ಯೋತಿಯ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು. ತೆರೆದ ಕಾರಿನಲ್ಲಿ ಶ್ರೀ ಜಯಚಾಮರಾಜ ಒಡೆಯರು ಹಿಂದಿನ ಹಾಗೂ ಇಂದಿನ ಕೃಷಿ ಸಚಿವರೊಂದಿಗೆ ಕುಳಿತು ಮೆರವಣಿಗೆಯಲ್ಲಿ ಪಾಲುಗೊಂಡಿದ್ದರು. ಹಂಪೆಯ ಉತ್ಸಾಹಿ ತರುಣರು ವಿಜಯನಗರ ಇತಿಹಾಸ ಕಣ್ಮುಂದೆ ಕಟ್ಟುವಂತೆ ರೂಪಕಗಳನ್ನು ಸಿದ್ಧಪಡಿಸಿದ್ದು ಚಿತ್ತಾಕರ್ಷಕವಾಗಿತ್ತಲ್ಲದೆ ಔಚಿತ್ಯಪೂರ್ಣವೂ ಆಗಿತ್ತು. ಜ್ಯೋತಿ ಹಾಗೂ ಕುಂಭಗಳನ್ನು ಶೃಂಗರಿಸಿದ ಆನೆಯ ಮೇಲಿರಿಸಲಾಗಿತ್ತು.

ಗೊಧೂಳಿ ಮತ್ತೆ ಹಣಕಿಹಾಕಿತು. ಮೆರವಣಿಗೆ ಪಂಚವಟಿ ತಲಪಿತು. 'ಪಂಚವಟಿ' ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣಮಾಡಿದ ದಿನ ನಿರ್ಮಿಸಿದ ಸ್ಮಾರಕ ತೋಟ (ಬನ); ಕರ್ನಾಟಕ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿದ—ಪಟ (ಅಲ), ಬನ್ನಿ, ಅಶ್ವತ್ಥ (ಆರಳಿ)

ಕರ್ನಾಟಕ ನಾಮಕರಣ ಸ್ಮಾರಕದ ಅಂಗವಾಗಿ ಹಂಪೆಯಲ್ಲಿನ ಪಂಚವಟಿಯಲ್ಲಿ ಶ್ರೀ ಜಯಚಾಮರಾಜ ಒಡೆಯರು ಪ್ರಥಮ ವೃಕ್ಷವಾಗಿ ನೆಡಲು ತೋಟಗಾರಿಕೆ ಇಲಾಖೆಯ ನಿರ್ದೇಶಕರಾದ ಡಾ॥ ಮರಿಗೌಡರಿಂದ ರಾಮೋಹಳ್ಳಿ ಬೊಪ್ಪ ಆಲದ ಮರದ ತಳಿ ಸ್ವೀಕರಿಸುತ್ತಿದ್ದಾರೆ.

ಬೇವು, ಬಿಲ್ವಗಳೇ ಮೊದಲಾದ ಹಾಗೂ ಕರ್ನಾಟಕದ ಅರಣ್ಯ ಸಂಪತ್ತನ್ನು ಹೆಚ್ಚಿಸಲು ಕಾರಣಗಳಾದ ಶ್ರೀಗಂಧ, ಬೀಟೆ, ತೇಗು, ನೀಲಗಿರಿ ಇತ್ಯಾದಿ ಹಾಗೂ ಸುಂದರ ಪುಷ್ಪ ನೀಡುವ ಸಂಪಿಗೆ, ಕತ್ತಿ, ಕೇಸಿಯಾ ಮೊದಲಾದ ಹಲವು ಮರಗಳಿಂದ ಕೂಡಿದ ವನ (ತೋಪು) ನಿರ್ಮಾಣವಿದು. ರಾಜ್ಯ ತೋಟಗಾರಿಕೆ ಇಲಾಖೆ ಮುಂದಾಳುತನದಲ್ಲಿ ಈ ಬನ ನಿರ್ಮಾಣವಾಗುತ್ತಿದೆ. ಈ ಇಲಾಖೆಯ ನಿರ್ದೇಶಕರಾದ ಡಾ॥ ಮರಿಗೌಡರ ರಾಜ್ಯದ ಮೇಲಿನ ಅಭಿಮಾನ ಹಾಗೂ ಪ್ರಜ್ಞೆಯ ಕುರುಹಿದು. ಕನ್ನಡ ನಾಡಿನ ಹೆಮ್ಮೆಯ ರಾವೋ ಹಳ್ಳಿಯ ದೊಡ್ಡ ಆಲದ ತಳಿಯ (ದೊಡ್ಡಾಲವೆಂದೇ ಅದಕ್ಕೆ ಖ್ಯಾತಿ; ರಾಜ್ಯದಲ್ಲಿಯೆ ಅತಿ ದೊಡ್ಡ ಆಲದ ಮರ. ಭಾರತದಲ್ಲಿ ಅದಕ್ಕೆ ದ್ವಿತೀಯ ಸ್ಥಾನ) ಸಸಿಯೊಂದನ್ನು ಶ್ರೀ ಜಯಚಾಮರಾಜ ಒಡೆಯರು ನೆಟ್ಟು ಪಂಚವಟಿ ನಿರ್ಮಾಣಕ್ಕೆ ನಾಂದಿ ಹಾಕಿದರು. ರಾಜ್ಯಕೃಷಿ ಸಚಿವರು ಕೃಷ್ಣಆಲ ನೆಟ್ಟರು. ಶ್ರೀ ಕೆ. ಎಫ್. ಪಾಟೀಲರು ಅಶ್ವತ್ಥ ವೃಕ್ಷನೆಟ್ಟರು.

ಹಂಪೆಯಲ್ಲಿ ನಾಮಕರಣ ಮಹೋತ್ಸವದ ನೆನಹಿಗಾಗಿ ಸ್ಥಾಪಿತವಾಗಿರುವ ಕರ್ನಾಟಕ ಸ್ತಂಭದ ಭೂಮಿ ಪೂಜೆಯು ಕೂಡ ನಡೆಯಿತು. ಈ ರಾಯಗಂಭ (ಕಲ್ಲಿನ ಕಂಭ) ದ ನಿರ್ಮಾಣದಲ್ಲಿ ಕರ್ನಾಟಕದ ಎಲ್ಲ ಜನತೆಯೂ ಪಾಲುಗೊಳ್ಳಲು ಅವಕಾಶ ಏರ್ಪಡಿಸಲಾಗಿದೆ.

ನಂದಾದೀಪವಾಗಿ ಉರಿಯುವ ಕರ್ನಾಟಕ ಜ್ಯೋತಿಯ ಜೊತೆಗೆ, ಕರ್ನಾಟಕ ಸ್ತಂಭ ಪೂರ್ಣಗೊಂಡು ತಲೆಯೆತ್ತಿ, ನಿಂತಾಗ, ಪಂಚವಟಿ ಬೆಳೆದು ಬಂದಾಗ, ಇವು ಕನ್ನಡಿಗರಿಗೆ ಬಹುದೊಡ್ಡ ಸಾಂಸ್ಕೃತಿಕ ಆಸ್ತಿಯಾಗಬಲ್ಲವು. ಈಗಾಗಲೇ ಸ್ಫೂರ್ತಿಯ ನೆಲೆಯಾದ ಹಂಪೆ ಇನ್ನೂ ಅಧಿಕ ಶಕ್ತಿ, ಚೇತನಗಳ ಪವಿತ್ರ ತಾಣವಾಗುವುದರಲ್ಲಿ ಸಂದೇಹವಿಲ್ಲ.

ಕರ್ನಾಟಕದ ಜ್ಯೋತಿ ಅಮರವಾಗಲಿ!
ಪಂಚವಟಿ ಪವಿತ್ರ ತಾಣವಾಗಲಿ!
ಕರ್ನಾಟಕ ಸ್ತಂಭ ಸ್ಫೂರ್ತಿಯ ಸಂಕೇತವೆನಿಸಲಿ!
ಜೈ ಭುವನೇಶ್ವರಿ!
ಜೈ ಕರ್ನಾಟಕ ಮಾತೆ!!

೩. ಗದುಗಿನಲ್ಲಿ ಉತ್ಸವ

ಶ್ರೀ ಸೂರ್ಯನಾರಾಯಣ ಚಡಗ

ಕನ್ನಡಿಗರಿಗೆ ಕನ್ನಡವೇ ದೇವರು! ಕನ್ನಡ ಭಾಷೆಯೇ ಉಸಿರು!! ಕನ್ನಡ ಸಾಹಿತ್ಯ ಕಲೆ, ಸಂಸ್ಕೃತಿಯೇ ಬಾಳಿನ ನೇಸರು!!! ಈ ಮಾತು ಎಂದೆಂದೂ ಹಸಿರು ಎಂದು ನಾನು ತಿಳಿದದ್ದು, ನವಂಬರ ಮೂರರಸಂಜೆ ಗದುಗಿನಲ್ಲಿ ಮಾಜಿ ಸಚಿವ ಶ್ರೀ ಕೆ. ಎಫ್. ಪಾಟೀಲರ ಮಾರ್ಗದರ್ಶನದಲ್ಲಿ ನಡೆದ ಕರ್ನಾಟಕ ನಾಮಕರಣ ಮಹೋತ್ಸವದ ಸಮಾರಂಭದ ಸಂಭ್ರಮವನ್ನು ಪ್ರತ್ಯಕ್ಷ ಕಂಡಾಗ. ಮಾತಿನಲ್ಲಿ ಉತ್ಪ್ರೇಕ್ಷೆ ಇಲ್ಲ. ಅತಿಶಯವಾದ ವರ್ಣನೆಯಿಂದ

ಲೇಖನಿಯ ದುರುಪಯೋಗವೂ ಆಗಿಲ್ಲ ; ಇದ್ದುದನ್ನು ಇದ್ದಂತೆ ಬರೆದಿದ್ದೇನೆ. ಕಾಲಚಕ್ರ ಉರುಳುತ್ತಿದೆ. ತನ್ನ ಪಾಡಿಗೆ ದಿನಗಳು ಹಲವು ಕಳೆದಿವೆ. ಗದುಗಿನಲ್ಲಿ ನಡೆದ ಸುಂದರ ಸಮಾರಂಭದ ನೆನಪು ಮಂರುಂಕಳಿಸುತ್ತಿದೆ ಇಂದಿಗೂ ನನಗೆ. ಅನುಭವಕಿಂತಲೂ ಮಧುರವಾದದ್ದು ಅನುಭವಿಸಿದುದರ ಸ್ಮರಣೆ. ನೆನಪು ಹುರುಪಿಗೆ ದಾರಿದೀಪ. ತಣ್ಣನೆಯ ಸಂಜೆ ಅಂದು. ಬಣ್ಣನೆಗೂ ಮಿಾರಿದ ವೈಭವದ ವಾತಾವರಣ ಗದುಗಿನ ಹೊರವಲಯದಲ್ಲಿ. ವರ್ಣನೆಗೆ ಯೋಗ್ಯವಾದ ನಿಜ ಅಭಿಮಾನದ ವಿಶೇಷತೆ ಗದುಗಿನ ಜನರ ಹೃದಯದಲ್ಲಿ. ಕಣ್ಣಿಗೆ ಇನ್ನಿಲ್ಲದ ಹಬ್ಬ. ಕ್ಷಣಕ್ಷಣವು ಉತ್ಸಾಹ ಜನರಲ್ಲಿ ; ಚಿರನೂತನ ಅಭಿಮಾನವು. ಸಚೇತನವಾದಂತಹ ಅಪೂರ್ವ ಸಂದರ್ಭ. ವೀರನಾರಾಯಣನ ನೆಲೆಯಾದ ಗದುಗಿನ ಕನ್ನಡಿಗರೆಲ್ಲರೂ ವೀರನಾರಾಯಣರೇ ಆದರೇನೊ ಎನ್ನುವ ದಿವ್ಯ ವಾತಾವರಣ. ಕುಮಾರ ವ್ಯಾಸನ ಮಹಾಭಾರತ ಸೃಷ್ಟಿಯಾದ



ಹಂಪೆಯಲ್ಲಿ ಶ್ರೀ ಭುವನೇಶ್ವರಿಯ ಸನ್ನಿಧಾನದಲ್ಲಿ ಕರ್ನಾಟಕ ನಾಮಕರಣ ಮಹೋತ್ಸವದ ಅಂಗವಾಗಿ ಹೊತ್ತಿಸಿದ ಕರ್ನಾಟಕ ಜ್ಯೋತಿಯನ್ನು ಗದುಗಿನ ವೀರನಾರಾಯಣನ ಸನ್ನಿಧಾನದಲ್ಲಿ ನಂದಾದೀಪವಾಗಿರಿಸಲಾಯಿತು. ಚಿತ್ರದಲ್ಲಿ ಹಂಪೆಯಿಂದ ಜ್ಯೋತಿ ತಂದ ಪ್ರಾ॥ ವೀ. ಸಿ. ಹಿತ್ತಲಮನಿ, ಜ್ಯೋತಿ ಸ್ವೀಕರಿಸಿದ ರಾಜ್ಯಮುಖ್ಯಮಂತ್ರಿ ಶ್ರೀ ದೇವರಾಜ ಅರಸ, ಜ್ಯೋತಿ ನಂದಾದೀಪವಾಗಿರಿಸಿದ ಶ್ರೀ ಜಯಚಾಮರಾಜ ಒಡೆಯರು, ಮುಖ್ಯ [illegible]ಮಂತ್ರಿಗಳ ಧರ್ಮಪತ್ನಿ] ಶ್ರೀಮತಿ ಚಿಕ್ಕಮ್ಮಣ್ಣಿ ಹಾಗೂ ರಾಜ್ಯ ಸಚಿವ ಶ್ರೀ ಡಿ. ಕೆ. ನಾಯ್ಕರರು ಇದ್ದಾರೆ.

ಆ ಪುಣ್ಯ ತಾಣದಲ್ಲಿ ಕನ್ನಡಿಗರೆಲ್ಲರೂ ಆ ಒಂದು ದಿನ ಕುಮಾರವ್ಯಾಸರೇ ಆದಂತಹ ಭವ್ಯ ದರ್ಶನ. ಒಟ್ಟಿನಲ್ಲಿ ಎಲ್ಲವೂ ರಮ್ಯ. ಕಣ್ಮನಗಳಿಗೆ ನವ್ಯ ದರ್ಶನ. ಮೈಸೂರಿನ ಆಳಿದ ಮಹಾರಾಜರು, ಪ್ರತಿಷ್ಠಿತರಾದ ಕರ್ನಾಟಕದ ಮುಖ್ಯಮಂತ್ರಿ ದೇವರಾಜ ಅರಸ, ಅರಣ್ಯ ಸಚಿವ ಕೆ, ಎಚ್. ಪಾಟೀಲ, ಮಂತ್ರಿಗಳಾದ ಡಿ. ಕೆ. ನಾಯ್ಕರ ಹಾಗೂ ಜಿ. ದೇವೇಂದ್ರಪ್ಪ ಮತ್ತು ಮಾಜಿ ಸಚಿವರಾದ ಕೆ. ಎಫ್. ಪಾಟೀಲರೊಂದಿಗೆ ಗದುಗಿನ ವೀರನಾರಾಯಣ ದೇವಾಲಯದಿಂದ ಸಭಾಂಗಣಕ್ಕೆ ಮೆರವಣಿಗೆಯೊಂದಿಗೆ ಆಗಮಿಸಿದಾಗ ಮತ್ತೊಮ್ಮೆ ವಿಜಯನಗರದ ಕೃಷ್ಣದೇವರಾಯನೇ ಅವತರಿಸಿ ಆಗಮಿಸಿ ಬಂದನೋ ಎನ್ನುವ ಅಸದೃಶ ಪ್ರಕರಣ. ಎಣಿಕೆಗೆ ನಿಲುಕದಷ್ಟು ಜನರು. ಕಣ್ಣಿಗೆ ಆಳತೆಯಾಗದಷ್ಟು ಉದ್ದದ ಮೆರವಣಿಗೆ. ಬೀದಿಯ ಇಕ್ಕೆಲಗಳಲ್ಲಿ ತಳಿರು ತೋರಣಗಳ ಅಂದಚಂದ. ಮರೆಯಲಾರದ... ಮರೆಯಲಾಗದ ಅತ್ಯಂತ ಮಹತ್ವದ ಮೆರವಣಿಗೆ; ಹಿಂದೆ ಗದುಗಿನಲ್ಲಿ ನಡೆದಿಲ್ಲ; ಮುಂದೆ ನಡೆಯುವುದರ ಬಗ್ಗೆ ಈಗ ಏನೂ ಹೇಳುವಂತಿಲ್ಲ.



ಕರ್ನಾಟಕ ನಾಮಕರಣ ಮಹೋತ್ಸವದ ಅಂಗವಾಗಿ ಗದುಗಿನಲ್ಲಿ ಕರ್ನಾಟಕ ಸಿಂಹಾಸನಾಧೀಶ್ವರ ಶ್ರೀ ಜಯಚಾಮರಾಜ ಒಡೆಯರು ಹಾಗೂ ಕರ್ನಾಟಕ ನಾಮಕರಣಕ್ಕೆ ಕಾರಣರಾದ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸರನ್ನು ಸನ್ಮಾನಿಸಲಾಯಿತು. ಕಾರ್ಯಧ್ಯಕ್ಷರಾದ ಶ್ರೀ ಕೆ. ಎಫ್. ಪಾಟೀಲರು ಸ್ವಾಗತ ಭಾಷಣ ಮಾಡುತ್ತಿದ್ದಾರೆ. ಕೃಷಿ ಹಾಗೂ ಅರಣ್ಯ ಸಚಿವ ಶ್ರೀ ಕೆ.ಎಚ್. ಪಾಟೀಲರು ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಮೇಲೆ ಪಾರ್ವಾತಿ ಸಚಿವ ಶ್ರೀ ದೇವೇಂದ್ರಪ್ಪ ಫಾಳಪ್ಪ ಹಾಗೂ ನಗರಸಭೆ ಅಧ್ಯಕ್ಷ ಶ್ರೀ ಕೆ.ಎಂ. ಕಣವಿ ಅವರೂ ಇದ್ದಾರೆ.

ಹಂಪೆಯಲ್ಲಿ ಹೊತ್ತಿಸಲಾದ ಕನ್ನಡಿಗರ ಬದುಕಿನ ನಂದಾದೀಪವನ್ನು ಗದುಗಿಗೆ ತಂದವರು ಪ್ರಾ॥ ವೀ. ಚ. ಹಿತ್ತಲಮನಿಯವರು. ವೀರನಾರಾಯಣ ಗುಡಿಯಲ್ಲಿ ಅದನ್ನು ಸ್ವಾಗತಿಸಿ ಸ್ವೀಕರಿಸಿದವರು ಶ್ರೀ ದೇವರಾಜ ಅರಸರು. ಕರ್ನಾಟಕದ ಜ್ಯೋತಿಯೆಂದು ಮುಖ್ಯ ಮಂತ್ರಿಯಾದ ಅರಸರೇ ಗುಡಿಯಲ್ಲಿ ದೀಪ ಹೊತ್ತಿಸಿದರು. ಶ್ರೀ ಜಯಚಾಮರಾಜ ಒಡೆಯರ್ ಅವರ ಸಮ್ಮುಖದಲ್ಲಿ ನಂದಾದೀಪ ಹೊತ್ತಿಸಿದುದಕ್ಕೆ ಮಹತ್ವದ ಅರ್ಥವಿದೆ.

ಆಕರ್ಷಕ ಸಮಾರಂಭ. ಸಂದರ್ಭಕ್ಕೆ ಉಚಿತವಾದ ರೀತಿಯಲ್ಲಿ ಸಭೆಯ ಏರ್ಪಾಡು. ಕಾರ್ಯಾಧ್ಯಕ್ಷರಾದ ಶ್ರೀ ಕೆ. ಎಫ್. ಪಾಟೀಲರ ಸೊಗಸಾದ ಸ್ವಾಗತ ಭಾಷಣ. ಮಹಾರಾಜರಿಂದ ಸಂಸ್ಕೃತಿಯ ಬಗ್ಗೆ ಸರಸವಾದ ವ್ಯಾಖ್ಯಾನ. ರಾಜಕೀಯವಾಗಿಯೇ ಮುಖ್ಯಮಂತ್ರಿಗಳಿಂದ ಭವಿಷ್ಯಕ್ಕೆ ಹಲವು ಭರವಸೆಗಳು. ಶ್ರೀ ಡಿ. ಕೆ. ನಾಯ್ಕರ್ ಅವರ ಕನ್ನಡದ ಬಗ್ಗೆ ಅಭಿಮಾನದ ಮಾತುಗಳು, ಸಾಹಿತ್ಯದ ಅಂಶಗಳಿಂದ ಕೂಡಿದ ಶ್ರೀ ಕೆ. ಎಚ್. ಪಾಟೀಲರ ಭಾಷಣವೂ ಸಭೆಗೆ ಭೂಷಣವಾಗಿಯೇ ಇತ್ತು. ಇವುಗಳೊಂದಿಗೆ ನೆನಪಿಸಿಕೊಳ್ಳಬೇಕಾದದ್ದು ಶ್ರೀ ಬಾಳಪ್ಪ ಹುಕ್ಕೇರಿಯವರ ಮತ್ತು ಶ್ರೀನಿವಾಸ ಉಡುಪರ ಲಘು ಸಂಗೀತ.

ನಾನು ಬೆಂಗಳೂರಿಗೆ ಬಂದಿದ್ದೇನೆ. ಆದರೆ ಮನಸ್ಸು ಇನ್ನೂ ಗೆದಂಗಿನಲ್ಲಿದೆ. ಆ ವೈಭವದ ಸಮಾರಂಭವನ್ನು ನೆನಸುತ್ತಿದೆ. ಆ ನೆನಪು ಬಹುಕಾಲ ಉಳಿಯುತ್ತದೆ. ಮತ್ತೊಮ್ಮೆ ಅಂತಹ ಅಪೂರ್ವ ಅವಕಾಶವನ್ನು ನಿರೀಕ್ಷಿಸುತ್ತಿದೆ.

೪ ಪತ್ರಿಕಾ ವರದಿಗಳು

ಹಂಪೆಯಲ್ಲಿ ಹರ್ಷದ ನಾಮಕರಣೋತ್ಸವ

[ಕರ್ನಾಟಕಜ್ಯೋತಿ ಶ್ರೀ ಭುವನೇಶ್ವರಿ ಸನ್ನಿಧಾನದಲ್ಲಿ ಹೊತ್ತಿತು. ಆ ಜ್ಯೋತಿ ನಂದಾದೀಪವಾಯಿತು. ಹಲವಾರು ಊರುಗಳಿಗೆ ಆ ಜ್ಯೋತಿ ಸಾಗಿಹೋಯಿತು. ಆ ಜ್ಯೋತಿ ಹಾಗೂ ಕರ್ನಾಟಕದ ಎಲ್ಲ ಜಲಾಶಯಗಳಿಂದ ತುಂಬಿದ ಪೂರ್ಣ ಕುಂಭಗಳ ಮೆರವಣಿಗೆ ನಡೆಯಿತು. ರಾಜ್ಯಕ್ಕೆ 'ಕರ್ನಾಟಕ'ವೆಂದು ಪಂಪಾಪತಿಯ ಸನ್ನಿಧಾನದಲ್ಲಿ ನಾಮಕರಣ ಮಾಡಲಾಯಿತು. ಕರ್ನಾಟಕಕ್ಕಾಗಿ ದುಡಿದು ಮಡಿದವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ನಾಮಕರಣೋತ್ಸವದ ಸಂಸ್ಮರಣೆಗಳಾದ ಪಂಚವಟಿಯಲ್ಲಿ ಗಿಡ ನೆಡಲಾಯಿತು ಹಾಗೂ ಕರ್ನಾಟಕ ಸ್ತಂಭದ ಭೂಮಿ ಪೂಜೆ ನಡೆಯಿತು.]

'' ಸರ್ವ ದೇಶವು ಪುಣ್ಯದೇಶವು, ಸರ್ವ ಕಾಲವು ಪರ್ವಕಾಲವು, ಸರ್ವ ದೇವರು ದಾನ ಪಾತ್ರರು ಮೂರು ಲೋಕದೊಳು ''.

ಬುಧವಾರ (31-10-1973) ಸಂಜೆ 7 ಗಂಟೆ ಹಂಪೆಯ ವಿರೂಪಾಕ್ಷ ದೇವಾಲಯ, ಬಿ. ಎಸ್. ರಾಮಾಚಾರ್ ಅವರಿಂದ ಈ ಪುಣ್ಯಾವಾಹನೆ.

ಕರ್ನಾಟಕ ನಾಮಕರಣ ಮಹೋತ್ಸವ ಆರಂಭ. ಆನಂತರ ಪಂಪಾಪತಿ, ಭುವನೇಶ್ವರಿಗೆ ಅಭಿಷೇಕ.

ಮುಂಬೈ, ಸೊಲ್ಲಾಪುರ ಹಾಗೂ ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ಜನರಂ ಪಂಪಾಪತಿ ದೇವಾಲಯದ ಪ್ರಾಕಾರದಲ್ಲಿ ಕಿಕ್ಕಿರಿದು ಸೇರಿದ್ದರು.

ಹನ್ನೆರಡು ಗಂಟೆಗೆ ಶ್ರೀ ದಿವಂಗತ ಆಲೂರು ವೆಂಕಟರಾಯರು ಹಾಗೂ ಕರ್ನಾಟಕಕ್ಕಾಗಿ ಮಾಡಿ ಮಡಿದವರ ಸ್ಮರಣೆ–ಶ್ರದ್ಧಾಂಜಲಿ.

ರಾಜ್ಯೋತ್ಸವ ಹದಿನೆಂಟನೆ ವರ್ಷದಲ್ಲಿ ಕಾಲಿಟ್ಟಾಗ ನೆರೆದಿದ್ದವರಿಂದ ಪ್ರತಿಜ್ಞೆ ಸ್ವೀಕಾರ.

"ತನು ಮನ ಧನಗಳು ತಾಯಿಗೆ ಸಮರ್ಪಣ. ಜಯ ಕರ್ನಾಟಕ ಮಂತ್ರ ಕಣಾ." ವಿಧಾನಸಭೆಯಲ್ಲಿ ರಾಜ್ಯಕ್ಕೆ ಕರ್ನಾಟಕ ನಾಮಕರಣ ನಿರ್ಣಯ ಅಂಗೀಕಾರವಾದ ಸುದ್ದಿಯನ್ನು ಕೇಳಿ ಶ್ರೀ ಕೃಷ್ಣಕುಮಾರ ಕಲ್ಲೂರ ಅವರು ಬರೆದ ಜಯ ಕರ್ನಾಟಕ ಗೀತೆಗಳಲ್ಲಿ ಇರುವ ಪ್ರತಿಜ್ಞೆ ಇದು.

ಪ್ರತಿಜ್ಞಾ ವಚನ ಸ್ವೀಕಾರದ ನಂತರ ಸರ್ವಶ್ರೀ ಕೆ. ಎಫ್. ಪಾಟೀಲ್, ಕೃಷ್ಣ ಕುಮಾರ ಕಲ್ಲೂರ, ಆಳಪಂಡಿ ಶಿವಮೂರ್ತಿ ಸ್ವಾಮಿ, ವಿ. ಸಿ. ಹಿತ್ತಲಮನಿ, ಮು.ನ. ಮೂರ್ತಿ, ಜಿ. ವಿ. ಕುಲಕರ್ಣಿ, ಮು. ಗ. ಶೆಟ್ಟಿ, ನರಸಿಂಹ ವೆಂಕಟೇಶ ಕುಲಕರ್ಣಿ, ಬಸವರಾಜ, ಡಾ॥ ಮಣ್ಣೂರ, ಹನುಮೇಗೌಡ ಹಾಗೂ ಶ್ರೀಶೈಲ ಅವರಿಂದ ಭಾಷಣ.

ರಾಷ್ಟ್ರದ ಸ್ವಾತಂತ್ರ್ಯ ಗಳಿಕೆಗಾಗಿ ಹಾಗೂ ಕರ್ನಾಟಕ ರಚನೆಗಾಗಿ ನಡೆದ ಹೋರಾಟವನ್ನು ಪ್ರಸ್ತಾಪಿಸಿದ ಶ್ರೀ ಕೆ. ಎಫ್. ಪಾಟೀಲ್‌ರವರು ತಮ್ಮ ಈ ಎರಡು ಆಸೆ ಪೂರೈಸಿವೆ ಎಂದು ಹೇಳಿದರು.

ಬುಧವಾರ ರಾತ್ರಿ 12 ಗಂಟೆಗೆ ಸರಿಯಾಗಿ ಶ್ರೀಪಾಟೀಲ್‌ರವರು ಕರ್ನಾಟಕ ಜ್ಯೋತಿ ಹೊತ್ತಿಸಿದರು. ಗುರುವಾರ ಬೆಳಿಗ್ಗೆ ವಿದ್ಯಾರಣ್ಯ ಪರಂಪರೆಯ ಶ್ರೀ ಶಂಕರ ಭಾರತೀಸ್ವಾಮಿಗಳು ನಂದಾದೀಪ ಹೊತ್ತಿಸಿದರು. ಕಾಶಿಯ ಗಂಗೆಯಿಂದ ಹಿಡಿದು ಸೊಲ್ಲಾಪುರದ ಸಿದ್ಧರಾಮ ತೀರ್ಥದವರೆಗೆ ವಿವಿಧ ಕ್ಷೇತ್ರಗಳಿಂದ ತಂದಿದ್ದ ಜಲಗಳನ್ನು ಐದು ಕುಂಭಗಳಲ್ಲಿಟ್ಟು ವೇದಿಕೆಗೆ ನಡೆಯಿತು. ಬಳ್ಳಾರಿ, ಕೊಡ್ಲಿಗಿ ಮುಂತಾದ ಕಡೆಗಳಿಂದ ಬಂದಿದ್ದ ಜನರು ಜ್ಯೋತಿ ಹೊತ್ತಿಸಿಕೊಂಡು ಅವರವರ ಊರಿಗೆ ಹೊರಟರು.

1-11-1973ನೆ ಗುರುವಾರ ಮುಂಜಾನೆ ಮಂಗಳವಾದ್ಯ ಮೊಳಗುತ್ತಿದ್ದಂತೆ ಸರಿಯಾಗಿ 6-30ಕ್ಕೆ ವಿದ್ಯಾರಣ್ಯರ ಪರಂಪರೆಯ ಶ್ರೀ ಶಂಕರ ಭಾರತೀಸ್ವಾಮಿಗಳವರು ಜ್ಯೋತಿಯನ್ನು ಹೊತ್ತಿಸಿ 'ಕರ್ನಾಟಕ'ವನ್ನು ಆಶೀರ್ವದಿಸಿದರು. ನಂತರ ಜ್ಯೋತಿ, ಪೂರ್ಣ ಕುಂಭ ಹಾಗೂ ಕರ್ನಾಟಕದ ನಕಾಶೆಯ ವೇದಿಕೆಗೆ ರಥ ಬೀದಿಯಲ್ಲಿ ವೈಭವಪೂರ್ಣವಾಗಿ

ಜರುಗಿತು. ಈ ಮೆರವಣಿಗೆಯಲ್ಲಿ ಸ್ವಾಮಿಗಳು ಸ್ವತಃ ಪಾಲುಗೊಂಡು ಕನ್ನಡಿಗರನ್ನು ಹರಸಿದರು. 8-30ಕ್ಕೆ ಶ್ರೀ ಕೆ. ಎಫ್. ಪಾಟೀಲ್‌ರವರು ರಾಷ್ಟ್ರಧ್ವಜವನ್ನೂ ಶ್ರಿ ಕೃಷ್ಣ ಕುಮಾರ ಕಲ್ಲೂರ ಅವರು ಕರ್ನಾಟಕ ಧ್ವಜವನ್ನು ಆರೋಹಿಸಿದರು, ಸರ್ವಶ್ರೀ ಕೆ. ಪಿ. ನಾಡಗೌಡ, ಅಳವಂಡಿ ಶಿವಮೂರ್ತಿಸ್ವಾಮಿ, ಸಿದ್ಧನಾಥ ಬಳ್ಳಾರಿ ಈ ಸಂದರ್ಭದಲ್ಲಿ ಮಾತ ನಾಡಿದರು.

1-11-73ನೆ ಗುರುವಾರ ಸಾಯಂಕಾಲ ಹುಟ್ಟು ಹೆಸರಿನ ಪುನರ್ ನಾಮಕರಣ ಮಹೋತ್ಸವ ಹಂಪೆಯ ವಿರೂಪಾಕ್ಷನ ಸನ್ನಿಧಿಯಲ್ಲಿ. ಕರ್ನಾಟಕ ಎಂತ್ತೊಮ್ಮೆ ಕಂದು-ಕಂಂದು ಕಾಣಬಾರದೆಂಬ ಕನ್ನಡಿಗರ ಆಶಾದೀಪ—ನಂದಾದೀಪ ಹೊತ್ತಿಸಲ್ಪಟ್ಟಿತು.

ಕರ್ನಾಟಕ ಸಾಮ್ರಾಜ್ಯ ಸಿಂಹಾಸನದ ಪೀಠವಾದ ಹಂಪೆಯಲ್ಲಿ ಗತ ವೈಭವದ ಹಿನ್ನೆಲೆ ನೆರೆದಿದ್ದ ಕನ್ನಡಿಗರ ಆನಂದೋತ್ಸಾಹ.

ಅರಸೊತ್ತಿಗೆ ಅಳಿಯುವವರೆಗೂ ಕರ್ನಾಟಕ ರತ್ನ ಸಿಂಹಾಸನಾಧೀಶ್ವರರಾಗಿದ್ದ ಶ್ರೀ ಜಯಚಾಮರಾಜ ಒಡೆಯರವರಿಂದ, ಪುಪಾಪತಿ ದೇವಾಲಯದಲ್ಲಿ ನೆರೆದಿದ್ದವರು ಕರ್ನಾಟಕ ಜ್ಯೋತಿ ಮಾತೆಗೆ ಜಯಘೋಷ ಮಾಡುತ್ತಿದ್ದಾಗ ಕರ್ನಾಟಕ ಜ್ಯೋತಿಗೆ ಬೆಳಕು.

ಶ್ರೀ ಒಡೆಯರ್ ಅವರು ಕರ್ನಾಟಕಕ್ಕೆ ಶುಭ ಕೋರಿದರು; ಕರ್ನಾಟಕ ಜನತೆಗೆ ಶುಭ ಕೋರಿದರು.

ಕರ್ನಾಟಕ ನಾಮಕರಣ ಮಹೋತ್ಸವ ಸಮಿತಿ ಕರ್ನಾಟಕ ಜನತೆ ಪರವಾಗಿ ಏರ್ಪಡಿಸಿದ್ದ ಚರಿತ್ರಾರ್ಹ ಉತ್ಸವಕ್ಕೆ ಆಗಮಿಸಿದ ಮಾಜಿ ಮಹಾರಾಜರಿಗೆ ಜನರಿಂದ ಆತ್ಮೀಯ ಸ್ವಾಗತ ಮಂಗಳವಾದ್ಯ—ಕೊಂಬು, ಕಹಳೆ, ಕರಡಿಮಜಲುಗಳಿಂದೊಡಗೂಡಿ.

ಶ್ರೀ ಜಯಚಾಮರಾಜ ಒಡೆಯರ್ ಅವರು ಇತರರ ಸಹಾಯದೊಡನೆ ದೇವಾಲಯದಲ್ಲಿ ಪೆಟ್ಟಿಲುಗಳನ್ನು ಹತ್ತಿ ಪುಪಾಪತಿ ಹಾಗೂ ಭುವನೇಶ್ವರಿ ದರ್ಶನ ಮಾಡಿದರು.

ದೇವಾಲಯದ ಸಮಾರಂಭ ಮುಗಿದ ನಂತರ ಶ್ರೀ ಒಡೆಯರ್ ಅವರು ಪಂಚವಟಿಯಲ್ಲಿ ಗಿಡ ನೆಟ್ಟರು. ಕರ್ನಾಟಕ ಕೀರ್ತಿ ಸ್ತಂಭಕ್ಕೆ ಭೂಮಿ ಪೂಜೆ ಮಾಡಿದರು.

ಪುಪಾಪತಿ ದೇವಾಲಯದಿಂದ ಪಂಚವಟಿವರೆಗೆ ಭುವನೇಶ್ವರಿಯನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಪ್ರಾರಂಭದಲ್ಲಿ ಬಾಳಪ್ಪ ಹುಕ್ಕೇರಿ ಅವರಿಂದ ' ಜ್ಯೋತಿ ಬೆಳಗುತಿದೆ ; ಕರ್ನಾಟಕ ಜ್ಯೋತಿ ಬೆಳಗುತಿದೆ, ಎಂಬ ಗೀತೆಯಾದ ನಂತರ ಶ್ರೀ ಬಿ. ಎಸ್. ರಾಮಾಚಾರ್ ಅವರು ಜಯ ಕರ್ನಾಟಕ ಗೀತೆ ಹಾಡಿದರು.

ಡಾ॥ ಸೂರ್ಯನಾಥ ಕಾಮತ್ ಅವರು ಬರೆದಿರುವ ' ವಿಜಯನಗರ ಸಾಮ್ರಾಜ್ಯ ' ಶ್ರೀ ಕಲ್ಲೂರ ಕೃಷ್ಣಕುಮಾರ್ ಅವರ ' ಜಯಂ ಕರ್ನಾಟಕ ಸಮರ್ಪಣ ಗೀತೆಗಳು' ಎಂಬ ಹೊತ್ತಿಗೆಗಳನ್ನು ಶ್ರೀ ಒಡೆಯರ್ ಬಿಡುಗಡೆ ಮಾಡಿದರು.

ಕೃಷಿ ಸಚಿವ ಶ್ರೀ ಕೆ. ಎಚ್. ಪಾಟೀಲ್ ಜನಪ್ರಿಯ ಮಹಾರಾಜರನ್ನು ಆದರದಿಂದ ಸ್ವಾಗತಿಸಿ ''ಇವರು ಇಂದು ಹೊತ್ತಿಸಿದ ನಂದಾದೀಪ ಪ್ರತಿಯೊಬ್ಬ ಕನ್ನಡಿಗನ ಹೃದಯದಲ್ಲಿ ಬೆಳಗಲಿ! ಕನ್ನಡ ನಾಡು ಬಂಗಾರದ ನಾಡಾಗಿ ಎಲ್ಲರು ಸುಖವಾಗಿ ಸಮನಾಗಿ ಬಾಳುವಂತಾಗಲಿ!!'' ಎಂದು ಹಾರೈಸಿದರು.

ಶ್ರೀ ಒಡೆಯರ್ ಅವರು ಸಮಾರಂಭದಲ್ಲಿ ಭಾಗಿಯಾಗಲು ತಮಗೆ ಸಾಧ್ಯವಾದುದು ತಮ್ಮ ಭಾಗ್ಯ ಎಂದು ಭಾವಿಸಿ, 'ನಾನು ರಾಜ್ಯಪಾಲನಾಗಿದ್ದಾಗ ಕರ್ನಾಟಕ ಏಕೀಕರಣ ಆಯಿತು. ಆದರೆ ಕಾರಣಾಂತರದಿಂದ ಹೆಸರು ಬದಲಾಗಲಿಲ್ಲ : ಈಗಿನ ಸರ್ಕಾರ ರಾಜ್ಯಕ್ಕೆ ಸಹಜವಾದ ಹೆಸರು ಕೊಟ್ಟಿರುವುದು ಸಂತೋಷದ ವಿಷಯ' ಎಂದರು.

'ಮೈಸೂರು ಮತ್ತು ವಿಜಯನಗರ ರಾಜ್ಯಗಳಲ್ಲಿ ರಾಜರು ಮತ್ತು ಪ್ರಜೆಗಳ ನಡುವೆ ಭೇದ ಭಾವ ಇಲ್ಲದೆ ಇಬ್ಬರ ಪ್ರಗತಿಯೂ ಒಂದೇ ಎಂಬ ಭಾವನೆ ಪರಂಪರೆ ಬೆಳೆದಿದ್ದರಿಂದ ಜನರಿಗೆ ನಮ್ಮ ಮನೆತನದ ಬಗೆಗೆ ಇನ್ನೂ ಅಭಿಮಾನ ಇದೆ' ಎಂದರು.

'ಸುಮ್ಮನೆ ಜ್ಯೋತಿ ಹಚ್ಚಿಸಿ ಗತವೈಭವವನ್ನು ಕುರಿತು ಯೋಚನೆ ಮಾಡಿದರೆ ಪ್ರಯೋಜನವಿಲ್ಲ. ಪ್ರತಿಯೊಬ್ಬನೂ ಸಾಧ್ಯವಾದ ರೀತಿಯಲ್ಲಿ ರಾಜ್ಯದ ಏಳಿಗೆಗಾಗಿ ದುಡಿದು ಜ್ಯೋತಿ ಹೆಚ್ಚು ಪ್ರಕಾಶಿಸುವಂತೆ ಮಾಡಬೇಕು' ಎಂದು ಮನವಿಮಾಡಿದರು.

'ಈ ಜ್ಯೋತಿ ಹೆಚ್ಚು ಪ್ರಜ್ವಲಿಸಲಿ ; ನಿಮಗೆಲ್ಲ ಸುಖ ಸಂತೋಷಗಳು ಒದಗಲಿ ಎಂದು ವಿರೂಪಾಕ್ಷ, ಭುವನೇಶ್ವರಿ, ಉಗ್ರನಾರಾಯಣನ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇನೆ' ಎಂದರು.

ಉತ್ಸವ ಸಮಿತಿ ಅಧ್ಯಕ್ಷ ಶ್ರೀ ಕೆ. ಎಫ್, ಪಾಟೀಲರು ಒಡೆಯರ್ ಅವರಿಗೆ ಕೃತಜ್ಞತೆ ಅರ್ಪಿಸಿದರು,

—ಶ್ರೀ ಎಸ್. ವಿ. ಜಯಶೀಲರಾವ್, ಪ್ರಜಾವಾಣಿ ವರದಿಗಾರರು.

(ii) ಗದುಗಿನಲ್ಲಿ ಉತ್ಸಾಹದ ನಾಮಕರಣ ಉತ್ಸವ

[ಹಂಪೆಯಲ್ಲಿ ಭುವನೇಶ್ವರಿ ಸನ್ನಿಧಾನದಲ್ಲಿ ಹೊತ್ತಿಸಿದ ಜ್ಯೋತಿ ಗದುಗಿನ ವೀರನಾರಾಯಣನ ಸನ್ನಿಧಿಯಲ್ಲಿ ನಂದಾದೀಪವಾಯಿತು. ಜ್ಯೋತಿಯ ಮೆರವಣಿಗೆ ನಡೆಯಿತು. ಅಲ್ಲದೆ, ಕರ್ನಾಟಕ ಸಿಂಹಾಸನಾಧೀಶ್ವರ ಶ್ರೀ ಜಯಚಾಮರಾಜ ಒಡೆಯರ್ ಹಾಗೂ ಕರ್ನಾಟಕ ನಾಮಕರಣಕ್ಕೆ ಕಾರಣರಾದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸರು ಹಾಗೂ ಹಲವಾರು ಕರ್ನಾಟಕಕ್ಕೆ ಶ್ರಮಿಸಿದ ಮಹನೀಯರಿಗೆ ಸನ್ಮಾನ ನಡೆಯಿತು. ಕರ್ನಾಟಕ ಮಹೋತ್ಸವ ಸ್ಮರಣ ಸಂಚಿಕೆ ಬಿಡುಗಡೆ ನಡೆಯಿತು. ಅದು ಅಭೂತಪೂರ್ವ ಸಮಾರಂಭ ; ಅಮಿತೋತ್ಸಾಹದ ಪ್ರಸಂಗ.]

ಕರ್ನಾಟಕ ನಾಮಕರಣ ಮಹೋತ್ಸವದ ಅಂಗವಾಗಿ ಹಂಪೆಯಲ್ಲಿ ಹೊತ್ತಿಸಿದ ಕರ್ನಾಟಕ ಜ್ಯೋತಿಯನ್ನು 'ಗದುಗಿನ ವೀರನಾರಾಯಣನ ಸನ್ನಿಧಾನಕ್ಕೆ ತಂದು ಶ್ರೀ ಜಯಚಾಮರಾಜ ಒಡೆಯರು ಸಂದಾದೀಪ ವಾಗಿರಿಸಿದ್ದನ್ನು ಪೋಷಿಸುವ ಹೊಣೆ ಹೊತ್ತ ಶ್ರೀ ಗುಡಿಯವರು ಸ್ವೀಕರಿಸುತ್ತಿದ್ದಾರೆ

ಶ್ರೀ ದೇವರಾಜ ಅರಸು ಮುಖ್ಯ ಮಂತ್ರಿಯಾಗಿರುವ ಕಾಲದಲ್ಲಿ ರಾಜ್ಯದ ಹೆಸರು ಕರ್ನಾಟಕವೆಂದಾದುದಕ್ಕೆ 'ಸಂಸ್ಕಾರ', ದೈವೀಬಲ, ಜನತೆಯ ಆಶೀರ್ವಾದ ಕಾರಣ.

ಎಲ್ಲ ಘಟನೆಗಳಿಗೂ ಒಂದು ದೈವಿಕಶಕ್ತಿ ಕಾರಣ ಎಂಬ ಹಿನ್ನೆಲೆಯಲ್ಲಿ ಈಗ ನಾಮಕರಣವಾದುದನ್ನು ಪ್ರಸ್ತಾಪಿಸಿ ಮಾಜಿ ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್ ಅವರು, ಮಾತನಾಡಿದರು. ಮುಖ್ಯಮಂತ್ರಿ ಶ್ರೀ ಅರಸು ಕರ್ನಾಟಕ ನಾಮಕರಣ ಮಹೋತ್ಸವ ಸಮಿತಿಯ ಆಶ್ರಯದಲ್ಲಿ ಶನಿವಾರ 3-11-73ನೆ ಸಂಜೆ ಗದುಗಿನಲ್ಲಿ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಸನ್ಮಾನಿತರಾದ ಮಾಜಿ ರಾಜ್ಯಪಾಲ ಶ್ರೀ ಒಡೆಯರ್ ಅವರು,

ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಕರ್ನಾಟಕ ಸಾಮ್ರಾಜ್ಯ ಸ್ಥಾಪನೆಯಾಗಿದ್ದು, ಈಗ ಶ್ರೀ ದೇವರಾಜರ ಕಾಲದಲ್ಲಿ 'ಕರ್ನಾಟಕ' ವೆಂದು ನಾಮಕರಣವಾಗಿರುವುದನ್ನು "ಸಂಸ್ಕಾರ' ಎಂದು ಕರೆದರು.

"ಒಬ್ಬ ಮನುಷ್ಯ ಒಂದು ಪ್ರಾಣಿಗೆ ಸಂಸ್ಕಾರ ಇರುತ್ತೆ. ಇದು ಫಲಿಸುವುದನ್ನು ಯಾವ ಮಾನವೀ ಶಕ್ತಿಯೂ ತಡೆಯಲಾರದು" ಎಂದರು.

" ಕೃಷ್ಣದೇವರಾಯನ ಕಾಲದಲ್ಲಿ ಸಾಮ್ರಾಜ್ಯ ಸ್ಥಾಪನೆಯಾಗಿ ಮೈಸೂರು ರಾಜರ ಕಾಲದಲ್ಲಿ ಕನ್ನಡ ರಾಜ್ಯ ಕ್ರೋಢೀಕರಿಸಿ, ದೇವರಾಜರ ಕಾಲದಲ್ಲಿ 'ಕರ್ನಾಟಕ' ಎಂದು ಆದದ್ದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ಇದೊಂದು ವಿಚಿತ್ರ ಸಂಗತಿ: ಒಂದು ವೈಶಿಷ್ಟ್ಯ! ಒಬ್ಬ ಮನುಷ್ಯನಿಂದ ಯಾವುದೇ ಕಾಲದಲ್ಲಿ ಆಗಬೇಕಾದ ಕಾರ್ಯವನ್ನು ತಪ್ಪಿಸಲು ಸಾಧ್ಯವಿಲ್ಲ" ಎಂದರು.



ಕುಮಾರಪ್ಯಾಸನ ಆರಾಧ್ಯದೇವತೆ ಶ್ರೀ ವೀರನಾರಾಯಣನ ನೆಲೆಯಾದ ಗದುಗಿನಲ್ಲಿ ಕರ್ನಾಟಕ ಮಹೋತ್ಸವ ಸಮಿತಿಯು ಕರ್ನಾಟಕ ನಾಮಕರಣಕ್ಕೆ ಕಾರಣರಾದ ರಾಜ್ಯದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸ ಹಾಗೂ ಕನ್ನಡ ಸಿಂಹಾಸನಾಧೀಶ್ವರ ಶ್ರೀ ಜಯಚಾಮರಾಜ ಒಡೆಯರನ್ನು ಸತ್ಕರಿಸಿತು. ರಾಜ್ಯ ಸಚಿವರುಗಳಾದ ಶ್ರೀ ಕೆ. ಎಚ್. ಪಾಟೀಲ ಹಾಗೂ ಶ್ರೀ ದೇವೇಂದ್ರಪ್ಪ ಘಾಳಪ್ಪ ಅವರೂ ವೇದಿಕೆಯ ಮೇಲಿದ್ದಾರೆ. ಸತ್ಕಾರಕ್ಕೆ ಉತ್ತರವಾಗಿ ಮುಖ್ಯ ಮಂತ್ರಿಗಳು ಮಾತನಾಡುತ್ತಿದ್ದಾರೆ.

ಕರ್ನಾಟಕ ನಾಮಕರಣ ಹಾಗೂ ಶ್ರೀ ಒಡೆಯರ್ ಅವರು ಹೇಳಿದ ಮಾತುಗಳನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ಮುಖ್ಯಮಂತ್ರಿ ಅರಸು ಅವರು ಈ "ಕಾರ್ಯಕ್ಕೆ ನಾನು ನಿಮಿತ್ತ ಮಾತ್ರ ಆಗಿದ್ದೇನೆ. ಮಂತ್ರಿ ಮಂಡಲ, ವಿಧಾನ ಮಂಡಲ ಹಾಗೂ ಜನತೆ ಕಾರಣ" ಎಂದರು.

ಸಂಸ್ಕಾರದ ವಿಷಯವನ್ನು ಪ್ರಸ್ತಾಪಿಸಿ "ಇದನ್ನು ಒಂದು ಸಂದರ್ಭದಲ್ಲಿ ನಂಬಲೇ ಬೇಕಾಗಿ ಬರುತ್ತೋ ಏನೋ! ಜನರ ನಾಡಿ ಎತ್ತ ಮಿಡಿಯುತ್ತಿದೆ ಎಂಬುದನ್ನು ತಿಳಿದು ಅವರ ಆಶೋತ್ತರ ಈಡೇರಬೇಕೆಂದು ನಾನು ಪ್ರಯತ್ನಿಸಿದೆ. ಅದಕ್ಕೆ ಎಲ್ಲ ಶಾಸಕರೂ ಸರ್ವಾನು ಮತದಿಂದ ಒಪ್ಪಿದರು. ಹಿಂದೆ ಕರ್ನಾಟಕಕ್ಕಾಗಿ ದುಡಿದವರ ಆಶೀರ್ವಾದವಿತ್ತು, ದೈವ ಬಲ ಕೂಡಿತ್ತು, ನಾನು ನೆಪಮಾತ್ರ. ದೈವ ಬಲವು, ಪ್ರತಿಯೊಂದಕ್ಕೂ ಬೇಕು. ಇದರಲ್ಲಿ ನನಗೆ ಪೂರ್ಣ ನಂಬಿಕೆಯಿದೆ. ಭುವನೇಶ್ವರಿ ಪ್ರೇರಣೆಯೇ ಕಾರಣ. ಇದು ನನ್ನಿಂದ ಆಯಿತು. ೧೭ ವರ್ಷಗಳಿಂದಲೂ ಆಗಲಿಲ್ಲ. ನನ್ನಿಂದ ಹೇಗೆ ಈಗ ಆಯಿತು ಅಂದರೆ ನನ್ನನ್ನು ಕೇಳಬೇಡಿ; ದೇವರನ್ನು ಕೇಳಿ. ಇದು ಧರ್ಮ-ಕರ್ಮ-ಸಂಯೋಗ" ಎಂದು ಅಭಿಪ್ರಾಯಪಟ್ಟರು.

ಹಿಂದೆ ತಮ್ಮ ವಿರೋಧವಿದ್ದುದು ಹೆಸರಿನ ಬಗ್ಗೆ ಅಲ್ಲವೆಂದೂ ಆಗಿನ ಮುಖಂಡತ್ವದ ಮನೋದೃಷ್ಟಿಯನ್ನು ವಿರೋಧಿಸಿದುದಾಗಿಯೂ ಸ್ಪಷ್ಟಪಡಿಸಿದರು.

ರಾಜ್ಯದ ಹೆಸರಿನ ಬಗ್ಗೆ ಚುನಾವಣೆ ಕಾಲದಲ್ಲಿ ತಮ್ಮನ್ನು ಜನ ಕೇಳುತ್ತಿದ್ದುದು. ಮುಂದಿನ ಚುನಾಯಿತ ಪ್ರತಿನಿಧಿಗಳ ಇಚ್ಛೆಯಂತೆ ಆಗಲಿ ಎಂದು ತಾವು ಭರವಸೆ ನೀಡಿದ್ದು ದನ್ನು ಶ್ರೀ ಅರಸು ಅವರು ಪ್ರಸ್ತಾಪಿಸಿ "ಜನರ ಪ್ರತಿನಿಧಿಗಳ ನಾಡಿ ಹಿಡಿದು ಅರ್ಥ ಮಾಡಿಕೊಳ್ಳುವ ವಿವೇಕವನ್ನು ದೇವರು ಕೊಟ್ಟಿದ್ದ" ಎಂದು ವಿವರಿಸಿದರು.

ವಿಧಾನ ಮಂಡಲದಲ್ಲಾಗಲೀ, ಪಕ್ಷದಲ್ಲಾಗಲೀ, ಯಾರ ವಿರೋಧವೂ ಇಲ್ಲದಿದ್ದುದು ಹೆಮ್ಮೆಯ ವಿಷಯವೆಂದು ಶ್ರೀ ಅರಸು ಹೇಳಿ "ಭುವನೇಶ್ವರಿ, ಗದುಗಿನ ವೀರನಾರಾಯಣನ ಇಚ್ಛೆ. ನನ್ನ ಇಚ್ಛೆ ಅಲ್ಲ. ತಮ್ಮೆಲ್ಲರ ಇಚ್ಛೆಯಂತೆ ಆಗಿದೆ" ಎಂದರು.

ಅಲಂಕೃತವಾಗಿ ಗದುಗಿನಲ್ಲಿ ಕರ್ನಾಟಕ ಜ್ಯೋತಿಯ ಮೆರವಣಿಗೆಯ ನಂತರ ರಾಜ್ಯೋತ್ಸವದ ಸಭೆ ನಡೆಯಿತು.

ಮೆರವಣಿಗೆಯ ಮುನ್ನ ಹಂಪೆಯಿಂದ ತಂದ ಜ್ಯೋತಿಯನ್ನು ಶ್ರೀ ತೋಂಟದಾರ್ಯರ ಮಠದಲ್ಲಿ ಅಲಂಕರಿಸಿ ಪೂಜಿಸಿ ಅದರ ಬೆಳಕಿನಲ್ಲಿ ಜಗದ್ಗುರುಗಳ ಸನ್ನಿಧಿಯಲ್ಲಿ ಮಂತ್ರಿವರ್ಯರನ್ನು ವೀರಶೈವ ಯುವಕ ಸಮಾಜದ ಪರವಾಗಿ ಸತ್ಕರಿಸಲಾಯಿತು.

ಮೆರವಣಿಗೆಯ ನಂತರ ಮುಖ್ಯ ಮಂತ್ರಿ ಶ್ರೀ ಅರಸು, ಮಾಜಿ ಮಹಾರಾಜರು ಹಾಗೂ ಸಚಿವರುಗಳಾದ ಸರ್ವಶ್ರೀ ಕೆ. ಎಚ್. ಪಾಟೀಲ, ಜಿ. ದೇವೇಂದ್ರಪ್ಪ, ಡಿ. ಕೆ. ನಾಯ್ಕರ್‌ರನ್ನು ಬಾಣಬಿರುಸು ಪಟಾಕ್ಷಿಗಳಿಂದ ಸ್ವಾಗತಿಸಲಾಯಿತು.



ಕರ್ನಾಟಕ ನಾಮಕರಣ ಮಹೋತ್ಸವದ ಅಂಗವಾಗಿ ಗದುಗಿನಲ್ಲಿ ನಡೆದ ಸತ್ಕಾರ ಸಮಾರಂಭಕ್ಕೆ ಕರ್ನಾಟಕ ಸಿಂಹಾಸನಾಧೀಶ್ವರ ಶ್ರೀ ಜಯಚಾಮರಾಜ ಒಡೆಯರು ಹಾಗೂ ಕರ್ನಾಟಕ ನಾಮಕರಣಕ್ಕೆ ಕಾರಣರಾದ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸರನ್ನು ಮೆರವಣಿಗೆಯಲ್ಲಿ ತರುವ ಚಿತ್ರ.

ಕರ್ನಾಟಕ ನಾಮಕರಣ ಉತ್ಸವ ಸಮಿತಿಯ ಅಧ್ಯಕ್ಷರಾದ ಮಾಜಿ ಸಚಿವ ಶ್ರೀ ಕೆ. ಎಫ್. ಪಾಟೀಲ್ ಅವರು ಸ್ವಾಗತ ಭಾಷಣ ಮಾಡಿ, ಕರ್ನಾಟಕದ ಶೋಷಿತ ಜನರ ಹಿತಸಾಧನೆಯ ಸಂಕೇತವಾಗಿ ಹಂಪೆಯ ವಿರೂಪಾಕ್ಷ ಹಾಗೂ ಗದಗಿನ ವೀರನಾರಾಯಣನ ಸನ್ನಿಧಿಗಳಲ್ಲಿ ನಂದಾದೀಪವನ್ನು ಬೆಳಗಿಸಲಾಗಿದೆಯೆಂದರು.

ಪೌರಸಭಾಧ್ಯಕ್ಷ ಶ್ರೀ ಕೆ. ಎಂ. ಕಣವಿ ಅವರು ಮುಖ್ಯಮಂತ್ರಿಗಳಿಗೆ ಬಿನ್ನವತ್ತಳೆಯನ್ನರ್ಪಿಸಿದರು. ಪೌರಸಭಾ ಸದಸ್ಯರಾದ ಶ್ರೀ ಬಿ. ಎಸ್. ಅರವಂದ ಅವರು ನಾಗರೀಕರ ವತಿಯಿಂದ ಶ್ರೀ ಜಯಚಾಮರಾಜ ಒಡೆಯರ್ ಅವರಿಗೆ ಬಿನ್ನವತ್ತಳೆಯನ್ನರ್ಪಿಸಿದರು.

ಸುಮಾರು ಎರಡು ವರ್ಷಗಳ ಹಿಂದೆ ಪ್ರಧಾನಿ ಇಲ್ಲಿಗೆ ಆಗಮಿಸಿದ್ದಾಗ ಬಹಿರಂಗ ಸಭೆ ನಡೆಸಲು ನಿರ್ಮಿಸಲಾಗಿದ್ದ ವೇದಿಕೆಯನ್ನು ಅಲಂಕರಿಸಲಾಗಿತ್ತು. ಕರ್ನಾಟಕದ ನಕ್ಷೆ ಈ ವೇದಿಕೆಯ ಹಿನ್ನೆಲೆಯಲ್ಲಿ ಪ್ರಕಾಶಿಸುತ್ತಿತ್ತು.

ಕರ್ನಾಟಕದ ನಕ್ಷೆ ಹಾಗೂ ಅವರ ಭಾವಚಿತ್ರವಿರುವ ಪಟಗಳನ್ನು ಸಚಿವ ಶ್ರೀ ಕೆ.ಎಚ್. ಪಾಟೀಲರು, ಮುಖ್ಯಮಂತ್ರಿ ಹಾಗೂ ಒಡೆಯರ್ ಅವರಿಗೆ ಅರ್ಪಿಸಿದರು.

ಶ್ರೀ ಒಡೆಯರ್ ಅವರು ಉತ್ಸವ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ಅಂದು ಸನ್ಮಾನಿತರಾದವರ ಪರವಾಗಿ ಶ್ರೀ ಶಾಂತಪ್ಪಣ್ಣ ಎಳಮಲಿ ಹಾಗೂ ಶ್ರೀ ವಿ. ಜಿ. ಕುಂಬಿ ಅವರು ಕೃತಜ್ಞತೆ ಸಲ್ಲಿಸಿದರು.

ಶ್ರೀ ಜಯಚಾಮರಾಜ ಒಡೆಯರ್ ಅವರು ವಿಜಯನಗರದ ಹಾಗೂ ಮೈಸೂರು ರಾಜರುಗಳ ಹಾಗೂ ಪ್ರಜೆಗಳಲ್ಲಿ ಯಾವ ಭೇದವೂ ಇಲ್ಲದೆ ಇವರಿಬ್ಬರ ಧ್ಯೇಯವೂ ಒಂದೇ ಆಗಿದ್ದರಿಂದ ರಾಜಕಾರಣ ಸಂಗಮವಾಗಿ ನಡೆದುಕೊಂಡು ಬಂದಿತೆಂದರು.

''ಈಗ ರಾಜತ್ವ ಅನ್ನೋದು ಹೊರಟು ಹೋಗಿದೆ. ಸಿಂಹಾಸನ ಹಕ್ಕುಭಾಧ್ಯತೆಗಳೂ ಹೊರಟು ಹೊಂಗಿವೆ. ಆದರೆ ನಿಮ್ಮ ಹೃದಯ ಸಿಂಹಾಸನದಲ್ಲಿ ನನ್ನನ್ನು ಕೂರಿಸಿದ್ದೀರಿ. ಅದಕ್ಕಿಂತ ಹೆಚ್ಚಿನ ಸಿಂಹಾಸನ ಹಕ್ಕು ಬಾಧ್ಯತೆಗಳು ದೊರಕಿವೆ ಎಂದು ಭಾವಿಸುತ್ತೇನೆ" ಎಂದು ಹೇಳಿದಾಗ ಸಭೆ ಕರತಾಡನ ಮಾಡಿತು.

ಕರ್ನಾಟಕಕ್ಕಾಗಿ ದುಡಿದ ಮಾಜಿ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿ ಅವರಿಂದ ಹಿಡಿದು ಶ್ರೀ ಹನುಮಂತಯ್ಯ, ಶ್ರೀ ನಿಜಲಿಂಗಪ್ಪ ಮೊದಲಾದ ಹಾಗೂ ಸದ್ಯದ ಮುಖ್ಯಮಂತ್ರಿ ಶ್ರೀ ಅರಸುವರೆಗೆ, ಹಾಗೂ ಅನೇಕ ಸಾಹಿತಿಗಳ ಹೆಸರುಗಳನ್ನು ಶ್ರೀ ಒಡೆಯರ್ ಹೇಳಿ ''ತುಂಬಾ ಉತ್ಸಾಹವಿದೆ. ಕೇವಲ ಉತ್ಸಾಹ ಇದ್ದರೆ ಸಾಲದು. ಅದಕ್ಕೆ ಗಂಠಿ ಶಿಸ್ತು, ಕ್ರಮ ಇಟ್ಟುಕೊಳ್ಳಬೇಕು. ಆಗ ನಿಜವಾದ ಕರ್ನಾಟಕದ ಉದಯವಾಗುತ್ತದೆ. ನನಗೋಸ್ಕರ ನಾನು ಈ ಮಾತನ್ನು ಹೇಳುತ್ತಿಲ್ಲ. ಹಿಂದಿನ ಋಷಿಗಳ, ರಾಜಯೋಗಿಗಳ ಆದರ್ಶ ಸಾಧನೆಗಾಗಿ ಮಂತ್ರಿಮಂಡಲ ಅನೇಕ ವರ್ಷಗಳ ಕಾಲ ಕರ್ನಾಟಕಕ್ಕೆ ಒಳ್ಳೆಯ ಸೇವೆಯನ್ನು ಸಲ್ಲಿಸಲಿ. ಶ್ರೇಯಸ್ಸನ್ನು ಪಡೆಯಲಿ" ಎಂದು ಹಾರೈಸಿ ಕನ್ನಡದ ಜನತೆಗೆ ಸಕಲ ಮಂಗಳವನ್ನೂ ಕೋರಿದರು.

ಮುಂಬೈನಿಂದ ಆಗಮಿಸಿದ ಕನ್ನಡಿಗರ ಪ್ರತಿನಿಧಿ ಶ್ರೀ ಕೃಷ್ಣಕುಮಾರ ಕಲ್ಲೂರ, ಸೊಲ್ಲಾಪುರದ ಕನ್ನಡಿಗರ ಪ್ರತಿನಿಧಿ ಶ್ರೀ ಸಿದ್ಧನಾಥ ಬಾಳ್ಕರಿ ಅವರುಗಳಿಗೆ ಶ್ರೀ ಒಡೆಯರ್ ಅವರು ಉತ್ಸವ ಸಮಿತಿಯ ಪರವಾಗಿ ಹಾರ ಹಾಕಿದರು. ಕರ್ನಾಟಕಕ್ಕಾಗಿ ಶ್ರಮಿಸಿದವರಿಗೆ ಹಾರ ಅರ್ಪಿಸಿ ಗೌರವಿಸಲಾಯಿತು.

ಸಚಿವ ಶ್ರೀ ಡಿ. ಕೆ. ನಾಯಕರ್ ಅವರು ಕರ್ನಾಟಕ ರಾಜ್ಯದ ಮಹತ್ವವನ್ನು ವಿವರಿಸಿದರು. ಸಚಿವ ಶ್ರೀ ಕೆ. ಎಚ್. ಪಾಟೀಲ್ ಅವರು ''ಕರ್ನಾಟಕ ನಾಮಕರಣಕ್ಕೆ ಕಾರಣರಾದ ಮುಖ್ಯಮಂತ್ರಿಗಳನ್ನು ಪ್ರಶಂಸಿಸಿ ಕರ್ನಾಟಕದ ಸರ್ವ ರಕ್ಷಣೆಯೂ ಇವರಿಂದಾಗಲಿ" ಎಂದು ಹಾರೈಸಿದರು,

ಶ್ರೀ ಶ್ರೀನಿವಾಸ ಉಡುಪರಿಂದ ಕರ್ನಾಟಕದ ಗೀತೆ ಆದನಂತರ ಸಭೆ ಮುಗಿಯಿತು.

—ಶ್ರೀ ಎಸ್. ವಿ. ಜಯಶೀಲರಾವ್, ಪ್ರಜಾವಾಣಿ ವರದಿಗಾರರು

(iii) ಶ್ರೀ ತೋಂಟದಾರ್ಯ ಮಠದಲ್ಲಿ ಮುಖ್ಯಮಂತ್ರಿಗಳಿಗೂ ಕೃಷಿಸಚಿವರಿಗೂ ಸನ್ಮಾನ

''ಎಲ್ಲರೂ ಐಕ್ಯದಿಂದಿದ್ದು ಸಮೃದ್ಧ ಕರ್ನಾಟಕವನ್ನು ಕಟ್ಟುವದು ಎಲ್ಲರ ಹೊಣೆ ಯಾಗಿದೆ. ಆದ್ದರಿಂದ ನಾವು ಸಮೃದ್ಧ ಕರ್ನಾಟಕವನ್ನು ಕಟ್ಟುವಾ'' ಎಂದು ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ದಿನಾಂಕ 3ರಂದು ಇಲ್ಲಿಯ ವೀರಶೈವ ಪ್ರಗತಿ ಶೀಲ ಯುವಕ ಸಂಘದವರು ತಮಗಿತ್ತ ಸನ್ಮಾನಕ್ಕೆ ಉತ್ತರಿಸುತ್ತ ನುಡಿದರು.

ಶ್ರೀ ತೋಂಟದಾರ್ಯ ಮಠದಲ್ಲಿ ವೀರಶೈವ ಪ್ರಗತಿ ಶೀಲ ಯುವಕ ಸಂಘದವರು ದಿನಾಂಕ 3 ರಂದು ಅಪರಾಹ್ನ 3 ಗಂಟೆಗೆ ಕರ್ನಾಟಕ ರಾಜ್ಯದ ಪ್ರಥಮ ಮುಖ್ಯ ಮಂತ್ರಿ ಗಳಾದ ಶ್ರೀ ದೇವರಾಜ ಅರಸ ಮತ್ತು ಮಾನ್ಯ ಮಂತ್ರಿ ಕೆ, ಎಚ್. ಪಾಟೀಲರಿಗೂ ಮಾನ ಪತ್ರ ಕೊಟ್ಟು ಸನ್ಮಾನಿಸಿದರು,

ಶ್ರೀ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳು ಸಿಂಹಾಸದಲ್ಲಿ ಉಪಸ್ಥಿತ ರಾಗಿದ್ದರು. ಯುವಕ ಸಂಘದ ಅಧ್ಯಕ್ಷ ಶ್ರೀ ಎಸ್. ಎ. ಹಿರೇಮಠರವರು ಸ್ವಾಗತ ಕೋರಿದರು. ಹಂಪೆಯಿಂದ ತಂದ ಕರ್ನಾಟಕ ಜ್ಯೋತಿಯನ್ನು ಸ್ವಾಗತಿಸಿದರು.

ಜ್ಯೋತಿಯ ಸಂಗಡ ಬಂದ ಪ್ರೊ॥ ವಿ. ಸಿ. ಹಿತ್ತಲಮನಿಯವರೂ ಶ್ರೀ ಕೆ. ಎಫ್. ಪಾಟೀಲರೂ ಜ್ಯೋತಿಯ ಮಹತ್ವವನ್ನು ವಿವರಿಸಿದರು. ಮಂತ್ರಿಗಳಾದ ಶ್ರೀ ನಾಯ್ಕರ ಮತ್ತು ಶ್ರೀ ದೇವೇಂದ್ರಪ್ಪನವರೂ ಆಗಮಿಸಿದ್ದರು.

ಕಾರ್ಯದರ್ಶಿ ಶ್ರೀ ವಿಶ್ವನಾಥ ಬುಳ್ಳಾ ಅವರು ಮಾನಪತ್ರ ಓದಿ ಉಭಯ ಮಂತ್ರಿ ಗಳಿಗೂ ಅರ್ಪಿಸಿದರು. ಶ್ರೀಗಳವರು ಮುಖ್ಯಮಂತ್ರಿಗಳಿಗೂ ಶ್ರೀ ಕೆ. ಎಚ್. ಪಾಟೀಲ ರಿಗೂ ಆಶೀರ್ವದಿಸಿದರು.

ಮುಖ್ಯಮಂತ್ರಿಗಳು ಮಾತನಾಡಿದರು. ನಂತರ ಶ್ರೀ ಜಿ. ಎಸ್. ಮಾನ್ವಿಯವರು ಮುಖ್ಯಮಂತ್ರಿಗಳಿಗೆ ಎರಡು ಬೆಳ್ಳಿ ಸಪೆಗಳನ್ನು ಅರ್ಪಿಸಿದರು.

ಮುಖ್ಯಮಂತ್ರಿಗಳು ಐಕ್ಯದಿಂದ ನಾಡು ಕಟ್ಟುವ ಹೊಣೆ ಎಲ್ಲರ ಮೇಲಿದೆಯೆಂದು ಹೇಳಿ ಸಮೃದ್ಧ ನಾಡನ್ನು ಕಟ್ಟುವಾ ಎಂದು ಹೇಳಿದರು. ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಕೆ. ಎಚ್. ಪಾಟೀಲರೂ ಮಾತನಾಡಿ ಕೃತಜ್ಞತೆಗಳನ್ನು ಅರ್ಪಿಸಿದರು. ಶ್ರೀ ವಿಶ್ವನಾಥ ಬುಳ್ಳಾ ಅವರಿಂದ ವಂದನಾರ್ಪಣೆಯಾಯಿತು.

—ಸಂಯುಕ್ತ ಕರ್ನಾಟಕ ವರದಿಗಾರರು

* * * *

'ವಿಶಾಲ ಕರ್ನಾಟಕ' 'ಕನ್ನಡಪ್ರಭ' ಮೊದಲಾದ ಕನ್ನಡ ಪತ್ರಿಕೆಗಳೂ 'ಡೆಕ್ಕನ್ ಹೆರಾಲ್ಡ್' 'ಇಂಡಿಯನ್ ಎಕ್ಸ್‌ಪ್ರೆಸ್' ಹಾಗೂ 'ಹಿಂದೂ' ಇಂಗ್ಲೀಷ ಪತ್ರಿಕೆಗಳೂ ಕರ್ನಾಟಕ ನಾಮಕರಣ ಮಹೋತ್ಸವದ ವರದಿಯನ್ನು ಮಾಡಿವೆ. ಅವರೆಲ್ಲರಿಗೂ ಉತ್ಸವ ಸಮಿತಿ ಕೃತಜ್ಞತೆಗಳನ್ನು ಅರ್ಪಿಸುತ್ತದೆ.

If you judge a company by the company it keeps

ADVANI OERLIKON
ASHOK LEYLAND
BAJAJ AUTO
BHABHA ATOMIC RESEARCH CENTRE
BHARAT EARTH MOVERS
BHARAT FORGE
BHARAT HEAVY ELECTRICALS
BINNY
CHITTARANJAN LOCOMOTIVE WORKS
DIESEL LOCOMOTIVE WORKS
ENFIELD INDIA
ENGINE VALVES
GUEST KEEN WILLIAMS
HEAVY ENGG. CORPORATION
HINDUSTAN AERONAUTICS
HINDUSTAN MACHINE TOOLS
HINDUSTAN MOTORS
HINDUSTAN STEEL
INDIA FORGE & DROP STAMPING
INDIAN DRUGS AND PHARMACEUTICALS
INDIAN RAILWAYS
INDO-NIPPON PRECISION BEARINGS
INTEGRAL COACH FACTORY
KIRLOSKAR ELECTRIC
MAHINDRA UGINE STEEL
MUKAND IRON & STEEL WORKS
NGEF
POWER CABLES
PRAGA TOOLS
PRECISION BEARINGS
PREMIER AUTOMOBILES
JK FILES
SANDVIK ASEA
TATA ENGG. & LOCOMOTIVE

How would you rate us from our customer list?

We convince the experts about our alloy steel with 36 quality control tests. But for the layman, there's a lot more to be learnt by a study of the industries who compliment us with their confidence. Take a look at their product range. Locomotives. Aircraft. Automobiles. Atomic reactors. Surgical equipment. Precision instruments. And many other fields where precise formulation of alloy steel is vital to human safety and progress.

Now take a look at their names. It's no accident if our customer list reads like a 'Who's Who?' of public and private sector industries in India. They're all industries who use special alloy steels which were totally imported till a few years ago. But as our product range steadily expanded, so did our customer list. Last year the alloy steel we produced went a long way to substitute their imports. The quantity is still limited. But the quality is not. That's how we keep the company we keep.

We bring out the best in steel

MISL

MYSORE IRON & STEEL LIMITED, BHADRAVATI



AN EYE FOR ACCURACY

ACCURACY IN PERFORMANCE
ENSURES ACCURACY IN JUDGEMENT

Technologists spearhead Industrial Progress. Accuracy is the hall-mark of a technologist. And G.E.F. Instruments, Surveying Instruments : Theodolites, Levels, Optical Squares ensure accuracy. Government Electric Factory Instruments are, in addition, lightweight, dust and damp-proof. Available with compass and/or vernier.

GOVERNMENT ELECTRIC FACTORY HAS A ROLE IN NATION-BUILDING

GOVERNMENT ELECTRIC FACTORY,
Mysore Road, BANGALORE.

VSK/GEF-1.

ಬಸ್ಸುಗಳು ಪೆಟ್ರೋಲ್‌ನಿಂದ ಮಾತ್ರವೇ ಓಡುವುದಿಲ್ಲ

ಅತಿ ಮುಖ್ಯವಾಗಿ ಜನತೆಯ ಸಹಕಾರ ಮತ್ತು ಪ್ರಾಮಾಣಿಕತೆಯೇ ಕಾರಣ.
• ನಿಷ್ಠೆಯಿಂದ ಟಿಕೆಟ್‌ಗಳನ್ನು ಕೊಳ್ಳುವುದು, ಬಸ್ಸುಗಳನ್ನು ತಮ್ಮದೆಂದು
ಭಾವಿಸುವುದು ಮತ್ತು ಇತರರನ್ನು ಅಪ್ರಾಮಾಣಿಕತೆಯಿಂದ ದೂರ
ವಿಡುವುದು, ಇವೇ ಬಸ್ಸುಗಳ ಓಡಾಟಕ್ಕೆ ಆಧಾರ. ಬಸ್ಸುಗಳ
ಸಂರಕ್ಷಣೆ, ನಿಯಮಿತ ವೇಳೆಗೆ ಓಡಾಟ, ಇವುಗಳಿಗೆ
ಮೊದಲನೆಯ ಅವಶ್ಯಕತೆ. ಟಿಕೆಟುಗಳು ಮತ್ತು
ಜನತೆ. ಪೆಟ್ರೋಲ್ ಎರಡನೆಯ ಅಂಶ.
ಬಸ್ಸುಗಳಿಲ್ಲದೆ ಪೆಟ್ರೋಲ್ ನಿಷ್ಪ್ರ
ಯೋಜಕವು. ಆದುದರಿಂದ
ಸಹಕರಿಸುವ ಜನತೆಯೇ
ಬಸ್ಸುಗಳ ಓಡಾಟಕ್ಕೆ
ಮುಖ್ಯ ಶಕ್ತಿ.

MYSORE STATE ROAD TRANSPORT CORPORATION

ಮೈಸೂರು ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್

ಟ್ರಾನ್ಸ್‌ಪೋರ್ಟ್ ಹೌಸ್, ಶಾಂತಿನಗರ, ಬೆಂಗಳೂರು-27

BAYER

ಬಾಯರ್ ಉತ್ಕೃಷ್ಟ ಕೀಟೌಷಧಗಳು

ಲೆಬಾಸಿಡ್ ಮತ್ತು ಹಿನೋಸಾನ್ ಭತ್ತದ ಬೆಳೆಗೆ, ಫಾಲಿಥಯಾನ್,
ಫಾಲಿಥಯಾನ್–ಕಾಂಬಿ ಮತ್ತು ಮೆಟಾಸಿಡ್–ಕಾಂಬಿ
ಹತ್ತಿಯ ಬೆಳೆಗೆ ಉಪಯುಕ್ತವಾದುದು.

)(

ಅಮೆರಿಕನ್ ಸ್ಪ್ರಿಂಗ್ ಮತ್ತು ಪ್ರೆಸ್ಸಿಂಗ್ ಪ್ರೈವೇಟ್ ಲಿಮಿಟೆಡ್,
ಮಲಾಡ್, ಬೊಂಬಾಯಿ
ಇವರ ತಯಾರಿಕೆಯ



"ಆಸ್ಪಿ ಬೋಲೊ"

ಆಸ್ಪಿ ಬೋಲೊ, ಆಸ್ಪಿ ಬ್ಯಾಕ್ ಪ್ಯಾಕ್ ಮತ್ತು
ಆಸ್ಪಿ ನ್ಯಾಪ್ ಸಾಕ್ ಸ್ಪ್ರೇಯರುಗಳು ಮತ್ತು
ಓರಿಯಂಟ್, ಆಸ್ಪಿ ಜ್ಯೂಬಿಲಿ ಡಸ್ಟರುಗಳನ್ನು
ಉಪಯೋಗಿಸಿ ಬೆಳೆಗಳನ್ನು ಸಂರಕ್ಷಿಸಿ.

15 — ವಿವರಗಳಿಗೆ —

ಎಸ್. ವಿ. ರಂಗಸ್ವಾಮಿ ಅಂಡ್ ಕಂಪನಿ ಪ್ರೈವೇಟ್ ಲಿಮಿಟೆಡ್,
75, ಕಲಾಸಿ ಪಾಳ್ಯಂ, ನ್ಯೂ ಎಕ್ಸ್‌ಟೆನ್ಷನ್, ಬೆಂಗಳೂರು–2.

HOLDING THE PRICE LINE FOR COFFEE

Blend Coffee powder, newly roasted and freshly ground by those who know Coffee best will be available in sealed packets at a pegged price of Rs. 10/- per kilo (Inclusive of Taxes) till December 31st 1973 from all India Coffee Depots of the Board at:

Rua Governador Pestana
PANJIM (GOA)

395, R & C Lamington Road
BOMBAY

Dharavi Road
Sion
BOMBAY

West High Court Road
Dharmapeth
NAGPUR

Dandia Bazaar
BARODA

No. 71, Jawahar Marg
INDORE

Noor Mahal Road
BHOPAL

Sardar Patel Marg
ALLAHABAD

Acharyanagar
KANPUR

No 66, Tolstoy Lane
NEW DELHI

Aryasamaj Road
KAROL Bagh
NEW DELHI

Bistupur Market
JAMSHEDPUR

Shop No. 13, Sector No 3 (Market)
RANCHI

Door No 29, Market Centre
Sector No 5
ROURKELA

21, Museum Road
BANGALORE

36, Sampige Road
Malleswaram
BANGALORE

38, Prithvi Buildings
Kempegowda Road
BANGALORE

84, Diagonal Road
Viveswarapuram
BANGALORE

Station Road
HUBLI

Statue Square
MYSORE

Shop No 1, Sardar High School
Grounds
College Road
BELGAUM

Chittor Road
ERNAKULAM

T C. No. 21|56, M G Road
TRIVANDRUM

XII-244, M.C Road
KOTTAYAM

Sweet Meat Bazar
KOZHIKODE

Big Bazar
PALGHAT

23|77, Round West
TRICHUR

192, Mount Road
MADRAS

20, Ramanathan Street
T'Nagar
MADRAS

Mylapore
MADRAS

322|325, Linghichetty Street
MADRAS

ICF, Shopping Centre
Perambur
MADRAS

23, Sri Rangapalayam Road
Kumarasampathi
SALEM

16-B, West Boulevard Road
Teppakulam
TRICHY

20|345, Edayar Street
COIMBATORE

75, West Avanimoola Street
MADURAI

No. 5-9-324, Gunfoundry
HYDERABAD

8|625, Station Road
WARRANGAL

Adjacent To Veerabhadra Talkies
RAJAHMUNDRY

Opp. R T.C. Bus Stand
VIJAYAWADA

26-15-27, Main Road
VISAKHAPATNAM

No. 12-3-293 Tilak Road
TIRUPATHI

From the India Coffee Houses/Rooms at:

No 1, Vidhana Veedhi
BANGALORE-1

Super Bazaar
NEW DELHI

Shastri Bhavan
NEW DELHI

Udyoga Bhavan
NEW DELHI

Yojana Bhavan
NEW DELHI

Parliament House
NEW DELHI

New Dak Bungalow
PATNA

5, Chittaranjan Avenue
Dharmatolla
CALCUTTA

Residency Road
SRINAGAR

Coffee Board, Vidhana Veedhi, Bangalore-1